ಕಸ್ತೂರಿ

ಜುಲೈ,೧೯೭೯



ರೂ.
೧-೨೫

ಕಸ್ತೂರಿ

☆

ವ್ಯವಸ್ಥಾಪಕ ಸಂಪಾದಕ :

ಎಚ್. ಆರ್. ಬಸವರಾಜ್

☆

ಸಂಪಾದಕ :

ಪ. ಸು. ಭಟ್ಟ

☆

ಕಲೆ :

ಕೆ. ಬಿ. ಕುಲಕರ್ಣಿ

☆

ಮುಖಪುಟ :

ದೂರದೃಷ್ಟಿ

ಚಿತ್ರ :

ಎಸ್. ಧನಲಕ್ಷ್ಮಿ

☆

ಚಂದಾದರ

ರ್ಷಕ್ಕೆ (ಅಂಚೆ ಸೇರಿ)		ರೂ. ೩೫-೦೦
ರ್ಷ	,,	ರೂ. ೨೫-೦೦
ರ್ಷ	,,	ರೂ. ೧೪-೦೦
ರ್ವರ್ಷ	,,	ರೂ. ೭-೫೦

KASTURI July 1979

ಬೆಳಕಿಂಡಿ

ಹೆಂಗಸರೊಂದಿಗೆ ವ್ಯವಹರಿಸುವುದು ಬಲು ಕಷ್ಟ. ಅವರಿಗೆ ಗಂಡಸರಂತೆ ಸಮ ಅವಕಾಶ ನೀಡಲು ಮನಸ್ಸು ಮಾಡದಿದ್ದರೋ ಅವರಿಗೆ ಕೋಪ ಉಕ್ಕೇರುತ್ತದೆ. ಒಂದು ವೇಳೆ ಹೆಂಗಸರು ಎಂದು ಕರುಣೆ ತೋರಿಸಿದಿರೋ ನಿಮ್ಮನ್ನು ಗುಲಾಮರಿಗಿಂತ ಕೀಳಾಗಿ ಕಾಣತೊಡಗುತ್ತಾರೆ.

—ವೆಲಾಶಿಯೋ ಡೊಮ್ನಿಕ್

*

ಜೀವನದಲ್ಲಿನ ಆನಂದದ ಕ್ಷಣಗಳನ್ನು ಕಳೆದುಕೊಳ್ಳುವವರು ಬಹುಸಂಖ್ಯಾಕ ಮಂದಿ. ಅವರಿಗವು ಸಿಕ್ಕುವುದಿಲ್ಲ ಎಂದರ್ಥವಲ್ಲ. ಅವುಗಳನ್ನು ಅನುಭವಿಸಲು ಅವಕಾಶವಿರದಷ್ಟು ವೇಗದಲ್ಲಿ ಅವರು ಸಂಸಾರರಥದಲ್ಲಿ ಸುತ್ತುತ್ತಿರುತ್ತಾರೆ.

-ವಿಲಿಯಂ ಫೆದರ್

*

ನಾವು ಈ ಜಗತ್ತನ್ನು ನಮ್ಮ ಕಿಡಕಿಯಿಂದ ಹಣಿಕಿಕ್ಕಿ ನೋಡುವುದನ್ನು ನಿಲ್ಲಿಸೋಣ. ವಿಶಾಲ ವಿಶ್ವವನ್ನು ಆ ವಿಶಾಲ ಆಕಾಶದ ಕೆಳಗೆ ನಿಂತು ಕಣ್ಣಿಗೆ ಕಾಣುವಷ್ಟನ್ನೂ ನೋಡೋಣ. -ಬಂಗಾಲಿ ನಾಟಕವೊಂದರಿಂದ

☆

ಚಂದಾದಾರರಿಗೆ ಸೂಚನೆ

'ಕಸ್ತೂರಿ' ತಿಂಗಳ ಒಂದನೇ ದಿನಾಂಕದೊಳಗೇ ಪ್ರಕಟವಾಗುವುದು. ತಿಂಗಳ ೫ ನೇ ದಿನಾಂಕದೊಳಗೆ ತಲುಪದೇ ಹೋದರೆ ಚಂದಾದಾರರು ತಮ್ಮ ಟಪಾಲು ಕಚ್ಚೇರಿಯಲ್ಲಿ ಮೊದಲು ವಿಚಾರಿಸಿ ಅನಂತರ ನಮಗೆ ತಿಳಿಸಬೇಕು. ಪತ್ರವ್ಯವಹಾರ ಮಾಡುವಾಗ ಚಂದಾ ನಂಬರು ಹಾಕಿರಬೇಕು.

ಈ ಸಂಚಿಕೆಯಲ್ಲಿ

ಸಹಚಿಂತನ ...		೩
ಯಾವುದು ಶ್ರೇಷ್ಠ? ...	ರಾಮದಾಸ	೫
ಪರಿಪೂರ್ಣ ಸಂಖ್ಯೆಗಳು ...	ಸಂಖ್ಯಾಪ್ರಿಯ	೬
ಹಕ್ಕಿಗಳ ಕೊಕ್ಕುಗಳು (ಕಲೆ) ...		೯
ವಾಸನೆ (ಕವಿತೆ) ...	ಅರಕಲಗೂಡು ನೀಲಕಂಠಮೂರ್ತಿ	೧೪
ವ್ಯಂಗ್ಯಚಿತ್ರ ...		೧೬
ನಗೆಲಾಯ? ನ್ಯಾಯಾಲಯ! ...	ಚೆಸ್‌ಕ್ವೀನ್	೧೭
ವ್ಯಂಗ್ಯ ರೇಖೆಗಳಲ್ಲಿ ಸಮಾಜ ವಿಮರ್ಶೆ ...	ಶ್ರೀ	೧೮
ನಗೆಮಲ್ಲಿಗೆ ...		೨೨
ಮಾರ್ಗರೆಟ್ ಥ್ಯಾಚರ್ ...	ಜಿ. ಎಸ್. ಭಟ್ಟ	೨೪
ಏಪ್ರಿಲ್ ಫೂಲ್ ...	ಡಬ್ಲ್ಯು. ಜೆ. ಲೆಡರರ್	೨೯
ಇದಿ ಅಮೀನನ ನಾಡಿನಲ್ಲಿ ...	ಡಾ. ಪ್ರಕಾಶ ಕೊಣ್ಣೂರ	೩೭
ಪದಾರ್ಥ ಚಿಂತಾಮಣಿ ...	ಪಾವೆಂ.	೪೯
ಅಭಿಮಾನ (ಕಥೆ) ...	ಎನ್. ಪಂಕಜ	೫೦
ಆಂಧ್ರಪ್ರದೇಶದ ಪಕ್ಷಿಪುರಾಣ ...	ಎಂ. ಆರ್. ಎಸ್.	೫೬
ನಿರ್ಣಯ (ಕಥೆ) ...	ಡಾ. ವಿಷ್ಣುಶರ್ಮ ವನಹಳ್ಳಿ	೫೮
ಇದುವೇ ಜೀವ ಇದು ಜೀವನ ...		೬೩
ನಿಮ್ಮ ಶಬ್ದಭಾಂಡಾರ ಬೆಳೆಯಲಿ ...		೬೫
ನುಲಿಗೊರಳು ಮತ್ತು ತಲೆದೂಗುವಿಕೆ ...	ಡಾ. ಕೆ. ಎಂ. ಧ್ರುವಕುಮಾರ	೬೭
ವಿಜಯನಗರ ಸಾಮ್ರಾಜ್ಯದಲ್ಲಿ ನೀರಾವರಿ ...	ಎಸ್. ಕೆ. ಜೋಶಿ	೭೫
ವಾದ ವೈಖರಿ ...	ಸಿ. ಎಚ್. ಗೋಪಾಲಕೃಷ್ಣಭಟ್ಟ	೮೦
ಇದ್ದುದು ಹೀಗೆ (ಕಥೆ) ...	ಸೌ. ನೀಲಾ ಶಿತೋಳೆ	೮೧
ಸಾವಿನ ದವಡೆಯಲ್ಲಿ ಮುಕ್ಕಾಲು ಗಂಟೆ ...	ಗೋವಾ	೮೬
ಕಣ್ಣು ...	ಡಾ. ಎಂ. ದಯಾಕರ	೮೯
ಶಾಪಗ್ರಸ್ತ ವಜ್ರ ...	ಸಿ. ಎಸ್. ಎ.	೯೬
ಹಿತ್ತಲ ಗಿಡ ಮದ್ದಲ್ಲ ...	ಪ. ರಾಮಕೃಷ್ಣಶಾಸ್ತ್ರಿ	೯೭
ಲಾಹೋರಿನ ಸಿಖ್ ಮ್ಯೂಸಿಯಂ	ಮಸೂದ ಉಲ್‌ಹಸನ್ ಕೋಖರ್	೯೮
ಸ್ಫೋಟಕ ಸಿಗಾರ್ ...	ಸವ್ಯಸಾಚಿ	೧೦೪
ನೀಲಗಿರಿ ಹಾನಿಕರವೇ? ...	ಕೃ. ನಾರಾಯಣರಾವ್	೧೧೦
ನಮ್ಮ ಭೇಟಿ ಎಲ್ಲಿ? ...	ಡಾ. ಕೆ. ಶ್ರೀಕಂಠಯ್ಯ	೧೧೨

ಪುಸ್ತಕ ವಿಭಾಗ

ಯಾತನಾ ಶಿಬಿರ ...	ಮೂಲ: ಚಂದ್ರಕಾಂತ ಕುಸನೂರ	
...	ಸಂಗ್ರಹ: ತುಳಸಿ ಅರವಿಂದಾರ್ಯ	೧೧೯

ಸಮಾಲೋಚನ

ಐನ್‌ಸ್ಟೈನ್ : ಸಂಶಯ

ಕಸ್ತೂರಿಯಲ್ಲಿ ಪ್ರಕಟವಾದ ಜಿ. ಟಿ. ನಾರಾಯಣರಾಯರ 'ಐನ್‌ಸ್ಟೈನ್' ಲೇಖನ ಬಹಳ ಮಾರ್ಮಿಕವಾಗಿದೆ. ಲೇಖನವನ್ನು ಓದಿದ ಬಳಿಕ ನನಗೆ ಬಂದಿರುವ ಕೆಲವು ಸಂಶಯಗಳನ್ನು ಪರಿಹರಿಸಬೇಕಾಗಿ ವಿನಂತಿ:

(೧) ವಸ್ತು 'v' ವೇಗದಲ್ಲಿ ಚಲಿಸುತ್ತಿರುವಾಗ ಅದರ ದ್ರವ್ಯರಾಶಿಯು mo ಇರುತ್ತದೆ. ವಸ್ತು ಬೆಳಕಿನ ವೇಗವನ್ನೂ ಮೀರಿ ಚಲಿಸಿದಾಗ $\sqrt{1-v^2/c^2}$ ಅದರ ದ್ರವ್ಯರಾಶಿ mo ಅಂದರೆ 'ಊಹನಾತ್ಮಕ' $\sqrt{-x}$ ಆಗುತ್ತದೆ. ಈ ರೀತಿಯ ದ್ರವ್ಯರಾಶಿ ಇರಲು ಸಾಧ್ಯವೆ? ಆ ರೀತಿಯ ದ್ರವ್ಯರಾಶಿ ಗುರುತ್ವಾಕರ್ಷಣೆಯ ನಿಯಮಗಳಿಗೆ ಹೇಗೆ ವರ್ತಿಸುತ್ತದೆ?

(೨) $E=mc^2$ ಎಂಬುದು ಯಾವುದೋ ಒಂದು 'm' ದ್ರವ್ಯರಾಶಿ 'c' ವೇಗದಿಂದ ಚಲಿಸುವಾಗ ಅದರಲ್ಲಿರುವ ಚಲನ ಶಕ್ತಿಯು ಎರಡರಷ್ಟಿರುತ್ತದೆ– ಅದರಲ್ಲಿ ಅಡಕವಾಗಿರುವ ಶಕ್ತಿ ಎಂದು ತಿಳಿಸುತ್ತದೆ. ಆದರೆ ಚಲಿಸದ ಕಲ್ಲಿನಲ್ಲೂ ಈ ಬಗೆಯ ಶಕ್ತಿ ಹೇಗೆ ಸಾಧ್ಯ?

ನರಸಿಂಹರಾಜಪುರ –ಕೆ. ಮಂಜುನಾಥ್

[(೧) ವಿಶ್ವ ಮತ್ತು ಪ್ರತಿವಿಶ್ವ ಎಂಬ ಎರಡು ಜಗತ್ತುಗಳಿವೆ; ನಮ್ಮ ನೆಲೆ ವಿಶ್ವ; ವಿಶ್ವ ಮತ್ತು ಪ್ರತಿವಿಶ್ವಗಳನ್ನು ಬೇರ್ಪಡಿಸುವ ಗಡಿ ಬೆಳಕಿನ ವೇಗ c; ವಿಶ್ವದಲ್ಲಿ ಯಾವುದೇ ವಸ್ತು ಏರಬಹುದಾದ ಗರಿಷ್ಠ ವೇಗ c ಯಾದರೆ ಪ್ರತಿವಿಶ್ವದಲ್ಲಿ ಯಾವುದೇ ವಸ್ತು ಇಳಿಯಬಹುದಾದ ಕನಿಷ್ಟ ವೇಗ c. ಅಲ್ಲಿಗೆ ಪ್ರತಿವಿಶ್ವದಲ್ಲಿ ವಸ್ತು ಏರಬಹುದಾದ ಗರಿಷ ವೇಗ ಅನಂತ– ಇಂಥಹ ಒಂದು ವಾದ ಉಂಟು. ಪ್ರತಿವಿಶ್ವದಲ್ಲಿ $mo/\sqrt{-x}$ ಮಾದರಿ ವಸ್ತುಗಳಿಗೆ ನಿಜ ಅಸ್ತಿತ್ವ ಇರುವುದು ಸಾಧ್ಯ. ವಿಶ್ವದಲ್ಲಿ ಇವು ಕಾಲ್ಪನಿಕ. ಬೆಳಕಿನ ವೇಗಕ್ಕಿಂತಲೂ ರಭಸದಿಂದ ಧಾವಿಸುವ ಈ ಕಣಗಳಿಗೆ ಟ್ಯಾಕ್ಯಾನುಗಳೆಂಬ (Tachyons) ಹೆಸರುಂಟು. ಟ್ಯಾಕ್ಯಾನುಗಳ ಅಸ್ತಿತ್ವ ಸದ್ಯ ಪರಿಕಲ್ಪನೆಯ ಹಂತದಲ್ಲಿದೆ. ಪ್ರತ್ಯಕ್ಷ ಪ್ರಮಾಣ ಲಭಿಸಿಲ್ಲ. 'ಕಸ್ತೂರಿ' ಮಾರ್ಚ್ ೧೯೭೭ ಸಂಚಿಕೆ ಪುಟ ೧೪೩ರಲ್ಲಿ ಕೊಟ್ಟಿರುವ ವಿವರಣೆಯನ್ನು ಇನ್ನೊಮ್ಮೆ ಪರಾಂಬರಿಸಬೇಕಾಗಿ ವಿನಂತಿ.

ಮೈಸೂರು – ಜಿ.ಟಿ. ನಾರಾಯಣರಾವ್]

ಶಬ್ದ ಭಾಂಡಾರ

ಜೂನ್ ಸಂಚಿಕೆಯ 'ಶಬ್ದಭಾಂಡಾರ'ದಲ್ಲಿ ಒಂದೆರಡು ವಿವಾದಾತ್ಮಕ ಅಂಶಗಳಿವೆ. ಅವು;

೧) 'ಉಪಧಿ' ಶಬ್ದಕ್ಕೆ 'ಉಪಟಳ, ಕಾಟ'ಎಂಬರ್ಥ ನೀಡಲಾಗಿದೆ. ಅದರ ಮುಂದಿನ ಪುಟದಲ್ಲೇ ಗೌರೀಶ ಕಾಯ್ಕಿಣಿಯವರ ಲೇಖನದಲ್ಲಿ 'ಉಪಧಿ' ಎಂದರೆ ಬಿರುದು ಎಂಬರ್ಥವಿದೆ, 'ಉಪಧಿ' ಎಂಬುದಕ್ಕೆ 'ಬಿರುದು' ಎಂಬುದೇ ಸರಿಯಾದ ಅರ್ಥ,

೨) 'ಹಿಳ್ಳು' ಶಬ್ದಕ್ಕೆ 'ಮರಿ' ಎಂಬರ್ಥ ನೀಡಲಾಗಿದೆ. ಗ್ರಾಮಾಂತರ ಪ್ರದೇಶಗಳಲ್ಲಿ (ನಮ್ಮ–ಕೊಡಗಿನ) ಕೆಲವೆಡೆಗಳಲ್ಲಿ ಈ ಶಬ್ದವನ್ನು 'ಉಬ್ಬು' ಎಂಬ ಅರ್ಥದಲ್ಲಿ ಬಳಸಲಾಗುತ್ತದೆ. ಉದಾ: ಎತ್ತುಗಳ ಹೆಗಲ ಬಳಿಯ ಉಬ್ಬಿಗೆ 'ಹಿಳ್ಳು' ಎಂದು ಕರೆಯಲಾಗುವುದು.

೩) 'ಉಲಿತ' ಎಂಬ ಶಬ್ದವನ್ನು ಪಿಸುಮಾತು, ಮೃದು ಧ್ವನಿ ಎಂಬರ್ಥದಲ್ಲಿ ಬಳಸುತ್ತಿಲ್ಲವೆ? ಬಳಸಿಲ್ಲವೆ ? (ಉದಾ: ಮೆಲ್ಲುಲಿತ ಇತ್ಯಾದಿ ಜೋಡಿ ಶಬ್ದಗಳು). ಅತ್ಯಂತ ಉಪಯೋಗಕರವಾಗಿರುವ ಈ ವಿಭಾಗದಲ್ಲಿ ನ್ಯೂನತೆಗಳನ್ನು ಇಲ್ಲವಾಗಿಸಿ ಉಪಕರಿಸಬೇಕಾಗಿ ಕೋರುತ್ತೇನೆ.

ಬೆಂಗಳೂರು ಹೊ. ಗು. ಮಹೇಶಕುಮಾರ್

["ಉಪಧಿ", "ಹಿಳ್ಳು" ಇವೆರಡಕ್ಕೂ ನಮ್ಮ ಅರ್ಥವೇ ಸರಿ. ಪರಿಷತ್ತಿನ ಸಂಕ್ಷಿಪ್ತ ನಿಘಂಟು ನೋಡಿರಿ. ಬಿರುದು ಎಂರ್ಥದಲ್ಲಿ ಪ್ರಯೋಗದಲ್ಲಿರುವ ಪದ "ಉಪಾಧಿ." ಹೋರಿಯ ಬೆನ್ನಿನ ಡುಬ್ಬಕ್ಕೆ "ಹಿಳಿಲು" ಎಂದಿರುವ ಶಬ್ದವೇ ಜನರ ಬಾಯಲ್ಲಿ ಹಿಳ್ಳೆಂದಾಗಿರಬೇಕು.

"ಉಲಿತ"ಕ್ಕೆ ಶ್ರೀ ಮಹೇಶಕುಮಾರರು ಹೇಳುವ ಅರ್ಥ ಸರಿ, ಆದರೆ ನಾವು ಉದ್ದೇಶಿಸಿದ್ದು "ಲುಲಿತ" ಎಂಬ ಪದ. ಅದು ಮುದ್ರಣ

ದೋಷದಿಂದ "ಉಲಿತ" ಎಂದಾಗಿದೆ. ಮೊದಲನೆಯದು ಸಂಸ್ಕೃತ, ಎರಡನೆಯದು ಕನ್ನಡ. ಮುದ್ರಣ ದೋಷಕ್ಕೆ ಕ್ಷಮೆ ಇರಲಿ.

—ಸಂ.]

ಡಾರ್ವಿನ್‌ವಾದ

ಎಪ್ರಿಲ್ ತಿಂಗಳ ಕಸ್ತೂರಿಯಲ್ಲಿ ಪ್ರಕಟಗೊಂಡ ಶ್ರೀಕಾಂತ ಮಳಗಿಯವರ 'ಡಾರ್ವಿನ್ನನ ವಾದ ಎಷ್ಟು ಸರಿ?' ಎಂಬ ಲೇಖನ ಓದಿದೆ. ಅದರ ಆಧಾರಗ್ರಂಥಗಳು ತುಂಬಾ ಹಳೆಯವು. ಡಾರ್ವಿನ್ನನು ಪ್ರಾಯೋಗಿಕವಾಗಿ ತನ್ನ ಸಿದ್ಧಾಂತವನ್ನು ರಚಿಸದೇ ಹೋದರೂ ತನ್ನ 'ಬೀಗಲ್' ಹಡಗಿನ ಪ್ರಯಾಣದಲ್ಲಿ ದರ್ಶಿಸಿದ ಪಳೆಯುಳಿಕೆಗಳು ಹಾಗೂ ನಿಸರ್ಗ ವೈಚಿತ್ರ್ಯಗಳಿಂದ ಉತ್ತೇಜಿತನಾಗಿ "ನೈಸರ್ಗಿಕ ಆಯ್ಕೆ" ತತ್ವವನ್ನು ಪ್ರತಿಪಾದಿಸಿದ್ದಾನೆ. ಪ್ರಾಯೋಗಿಕ ಅಂಶಗಳಿಂದ ಈ ಡಾರ್ವಿನ್ನನ ವಿಕಾಸವಾದವನ್ನು ನವತಳಿಶಾಸ್ತ್ರಜ್ಞರೂ, ನವಡಾರ್ವಿನ್‌ವಾದಿಗಳೂ ಎತ್ತಿ ಹಿಡಿದಿದ್ದಾರೆ. ಗುಣಾಣುಗಳು (ಜೀನುಗಳು), ಪ್ರಾಣಿಗಳ ವಾತಾವರಣ, ಸಾಂದ್ರತೆ, ವಿಕೃತಿಗಳು, ಹೊಸ ವಾತಾವರಣಕ್ಕೆ ಹೊಂದಿಕೊಳ್ಳುವ ಶಕ್ತಿ,ಸಂತಾನಾಭಿವೃದ್ಧಿ ಶಕ್ತಿ, ವಲಸೆ ಹೋಗುವಿಕೆ ಮತ್ತು ವಿಭೇದೀಕರಣ ಮುಂತಾದವು ನೈಸರ್ಗಿಕ ಆಯ್ಕೆಗೆ ಪೂರಕಗಳು. ಕೇವಲ ಪಳಿಯುಳಿಕೆಗಳನ್ನೆ ಅಥವಾ ಅಂಗರಚನಾಶಾಸ್ತ್ರವನ್ನೆ ದೃಷ್ಟಿಯಲ್ಲಿಟ್ಟುಕೊಂಡರೆ ಡಾರ್ವಿನ್ ವಾದವನ್ನು ಪುಷ್ಟೀಕರಿಸುವದಸಾಧ್ಯ. ಏಕೆಂದರೆ ಇದುವರೆಗೆ ದೊರಕಿರುವ ಪಳೆಯುಳಿಕೆಗಳು ನಮ್ಮ ಭೂಮಿಯ ಪ್ರಾಗೈತಿಹಾಸವನ್ನು ಸಂಪೂರ್ಣವಾಗಿ ವಿವರಿಸುವದಿಲ್ಲ. ಇದನ್ನೂ ಎಷ್ಟೋ ಪಳೆಯುಳಿಕೆಗಳು ನಮಗಿನ್ನೂ ಸಿಕ್ಕಿಲ್ಲ. 'ಪ್ರಾಗೈತಿಹಾಸ ಒಂದು ಹರಿದ ಪುಸ್ತಕ. ಮಧ್ಯೆ ಹಲವಾರು ಪುಟಗಳೇ ಇಲ್ಲ' ಎಂದು ವಿಕಾಸವಾದದ ವಿಜ್ಞಾನಿಯೊಬ್ಬರ ಅಭಿಪ್ರಾಯ.

ಸ್ತನಿಗಳು (mammals) ಎಂಬ ಶಬ್ದಕ್ಕೆ ಸರಿಯಾದ ಕನ್ನಡ ಪದ ಸಸ್ತನಿಗಳು ಎಂದು. ಇದೇ ಶಬ್ದವನ್ನು ಇಂಗ್ಲಿಷ್-ಕನ್ನಡ ನಿಘಂಟಿನಲ್ಲಿಯೂ, ವಿಶ್ವಕೋಶದಲ್ಲಿಯೂ ವೈಜ್ಞಾನಿಕ ಗ್ರಂಥಗಳಲ್ಲಿಯೂ ಬಳಸಲಾಗುತ್ತಿದೆ.

ಮೈಸೂರು. ಎಸ್. ಎನ್. ಹೆಗಡೆ

[ಡಾರ್ವಿನ್‌ವಾದದ ಇನ್ನೊಂದು ಮುಖವನ್ನು ಓದುಗರಿಗೆ ಪರಿಚಯಿಸುವುದಕ್ಕೆ ಮಾತ್ರ ಲೇಖನದ ಉದ್ದೇಶ ಸೀಮಿತವಾಗಿತ್ತು. ಡಾರ್ವಿನ್‌ವಾದ ಇಂದೂ ಚರ್ಚೆಯ ವಿಷಯವೆ ಆಗಿದ್ದು ನೈಸರ್ಗಿಕ ಆಯ್ಕೆಯ ಹೈಪಾಥಿಸಿಸನ್ನೇ ಪ್ರಶ್ನಿಸುವ ವಿಜ್ಞಾನಿಗಳೂ ಉಂಟು. ಅಂಗರಚನಾಶಾಸ್ತ್ರವನ್ನಷ್ಟೆ ದೃಷ್ಟಿಯಲ್ಲಿಟ್ಟುಕೊಂಡರೆ ಡಾರ್ವಿನ್‌ವಾದವನ್ನು ಸಮರ್ಥಿಸುವುದು ಸಾಧ್ಯವಿಲ್ಲವೆಂಬ ನಿಮ್ಮ ಮಾತು ಸರಿ. ಆದರೆ ಜಗತ್ತಿನಾದ್ಯಂತ ದೊರೆಯುತ್ತಿರುವ ಪ್ರಾಗೈತಿಹಾಸಿಕ ಪ್ರಾಣಿಗಳ ಅವಶೇಷಗಳು ಈ ಪ್ರಾಣಿಗಳು ಒಂದೇ ಕಾಲಕ್ಕೆ ನಿರ್ವಂಶಗೊಂಡಿದ್ದನ್ನು ಸೂಚಿಸುತ್ತವೆಯಾದ್ದರಿಂದ ಆ ಬಗ್ಗೆ ಹೊಸ ದೃಷ್ಟಿಕೋನದಿಂದ ವಿಚಾರಿಸಬೇಕೆಂಬುದು ಲೇಖಕರ ಉದ್ದೇಶವಿದ್ದಹಾಗೆ ಕಾಣುತ್ತದೆ.

ಇಂಗ್ಲಿಷಿನ ಮಮಲ್ಸ್ ಎಂಬ ಪದಕ್ಕೆ ಕನ್ನಡದಲ್ಲಿ ಸಸ್ತನಿಗಳು ಎಂಬ ಪದ ಪರ್ಯಾಯವಾಗಿ ಬಂದಿದೆಯಾದರೂ ಸ್ತನಿಗಳು ಎಂಬ ಶಬ್ದವೆ ಸ್ತನವುಳ್ಳದ್ದು ಎನ್ನುವುದನ್ನು ಸೂಚಿಸುವುದರಿಂದ ಅದನ್ನು ಹಾಗೆ ಉಪಯೋಗಿಸುವುದೇ ಸೂಕ್ತವೆನಿಸುತ್ತದೆ. ಇಲ್ಲವಾದರೆ ಅದರ ಬದಲು ಸಸ್ತನ ಪ್ರಾಣಿಗಳು ಎಂಬ ಪದವನ್ನಾಗಲಿ, ಸಂಸ್ಕೃತದ ಮಸ್ತನಗಳೆಂಬುದನ್ನಾಗಲಿ ಬಳಕೆಯಲ್ಲಿ ತರಬಹುದು. ಸಂ.]

ಜೂನ್ ಮುಖಚಿತ್ರ

ಈ ವರ್ಣಚಿತ್ರ ತೆಗೆದವರು ಶ್ರೀ ವಿನೋದ ದೇಸಾಯಿಯವರು. ಅವರ ಹೆಸರು ಉಳಿದು-ಹೋದುದಕ್ಕೆ ವಿಷಾದಿಸುತ್ತೇವೆ. —ಸಂ.

ಕಸ್ತೂರಿ

ಸಂಚಿಕೆ: ೧೧ ಕಸ್ತೂರಿ, ಜುಲೈ ೧೯೭೯ ವರ್ಷ: ೨೩

ಯಾವುದು ಶ್ರೇಷ್ಠ ?

ರಾಮದಾಸ

ಸಿಸ್ತಾನ ದೇಶದಲ್ಲಿ ಒಂದು ಸಲ ದೊಡ್ಡವರೆನಿಸಿಕೊಂಡ ಸರದಾರರು ಒಂದೆಡೆ ಸೇರಿದ್ದರು. ಹರಟೆ ಹೊಡೆಯುತ್ತಿದ್ದಾಗ ಎಲ್ಲದರಲ್ಲಿ ಶ್ರೇಷ್ಠ ಮತ್ತು ಸುಂದರ ಯಾವುದೆಂಬುದರ ಕುರಿತು ಚರ್ಚೆ ಸಾಗಿತು.

"ತಾರ್ತರ ದೇಶದಲ್ಲಿಯ ಲೌಕರಿಯ ಪೋಷಾಕು ಎಲ್ಲದರಲ್ಲಿ ಸುಂದರ"–ಓರ್ವ ಸರದಾರ ಹೇಳಿದ.

"ರೋಮಿನ ಮುಕುಟವು ಎಲ್ಲದರಲ್ಲಿ ಸುಂದರ. ಶಿರೋಭೂಷಣವೂ ಆಗಿದೆ" ಇನ್ನೊಬ್ಬನೆಂದ

"ಎಲ್ಲಕ್ಕಿಂತ ಸುಂದರ ಸ್ಥಾನವೆಂದರೆ, ಪುಷ್ಪಗಳಿಂದೊಡಗೂಡಿದ ತೋಟ"– ಮೂರನೆಯವನೆಂದ.

ನಾಲ್ಕನೆಯವ ಹೇಳಿದ: "ಎಲ್ಲದರಲ್ಲಿ ಶ್ರೇಷ್ಠ ಪೇಯವೆಂದರೆ ಸೆರೆ"

"ಎಲ್ಲಕ್ಕಿಂತ ಶ್ರೇಷ್ಠ ಶೀತಲ ಸ್ಥಾನವೆಂದರೆ, ಬೀದ ವೃಕ್ಷದ ನೆರಳಾಗಿದೆ" ಐದನೆಯವನೆಂದ.

"ವೀಣೆಯು ಎಲ್ಲ ವಾದ್ಯಗಳಲ್ಲಿ ಶ್ರೇಷ್ಠ ವಾದ್ಯವೆನಿಸಿದೆ," ಆರನೆಯವ ದನಿಗೂಡಿಸಿದ.

"ದರಬಾರದಲ್ಲಿಯ ತರುಣ ಸರದಾರನೇ ನಿಜವಾದ ಮಿತ್ರ" ಏಳನೇಯವ ಹೇಳಿದ. ಇವರೆಲ್ಲ ಹೇಳುವುದನ್ನು ಹೇಳಿ ಮುಗಿಸುವ ತನಕ ಸುಮ್ಮನೆ ಕುಳಿತಿದ್ದ ಕೊನೆಯ ವ್ಯಕ್ತಿ ಇವರೆಲ್ಲರ ವಾದವನ್ನೂ ಗಂಭೀರ ಧ್ವನಿಯಲ್ಲಿ ತಿರಸ್ಕರಿಸಿ ಹೇಳಿದ:

"ಎಲ್ಲದರಲ್ಲಿ ಸುಂದರ ಪೋಷಾಕೆಂದರೆ ಚಿಲಕತ್ತಾಗಿದೆ. ಸುಂದರ ಶಿರೋಭೂಷಣವು ಶಿರಸ್ತ್ರಾಣವಾಗಿದೆ. ಎಲ್ಲಕ್ಕಿಂತ ಸುಂದರ ಸ್ಥಳವು ರಣಾಂಗಣವಾಗಿದೆ. ಎಲ್ಲಕ್ಕಿಂತ ಕರ್ಣಮಧುರವಾದ ವಾದ್ಯವೆಂದರೆ, ಕುದುರೆಯ ಖುರಪುಟ, ಶೂರ ಸೈನಿಕನಾಗಿರುವುದು ಎಲ್ಲಕ್ಕಿಂತ ಶ್ರೇಷ್ಠವಾಗಿದೆ."

ಹೀಗೆ ಹೇಳಿದವನ ಹೆಸರು ಯಾಕೂಬ. ಮುಂದೆ ಕೆಲವೇ ವರ್ಷಗಳಲ್ಲಿ ಆತ ಮಹಾನ್ ಸುಲ್ತಾನನಾದನೆಂದರೆ ವಿಸ್ಮಯವೇನಿಲ್ಲ.

✡

ಪರಿಪೂರ್ಣ ಸಂಖ್ಯೆಗಳ ಸಂಶೋಧನೆಯಿನ್ನೂ ಅಪರಿಪೂರ್ಣ

ಪರಿಪೂರ್ಣ ಸಂಖ್ಯೆಗಳು

ಸಂಖ್ಯಾಪ್ರಿಯ

ವಿವಿಧ ಸಂಖ್ಯೆಗಳ ಅಧ್ಯಯನ ಆನಂದವನ್ನು ಉಂಟುಮಾಡುತ್ತದೆ. ಉದಾಹರಣೆಗೆ 4ರ ಅಪವರ್ತನಗಳು 1 ಮತ್ತು 2 (4ನ್ನು ಪರಿಗಣಿಸಿಲ್ಲ). 1 ಮತ್ತು 2ರ ಮೊತ್ತ 3. ಅಪವರ್ತನಗಳ ಮೊತ್ತವು ದತ್ತ ಸಂಖ್ಯೆಗಿಂತ ಕಡಿಮೆಯಾಗಿದೆ. 8ರ ಅಪವರ್ತನಗಳು 1, 2 ಮತ್ತು 4. ಅಪವರ್ತನಗಳ ಮೊತ್ತ 7. ಇದು 8 ಕ್ಕಿಂತ ಕಡಿಮೆಯಾಗಿದೆ. ಈ ರೀತಿ ದತ್ತ ಸಂಖ್ಯೆಗಳ ಅಪವರ್ತನಗಳ ಮೊತ್ತವು ದತ್ತ ಸಂಖ್ಯೆಗಿಂತ ಕಡಿಮೆ ಇದ್ದರೆ ಅವುಗಳನ್ನು ನ್ಯೂನಸಂಖ್ಯೆಗಳೆಂದು ಕರೆಯುತ್ತೇವೆ.

12ರ ಅಪವರ್ತನಗಳು 1, 2, 3, 4, 6, (12ನ್ನು ಪರಿಗಣಿಸಿಲ್ಲ). ಇವುಗಳ ಮೊತ್ತ 16: ಇದು 12ಕ್ಕಿಂತಲೂ ಅಧಿಕವಾಗಿದೆ. 20ರ ಅಪವರ್ತನಗಳು, 1, 2, 4, 5, 10 (20ನ್ನು ಪರಿಗಣಿಸಿಲ್ಲ) ಇವುಗಳ ಮೊತ್ತ 22. ಇದು 20ಕ್ಕಿಂತಲೂ ಅಧಿಕವಾಗಿದೆ. ಈ ತೆರನಾದ ಸಂಖ್ಯೆಗಳನ್ನು ಸಮೃದ್ಧಿಸಂಖ್ಯೆಗಳೆಂದು ಕರೆಯುತ್ತೇವೆ.

ಆದರೆ ಕೆಲವು ಸಂದರ್ಭಗಳಲ್ಲಿ ದತ್ತ ಸಂಖ್ಯೆಯ ಅಪವರ್ತನಗಳ ಮೊತ್ತವು ದತ್ತ ಸಂಖ್ಯೆಗೆ ಸಮನಾಗಿರುತ್ತದೆ. ಹೀಗೆ ಸಂಖ್ಯೆಯ ಅಪವರ್ತನಗಳ ಮೊತ್ತವು ಆ ಸಂಖ್ಯೆಗೆ ಸಮನಾದರೆ, ಆ ಸಂಖ್ಯೆಗೆ ಪರಿಪೂರ್ಣ ಸಂಖ್ಯೆ ಎಂದು ಹೆಸರು. 6 ಎನ್ನುವುದು ಸಂಖ್ಯೆ. ಇದರ ಅಪವರ್ತನಗಳು 1, 2, 3 (6ಅನ್ನು ಗಣನೆಗೆ ತೆಗೆದುಕೊಳ್ಳುವುದಿಲ್ಲ.). 1, 2, 3ರ ಮೊತ್ತ 6. ಇದು ದತ್ತ ಸಂಖ್ಯೆಗೆ ಸಮ. ಆದುದರಿಂದ 6 ಎಂಬುದು ಪರಿಪೂರ್ಣ ಸಂಖ್ಯೆ. ಈ ತರಹದ ಸಂಖ್ಯೆಗಳು ಸಂಖ್ಯಾ ಪ್ರಪಂಚದಲ್ಲಿ ಅತಿವಿರಳ. ಮೊಟ್ಟಮೊದಲನೆಯ ಸಂಖ್ಯೆ 6 ಮುಂದಿನ ಸಂಖ್ಯೆ. 28 28ರ ಭಾಜಕಗಳು 1, 2, 4, 7, 14 (28ಅನ್ನು ಗಣನೆಗೆ ತೆಗೆದುಕೊಳ್ಳುವುದಿಲ್ಲ) ಇವುಗಳ ಮೊತ್ತ 28. ಆದುದರಿಂದ 28 ಎಂಬುದು ಪರಿಪೂರ್ಣ ಸಂಖ್ಯೆ. ಮುಂದಿನ ಸಂಖ್ಯೆಗಳು ಕ್ರಮವಾಗಿ 496 ಮತ್ತು 8128 ಹೀಗೆ, ಈ ವರೆಗೆ ಕೇವಲ 17 ಸಂಖ್ಯೆಗಳು ಮಾತ್ರ ಕಂಡುಹಿಡಿಯಲ್ಪಟ್ಟಿವೆ. ಈ ಸಂಖ್ಯೆಗಳು ಎಷ್ಟಿವೆ ಎಂಬುದು ನಿರ್ಧಾರವಾದರೆ, ಆ ಕೊನೆಯ ಸಂಖ್ಯೆ ಯಾವುದು? ಬಹುಶಃ ಅದು ದೈತ್ಯಸಂಖ್ಯೆಯೇ ಆಗಿರಬೇಕು.

ಸುಪ್ರಸಿದ್ಧ ಗಣಿತಜ್ಞ ಯುಕ್ಲಿಡ್ ಎಂಬುವನು ಕ್ರಿಸ್ತ ಪೂರ್ವ 3ನೇ ಶತಮಾನದಲ್ಲಿ ಪರಿಪೂರ್ಣ ಸಂಖ್ಯೆಗಳಿಗೆ ಸಂಬಂಧಿಸಿದಂತೆ ಒಂದು ಸೂತ್ರವನ್ನು ಪ್ರತಿಪಾದಿಸಿದನು. ಈ ಸೂತ್ರವು

$$2^{n-1}\ (2^n - 1)$$

ಇದರಲ್ಲಿ 2^n-1 ಎಂಬುದು ಅವಿಭಾಜ್ಯಸಂಖ್ಯೆಯಾದರೆ, ಸೂತ್ರವು ಪರಿಪೂರ್ಣ ಸಂಖ್ಯೆಯನ್ನು ನೀಡುತ್ತದೆ.

$$n = 2,\ 2^{2-1}\ (2^2 - 1) = 2 \times 3 = 6 \ldots.$$

(ಪರಿಪೂರ್ಣ ಸಂಖ್ಯೆ)

$n = 3,\ 2^{3-1}\ (2^3 - 1) = 4 \times 7 = 28 \ldots$
(ಪರಿಪೂರ್ಣ ಸಂಖ್ಯೆ)

ಇದರಲ್ಲಿ 3 ಮತ್ತು 7 ಅವಿಭಾಜ್ಯ ಸಂಖ್ಯೆಗಳಾದ್ದರಿಂದ ಪರಿಪೂರ್ಣಸಂಖ್ಯೆಗಳು ಲಭ್ಯವಾದವು.


$n = 4,\ 2^{4-1}\ (2^4 - 1) = 8 \times 15 = 120.$

ಇದು ಪರಿಪೂರ್ಣ ಸಂಖ್ಯೆಯಲ್ಲ. ಇದಕ್ಕೆ ಕಾರಣ 15 ಎಂಬುದು ಅವಿಭಾಜ್ಯಸಂಖ್ಯೆಯಲ್ಲ.

ಪರಿಪೂರ್ಣ ಸಂಖ್ಯೆಗಳ ಪಟ್ಟಿ

1. $2^{2-1}\,(2^2 - 1) = 6$
2. $2^{3-1}\,(2^3 - 1) = 28$
3. $2^{5-1}\,(2^5 - 1) = 496$
4. $2^{7-1}\,(2^7 - 1) = 8128$
5. $2^{12}\,(2^{13} - 1) = 33,550,336$
6. $2^{16}\,(2^{17} - 1) = 8,589,869,056$
7. $2^{18}\,(2^{19} - 1 = 137,\ 438,\ 691,\ 328$
8. $2^{30}\ (2^{31}-1) = 2,\ 305,\ 843\cdot 008,\ 139,\ 952,\ 128$
9. $2^{60}\ (2^{61}-1) = 2,\ 658,\ 455,\ 991,\ 569,\ 831,\ 744,\ 654,\ 692,\ 615,\ 953,\ 842,\ 176.$
10. $2^{88}\ (2^{89}-1) = \ldots\ldots\ldots\ldots$
11. $2^{106}\ (2^{107}-1) \ldots\ldots\ldots\ldots$
12. $2^{126}\ (2^{127}-1) = \ldots\ldots\ldots\ldots$

ಕ್ರಿಸ್ತ ಪೂರ್ವ 5ನೇ ಶತಮಾನದಲ್ಲಿ ಸಂಖ್ಯಾ ಸಿದ್ಧಾಂತಿ ಪೈಥಾಗೊರಸ್ ಎಂಬ ಗ್ರೀಕ್ ಗಣಿತಜ್ಞನು ಪರಿಪೂರ್ಣ ಸಂಖ್ಯೆಗಳ ವಿಷಯವನ್ನು ಪ್ರಚಾರಕ್ಕೆ ತಂದನು. ಯೆಹೂದಿ ವಂಶಸ್ಥನಾದ ನಿಕೋಮಾಕಸ್ ಎಂಬ ಗ್ರೀಕ್ ಗಣಿತಜ್ಞನಿಗೆ ಕ್ರಿ.ಶ. ಒಂದನೇ ಶತಮಾನದಲ್ಲಿ ಈ ಪರಿಪೂರ್ಣ ಸಂಖ್ಯೆಗಳ ವಿಷಯ ತಿಳಿದಿತ್ತು. ಮೊದಲಿನ 4 ಸಂಖ್ಯೆಗಳು ಮಾತ್ರ ಅವನಿಗೆ ಗೊತ್ತಿತ್ತು. ಅವನು ಅಂಕಗಣಿತಕ್ಕೆ ಸಂಬಂಧ



"ಈಗ ಎಸ್. ಜಾನಕಿ ಹಾಡಿರುವ ಗೀತೆ. ಚಿತ್ರ...ಇದನ್ನು ಕೇಳಲು ಇಚ್ಛಿಸುವವರು ಭದ್ರಾವತಿಯಿಂದ ಶ್ರೀರಮೇಶ್, ಬೆಂಗಳೂರಿನಿಂದ ನಾಗರಾಜ್, ಹುಬ್ಬಳ್ಳಿಯಿಂದ ರಮಾ-ಉಮಾ-ವೆಂಕಟೇಶ್, ಹೊಸಕೋಟೆಯಿಂದ ಹನುಮಯ್ಯ, ಸಾಗರದಿಂದ ಹಯವದನರಾವ್-ಅನಂತ-ಉಷಾ ಮತ್ತು ಮನೆಯವರು......ಮಳವಳ್ಳಿಯಿಂದ......"

ಪಟ್ಟಂತೆ ಎರಡು ಗ್ರಂಥಗಳನ್ನು ಬರೆದನು. ಅವನಿಗೆ ಸಂಖ್ಯಾಸಿದ್ಧಾಂತದಲ್ಲಿ ವಿಶೇಷವಾದ ಆಸಕ್ತಿಯಿತ್ತು. ಇವನ ಗ್ರಂಥಗಳು ಸಾವಿರ ವರ್ಷಗಳ ವರೆಗೆ ಪ್ರಚಾರದಲ್ಲಿದ್ದವು.

15ನೇ ಶತಮಾನದ ಹೊತ್ತಿಗೆ 5 ಪರಿಪೂರ್ಣ ಸಂಖ್ಯೆಗಳು ತಿಳಿದಿದ್ದವು. ಇನ್ನೂ 3 ಸಂಖ್ಯೆಗಳು ಕಂಡು ಹಿಡಿಯಲ್ಪಟ್ಟವು. 8ನೇ ಸಂಖ್ಯೆಗೆ ಸಂಬಂಧಿಸಿದ 2^{31-1} ಎಂಬುದು ಅವಿಭಾಜ್ಯ ಸಂಖ್ಯೆ ಎಂದು ಫ್ರೆಂಚ್ ಗಣಿತಜ್ಞನಾದ ಫರ್ಮಾ ಎಂಬುವನು ಕಂಡುಹಿಡಿದನು. ಇದನ್ನು ಮುಂದೆ ಸ್ವಿಜರ್ಲೆಂಡಿನ ಆಯ್ಲರ್ ಎಂಬ ಗಣಿತಜ್ಞನು ಕ್ರಿ.ಶ. 1730 ರಲ್ಲಿ ಸಮರ್ಥಿಸಿದನು. ಇತ್ತೀಚೆಗೆ, ಇನ್ನೂ 9 ಪರಿಪೂರ್ಣ ಸಂಖ್ಯೆಗಳನ್ನು ಕಂಡು ಹಿಡಿದಿದ್ದಾರೆ. 17ನೆಯ ಪರಿಪೂರ್ಣ ಸಂಖ್ಯೆ ದೈತ್ಯಾಕಾರದಲ್ಲಿದೆ. ಇದರಲ್ಲಿ 1373 ಅಂಕಗಳು ಇರುತ್ತವೆ. 23ನೇ ಪರಿಪೂರ್ಣ ಸಂಖ್ಯೆಯು ಇನ್ನೂ ದೊಡ್ಡದಾಗಿದೆ. ಇದರಲ್ಲಿ 3376 ಅಂಕಗಳಿವೆ ಎಂದು ಹೇಳಲಾಗಿದೆ.

ಇದರಲ್ಲಿ ವಿಚಿತ್ರವೇನೆಂದರೆ ಈಗ ಕಂಡು ಹಿಡಿದಿರುವ ಸಂಖ್ಯೆಗಳ ಪೈಕಿ ಎಲ್ಲವೂ ಸಮ ಸಂಖ್ಯೆಗಳು. ಯೂಕ್ಲಿಡನ ಸೂತ್ರವು ನಿಜವಾಗಿದ್ದಲ್ಲಿ, ಪರಿಪೂರ್ಣ ಸಂಖ್ಯೆಗಳೆಲ್ಲವೂ ಸಮ ಸಂಖ್ಯೆಗಳೇ ಆಗಿರುತ್ತವೆ.

ಇಂದಿನವರೆಗೆ ಬೆಸಸಂಖ್ಯೆ ಒಂದೂ ದೊರಕಿಲ್ಲ. ಅದು ಇದೆಯೋ, ಇಲ್ಲವೋ ಎಂಬುದೂ ತಿಳಿಯದು. ಸಮಸಂಖ್ಯೆಗಳ ಪೈಕಿಯೂ ಸಹ, ಅವುಗಳ ಕೊನೆಯಲ್ಲಿ 6 ಅಥವಾ 28 ಇರುತ್ತದೆ. ಒಂದು ಪಕ್ಷ ಕಂಡು ಹಿಡಿಯಲ್ಪಟ್ಟರೆ ಮುಂದಿನ ಸಂಖ್ಯೆಯಲ್ಲಿಯೂ ಸಹ 6 ಅಥವಾ 28 ಇರುತ್ತದೆಯೇ? ಇದು ಸ್ವಾರಸ್ಯಕರ ವಿಷಯ.

☼

‘ಹಿಮಮಾನವ’ನ ವೃತ್ತಾಂತ

1872 ವಿಪರೀತ ಬಿರುಗಾಳಿಯಿಂದಾಗಿ ಕಲಕತ್ತಾ ಎಂಬ ಹೆಸರಿನ ಹಡಗು ಕೆನಡಾದ ಗ್ರೈಂಡ್‌ಸ್ಟೋನ್ ಐರ್ಲಂಡಿನ ಬಳಿ ಬಂಡೆಗಳ್ಳಿಗೆ ಅಪ್ಪಳಿಸಿ ನುಚ್ಚು-ನೂರಾಗಿತ್ತು. ಬಿರುಗಾಳಿ ಶಾಂತವಾದ ಕೂಡಲೆ ಸಮುದ್ರ ತೀರಕ್ಕೆ ಬಿದ್ದ ಹಡಗದಲ್ಲಿನ ಸಾಮಾನುಗಳನ್ನು ಎತ್ತಿಕೊಳ್ಳಲು ಅಲ್ಲಿನ ಕೆಲವು ಬಾಲಕರು ಉದ್ಯುಕ್ತರಾದರು. ಆದರೆ ಅವರು ತೀರವನ್ನು ಸೇರುವುದೇ ತಡ, ಹಿಮಮಾನವ ತಮ್ಮತ್ತ ಧಾವಿಸುತ್ತಿರುವುದನ್ನು ಕಂಡು ಭಯಾಕ್ರಾಂತರಾಗಿ ತಮ್ಮ ತಮ್ಮ ಮನೆಗಳಿಗೆ ಓಡಿ ಹೋದರು. ಈ ಹಿಮಮಾನವನ ಸುದ್ದಿ ಊರಲ್ಲೆಲ್ಲಾ ಹಬ್ಬಿತು. ಜನ ಅವನನ್ನು ಶೋಧಿಸಬೇಕೆಂದು ಗುಂಪುಗುಂಪಾಗಿ ಹೋದರು. ಅವರೆಲ್ಲ ಹಿಮದಲ್ಲಿ ಮೂಡಿದ ಹೆಜ್ಜೆಯ ಜಾಡನ್ನು ಹಿಡಿದು ಹೊರಟಾಗ ಹಿಮಾವೃತನಾದ ವ್ಯಕ್ತಿಯೊಬ್ಬ ಬಿದ್ದಿರುವುದು ಕಾಣಿಸಿತು. ಅವರು ಅವನ ಮೈಮೇಲಿನ ಹಿಮವನ್ನು ಕೊಡವಿ ಪ್ರಥಮೋಪಚಾರವನ್ನು ನೀಡಿದ ನಂತರ, ತಾನು ಆ ಹಡಗಿಗೆ ಸೇರಿದವನೆಂದೂ ಸಹಾಯಕ್ಕಾಗಿ ಯಾರ ಬಳಿಯಾದರೂ ಧಾವಿಸಿದಾಗ ಮೈಮೇಲಿನ ಹಿಮವನ್ನು ಕಂಡು ನನ್ನನ್ನು ಹಿಮಮಾನವನೆಂದು ಭಾವಿಸಿ ಓಡುತ್ತಿದ್ದುದಾಗಿಯೂ ಹೇಳಿದ. ಆತ ತನ್ನ ತಾಯ್ನಾಡಿಗೆ ಮರಳಲಿಲ್ಲ. ಬದಲು ಅಲ್ಲಿಯೆ ಒಬ್ಬಳನ್ನು ಮದುವೆಯಾಗಿ ಸಂಸಾರ ಹೂಡಿದ. ಹೀಗಾಗಿ ಇಂದು ಗ್ರೈಂಡ್‌ಸ್ಟೋನ್ ಐರ್ಲಂಡಿನ ಕೆಲವು ಜನ ನಿಜವಾಗಿಯೂ ತಾವು ಹಿಮಮಾನವನ ವಂಶದವನೆಂದು ತಮಾಷೆಗಾಗಿ ಹೇಳುತ್ತಾರೆ.



ಹಕ್ಕಿಗಳ ಕೊಕ್ಕುಗಳು

ನೀರಡಿಸಿದ ಕಾಗೆ ಆ ಮಣ್ಣಿನ ಕೊಡದ ಮೇಲೆ ಕುಳಿತು ಒಳ ಇಣುಕಿತು. ತೀರ ಕೆಳಗೆ ತಳದಲ್ಲಿ ಬೊಗಸೆಯಷ್ಟು ಮಾತ್ರ ನೀರಿತ್ತು. ಏನು ಮಾಡುವುದು? ಬಾಗಿದರೂ ನೀರು ನಿಲುಕುವುದಿಲ್ಲ. ಕಾಗೆಗೆ ಉಪಾಯವೊಂದು ಹೊಳೆಯಿತು. ಹತ್ತಾರು ಬಾರಿ ಹಾರಿ ಹಾರಿ ಬಂದು, ಬಾಯಲ್ಲಿ ಕಲ್ಲು ಹಳ್ಳುಗಳನ್ನು ಕಚ್ಚಿ ತಂದು ಒಳ-ಗೆಸೆಯಿತು. ನೀರು ಮೇಲಕ್ಕೆ ಬಂತು. ಕಾಗೆ ತನ್ನ ನೀರಡಿಕೆ ಹಿಂಗಿಸಿಕೊಂಡು ಆನಂದದಿಂದ ಹಾರಿಹೋಯಿತು..." ಮಕ್ಕಳಿಗೆ ಪಠ್ಯದಲ್ಲಿರುವ ಪಾಠ ಇದು. ಇಲ್ಲಿ ವಾಸ್ತವಕ್ಕಿಂತ ತರ್ಕಕ್ಕೇ ಹೆಚ್ಚು ಮಹತ್ವ. ಉಪಾಯ ಹುಡುಕುವಿಕೆಯ ಬಗ್ಗೆ ಮಕ್ಕಳಿಗಿಷ್ಟು ತಿಳುವಳಿಕೆ ನೀಡುವ ಉದ್ದೇಶ. ನೀರು ಮೇಲೆ ಬರುವವರೆಗೆ ಎಷ್ಟು ಹಳ್ಳುಗಳನ್ನು ಕಾಗೆ ಆಯ್ದು ತಂದಿರಬೇಕು ಮತ್ತು ಹಳ್ಳುಗಳನ್ನು ತಂದು ಹಾಕುವವರೆಗೆ ನೀರಡಿಕೆ ದ್ವಿಗುಣಗೊಂಡಿರಲಿಕ್ಕಿಲ್ಲವೇ?

ಅಲ್ಲಿ ನಾವು ಗಮನಿಸಬೇಕಾದ್ದು ಅದು ತನ್ನ ಕೊಕ್ಕನ್ನು ಬಳಸಿಕೊಂಡ ರೀತಿಯನ್ನು ಮಾತ್ರ.

ಖಗಲೋಕದ ವೈಚಿತ್ರ್ಯಗಳಲ್ಲಿ ಅವುಗಳ ಕೊಕ್ಕುಗಳಿಗೆ ಮಹತ್ವದ ಸ್ಥಾನ. ಸಾವಿರಾರು ಬಗೆಯ ಜಾತಿಯ ಪಕ್ಷಿಗಳಿವೆ. ನಾನಾ ಬಗೆಯ ಕೊಕ್ಕುಗಳನ್ನು ಹೊಂದಿ. ಅವುಗಳ ಕೊಕ್ಕುಗಳನ್ನು ನೋಡಿಯೇ ಇದು ಇಂಥ ಪಕ್ಷಿ ಎಂದು ಗುರುತಿಸಲಾಗುತ್ತದೆ. ಕೊಕ್ಕು ಎಂದರೆ ಹಕ್ಕಿಯ ಮೇಲ್ದವಡೆ–ಕೆಳದವಡೆಗಳ ಮುಂಚಾಚಿದ ಮೂಳೆಯ ಭಾಗ. ಕೊಕ್ಕುಗಳಲ್ಲಿ ಹಕ್ಕಿಯ ಮೂಗಿನ ಹೊಳ್ಳೆಗಳೂ ಸೇರಿಕೊಂಡಿವೆ. ಇನ್ನೂ ಒಂದು ವೈಚಿತ್ರ್ಯವೆಂದರೆ ಪಕ್ಷಿಯ ಗಾತ್ರಕ್ಕೂ ಅವುಗಳ ಕೊಕ್ಕುಗಳಿಗೂ ಇರುವ ಅಂತರ; ಬೃಹದ್ ಗಾತ್ರದ ಮರದಲ್ಲಿ ಚಿಕ್ಕ ಕಾಯಿ–ಹಣ್ಣು ಬಿಡುವಂತೆ. ರಣಹದ್ದಿನಂಥ ದೊಡ್ಡ – ಭಯಂಕರ ಪಕ್ಷಿಗೆ ಸಣ್ಣ ಕೊಕ್ಕು; ಮರಕುಟಿಗದಂಥ ಪಕ್ಷಿಗೆ ಉದ್ದವಾದ ಕೊಕ್ಕು!

ಬಾಗಿದ, ಉದ್ದವಾದ, ಹುಂತವಾದ, ಕೊಳವೆಯಾಕಾರದ, ಮೇಲ್ಬಾಗಿದ ಹೀಗೆ ನೂರಾರು ಆಕಾರದ ಕೊಕ್ಕುಗಳಿವೆ. ಅವುಗಳ ಬಣ್ಣಗಳೂ ಬೇರೆ ಬೇರೆ. ಪಕ್ಷಿಯ ದೇಹದ ಬಣ್ಣವೊಂದಾದರೆ ಕೊಕ್ಕಿನ ಬಣ್ಣವೇ ಬೇರೆ. ಗಿಳಿಯ ದೇಹದ ಬಣ್ಣ ಹಸಿರಾದರೆ ಕೊಕ್ಕು ಕೆಂಪಾದದ್ದು. ಕೆಲವು ಪಕ್ಕಿಗಳಿಗೆ ಚಮ್ಮಚದಂಥ ಕೊಕ್ಕು. ಇನ್ನು ಕೆಲ ಪಕ್ಕೆ ಒಂದೇ ರೀತಿಯ ಚಿಕ್ಕ ಕೊಕ್ಕು. ಕಾಗೆಗಿರುವ ಕೊಕ್ಕು ಕತ್ತರಿಯಂಥದು. ಇಂಥ ಕತ್ತರಿಯಾಕಾರದಲ್ಲೇ ಬೇರೆ ಬೇರೆ ಅಳತೆಯ ಕೊಕ್ಕುಗಳನ್ನು ನಾವು ಕಾಣುತ್ತೇವೆ.





൧൦
൧൧
൧൨

ಮಾಂಸ ಹರಿಯುವ ಕೊಕ್ಕು ಅಥವಾ ಕತ್ತರಿಸುವ ಕೊಕ್ಕು ಕಾಗೆ–ಹದ್ದುಗಳಿಗಿದೆ. ಹೂವಿನ ಮಕರಂದವನ್ನು ಹೀರುವ ಕೊಳವೆಯಾಕಾರದ ಕೊಕ್ಕು ಮಧುಪಕ್ಷಿಗೆ. ಇದನ್ನು ಪರ್ಪಲ್ ಸನ್‌ಬರ್ಡ್ ಎಂದು ಕರೆಯುವುದುಂಟು. ಕಟ್ಟಿಗೆ ಕುಕ್ಕುವ ಮರಕುಟಿಗ ಪಕ್ಕಿಗೆ ಚೂರಿಯಂಥ ಕೊಕ್ಕು. ಸ್ಪಿಲ್ಬ್‌ಸಂಥ ಮಣ್ಣು ಅಗೆಯುವ ಪಕ್ಕಿಗಳಿಗೆ ಪಿಕಾಸೆಯಾಕಾರದ ಕೊಕ್ಕು. ಮೀನು ಹಿಡಿಯುವ ಜಲಪಕ್ಷಿಗಳಿಗೆ ಉದ್ದವಾದ, ಗರಗಸದಾಕಾರದ ಕೊಕ್ಕು. ಈಗ ಜೀವಂತವಾಗಿರುವ ಯಾವ ಹಕ್ಕಿಯ ಕೊಕ್ಕಿನಲ್ಲೂ ಹಲ್ಲುಗಳಿಲ್ಲ. ಮಣ್ಣು ಅಗಿಯುವ ಮತ್ತೊಂದು ಪಕ್ಷಿ ಫ್ಲೆಮಿಂಗೋಕ್ಕೆ ಕೂಡ ದೊಡ್ಡ ಪಿಕಾಸೆಯಂಥ ಕೊಕ್ಕಿದೆ. ಕ್ರಾಸ್‌ಬಿಲ್ ಎಂಬ ಹಕ್ಕಿಯ ಕೊಕ್ಕು ವಿಚಿತ್ರವಾದದ್ದು. ಕೊಕ್ಕಿನ ಮೇಲ್ಭಾಗ ಮತ್ತು ಕೆಳಭಾಗಗಳು ಒಂದನ್ನೊಂದು ಅಡ್ಡ ಹಾಯುತ್ತವೆ. ಮೇಲ್ಭಾಗ ಬಲಕ್ಕೂ ಕೆಳಭಾಗ ಎಡಕ್ಕೂ ತಿರುಗಿಕೊಂಡಿರುತ್ತವೆ. ಕಾಳು ಒಡೆಯುವ ಗುಬ್ಬಿಯಂಥ ಪಕ್ಷಿಗಳಿಗೆ ಹರಿತವಾದ ಚಿಕ್ಕ ಕೊಕ್ಕುಗಳಿವೆ. ನ್ಯೂಜಿಲೆಂಡಿನ ಗಂಡು ಹೊಯಿಯ ಹಕ್ಕಿಗೆ ಒಂದು ತರದ ಕೊಕ್ಕು ಇದ್ದರೆ, ಹೆಣ್ಣಿಗೆ ಮತ್ತೊಂದು ಆಕಾರದ ಕೊಕ್ಕು.

ಒಂದೇ ಬಗೆಯ ಕೊಕ್ಕುಗಳುಳ್ಳ ಸಾಮಾನ್ಯ ಪಕ್ಷಿಗಳು ಇವು: ಕಾಗೆ, ಕಾಡುಕಾಗೆ, ಕಾಡುಗುಬ್ಬಿ, ನಾಡಗುಬ್ಬಿ ಮತ್ತು ಹಳದಿ ವ್ಯೆಯ ಗುಬ್ಬಿ ಮುಂತಾದವುಗಳಿಗೆ ಒಂದೇ ತರಹದ ಆದರೆ ಬೇರೆ ಅಳತೆಯ ಕೊಕ್ಕುಗಳು. ಬಾಬ್ಲರ್ ಹಕ್ಕಿಯಲ್ಲಿ ಆರು ಜಾತಿ. ಅವುಗಳ ಕೊಕ್ಕುಗಳು ಬೇರೆ ಅಳತೆಯವಾದರೂ ಆಕಾರ ಒಂದೇ. ಅದೇ ರೀತಿ ಬುಲ್‌ಬುಲ್ ಹಕ್ಕಿಯದು. ಮತ್ಸ್ಯಾಹಾರಿ ಹಕ್ಕಿಗಳ ಕೊಕ್ಕು ಅಗಲವಾಗಿಯೂ, ಚಪ್ಪಟೆಯಾಗಿಯೂ ಇರುತ್ತದೆ. ಕೊಕ್ಕಿನ ಎಡಬಲವಲ್ಲಿ ಜರಡಿಯಂಥ ರಚನೆಯಿರುತ್ತದೆ. ಇವು ನೀರನ್ನು ಕುಡಿದಾಗ, ಮೀನುಗಳು ಮಾತ್ರ ಬಾಯಲ್ಲಿ ಉಳಿದು ನೀರೆಲ್ಲ ಜರಡಿಯ ಮೂಲಕ ಸೋಸಿ ಬೀಳುತ್ತದೆ.

ಕಾಳು ಕಡಿಯುವ ಕೊಕ್ಕಿಗೂ, ಹುಳು ಹಿಡಿಯುವ ಕೊಕ್ಕಿಗೂ ಸಾಕಷ್ಟು ಸಾಮ್ಯವಿದೆ. ಜೇನು ತುಪ್ಪ ಕುಡಿಯುವ ಬೀ ಈಟರ್ ಹಕ್ಕಿಗೂ, ಕಿಂಗ್‌ಫಿಶರ್ ಹಕ್ಕಿಯ ಕೊಕ್ಕಿಗೂ ಇರುವ ಅಂತರವೆಂದರೆ ಆಕಾರದ್ದಲ್ಲ, ಗಾತ್ರದ್ದು. ಗೂಬೆಯಲ್ಲಿ ಹತ್ತು ವಿಧ. ಅವುಗಳ ಆಕಾರ– ಮುಖ ಬೇರೆ ಬೇರೆಯಾದರೆ ಕೊಕ್ಕು ಮಾತ್ರ ಒಂದೇ. ಈ ಕೊಕ್ಕು ಸವೆದಂತೆಲ್ಲ ತಳದಿಂದ ಹೊಸ ಪದರ ಹುಟ್ಟಿಕೊಳ್ಳುತ್ತದೆ.

ಕೇವಲ ಆಹಾರ ತಿನ್ನಲು ಮಾತ್ರ ಕೊಕ್ಕು ಉಪಯುಕ್ತ ಎಂದು ತಿಳಿಯಬೇಡಿ. ಅದು ಆಯಾ ಪಕ್ಷಿಗೆ ಸೃಷ್ಟಿಪತ್ತ ಆಯುಧ ಕೂಡ.

ಈ ಕೊಕ್ಕುಗಳು ತುಂಬ ಆಕರ್ಷಣೀಯ. ಹಕ್ಕಿಯ ಆಹಾರಕ್ರಮದ ಸಂಕೇತಗಳು ಕೂಡ.

ಚಿತ್ರ ವಿವರ

೧ ಕತ್ತಿಯಂತೆ ಬಾಗಿದ ಉದ್ದವಾದ ಕೊಕ್ಕು ಇರುವ ಕಲ್ಯೂರ್ ಹಕ್ಕಿ.

೨ ಸದಾ ನಗುವಂತೆ ಕಾಣುವ ಕೊಕ್ಕಿನ ಕೂಕ್‌ಬುರ್ರಾ.

೩ ಛಾಲೆಯ ತುದಿಯಂತೆ ಕಾಣುವ ಕೊಕ್ಕು ಪಫಿನ್ ಹಕ್ಕಿಗೆ.

೪ ಮನುಷ್ಯನ ಮೂಗನ್ನು ಹೋಲುವ ಚಿಕ್ಕನ ಮುಖದ ಮಿಲ್ಕಿ ಈಗಲ್ ಔಲ್ (ಗೂಬೆ)ಯ ಕೊಕ್ಕು.

೫ ‘ಗಿಣಿ ಮೂಗು’ ಎಂದು ಪ್ರಸಿದ್ಧವಾಗಿರುವ ಬಾಗಿದ ಕೊಕ್ಕಿನ ಗಿಳಿ.

೬ ಗಿಡ ಕತ್ತರಿಸುವ ಕತ್ತರಿಯಂತಹ ಕೊಕ್ಕು ಇರುವ ಟೋಕೋ ಟೌಕಾನ್.

೭ ಕೊಳವೆಯಾಕಾರದ ತನ್ನ ಕೊಕ್ಕಿನಿಂದ ಹೂವಿನ ಮಧು ಹೀರುವ ಹಮಿಂಗ್‌ಬರ್ಡ್.

೮ ಚಮ್ಮಚದಂತಹ ಕೊಕ್ಕುಳ್ಳ ರೋಸೆಟ್.

೯-೧೦ ಮಾಂಸ ಕಿತ್ತು ತಿನ್ನಲು ಯೋಗ್ಯವಾದ ಹರಿತವಾದ ಕೊಕ್ಕಿರುವ ರಣಹದ್ದು ಮತ್ತು ಚಿಲಿಯನ್ ಫ್ಲೆಮಿಂಗೋ.

೧೧ ಬಿಳಿ ಕತ್ತಿನ ಕಿಂಗ್‌ಫಿಶರ್ ಹಕ್ಕಿಯ ಬಲೆಯಂಥ ಕೊಕ್ಕು.

೧೨ ಕೊಂಬುಗಳ ಆಕಾರದ ಕೊಕ್ಕು ಇರುವ ಗ್ರೇಟ್ ಹಾರ್ನ್‌ಬಿಲ್.

ವಾಸನೆ

೧. ಕೇವಲ ವಾಸನೆಯು ಪ್ರಶ್ನೆಯಲ್ಲ;
ಇದು ವಾಸನೆಯ ಹಿಂದಿನ ವ್ಯಕ್ತಿಯ ಪ್ರಶ್ನೆಯೂ ಅಲ್ಲ.
ಗಾಳಿ ಬೀಸುವುದರಿಂದ
ವಾಸನೆಯೂ ಪಸರಿಸುತ್ತದೆ ಖಂಡಾಂತರ.
ವ್ಯಕ್ತಿಗಳಳಿಯುತ್ತಾರೆ,
ರಾಜ್ಯ-ದೇಶಗಳೇಳುಬೀಳುಗಳು ಜರಗುತ್ತಲಿರುತ್ತವೆ.
ಚರಿತ್ರೆ, ಸಾಹಿತ್ಯ ಅಖಂಡವಾಗಿ ಬೆಳೆಯುತ್ತಾ ಹೋಗುತ್ತದೆ.
ಪ್ರಭಾವ-
ಹಿಗ್ಗುವ ಪ್ರಶ್ನೆಯಾಗಿಯೇ ಉಳಿದು ಹೋಗುತ್ತದೆಯೇ ಹಾಗಾದರೆ?

೨. ಛತ್ರದ, ತಿಪ್ಪೆಯಲಿ ಚದರಿದೆಂಜಲೆಲೆಗಳಗಳುಗಳ
ಮೇಲೆ ಗಿಜಗುಟ್ಟುವ
ಕೈ ಬಾಯಿ, ಕಾಗೆ- ನಾಯಿಗಳ ನಕ್ಷತ್ರರಾಶಿ
ಜೊಳ್ಳು ಹೊಟ್ಟೆಯ ಸರಹರಿದ ಮೂಗು
ಗಳ ತಟ್ಟುವುದೇ ಇಲ್ಲದಿದ್ದರೂ,
ಮಾರನೇ ದಿನದ ಚಾರಿತ್ರಿಕ ಪ್ರದರ್ಶನಗಳ
ಭಿತ್ತಿಗಳ ಮೇಲೆ ಛಾಯಾಚಿತ್ರ
ಗಳಾಗಿ ಮಿನುಗಿ
ನವ್ಯದ ವಾಸನೆಯನ್ನಷ್ಟು ದಿಕ್ಕುಗಳಿಗೂ ಬಡಿಸುತ್ತವೆ.

೩. ಲಕ್ಷ ಲಕ್ಷ ಇರುವೆ ಸಾಲುಗಳಲ್ಲಿಳಿವುವೆಷ್ಟೋ
ಉಳಿದವೆಷ್ಟೋ ಗೆಲುವುವೆಷ್ಟೋ
ಸೋಲುವುವೆಷ್ಟೋ-ಯಾರಿಗೆ ಬೇಕು ಲೆಕ್ಕ?
ವೇಳೆಯೂ ಇಲ್ಲ ಬೇಕಾದಷ್ಟು.
ಆದರೆ,
ಆಚೆ ಮನೆಯವಳು ಮುಂಡೆಯಾದ ಗಳಿಗೆಯಲ್ಲೇ ಏನು
ಈಚೆ ಮನೆಯವಳು ಮಿಂಡನ ಕೂಡುವುದು?

೪. ಕಾರ್ಖಾನಾ ಐವತ್ತರಾಚೆಯೂ ಮುಲುಗುದುವ ಯೌವನವನ್ನೂ ಚಿಮ್ಮುತ್ತಿರುವ
ಮಾನವೀಯ ಮೌಲ್ಯಗಳ ಸುವಾಸನೆ,
[illegible], ಉಗಾಂಡಾ, ರಶಿಯದಂಥ ಮೂಗುಗಳಿಗೆ
ಹೊಸಿಗಿಂತ ಕೆಟ್ಟನಾತ
ವಿಧವಿಧ ವಾಸನೆಗಳ ಪಾಲಿಸಿಗಳು!

೫. ಇಯಾನ್‌ಸ್ಮಿತ್–ಪೋರ್ಸ್ಟರರು ಶ್ವೇತ ಮಹಲುಗಳ ಸುತ್ತ
ರಕ್ತ ಹಸಿದ ಕರಿಕಂದಕ ತೋಡಿಕೊಂಡಿರುತಿದ್ದರೂ,
ಬಿ.ಸಿ.ಜಿ; ವಿ.ಓ.ಎ. ಮುಂತಾದ
ನಿರ್ಜೀವ ತುತ್ತೂರಿಗಳೊದುವ ವಾಸನೆ,
ಒಮ್ಮೊಮ್ಮೆ ಸುವರ್ಣಾಕ್ಷರಗಳಲಿ ಕೆತ್ತಿಸಿಕೊಳ್ಳಲರ್ಹವಾದ (!)
ಒಬ್ಬಿಬ್ಬರ ಘೋಷುಗುಡುವ ಢೋಂಗಿ ಸಭೆಗಳನುಳಿದು
ಆಗಿರುವುದಾದರೂ ಏನು?

೬. ಚಂದ್ರನ ಮೇಲೊಂದೂರಿನ
ಬಣ್ಣ ಬ್ರಾಹ್ಮಣರೂ ಕಪ್ಪು ಬಣ್ಣ ಬಳಿದ ಮನೆಗಳ ಪ್ರತ್ಯೇಕ ಕಾಲೋನಿಗಾಗಿ
ತೀರ್ಮಾನವಾಗಿರಬಹುದೇ ಅಮೇರಿಕದ ಮೇಧಾವಿಗಳಿಂದ?
ನಿಮಿಷ ನಿಮಿಷವೂ ಬ್ರಹ್ಮಾಂಡವನೆ ಕುಗ್ಗಿಸಿ ಕೇಕೆ ಹಾಕಿ
ಪ್ರಾಣಿ ಲೋಕದೊಳಗೇ ಪವಾಡ ಬ್ರಹ್ಮವಾಗಿಯೂ
ಮಾನವಾತ್ಮೀಯ ವಾಸನೆಗಳೇ ನಿಲುಕದಂಥ
ಅವಮಾನಸ್ತೋಮವಾ ಹುಟ್ಟದವರಾದರೂ ಯಾರು ಒಳಿತು ಪರಮಾಂಗಕ್ಕೆ?

೭. ಪ್ರಸ್ತುತ ದಿನ ನಿತ್ಯ ಮೆಲುಕಿಸಿಕೊಳ್ಳುತಿರುವ
ವಿವೇಕಾನಂದ, ಗಾಂಧಿ, ಲೂಥರ್‌ಕಿಂಗ್ ಮುಂತಾದವರೇ
ಸಾಲರೇ ಈ ಅಸಂಖ್ಯವಲ್ಲದುದಕ್ಕೆ?
ಎಷ್ಟೊಂದು ಮಂದಿ ಜ್ಞಾತಾಜ್ಞಾತ ಮಹಾತ್ಮ–
ಪುತಾತ್ಮರುದಯ ಅಳಿವಾಗಿಲ್ಲ! ಆಗುತ್ತಿಲ್ಲವೇ ಈಗಲೂ ?
ಉಪಾಧ್ಯಾಯರು ನಿರಂತರ ನಿರತರಾಗಿರಲೇಬೇಕೇನು ಪಾಠದಲ್ಲಿ?
ಬೋನು–ಚಿತ್ರಗಳು, ಸಂಗ್ರಹಾಲಯಗಳು ನಮಗೂ ಬೇಕೇನು?
!? !? !?

೮. 'ಸರ್ವೇ ಜನೋ ಸುಖಿನೋ ಭವಂತು–"
'ಲವ್ ದೈ ನೈಬರ್'–
'ಕಳಬೇಡ, ಕೊಲಬೇಡ, ಹುಸಿಯ ನುಡಿಯಲು ಬೇಡ,'
'ಸಬಕೋ ಸನ್ಮತಿ ದೇ ಭಗವಾನ್'–
–ಈ ವಾಸನೆಗಳಿಲ್ಲ

ಬೀದಿ ಬೀದಿಗಳಲಿ
ದೇಶ–ವಿದೇಶಗಳಲಿ
ಕೊನೆಗೆ ದೇವಾಲಯ, ಬಸದಿ, ಮಸೀದಿ, ಚರ್ಚುಗಳಲಿ
ಎಲ್ಲಿ ಮೂಸಿದರೂ
ಆಳವಾಗಿ ಹೊಳ್ಳೆ ಒಡೆವಂತೆ ಮೂಸಿದರೂ
ಮಿಲಿಯ–ಬಿಲಿಯನಾಂತರಗಳೊಳಗೊಂದಂಶದಷ್ಟು ಶುದ್ಧವಿಲ್ಲವಲ್ಲ ಸ್ವಾಮಿ!
ಎಲ್ಲಡಗಿ ಕೊಳೆಯುತ್ತಿದ್ದಾನೆ ಸ್ವಾಮಿ?

ಅರಕಲಗೂಡು ನೀಲಕಂಠಮೂರ್ತಿ

ವ್ಯಂಗ್ಯಚಿತ್ರ

ಯುರೋಪ್, ಅಮೇರಿಕಗಳಲ್ಲಿ ವ್ಯಂಗ ಚಿತ್ರಗಳ ಪರಿಪಾಠ ನಮ್ಮಲ್ಲಿಗಿಂತ ಬೇಗ ಆರಂಭವಾಯಿತು. ಹಾಗಾಗುವುದಕ್ಕೆ ಕಾರಣ ಪತ್ರಿಕೋದ್ಯಮ ಅಲ್ಲಿ ಮೊದಲು ಪ್ರಾರಂಭವಾಯಿತೆಂಬುದು ನಿಜವಾದರೂ ಬಹಳ ಮಟ್ಟಿಗೆ ಅಲ್ಲಿನ ಮನೋವೃತ್ತಿಯೂ ಹೌದೆಂದು ಹೇಳಬೇಕು.

ಹೊರಗಿನವರ ದೃಷ್ಟಿಯಲ್ಲಿ ಭಾರತೀಯರು ರಸಿಕರಾದರೂ ಸಾಮಾನ್ಯವಾಗಿ ವಿನೋದಪ್ರಿಯರಲ್ಲ. ಹೀಗೆ ಹೇಳುವುದು ನಮ್ಮ ಹಳ್ಳಿಗಾಡಿನ ಮುಗ್ಧ ರಸಿಕರಿಗೆ ನ್ಯಾಯ ಬಗೆದಂತಾಗಲಿಕ್ಕಿಲ್ಲ. ಆದರೆ ಸಾಮಾನ್ಯವಾಗಿ ನಮ್ಮ ಸಮಾಜ ಹತ್ತಾರು ಸ್ತರಗಳಲ್ಲಿ ವಿಭಾಗಗೊಂಡು ಸಂಕುಚಿತವಾಗಿರುವುದರಿಂದ ನಗು, ಹಾಸ್ಯ, ವಿನೋದ, ವ್ಯಂಗ್ಯ ಮುಂತಾದ ಪರಿಕಲ್ಪನೆಗಳಲ್ಲಿಯ ಸೂಕ್ಷ್ಮ ಅಂತರವನ್ನು ಅರ್ಥ ಮಾಡಿಕೊಳ್ಳಲಾಗದೆ ಚಿಲ್ಲರೆ ಕೀಳು ಅಭಿರುಚಿಯು ಹಾಗು ಹರಟೆಯೋ, ಅವಾಚ್ಯ ಮಾತುಗಳೋ ನಮ್ಮ ಹಾಸ್ಯದ ಮಾದರಿಗಳಾಗಿಬಿಟ್ಟಿವೆ. ಇದರಿಂದಾಗಿ ನಮ್ಮ ಭಾಷೆಗಳ ಬೆಳವಣಿಗೆಯೂ ಆ ಮಟ್ಟಿಗೆ ಕುಂಠಿತವೇ ಆಗಿರಬೇಕು. ಭಾಷೆಯು ಪರಿಪುಷ್ಟವಾಗಿ ಬೆಳೆಯಬೇಕಾದರೆ ಶಬ್ದ ಪ್ರಯೋಗದಲ್ಲಿಯ ಸೂಕ್ಷ್ಮ ಭೇದಗಳನ್ನು ಗುರುತಿಸಲು ಅದು ಸಮರ್ಥವಾಗಬೇಕು. ಹಾಗಾಗುವುದಕ್ಕೆ ಹಾಸ್ಯದ ಹತ್ತಾರು ಮುಖಗಳೂ ಸಾಕಷ್ಟು ಕೊಡುಗೆ ನೀಡುತ್ತವೆ.

ಪಾಶ್ಚಿಮಾತ್ಯರ ಮಾನದಿಂದ ಕಡಿಮೆ ಪ್ರಮಾಣದಲ್ಲೆಂದು ಹೇಳಬಹುದಾದರೂ ನಮ್ಮಲ್ಲಿಯೂ ಜಾಗತಿಕ ಮಟ್ಟಕ್ಕೇರಬಲ್ಲ ವ್ಯಂಗ್ಯಚಿತ್ರಕಾರರು ಹುಟ್ಟಿದ್ದಾರೆ; ಬೆಳೆದಿದ್ದಾರೆ. ಶಂಕರ್, ಆರ್. ಕೆ. ಲಕ್ಷ್ಮಣ, ಡಿಬ್ಬು. ಅಬು, ಮಾರಿಯೋ ಮುಂತಾದವರನ್ನು ಎತ್ತಿ ಹೇಳಬಹುದಾಗಿದೆ. ಅದರಲ್ಲೂ ಮೊದಲಿನ ಇಬ್ಬರು ತಮ್ಮ ಸಾಧನೆಗಳಿಂದ ಬಲು ಎತ್ತರಕ್ಕೇರಿದ್ದಾರೆ. ಈ ಸಂಚಿಕೆಯಲ್ಲಿ ಪ್ರಕಟವಾದ 'ವ್ಯಂಗ್ಯ ರೇಖೆಗಳಲ್ಲಿ ಸಮಾಜ ವಿಮರ್ಶೆ' ಲೇಖನದಲ್ಲಿ ಈ ಇಬ್ಬರು ಕಲಾವಿದರ ಕೃತಿಗಳನ್ನು ಎತ್ತಿಕೊಟ್ಟಿದ್ದೇವೆ. ಶಂಕರರ ಹಿರಿಮೆ ಅವರ ಹೆಗ್ಗುರುತೆನಿಸಿದ 'ಬುದ್ಧಿವಂತ ಕತ್ತೆ'ಯ ಚಿತ್ರಗಳಲ್ಲಿ ಕಂಡರೆ ಲಕ್ಷ್ಮಣರವರ ಶ್ರೇಷ್ಠತ್ವವನ್ನು ಚಿತ್ರಕತೆಯೊಂದಿಗೆಯೇ ಇಂಗ್ಲೀಷ ಭಾಷೆಯ ಮೇಲಿರುವ ಅವರ ಪ್ರಭುತ್ವದಲ್ಲೂ ನೋಡಬಹುದಾಗಿದೆ.



ಅದನ್ನೇ ಕೇಳಲಿಲ್ಲ!

ರೈಲು ಆಕ್ಸಿಡೆಂಟ್ ಕೇಸು- ಹರಿಹಾರ ನ್ಯಾಯಾಲಯದಲ್ಲಿ. ಅಪಘಾತ ಸಂಪೂರ್ಣ ಜವಾಬ್ದಾರಿ ರೈಲು ಖಾತೆಯದೇ ಎಂದು ಸಿದ್ಧಪಡಿಸಲು ಪ್ರತಿಪಕ್ಷದ ವಕೀಲ ಹೆಣಗಾಡುತ್ತಿದ್ದ. ರೇಲ್ವೆ ಪೋರ್ಟರನೊಬ್ಬನ ಸಾಕ್ಷಿಯ ಮೇಲೆ ಎಲ್ಲ ಅವಲಂಬಿಸಿತ್ತು. ಪಾಟೀ ಸವಾಲು ಜೋರಾಗಿ ನಡೆಯಿತು.

"ನೀನು ಸಿಗ್ನಲ್ ನೋಡಿದೆಯಾ?"

"ಹೌದು."

"ರೈಲು ಟೈಮು ಗೊತ್ತಿತ್ತೆ?"

"ಹೌದು."

"ರೈಲು ನಿಲ್ಲುವ ಬಗ್ಗೆ ನಿನ್ನ ಕೈಲಿದ್ದ ಲಾಂದ್ರವನ್ನು ತೋರಿಸಿದೆಯಾ?"

"ಹೌದು."

"ಅದನ್ನು ಜೋರಾಗಿ ಅಲುಗಾಡಿಸಿದೆ?"

"ಹೌದು."

"ಆಗ ಗಾಳಿಯಿತ್ತೇ?"

"ಇಲ್ಲ."

ಹೀಗೆಲ್ಲ ಏನು ಪ್ರಶ್ನೆ ಕೇಳಿದರೂ ತಡವರಿಸದೇ ನೇರವಾಗಿ ಉತ್ತರಿಸಿದ್ದ ಆ ನಿರಕ್ಷರಿ ಪೋರ್ಟರ್. ಪ್ರಕರಣ ಮುಗಿದ ಬಳಿಕ ಆ ಪೋರ್ಟರನನ್ನು ಸ್ಟೇಶನ್ ಮಾಸ್ತರರು ಹೊಗಳಿಕೆಗಾಗಿ ಕರೆಯಿಸಿದರು.

"ಪರವಾಯಿಲ್ಲ, ಕೋರ್ಟಿನಲ್ಲಿ ತುಂಬ ಚನ್ನಾಗಿ ಉತ್ತರಿಸಿದೆ. ಅಷ್ಟು ಧೈರ್ಯ ಹೇಗೆ ಬಂತು?"

'ಧೈರ್ಯವೆಲ್ಲಿಯದು ಸ್ವಾಮೀ' ಆ ವಕೀಲರು ನನ್ನನ್ನು ನಾನು ತೋರಿಸುತ್ತಿದ್ದ ಸಿಗ್ನಲ್ ಕಂದೀಲಿಗೆ, 'ದೀಪ ಹಚ್ಚಿತ್ತೇ?' ಎಂದೆಲ್ಲಿ ಕೇಳುವರೋ ಎಂದು ಹೆದರಿದ್ದೆ" ಎಂದ ಪೋರ್ಟರ್!

ವಕೀಲಿ ಸಲ್ಲಾ!

"ನಿಮಗೆ ನನ್ನ ಪ್ರಾಮಾಣಿಕ ಅಭಿಪ್ರಾಯ ಹೇಳಬೇಕೆಂದರೆ..." ವಕೀಲ ಅಲ್ಲಿ ಕಾಲರು ಸರಿಮಾಡಿಕೊಳ್ಳುತ್ತ ಕಕ್ಷಿಗಾರನಿಗೆ ಹೇಳುತ್ತಿದ್ದ.

"ಪ್ರಾಮಾಣಿಕ ಅಭಿಪ್ರಾಯ ಹಾಳಾಗಲಿ, ಅದ್ಯಾರಿಗೆ ಬೇಕರೀ? ನಿಮ್ಮ ವಕೀಲಿ ಸಲಹೆ ಹೇಳ್ರೀ" ಎಂದು ಅವಸರಿಸಿದ ಕಕ್ಷಿಗಾರ!

ನಾವು ಸೋಲುತ್ತೇವೆ!

ಮುಗ್ಧ ಹಳ್ಳಿಗನಿಗೆ ನ್ಯಾಯಾಧೀಶರು ಪ್ರಶ್ನಿಸಿದರು:

"ನಿನಗೆ ಸತ್ಯಪ್ರಮಾಣ ಮಾಡಿ ಹೇಳುವುದೆಂದರೆ ಏನು ಗೊತ್ತು ತಾನೇ?"

"ಗೊತ್ತು ಸ್ವಾಮೀ, ನಿಜವನ್ನೇ ಹೇಳುತ್ತೇನೆಂದು ಪ್ರಮಾಣ ಮಾಡುವುದು."

"ಸರಿ. ಹಾಗಾದರೆ ನೀನು ನಿಜವನ್ನೇ ಹೇಳದಿದ್ದರೆ ಏನಾಗುತ್ತದೆ ಎಂಬ ಗೊತ್ತೋ?"

"ಆಗ ಮಾತ್ರ ನಾವು ಗೆಲ್ಲುತ್ತೇವೆ ಎಂದೆನಿಸುತ್ತದೆ!"

ಒಂದು ಕ್ಷಣ ವಿಚಾರಿಸಿರಿ

ತಮ್ಮ ವಿನಾ ಜಗತ್ತು ನಡೆಯಲಾರದು ಎಂದು ತಿಳಿದುಕೊಂಡ ಜನರಿಂದಲೇ ಸಮಾಧಿ ಗೋರಿಗಳೆಲ್ಲ ತುಂಬಿಕೊಂಡಿವೆ.

—[illegible]



ವ್ಯಂಗ್ಯ ರೇಖೆಗಳಲ್ಲಿ ಸಮಾಜ ವಿಮರ್ಶೆ

ಶ್ರೀ

ದಿನಪತ್ರಿಕೆಯನ್ನು ಕೈಗೆತ್ತಿಕೊಂಡ ಕೂಡಲೇ ಅ ವ್ಯಂಗ್ಯಚಿತ್ರದ ಮೇಲೆ ಕಣ್ಣು ಹಾಯಿಸಿದ ಬಳಿಕವೇ ಉಳಿದ ಸುದ್ದಿ–ಗದ್ದಲ ಯೋಗಕ್ಷೇಮ ಸರಿ ಸುಮಾರು ಎಲ್ಲರ ನಡವಳಿಕೆ. ಇದು ಸಹಜವೂ ಹೌದು. ಹಲವು ಮಾತುಗಳಲ್ಲಿ ಹೇಳಲಾಗದ್ದನ್ನು ಅಥವಾ ಹಲವಾರು ಮಾತುಗಳಲ್ಲಿ ಹೇಳುವುದನ್ನು ವ್ಯಂಗ್ಯಚಿತ್ರಕಾರ ಕೆಲವೇ ಗೆರೆಗಳಲ್ಲಿ ಬಿಂಬಿಸುತ್ತಾನೆ. ಆತ ಚಿತ್ರಕ್ಕೆ ಬಳಸುವ ಸಾಂಕೇತಿಕ ಸನ್ನಿವೇಶ, ವೇಷಭೂಷಣ ಮತ್ತು ಚಿತ್ರಗಳಲ್ಲಿ ತರುವ ಭಾವ ಪ್ರದರ್ಶನವೇ ಇದಕ್ಕೆ ಸಂಪರ್ಕ ಭಾಷೆ.

ಮರಣ – ನಿರಶನ – ಭಾಷಣ – ಘೋಷಣೆಗಳ ಮಧ್ಯೆ ವ್ಯಂಗ್ಯಚಿತ್ರ ಕಚಗುಳಿಯಿಟ್ಟು ನಗಿಸುತ್ತದೆ. ಆದರೆ ನಗೆಯೊಂದೇ ವ್ಯಂಗ್ಯದ ಗುರಿಯಲ್ಲ. ನಗೆ ಉಕ್ಕಿಸಿ ಪರಿಸರ ಪ್ರಜ್ಞೆಯನ್ನು ಜಾಗೃತಗೊಳಿಸಿ ಆಲೋಚನೆಗೆ ಹಚ್ಚುತ್ತದೆ. ತಿಳುವಳಿಕೆಯನ್ನು ಹೆಚ್ಚಿಸುತ್ತದೆ ವ್ಯಂಗ್ಯಚಿತ್ರ.

ವ್ಯಂಗ್ಯಚಿತ್ರಕಲೆ ಅಭಿವ್ಯಕ್ತಿಯ ಒಂದು ಬಗೆ. ಜನಜೀವನದ ಆಗುಹೋಗುಗಳನ್ನು ವ್ಯಂಗ್ಯ ಚಿತ್ರಕಾರ ತನ್ನದೇ ಆದ ಭಾಷೆಯಲ್ಲಿ ವ್ಯಾಖ್ಯಾನಿಸುತ್ತಾನೆ. ಜಗತ್ತಿನ ಸುದ್ದಿ ಸಂಗತಿಗಳಿಗೆ ವ್ಯಂಗ್ಯದ ಮೊನೆ ಕೊಟ್ಟು ಓದುಗನ ನೋಡುವವನ ಗಮನ ಸೆಳೆಯುತ್ತಾನೆ.

ಒಂದು ಚಿತ್ರ ಬಿಡಿಸಿದರೆ ವ್ಯಂಗ್ಯಚಿತ್ರಕಾರನ

ವಾರ್ಷಿಕೋತ್ಸವದಲ್ಲಿ ಫ್ಯಾಶನ್ ಪರೇಡು



ತಂತಮ್ಮ ಖಾತೆಗಳ ಮುಂಗಡ ಪತ್ರಗಳು ಸಂಸತ್ತಿನ ಮನ್ನಣೆ ಪಡೆಯುವುದಕ್ಕೋಸುಗ ಪ್ರತಿಯೊಂದು ಮಂತ್ರಿಶಾಖೆಯೂ ತನ್ನ ತನ್ನ ಸಾಧನೆಗಳ ಪ್ರದರ್ಶನವನ್ನೇ ನೀಡಿತು. (೧೯೫೦ ಮಾರ್ಚ್ ೨೫ರ 'ಶಂಕರ್ಸ್ ವೀಕ್ಲಿ'ಯಲ್ಲಿ ಶಂಕರ.)

...ನದ ಕೆಲಸ ಮುಗಿಯಿತೇ? ಅನೇಕರು ಇಂಥ ಕೃತ್ಯಗಳಿಂದ ವ್ಯಂಗ್ಯಚಿತ್ರಕಲೆಯನ್ನು ಸರಳಗೊಳಿಸುವುದೂ ಉಂಟು. ವ್ಯಂಗ್ಯಚಿತ್ರ ರಚನೆಗೆ [illegible]ಶೇಷ ಪರಿಶ್ರಮ ಅಗತ್ಯ. ಆತನಿಗೆ ಇರಬೇಕಾದ ಕಲ್ಪನಾ ಶಕ್ತಿ. ಅಧ್ಯಯನ. ಸಿದ್ಧತೆ. ಗತಿ–ಸಂಗತಿಗಳಿಗೆ ವ್ಯಂಗ್ಯವನ್ನು ತುಂಬುವ ಕಲೆಯಲ್ಲಿ ಪರಿಣತಿ ಮೇಲುನೋಟಕ್ಕೆ ಅರಿವಾಗದು. ಸದಾ [illegible]ಕ್ಕ ಮೈಯೆಲ್ಲಾ ಕಣ್ಣಾಗಿ ಸುತ್ತಲಿನ ಆಗುಹೋಗುಗಳಿಗೆ ಸಹಜವಾಗಿ ಸ್ಪಂದಿಸುವ ಪ್ರವೃತ್ತಿ. ಅದಕ್ಕೆ ತನ್ನದೇ 'ಭಾಷೆ'ಯ ಮೆರುಗನ್ನು ತುಂಬುವ ಶಕ್ತಿ ಇರಬೇಕು. ವ್ಯಂಗ್ಯಚಿತ್ರಕಾರನ ವ್ಯಂಗ್ಯಕ್ಕೆ, ಕುಚೋದ್ಯಕ್ಕೆ, ಕುಶಾಲಿಗೆ, ಕುಹಕಕ್ಕೆ ಒಳಪಡದ ವಸ್ತುವೇ ಇಲ್ಲ. ಹಮ್ಮಿಯ ಅಹಂಕಾರದ ಠೇಂಕಾರದ ಎಲ್ಲರನ್ನೂ ಎಲ್ಲವನ್ನೂ ವ್ಯಂಗ್ಯದ ಸೂಜಿ ಮೊನೆಯಿಂದ ಚುಚ್ಚಿ ನಿಜವನ್ನು ಅರಿವು ಮಾಡಿಕೊಡುವ ಆತ ಒಂದು ಬಗೆಯಲ್ಲಿ ಸಮಾಜ ಸುಧಾರಕ.

ಕೇವಲ ಅಭಿಲಾಷೆ ಅಥವಾ ಅನುಕರಣೆ ಯಾರನ್ನೂ ವ್ಯಂಗ್ಯಚಿತ್ರಕಾರನನ್ನಾಗಿಸದು. ಚಿತ್ರಕಲೆಯಲ್ಲಿ ವ್ಯಂಗ್ಯಚಿತ್ರಕಲೆ ಒಂದು ವಿಶಿಷ್ಟ ಪ್ರಕಾರ. ಕೇವಲ ಗೆರೆಗಳ ಮೇಲಿನ ಹಿಡಿತ ಇಲ್ಲಿ ಅಷ್ಟು ಗಣನೆಗೆ ಬಾರದು. ವ್ಯಂಗ್ಯದೃಷ್ಟಿ, ಚಿಕಿತ್ಸಕ ಬುದ್ಧಿ ಅತ್ಯಗತ್ಯ. ತುಂಬಾ ಸೂಕ್ಷ್ಮವಾಗಿದ್ದರೆ ವ್ಯಂಗ್ಯಚಿತ್ರ ಪರಿಣಾಮಕಾರಿಯಾಗದು.



ಇತ್ತೀಚಿನ 'ಟೈಮ್ಸ್ ಆಫ್ ಇಂಡಿಯಾ'ದಲ್ಲಿ ಆರ್. ಕೆ. ಲಕ್ಷ್ಮಣ ವಾರದ ಮೂರು ಮುಖ್ಯ ಘಟನೆಗಳ ಮೇಲೆ ಮಾಡಿದ ಭಾಷ್ಯ.

ಕಲ್ಪನೆಯಲ್ಲೇ ವ್ಯಂಗ್ಯ ತುಂಬಿರಬೇಕು. ಕೆಲವೇ ರೇಖೆಗಳಲ್ಲಿ ಅಪಾರ ಗೂಢಾರ್ಥವನ್ನು ವ್ಯಾಖ್ಯಾನಿಸುವ ಕಲೆ ಕರಗತವಾಗಿರಬೇಕು.

ರಾಜಕೀಯ ಹಾಗೂ ಸಾಮಾಜಿಕ ವ್ಯಂಗ್ಯ-ಚಿತ್ರಗಳು ಅಪಾರ ಜನಪ್ರಿಯ. ರಾಜಕೀಯ ಆಗುಹೋಗುಗಳು, ರಾಜಕಾರಣಿಯ ನಡವಳಿಕೆ ಹೇಳಿಕೆ, ಭಾಷಣ, ಮಾತು–ಕೃತಿ. ವ್ಯಂಗ್ಯಚಿತ್ರಕಾರನ ನಿತ್ಯಗ್ರಾಸ. ಸುದ್ದಿ ಬಿಸಿಯಾಗಿರುವಾಗಲೇ ವ್ಯಂಗ್ಯದ ಕುಂಚ ಆಡಿಸಿ ಸುದ್ದಿ ಮಾಡಿದವರ ಬುದ್ಧಿ ಬರಲು ಮಾಡುತ್ತಾನೆ. ಪ್ರಸಕ್ತ ಗತಿ ಸಂಗತಿಗಳಿಗೆ ಚಾರಿತ್ರಿಕ, ಪೌರಾಣಿಕ ಸನ್ನಿವೇಶ ಸಂದರ್ಭಗಳನ್ನು ಬಳಸಿ ಓದುಗನ, ನೋಡುವವನ ಮನಸ್ಸಿನಲ್ಲಿ ವ್ಯಂಗ್ಯ ತರಂಗಗಳನ್ನೆಬ್ಬಿಸುತ್ತಾನೆ. ಅನೇಕ ಸುದ್ದಿಗಳ ನೆನಪು ಉಳಿಯದಿದ್ದರೂ ಒಮ್ಮೆ ಕಣ್ಣು ಹಾಯಿಸಿದ ಕೆಲವು ವ್ಯಂಗ್ಯಚಿತ್ರಗಳು ಮೆಲುಕು ಹಾಕುತ್ತಿರುತ್ತವೆ. ಮರುಕಳಿಸಿದ ಸಂದರ್ಭ, ಘಟನೆಗಳನ್ನು ಪದೇ ಪದೇ ಬಳಸಿ ಸಮಕಾಲದ ಸಂಕೇತಗಳಿಂದ ಪ್ರತಿನಿಧಿಸುವ ಸಂಭವವೂ ಉಂಟು. (ಉದಾ: ವಿಶ್ವಾಮಿತ್ರ–ಮೇನಕೆ. ನರಿ–ಹುಳಿ ದ್ರಾಕ್ಷಿ.) ಆಗ ಓದುಗನ, ನೋಡುವವನ ಪ್ರತಿಕ್ರಿಯೆ ಅಷ್ಟು ಉತ್ಸುಕವಾಗಿರದು.

ಸಾಮಾಜಿಕ ಸಮಸ್ಯೆಗಳ ಬಗ್ಗೆ ಜನರನ್ನು, ಆಡಳಿತಗಾರರನ್ನು ವ್ಯಂಗ್ಯದ ಚಾಟಿ ಬೀಸಿ ಎಚ್ಚರಗೊಳಿಸುವುದು ವ್ಯಂಗ್ಯಚಿತ್ರಕಾರನಿಗೆ ಇರುವ ಸಾಮಾಜಿಕ ಹೊಣೆ. ದೀಪ. ನೀರು ಸರಬರಾಜು. ರಸ್ತೆ, ವಾಹನ ಸೌಕರ್ಯ. ಅಪಾರ ಪರಿಸ್ಥಿತಿ,



ತುರ್ತು ಪರಿಸ್ಥಿತಿಗೆ ತುಸು ಮುಂಚೆ ಚಲಚ್ಚಿತ್ರರಂಗದಲ್ಲಿ ಹೆಣ್ಣನ್ನು ಬಳಸುತ್ತಿರುವ ರೀತಿಯನ್ನು ಶಂಕರರ ಬುದ್ಧಿವಂತ ಗಾರ್ದಭ ಈ ರೀತಿ ಕಂಡಿದ್ದಾನೆ.

ಮುಂತಾದ ಹಲವು ಹನ್ನೊಂದು ಸಾಮಾಜಿಕ ಅಗತ್ಯಗಳು ವ್ಯಂಗ್ಯಚಿತ್ರಕಾರನ [illegible] ವಸ್ತುಗಳು. ಜನರ ಪರದಾಟ. ಪರಿತಾಪಗಳ ರೇಖೆಗಳ ಮೂಲಕ ಅಭಿವ್ಯಕ್ತಿ ಸಾಧ್ಯ[illegible] ಕಣ್ತೆರೆಸುವ ಕಾರ್ಯ ಅವನದು.

ವ್ಯಂಗ್ಯಚಿತ್ರಕಲೆಯನ್ನು ವ್ಯಂಗ್ಯಚಿತ್ರ ಪತ್ರಿಕೋದ್ಯಮ (Cartoon Journalism) ಎಂದೂ ಕರೆಯುತ್ತಾರೆ. ಏಕೆಂದರೆ ವ್ಯಂಗ್ಯಚಿತ್ರಕಾರ ಸುದ್ದಿಯ ಸಾರ ಸಂಗ್ರಹವನ್ನು ರೇಖೆಗಳಲ್ಲಿ ಹಿಡಿದಿರುವ ಪತ್ರಕರ್ತ.

~~~~~~~~~~~~

ನಮ್ಮ ನೆರೆಮನೆಯಾಕೆ ಯಾರ ತಂಟೆಗೂ ಬರದೆ ತನ್ನ ಪಾಡಿಗೆ ಶಾಂತ ಜೀವನ ಸಾಗಿಸುವ ಹೆಣ್ಣುಮಗಳು. ಆವಳ ಮಾತಿನಲ್ಲಾಗಲಿ, ಕೃತಿಯಲ್ಲಾಗಲಿ ಯಾವ ಉದ್ರೇಕವನ್ನೂ ಕಂಡವರು ಇಲ್ಲ. ಆದರೂ ನನ್ನ ಮೂರು ವರ್ಷದ ಮಗನ ವರ್ತನೆಯ ಬಗ್ಗೆ ತನ್ನ ತಕರಾರು ನನಗೆ ಪರಿಣಾಮಕಾರಿಯಾಗಿ ಅರಿವಾಗುವಂತೆಯೇ ಅವಳೊಮ್ಮೆ ತನ್ನದೇ ಆದ ರೀತಿಯಲ್ಲಿ ತಿಳಿಸಿದಳು. ಒಮ್ಮೆ ನನ್ನ ಮಗ ಮನೆಯೊಳಕ್ಕೆ ಬಂದಾಗ ಅವನ ಅಂಗಿಗೊಂದು ಕಾಗದ ಅಂಟಿಸಿದ್ದು ಕಾಣಿಸಿತು. ಏನೆಂದು ನೋಡಿದರೆ "ಮಾಲತೀಬಾಯಿಯವರು ತುಂಬ ಪ್ರೇಮದಿಂದ ಬೆಳೆಸಿರುವ ಕೆಲವು ಗುಲಾಬಿ ಹೂವುಗಳನ್ನು ನಾನು ಕಿತ್ತಿ ತಂದಿದ್ದೇನೆ" ಎಂದಿತ್ತು.

—ಎಂ. ರಮಾದೇವಿ
~~~~~~~~~~~~

ನಗೆಮಲ್ಲಿಗೆ

ಶಿಕ್ಷಕರೊಬ್ಬರು ನಾಲ್ಕನೆಯ ತರಗತಿಯಲ್ಲಿ ಪಾಠ ಮಾಡುತ್ತಿದ್ದರು. ಹುಡುಗರು ಕಿರುಚಾಟ್ಟ ಗಲಾಟೆ ಮಾಡತೊಡಗಿದಾಗ ಮೇಷ್ಟ್ರಿಗೆ ರೇಗಿತು. ಬಯ್ದರು. ನಂತರ, "ಸೂಜಿ ಬಿದ್ದರೆ ಸಪ್ಪಳವಾಗಬೇಕು. ಆ ಸಪ್ಪಳ ಕೇಳಿಸುವಷ್ಟು ಶಾಂತರಾಗಿ ಕುಳಿತುಕೊಳ್ಳಬೇಕೆಂದು ಎಷ್ಟು ಸಲ ಹೇಳಲ್ಲ?" ಅಂದರು. ಒಮ್ಮಿಂದೊಮ್ಮಲೇ ತರಗತಿಯಲ್ಲಿ ಸ್ಮಶಾನಮೌನ. ನಂತರ ಪಾಠ ಶುರು ಮಾಡಿದ ಮೇಷ್ಟ್ರಿಗೆ ವಿದ್ಯಾರ್ಥಿಯೊಬ್ಬ ಆಕ್ಷೇಪಿಸಿದ. "ನಮಗೆ ಶಾಂತರಾಗಿ ಕೂತ್ಕೊಳ್ಳೋದಕ್ಕೆ ಹೇಳಿ ನೀವು ಮಾತ್ರ ಗಲಾಟೆ ಮಾಡ್ತೀರಾ ಸಾರ್? ನೀವು ಗಲಾಟೆ ಮಾಡುವಾಗ್ಲೇ ಸೂಜಿ ಬಿದ್ದರೆ ಸಪ್ಪಳ ಹೇಗಾಗಬೇಕು? ನಮಗ್ಹ್ಯಾಗೆ ಕೇಳಿಸಬೇಕು?"

*

ಶಿಕ್ಷಕ: ಹಾಲುಗಳಲ್ಲಿ ಎಷ್ಟು ವಿಧ?

ವಿದ್ಯಾರ್ಥಿ: ಪ್ರೇಯರ್ ಹಾಲ್, ಲೆಕ್ಚರ್ ಹಾಲ್....

ಶಿಕ್ಷಕ: ಅಲ್ಲೋ. ಆ ಹಾಲಲ್ಲ, ಕುಡೀತೇವಲ್ಲ ಆ ಹಾಲು...

ವಿದ್ಯಾರ್ಥಿ: ಆಕಳ ಹಾಲು, ಎಮ್ಮೆ ಹಾಲು, ಆಡಿನ ಹಾಲು, ಡೇರಿ ಹಾಲು, ಆಲ್ಕೋ ಹಾಲು...

-ಕೋಟ ವಂದೇಂದ್ರ

*

ಆಫೀಸು ಕೆಲಸದಿಂದ ಮನೆಗೆ ಬಂದ ಪತಿಗೆ ಅದೇ ತಾನೇ ನಿದ್ದೆಯಿಂದೆದ್ದ ಪತ್ನಿ, "ರೀ, ಪ್ಲೀಸ್-ಒಂದ್ ಕಪ್ ಕಾಫೀ ಮಾಡಿಕೊಡ್ತೀರಾ? ಈಗ ತಾನೇ ನಿದ್ದೆಯಿಂದೇಳ್ತಿದ್ದೀನಿ" ಅಂದಳು.

"ಮತ್ತೆ ನಾನೇನಂದ್ಕೊಂಡಿ? ಈಗಾನೆ ನಿದ್ದೆ ಮುಗಿಸಿ ಆಫೀಸಿನಿಂದಾ ಬರ್ತಿದ್ದೀನಿ ನೀನೇ ಎದ್ದು ಮಾಡು" ಅಂದವನೇ ತೂಕಡಿಕೆಯ ಕಣ್ಣುಗಳನ್ನು ತಿಕ್ಕಿಕೊಳ್ಳತೊಡಗಿದ.

*

ಕಳ್ಳತನದ ತನಿಖೆಗೆ ಬಂದ ಪೋಲೀಸರು ಮನೆಯ ಕಾವಲುಗಾರನನ್ನು ಪ್ರಶ್ನಿಸುತ್ತಿದ್ದರು.

"ರಾತ್ರಿ ಕಳ್ಳತನ ನಡೆದಾಗ ನೀನು ಗಾಢ ನಿದ್ರೆಯಲ್ಲಿದ್ದೆಯಾ?"

"ಅವ್ರು ತಿಜೋರೀನ ಕಂಪಾಂಡ್ ಬಾಗಿಲು ದಾಟ್ಸೋ ಹೊತ್ತಿಗೆ ಎಚ್ಚರವಾಯ್ತು."

"ಹಾಗಾದ್ರೆ ಅಗ್ಲೇ ಯಾಕೆ ಹಿಡೀಲಿಲ್ಲ?"

"ಅಲ್ಲಾ ಸಾರ್, ತಿಜೋರಿ ಬೀಗದ ಕೈ ತಗೊಂಡು ಹೋಗೋದಕ್ಕೆ ಮತ್ತೊಂದ್ಸಲಾ ಆತ ಬರ್ಲೇಬೇಕಲ್ಲ, ಬಂದಾಗ್ಲೆ ಹಿಡದ್ರಾಯ್ತು ಅಂತ ಸುಮ್ನಿದ್ದೆ."

*

"ನಿನ್ನೆ ನಾನು 'ಜಾಗರಣೆ'ಯ ಬಗ್ಗೆ ಮಾಡಿದ ಭಾಷಣ ಹೇಗಿತ್ತು?"

"ಹತ್ತು ನಿಮಿಷಗಳಲ್ಲೇ ಆಕಳಿಕೆ ತೂಕಡಿಕೆ ತರಿಸಿ ಅಲ್ಲೇ ಮಲಗಿಸಿಬಿಡ್ತು."

*

"ನಿಮ್ಮಂಗಡಿ ಹತ್ರ ನನ್ನ ನಾಯಿ ಬಂದ್ರೆ ಚೆನ್ನಾಗಿ ನೋಡ್ಕೋಬೇಕು. ತಿಳೀತಾ?" ಆ ಕಟ್ಟಡದ ಮಾಲಿಕ ಹೊಸದಾಗಿ ಅಲ್ಲಿ ಪ್ರಾರಂಭಿಸಿದ ಅಂಗಡಿಯವನಿಗೆ ಹೇಳಿದ.

"ಆಗ್ಲಿ ಒಡೆಯಾ, ನೀವೇ ಬಂದಿದೀರಿ ಅಂತಿಳ್ಕೋತೇನೆ. ಆಯ್ತಾ?"

-ಎನ್. ಕೆ. ನರಸಿಂಹಮೂರ್ತಿ

*

ಆಕಾಶದಲ್ಲಿ ಹಾರಾಡುತ್ತಿದ್ದ ಹಕ್ಕಿಗೆ ಗುರಿಯಿಟ್ಟು ಶಿಕಾರಿ-ಗುಂಡು ಹೊಡೆದ. ಅದು ರಿವ್ವನೇ ನೆಲಕ್ಕೆ ಬಿತ್ತು. ಶಿಕಾರಿಯ ಜತೆಗಿದ್ದ ನಾಲ್ಕಾರು ಮಂದಿ ಗ್ರಾಮಸ್ಥರು, "ನೀವು ಸುಮ್ಮಸುಮ್ನೆ ಒಂದು ಗುಂಡನ್ನ ಹಾಳು ಮಾಡೀದ್ರಿ" ಅಂದರು.

"ಯಾಕೆ?"

"ಆಲ್ರಿ, ಅಷ್ಟು ಮೇಲ್ನಿಂದ ಕೆಳಗೆ ಬೀಳುವ ಹಕ್ಕಿ ನೆಲಕ್ಕೆ ಬಡಿದು ತಂತಾನೇ ಸಾಯ್ತಿತ್ತು."

*

"ರಾಮು, ಅಂಗಡಿಯಿಂದ ತಂದ ಖಾರದ ಪುಡಿ ಪೊಟ್ಟಣಾನ ಇಲ್ಲಿಟ್ಟಿದ್ದೆ. ನಿನ್ನ ಕಣ್ಣಿಗೇನಾದ್ರೂ ಬಿತ್ತಾ?"

"ಇಲ್ಲಮ್ಮಾ. ಬಿದ್ದೀತೆಂದು ಆಚೆ ಎಸೆದ್ಬಿಟ್ಟೆ ಕಿಟಕಿಯಿಂದ."

*

"ಮೊನ್ನೆ ಸತ್ತೇ ಹೋಗ್ತಿದ್ದೆ ಕಣೋ. ದೇವರು ದೊಡ್ಡವನು. ಸ್ವಲ್ಪದರಲ್ಲಿ ಬದುಕಿ ಉಳಿದುಕೊಂಡೆ ಗೊತ್ತಾ?"

"ಏನಾಯ್ತೋ?"

"ಏನಿಲ್ಲ ಕಣೋ. ಎಂದಿನಂತೆ ಈಜಲು ಹೋದವನು ಹೊಳೆಯ ಆಚೆಯ ದಡದ ವರೆಗೂ ಈಜಿಕೊಂಡು ಹೋಗಬೇಕೆಂದು ಮಾಡಿದ್ದೆ. ಆದರೆ ಹೊಳೆಯ ಮಧ್ಯಕ್ಕೆ ಬಂದಾಗ ಇನ್ನು ಮುಂದೆ ಹೋಗಲು ನನ್ನಿಂದ ಸಾಧ್ಯವಿಲ್ಲ ಅನ್ನುವಷ್ಟು ಸುಸ್ತಾಗಿ ಬಿಡ್ತು."

"ಹಾಗಾದ್ರೆ ಏನ್ಮಾಡಿದೆ?"

"ಮಾಡುವುದೇನು? ಮತ್ತೆ ಹಿಂದಿರುಗಿ ಈಜಿಕೊಂಡು-ಈಚೆಯ ದಡಕ್ಕೆ ಬಂದು ಬಿಟ್ಟೆ."

*

"ಸೋಮು, ನಿನಗೆ ಒಬ್ಬ ಸಾವಿರ ರೂಪಾಯಿಗಳನ್ನ ಕೊಟ್ಟು, 'ಇಟ್ಕೊಂಡಿರು. ಕೇಳಿದಾಗ ಕೊಡು' ಅಂತ್ಹೇಳಿ ಸತ್ಹೋಗಿ ಬಿಟ್ಟ ಅಂತಿಟ್ಕೊ. ಆತ ನಿನಗೆ ಹಣ ಕೊಟ್ಟದ್ದು ಬೇರೆ ಯಾರಿಗೂ ಗೊತ್ತಿಲ್ಲ. ಇಂಥ ಸಂದರ್ಭದಲ್ಲಿ ಏನ್ಮಾಡ್ತಿ?"

"ಇಂಥಾ ಬುದ್ಧಿ ಎಲ್ಲರಿಗೂ ಬರ್ಲಪ್ಪಾ ಅಂತ ದೇವ್ರಲ್ಲಿ ಪ್ರಾರ್ಥಿಸ್ಕೊತೀನಿ."

—ಎಸ್. ಎ. ಚಂಗಾವಿ

*

ವಿದೇಶಿಯೊಬ್ಬ ಭಾರತದ ಪರ್ವತ ಪ್ರದೇಶಗಳಲ್ಲಿ-ತಿರುಗಾಡುತ್ತಿದ್ದ. ಇದ್ದಕ್ಕಿದ್ದಂತೇ ಬಿಡಾಡಿ ನಾಯಿಯೊಂದು ಆತನನ್ನು ಕಂಡು ಬೊಗಳುತ್ತಾ ಬೆನ್ನಟ್ಟಿತು. ಆತ ಬಾಗಿ ಕಲ್ಲನ್ನೆತ್ತಿ ಹೊಡೆಯಬೇಕೆಂದ. ಕಲ್ಲು ಕೈಗೆ ಸಿಕ್ಕಿತಾದರೂ ಆತನಿಗೆ ಹೊಡೆಯಲಾಗಲಿಲ್ಲ. ಅದು ನೆಲದಲ್ಲಿ ಹುಗಿದುಕೊಂಡಿತ್ತು. ಆಗ ವಿದೇಶೀಯ, "ಛೀ ಎಂಥಾ ದೇಶ. ನಾಯೀನ ಬಿಟ್ಟಿರ್ತಾರೆ, ಕಲ್ಲನ್ನ ಕಟ್ಟಿರ್ತಾರೆ" ಎಂದ.

*

ಕಳ್ಳನನ್ನು ಹಿಡಿದು ಹೊಡೆದು ಮೂರ್ಛೆ ಹೋಗುವಂತೆ ಮಾಡಿದ ಮಹಿಳೆಯನ್ನು ಅಭಿನಂದಿಸಿದರು ಪೋಲೀಸು ಅಧಿಕಾರಿ.

"ಅಭಿನಂದಿಸೋ ಕಾರಣಾನೇ ಇಲ್ರಿ ನಿಜವಾಗಿ ಹೇಳಬೇಕಂದೆ ಅಷ್ಟು ರಾತ್ರೀಲಿ ಬಂದವ ನನ್ನ ಪತೀನೆ ಅಂತ ತಿಳಿದು ಒನಕೆಯಿಂದ ಒಂದು ಕೊಟ್ಟೆ. ಆದರೆ ಚೀರಿಕೊಂಡ ಧ್ವನಿ ಬೇರೆ ಬಂತು ಅಷ್ಟೇ." ಅಂದಳು ಧೈರ್ಯವಂತ ಗೃಹಿಣಿ.

*

"ಲೋ ರಾಮು, ಕೋಳಿ ಮುಖ್ಯಾನೋ? ಮೊಟ್ಟೆಯೋ?" ಮೇಷ್ಟ್ರು ಕೇಳಿದರು.

"ಎರಡೂ ಮುಖ್ಯ ಸಾರ್."

"ಹ್ಯಾಗೋ?"

"ಹ್ಯಾಗಂದ್ರೆ...ಆಮ್ಲೇಟ್ ಮಾಡ್ಕೊಂಡು ಮೊಟ್ಟೆಗಳೆಲ್ಲಾ ತೀರಿದ್ರೆ ಮತ್ತೆ ಹಾಕೋದಿಕ್ಕೆ ಕೋಳಿ ಮುಖ್ಯ. ಇನ್ನು ಕೋಳೀನೇ ತಿಂದು ಹಾಕಿಬಿಟ್ರೆ ಮತ್ತೆ ಕೋಳಿ ಆಗ್ಲಿಕ್ಕೆ ಮೊಟ್ಟೆ ಮುಖ್ಯ."

*

"ಅರೆ, ತಿಜೋರಿ ಬಾಗಿಲು ಹಾಕೋದನ್ನೇ ಮರೆತು ಬಿಟ್ಟಿದೀನಲ್ಲ...." ಅಂದ ಗಂಡ ಮಾರ್ಕೆಟ್ಟನಲ್ಲಿ.

"ಅದಕ್ಯಾಕೆ ಅಷ್ಟು ಯೋಚ್ನೆ? ನಾನಿಲ್ಲಿದೀನಿ, ಹೆದರ್ಕೋಬೇಡಿ." ಅಂದಳು ಹೆಂಡತಿ.

****

ಬ್ರಿಟನ್ ಬಲಕ್ಕೆ ಹೊರಳುತ್ತಿದೆಯೆ?

ಮಾರ್ಗರೆಟ್ ಥ್ಯಾಚರ್

ಜಿ. ಎಸ್. ಭಟ್ಟ

ಪಾಶ್ಚಿಮಾತ್ಯ ರಾಷ್ಟ್ರಗಳಲ್ಲೇ ಪ್ರಪ್ರಥಮ ಬಾರಿಗೆ ಪ್ರಧಾನಿ ಯಾಗಿರುವ ಮಾರ್ಗರೆಟ್ ಥ್ಯಾಚರ್ ಕಾಂಜರ್ವೇಟಿವ್ ಪಕ್ಷ ನಿರ್ಮಿಸಿದ ಏಕೈಕ 'ಗಂಡು'. ಬ್ರಿಟನ್ ಪ್ರಜಾ ಪ್ರಭುತ್ವಕ್ಕೆ ಹೆಸರು, ರಾಷ್ಟ್ರಗಳಿಗೆ ಸ್ವಾತಂತ್ರ್ಯ ನೀಡಿ ದ್ದೇಶ. ಜನರೆ ಸ್ತ್ರೀ ಪುರುಷರೆಲ್ಲರೂ ಸರಿ ಸಮಾನರೆಂದು ಪ್ರತಿಪಾದಿಸುವ ಆ ರಾಷ್ಟ್ರದ- ಲ್ಲಾಗಲೀ ಇತರ ಪಾಶ್ಚಿಮಾತ್ಯ ರಾಷ್ಟ್ರಗಳಲ್ಲಿ ಆಗಲೀ ಪ್ರಧಾನಿ ಪಟ್ಟದಂಥ ಉನ್ನತ ಹುದ್ದೆ ಇದುವರೆಗೆ ಒಬ್ಬಳು ಸ್ತ್ರೀಯರಿಗೆ ಗಗನಕುಸುಮ ವಾಗಿತ್ತು. ಪ್ರಪಂಚದಲ್ಲಿ ಇದುವರೆಗೆ ಮೂರು ರಾಷ್ಟ್ರಗಳಲ್ಲಿ ಮಾತ್ರ ಸ್ತ್ರೀಯರಿಗೆ ಉನ್ನತ ಸ್ಥಾನ ಲಭ್ಯವಾಗಿದೆ; ಇಸ್ರೇಲಿನ ಗೋಲ್ಡಾ ಮೇರ್, ಭಾರತದ ಇಂದಿರಾ ಗಾಂಧಿ, ಶ್ರೀಲಂಕಾದ ಸಿರಿ- ಮಾವೋ ಬಂಡಾರನಾಯ್ಕೆ. ಆದರೆ ಇವರೆಲ್ಲ ಪೌರಸ್ತ್ಯ ರಾಷ್ಟ್ರಗಳವರು. ಇದೀಗ ಸೂರ್ಯ ಅಸ್ತಂ ಗತನಾಗದ ಸಾಮ್ರಾಜ್ಯ ಕಟ್ಟಿದ ಬ್ರಿಟನ್ನಿಗೆ ಧೀರೋದಾತ್ತ ಸುಂದರಿ. ೫೪ ವರ್ಷದ ಮಾರ್ಗ- ರೆಟ್ ಥ್ಯಾಚರ್ ಪ್ರಧಾನಿ. ಸೋವಿಯತ್ ರಷ್ಯನರ ದೃಷ್ಟಿಯಲ್ಲಿ ಥ್ಯಾಚರ್ 'ಉಕ್ಕಿನ ಮಹಿಳೆ.' ಬ್ರಿಟ ನ್ನಿನ ಕಾರ್ಮಿಕ ಸಂಘಗಳ ದೃಷ್ಟಿಯಲ್ಲಿ ಅವಳು ಕಾರ್ಮಿಕ ವಿರೋಧಿ. ಬಂಡವಾಳಶಾಹಿ ವ್ಯವಸ್ಥೆಯ



ಪ್ರತಿಪಾದಕಿ ಥ್ಯಾಚರ್ – ಬ್ರಿಟನ್ನಿನ ಜನತೆ ಬದಲಾವಣೆ ಬಯಸಿದ್ದರೆ – ಆ ಬದಲಾವಣೆಯನ್ನು ತಾ ತಂದು ಕೊಡಬಲ್ಲೆ ಎಂಬುದನ್ನು ದಿಟ್ಟತನದಿಂದ ತೋರಿಸಿಕೊಟ್ಟಳು. ಹನ್ನೊಂದು ವರ್ಷಗಳ ಕಾರ್ಮಿಕ ಸರಕಾರವನ್ನು ಬದಲಾಯಿಸಲು ಜನತೆ ನಿರ್ಧರಿಸಿದ್ದನ್ನು ಬ್ರಿಟನ್ನಿನ ಚುನಾವಣೆ ಸ್ಪಷ್ಟಪಡಿಸಿತು. ಕ್ಯಾಲಹನ್ ಸರಕಾರವನ್ನು ಕೇವಲ ಒಂದು ಮತದಿಂದ ಪರಾಭವಗೊಳಿಸಿ ಚುನಾವಣೆ ನಡೆಯುವಂತೆ ಮಾಡಿದ ಥ್ಯಾಚರ್ ಕಾಂಜರ್ವೇಟಿವ್ ಪಕ್ಷದ ಅಪ್ರತಿಮ ನಾಯಕಿ. ವಿರೋಧ ಪಕ್ಷದ ನಾಯಕಿಯಾಗಿ ಸರಕಾರವನ್ನು ಟೀಕಿಸುತ್ತಿದ್ದ ಆವಳೇ ಈಗ ಆಡಳಿತದ ಸೂತ್ರಧಾರಿ. ಹಣವುಳ್ಳ ವಿಧೇಯಕ ಪಾರ್ಲಿಮೆಂಟಿನಲ್ಲಿ ಅನುಮೋದನಾಗದೆ ಸೋತ ಸರಕಾರ ರಾಜೀನಾಮೆ ನೀಡುವುದು ಬ್ರಿಟನ್ನಿನ ಸತ್ಸಂಪ್ರದಾಯ. ಆದರಿಂದ ವಿರೋಧ ಪಕ್ಷದ ನಾಯಕಿ ಥ್ಯಾಚರ್ ತಂದ ಅವಿಶ್ವಾಸ ಗೊತ್ತುವಳಿ ಸ್ವೀಕೃತವಾದಾಗ ಕ್ಯಾಲಹನ್ ಸರಕಾರ ರಾಜೀನಾಮೆ ನೀಡದೇ ಅನ್ಯ ಮಾರ್ಗವೇ ಇರಲಿಲ್ಲ. ಪ್ರಾದೇಶಿಕ ಪಕ್ಷಗಳ ಹುಟ್ಟು, ಲಿಬರಲ್ ಪಕ್ಷದ ಪುನರುತ್ಥಾನ ಇವುಗಳಿಂದ ಮೊದಲು ಇದ್ದ ಎರಡು ಪ್ರಬಲ ಪಕ್ಷಗಳ ಪದ್ಧತಿ ಪುನಃ ತಲೆ ಎತ್ತುವ ಮುನ್ಸೂಚನೆಯಾಗಿದೆ ಈ ಚುನಾವಣೆ.

ಕಾಂಜರ್ವೇಟಿವ್ ಪಕ್ಷದ ಬದುಕು–ಸಾವಿನ ಪ್ರಶ್ನೆ ಎಂದು ಭಾವಿಸಿದ ಥ್ಯಾಚರ್ ಕ್ಯಾಲಹನ್ ಸರಕಾರದ ವಿರುದ್ಧ ಸಮರವನ್ನೇ ಸಾರಿದಳು.

ಮಾರ್ಗರೆಟ್ ಥ್ಯಾಚೆರ್ ಚುನಾವಣೆಯಲ್ಲಿ ನೀಡಿದ ಆಶ್ವಾಸನೆಗಳಿವು – "ರಕ್ಷಣಾವೆಚ್ಚವನ್ನುಳಿದಂತೆ ಇರುವ ಸರಕಾರೀ ವೆಚ್ಚದಲ್ಲಿ ಖೋತಾ, ಕಾರ್ಮಿಕ ಸಂಘಗಳ ಅಧಿಕಾರ ಮೊಟಕುಗೊಳಿಸುವುದು, ವಲಸೆ ತಡೆಗಟ್ಟುವ ಶಾಸನ, ಬಲಪಂಥದ ಬಂಡವಾಳಶಾಹಿ ನೀತಿ, ಕಡಿಮೆ ತೆರಿಗೆ, ಮುಕ್ತ ಸ್ಪರ್ಧಾತ್ಮಕ ವ್ಯಾಪಾರ, ಸರಕಾರೀ ನಿಯಂತ್ರಣ ಸಡಿಲಿಕೆ."

ವಲಸೆಗಾರರ ಸಮಸ್ಯೆ ಚುನಾವಣೆಯಲ್ಲಿ ಒಂದು ವಿಷಯವಾಗಿರಲಿಲ್ಲವೇನೋ ನಿಜ; ಆದರೆ ಕಾಂಜರ್ವೇಟಿವ್ ಪಕ್ಷ ಮತ್ತು ಕಾರ್ಮಿಕ ಪಕ್ಷಗಳೆರಡೂ ಹೊಸದಾಗಿ ವಲಸೆ ಬರುವುದನ್ನು ವಿರೋಧಿಸಿದ್ದುವು ಎಂಬುದನ್ನು ಗಮನಿಸಬಹುದು. ಈಗಾಗಲೇ ಬ್ರಿಟನ್ನಿನಲ್ಲಿ ನೆಲೆಸಿರುವವರಿಗೆ ಸಂಪೂರ್ಣ ನಾಗರಿಕ ಹಕ್ಕನ್ನು ಕಾನೂನಿನ ಚೌಕಟ್ಟಿನಲ್ಲೇ ಪರಿಹರಿಸುವ ಭರವಸೆ ಕಾಂಜರ್ವೇಟಿವ್ ಪಕ್ಷದ್ದು. ಆದರೆ ಇದನ್ನು ಅನುಸರಿಸುವಲ್ಲಿ ಥ್ಯಾಚರ್ ವಿಳಂಬನೀತಿಯನ್ನು ಅನುಸರಿಬಹುದೆಂದು ಹೇಳಲಾಗುತ್ತಿದೆ. ಕಾಂಜರ್ವೇಟವ್ ಪಕ್ಷಕ್ಕೆ ಮತ ನೀಡಿದವರಲ್ಲಿ ಅಲ್ಲಿ ನೆಲಸಿದ ಏಶಿಯನ್ನರೂ ಇದ್ದಾರೆ. ಸರಕಾರದ ಆರ್ಥಿಕ ನೀತಿಯಲ್ಲಿ ಗಮನಾರ್ಹ ಬದಲಾವಣೆ ನಿರೀಕ್ಷಿಸಿರುವ ಉದ್ದಿಮೆದಾರರು– ವ್ಯಾಪಾರಿಗಳು ಥ್ಯಾಚರ್ ಅಧಿಕಾರಕ್ಕೆ ಬರುವುದರಿಂದ ತಮಗೆ ಲಾಭವಾಗಬಹುದೆಂದು ಆಶಿಸಿದ್ದಾರೆ.

ಕಾಂಜರ್ವೇಟಿವ್ ಪಕ್ಷ ಬ್ರಿಟನ್ನಿಗೆ ಸಮರ್ಥ ಸರಕಾರವನ್ನು ನೀಡಿಲ್ಲ ಎಂದು ಒಂದು ಟೀಕೆ ಇದೆ. ನೆವಿಲ್ ಚೇಂಬರ್ಲಿನ್ (೧೮೬೯–೧೯೪೦) ಪ್ರಧಾನಿಯಾಗಿದ್ದಾಗ (೧೯೩೭–೪೦) ವಿಶ್ವಶಾಂತಿಗಾಗಿ ಜರ್ಮನಿಯ ಸರ್ವಾಧಿಕಾರಿ ಹಿಟ್ಲರ್‌ನೊಂದಿಗೆ ಒಪ್ಪಂದ ಮಾಡಿಕೊಂಡ. ಇದೊಂದು ಅವಮಾನಕರ ಒಪ್ಪಂದವಾಗಿತ್ತು. ಎರಡನೆಯ ಮಹಾಯುದ್ಧದ ನಂತರ ಬಂದ ಈ ಪಕ್ಷದ ಪ್ರಧಾನಿಗಳು ಯಾರೂ ಅಂಥ ಮಹತ್ತರವಾದುದೇನನ್ನೂ ಸಾಧಿಸಲಿಲ್ಲ. ಆದರೆ ಯುದ್ಧಕಾಲದಲ್ಲಿ ಪ್ರಧಾನಿಯಾಗಿದ್ದ ಸರ್ ವಿನ್‌ಸ್ಟನ್ ಚರ್ಚಿಲ್ (೧೮೭೪–೧೯೬೫) ಬ್ರಿಟನ್ನನ್ನು ವಿಜಯದ ಹಾದಿಯಲ್ಲಿ ಒಯ್ದ ಮುತ್ಸದ್ದಿ ರಾಜಕಾರಣಿ. ಆತನದು ಅದ್ವಿತೀಯ ವ್ಯಕ್ತಿತ್ವವಾಗಿತ್ತು. ಚರ್ಚಿಲನ ಅನಂತರ ಕಾಂಜರ್ವೇಟಿವ್ ಪಕ್ಷದ ನಾಯಕಿ ಥ್ಯಾಚರ್ ಪುನಃ ಇತಿಹಾಸ ನಿರ್ಮಿಸಲಿದ್ದಾರೆ ಎಂದು ಹೇಳಲಾಗುತ್ತಿದೆ.

ಭಾರತದ ಜೊತೆ ಬ್ರಿಟನ್ನಿನ ಸಂಬಂಧದಲ್ಲಿ ಬದಲಾವಣೆ ಏನೂ ಕಾಣಿಸುವುದಿಲ್ಲವಾದರೂ ಬ್ರಿಟನ್ ಭಾರತಕ್ಕೆ ನೀಡುತ್ತಿರುವ ನೆರವಿನ ಪ್ರಮಾಣ ಕಡಿಮೆ ಆಗಬಹುದೆಂದು ರಾಜಕೀಯ ವೀಕ್ಷಕರ ಅಭಿಪ್ರಾಯವಾಗಿದೆ. ಭಾರತ–ರಶಿಯದ ಮೈತ್ರಿಯನ್ನು ಅರ್ಥ ಮಾಡಿಕೊಂಡಿರುವ ಥ್ಯಾಚರ್ ಅದನ್ನು ಸಂಶಯದ ದೃಷ್ಟಿಕೋನದಿಂದ ನೋಡಲಾರರು. ಅಮೇರಿಕದೊಂದಿಗೆ ಕ್ಯಾಹಲನ್ ಸರಕಾರ ಹೊಂದಿದ್ದ ಆತ್ಮೀಯತೆ ಇನ್ನು ಮುಂದೆ ಇರಲಾರದು. ಕ್ಯಾಲಹನ್‌ರ ಪರಾಭವದಿಂದ ಜಿಮ್ಮಿ ಕಾರ್ಟರ್ ಅವರಿಗೆ ನಿರಾಶೆ ಆಯಿತು ಎಂಬುದು ವೈಟ್‌ಹೌಸ್ ವಕ್ತಾರನ ಹೇಳಿಕೆ. ಅಂತಾರಾಷ್ಟ್ರೀಯ ರಂಗದಲ್ಲಿ ದಕ್ಷಿಣ ಆಫ್ರಿಕ ಮತ್ತು ರ್‍ಹೊಡೀಶಿಯಗಳೊಂದಿಗಿನ ಸಂಬಂಧ ಹದಗೆಡಬಹುದೆಂದು ಭಾವಿಸಲಾಗಿದೆ. ಅದನ್ನು ಎದುರಿಸುವ ಸಾಮರ್ಥ್ಯ ಥ್ಯಾಚರಳಿಗೆ ಇದೆ. ಬ್ರಿಟನ್ನಿನಲ್ಲಿ ಕಾರ್ಮಿಕ ಸಂಘಗಳ ಜೊತೆ ಸಂಬಂಧ ಹದಗೆಟ್ಟಲ್ಲಿ ಒಂದು ವರ್ಷದಲ್ಲೇ ಥ್ಯಾಚರ್ ದೇಶಾದ್ಯಂತ ಕಾರ್ಮಿಕ ಸಂಪನ್ನು ಎದುರಿಸಬೇಕಾಗಬಹುದು. ಬ್ರಿಟನ್ನಿನಲ್ಲಿ ಹಳೆಯ ಅಧ್ಯಾಯ ಕೊನೆಗೊಂಡು ಹೊಸ ಅಧ್ಯಾಯ ಪ್ರಾರಂಭವಾಗಲಿದೆ ಎಂದು ಘೋಷಿಸಿರುವ ಮಾರ್ಗರೆಟ್ ಥ್ಯಾಚರ್ ಬಂದೊದಗಲಿರುವ ಸಮಸ್ಯೆಗಳನ್ನೆಲ್ಲ ಎದುರಿಸುವ ಸಾಮರ್ಥ್ಯ ಪಡೆದಿದ್ದಾಳೆಯೋ ಎಂದು ಕಾದು ನೋಡಬೇಕು.

ಆಕೆ ಇಂಗ್ಲಂಡಿನ ಲಿಂಕನ್‌ಷೈರಿನ ಗ್ರಾಂತ್ಯಾಮ್ ಎಂಬ ಸಣ್ಣ ಪಟ್ಟಣದಲ್ಲಿ ಜನಿಸಿದಳು (೧೯೨೫). ತಂದೆ ಆಲ್ಫ್ರೆಡ್ ರಾಬರ್ಟ್ ಜಿನಸಿ ವ್ಯಾಪಾರಿ. ಅಂಗಡಿಯ ಮಹಡಿಯ ಮೇಲೆ ತಂದೆ ಸಂಸಾರ ಹೂಡಿದ್ದ. ಮಾರ್ಗರೆಟಳ

ಅಜ್ಜ, ಮುತ್ತಜ್ಜ ಇವರೆಲ್ಲ ಪಾದರಕ್ಷೆ ತಯಾರಕರಾಗಿದ್ದರಂತೆ. ಮಾರ್ಗರೆಟಳ ತಾಯಿ ರೇಲ್ವೆ ಕೆಲಸಗಾರನೊಬ್ಬನ ಮಗಳು. ಅಲ್ಫ್ರೆಡ್ ರಾಬರ್ಟನನ್ನು ವಿವಾಹವಾದಾಗ ತಾನು ಕೂಡಿಟ್ಟ ಬಿಡಿಗಾಸುಗಳನ್ನು ಗಂಡನ ಕೈಗಿತ್ತಳು. ಆ ಹಣದಿಂದಲೇ ಆತ ಜಿನಸಿ ವ್ಯಾಪಾರ ಪ್ರಾರಂಭಿಸಿದ್ದು. ಮಾರ್ಗರೆಟ್ ಮತ್ತು ಅವಳ ಸೋದರಿ ಮ್ಯುರೆಲ್ ಮೊದಲಿನ ೧೮ ವರ್ಷಗಳನ್ನು ಕಳೆದಿದ್ದು ತಂದೆಯ ಅಂಗಡಿಯ ಮಹಡಿಯ ಮೇಲೆ. ಪ್ರತಿ ಶನಿವಾರವೂ ಅಂಗಡಿಯಲ್ಲಿ ತಾನು ಕೆಲಸ ಮಾಡುತಿದ್ದೆನೆಂದು ಥ್ಯಾಚರ್ ಹೇಳುತ್ತಾಳೆ. ಗ್ರಂತ್ಯಾಮ್ ಪ್ರೌಢಶಾಲೆಯಲ್ಲಿ ಮತ್ತು ಆಕ್ಸ್‌ಫರ್ಡ್‌ನ ಸೊಮರ್‌ವಿಲ್ ಕಾಲೇಜಿನಲ್ಲಿ ಪದವಿ ಪಡೆದಳು. ಅನಂತರ ಸಂಶೋಧನ ರಸಾಯನಜ್ಞೆಯಾದ ಥ್ಯಾಚರ್(೧೯೪೭–೫೧) ಬ್ಯಾರಿಸ್ಟರ್ ಕೂಡ ಆದಳು. ರಾಜಕೀಯ ಚರ್ಚೆಗಳಲ್ಲಿ ಭಾಗವಹಿಸಲು ಮಾರ್ಗರೆಟಳ ತಂದೆ ನಿರಂತರ ಪ್ರೋತ್ಸಾಹ ನೀಡಿದ. ವಿಶ್ವವಿದ್ಯಾಲಯ ಸೇರಿದಾಗ ಅವಳಿಗಿದ್ದ ರಾಜಕೀಯ ಆಸಕ್ತಿ ವಿಶಾಲವೂ ಆಳವೂ ಆಯಿತು. ವಿದ್ಯಾರ್ಥಿ ದೆಸೆಯಲ್ಲಿದ್ದಾಗ ವಿದ್ಯಾರ್ಥಿಗಳ ಕಾಂಜರ್ವೇಟಿವ್ ಸಂಘದ ಅಧ್ಯಕ್ಷಳಾದಳು. ಇದರಿಂದ ಅನೇಕ ಪಾರ್ಲಿಮೆಂಟ್ ಸದಸ್ಯರ ಪರಿಚಯ ಥ್ಯಾಚರಳಿಗೆ ಆಯಿತು. ಇದಲ್ಲದೇ ಕಾಂಜರ್ವೇಟಿವ್ ಪಕ್ಷದ ಅನೇಕ ಸಭೆಗಳಲ್ಲಿ ಭಾಗವಹಿಸುವ ಸದವಕಾಶ ಒದಗಿತು.

೧೯೫೯ರಲ್ಲಿ ಫಿಂಚ್ಲೆ ಕ್ಷೇತ್ರದಿಂದ ಪಾರ್ಲಿಮೆಂಟಿಗೆ ಆಯ್ಕೆಯಾದ ಥ್ಯಾಚರ್ ಈ ಕ್ಷೇತ್ರವನ್ನು ೨೦ ವರ್ಷಗಳಿಂದಲೂ ಪ್ರತಿನಿಧಿಸುತ್ತಿದ್ದಾಳೆ. ಆಯ್ಕೆಯಾದ ಎರಡು ವರ್ಷಗಳಲ್ಲೇ ಸಂಸದೀಯ ಸಚಿವೆ ಅವಳು. ೧೯೬೧ರ ವೇಳೆಗೆ ಶಿಕ್ಷಣ ಕ್ಷೇತ್ರದ ಬಗ್ಗೆ ಮಾತನಾಡಬಲ್ಲ ಸಾಮರ್ಥ್ಯ ಪಡೆದಳು. ೧೯೭೦ರಲ್ಲಿ ಕಾಂಜರ್ವೇಟಿವ್ ಪಕ್ಷ ಅಧಿಕಾರಕ್ಕೆ ಬಂದಾಗ ಶಿಕ್ಷಣ ಮತ್ತು ವಿಜ್ಞಾನ ಶಾಖೆಯ ಸಚಿವೆ ಆದಳು. ಕಾರ್ಮಿಕ ಸರಕಾರದ ಬಂದ ಮೇಲೆ ವಿರೋಧ ಪಕ್ಷದ ನಾಯಕಿ ಪಟ್ಟ ಲಭಿಸಿತು. ಚರ್ಚಿಲ್ ಮತ್ತು ಹೆರಾಲ್ಡ್ ಮ್ಯಾಕ್‌ಮಿಲನ್ ಈಕೆಯ ಮೇಲೆ ಪ್ರಭಾವ ಬೀರಿದರು. ಥ್ಯಾಚರಳ ಆರ್ಥಿಕ ವಿಚಾರಧಾರೆಯನ್ನು ಅವಳ ವಿರೋಧಿಗಳೂ ಮೆಚ್ಚಿಕೊಂಡಿದ್ದರು. ಕಾಮನ್ಸ್ ಸಭೆಯಲ್ಲಿ ೨೭ ಜನ ಮಹಿಳಾ ಸದಸ್ಯರು ಇದ್ದಾಗ ಪ್ರಧಾನಿ ಆಗದ ಥ್ಯಾಚರ್ ಈಗ ಪ್ರಧಾನಿ (ಈಗ ಮಹಿಳಾ ಸದಸ್ಯರು ೧೮). ತಮ್ಮ ಮಾತಿನ ಮೋಡಿಯಿಂದ ದಂಗುಬಡಿಸುವ ಥ್ಯಾಚರಳು ಅನುಸರಿಸುವ ರೀತಿ–ನೀತಿ ಆಡಳಿತದ ವೈಖರಿಯನ್ನು ಜಗತ್ತು ಕುತೂಹಲದಿಂದ ನಿರೀಕ್ಷಿಸುತ್ತಿದೆ. ಥ್ಯಾಚರಳ ಗಂಡ ಡೇನಿಸ್ ಥ್ಯಾಚರ್. ಆತ ತೈಲ ಕಾರ್ಪೋರೇಷನ್ನಿನ ಕಾರ್ಯನಿರ್ವಾಹಕನಾಗಿದ್ದ. ಎರಡು ಅವಳಿ ಮಕ್ಕಳ ತಾಯಿಯಾದ ಆಕೆ ಸವಾಲುಗಳನ್ನೆದುರಿಸಿ ಬ್ರಿಟನ್ನಿಗೆ ಪುನಃ ಹೊಸ ಬಾಳುವೆ ನೀಡುವ ಭರವಸೆ ನೀಡಿದ್ದಾಳೆ. ✡

ಜಗಕೊಂದು ಯುಗಕೊಂದು ಹೊಸ ಹೆಸರು ಬೇಕು;
ನಗೆಗೊಂದು, ಬಗೆಗೊಂದು, ಹೊಸ ಕುಸುರು ಬೇಕು;
ಹೊಸತನವೆ ಜೀವನದ ಪ್ರಗತಿಯ ರಹಸ್ಯ;
ಹೊಸತನವೆ ಮನುಜತೆಯ ಮೈಸಿರಿಯ ಲಾಸ್ಯ!

ಹಿಂದಿನದೊಳ್ಳಿತೊ ಕೆಡುಕೊ–ಅದು ಭೂತವೃತ್ತ;
ಇಂದಿಗದು ಮುಂದಿಗದು ಬರಿಯ ಸ್ಮೃತಿ ಮಾತ್ರ!
ಹಳೆಹಾದಿ ನಡೆಗಲಿವ ಮಗುವಿಗೆ ಸಾಕು;
ಬಲಿವುದಕೆ, ನಲಿವುದಕೆ ಹೊಸಹಾದಿ ಬೇಕು!

ಎಂ. ಗೋಪಾಲಕೃಷ್ಣ ಅಡಿಗ
(ಭಾವತರಂಗದಿಂದ)

ನಿಮಗೆ ನೀವೇ ಖಾತ್ರಿ ಮಾಡಿಕೊಳ್ಳಿ:

ಮಿಂಚಿನಂತಹ ಸುಪರ್ ರಿನ್ ಬಿಳುಪು, ಬೇರೆ ಯಾವುದೇ ಡಿಟರ್ಜೆಂಟ್ ಬಿಲ್ಲೆ ಅಥವಾ ಬಾರ್‌ಗಿಂತ ಅಧಿಕ ಬಿಳುಪು.





ಸುಪರ್ ರಿನ್ ನಿಯಮಿತವಾಗಿ ಉಪಯೋಗಿಸಿ ಮತ್ತು ನಿಮ್ಮ ಬಟ್ಟೆಗಳು ಎಷ್ಟು ಅಧಿಕ ಬಿಳುಪಾಗಿ ಕಾಣುತ್ತವೆಂದು ನೋಡಿರಿ. ಇವು ಬೇರೆ ಯಾವುದೇ ಡಿಟರ್ಜಂಟ್ ಬಿಲ್ಲೆ ಅಥವಾ ಬಾರ್‌ನಿಂದ ಒಗೆದಾಗ ಆಗುವುದಕ್ಕಿಂತ ಅಧಿಕ ಬೆಳ್ಳಗೆ ಆಗುತ್ತವೆ. ಏಕೆಂದರೆ ಸುಪರ್ ರಿನ್‌ನಲ್ಲಿ ಅಧಿಕ ಬಿಳುಪುಗೊಳಿಸುವ ಶಕ್ತಿ ಇದೆ. ನಿಮಗೆ ನೀವೇ ಖಾತ್ರಿ ಮಾಡಿಕೊಳ್ಳಿ.



ಬೇರೆ ಯಾವುದೇ ಡಿಟರ್ಜಂಟ್ ಬಿಲ್ಲೆ ಅಥವಾ ಬಾರ್‌ಗಿಂತ ಅಧಿಕ ಬಿಳುಪುಗೊಳಿಸುವ ಶಕ್ತಿ

ಹಿಂದುಸ್ಥಾನ್ ಲೀವರ್ ಅವರ ಉತ್ಕೃಷ್ಟ ತಯಾರಿಕೆ.

Lintas-RIN.34-1710 KN

ಇನ್ನೊಬ್ಬರನ್ನು
ಫೂಲ್ ಮಾಡಲು ಹೋಗಿ
ತಾನೇ ಫೂಲ್ ಆದ

ಏಪ್ರಿಲ್ ಫೂಲ್

ಮೂಲ : **ಡಬ್ಲ್ಯು. ಜೆ. ಲೆಡರರ್**
ಅನುವಾದ : **ಎಂ. ಆರ್. ಗಿರಿಧರ ಸ್ಥಪತಿ**

ಒಂಬೈನೆಯ ಇಸವಿ ಏಪ್ರಿಲ್ ಒಂದನೆಯ ತಾರೀಖು. ಅಮೇರಿಕದ ಯುದ್ಧನೌಕೆ ಆಪಲ್‌ಬೇ ಮನಿಲಾ ಕೊಲ್ಲಿಯಲ್ಲಿ ಲಂಗರು ಹಾಕಿ ನಿಂತಿತ್ತು. ಹಡಗಿನ ಅಧಿಕಾರಿಗಳ ನಿವಾಸದ ಕೋಣೆಯೊಂದರಲ್ಲಿ ಬಿಸಿಯಾದ ಚರ್ಚೆ ನಡೆಯುತ್ತಿತ್ತು. ಹಡಗಿನ ಕ್ಯಾಪ್ಟನ್ ಹಿಂದಿರುಗಿ ಬರುವಷ್ಟರಲ್ಲಿ ಆ ಅಧಿಕಾರಿಗಳೆಲ್ಲಾ ಒಂದು ಸಮಸ್ಯೆಯನ್ನು ಬಗೆಹರಿಸಬೇಕಾಗಿತ್ತು.

“ಏನಾದರೂ ಮಾಡಿ ಆತನು ಬೀಳುವಂತೆ ಮಾಡಲು ಒಂದು ದಾರಿ ಹುಡುಕಬೇಕು” ಮೊದಲನೆಯ ಲೆಫ್ಟಿನೆಂಟ್ ಹೇಳುತ್ತಾ ಇದ್ದನು: “ಏಪ್ರಿಲ್ ಫೂಲ್ ದಿನವೇ ನಮಗಿರೋ ಸುವರ್ಣಾವಕಾಶ. ಇದನ್ನು ಬಿಟ್ಟರೆ ಬಹುಶಃ ಇನ್ನೊಂದು ಇಂತಹ ನ್ಯಾಯಬದ್ಧವಾದ ಸಮಯ ದೊರೆಯುವುದಿಲ್ಲ, ಆ ಮುದುಕನನ್ನು ಆಟ ಆಡಿಸೋಕೆ.”

ನಮ್ಮ ಹಡಗಿನ ಹಿರಿಯ ಅಧಿಕಾರಿ ಕ್ಯಾ. ಜಿ. ಜೆ. ಸ್ವೀನಿ ಎಲ್ಲರ ಪ್ರೀತಿಪಾತ್ರನಾಗಿದ್ದ ವ್ಯಕ್ತಿ. ಅಂತಹ ಒಳ್ಳೆಯ ಕ್ಯಾಪ್ಟನ್ ಇತರ ಯಾವುದೇ ಹಡಗಿನಲ್ಲೂ ಇರಲಿಲ್ಲವೆಂದೇ ಹೇಳಬಹುದು. ಆದರೆ ಅವನಿಗಿದ್ದ ಒಂದೇ ಒಂದು ಚಟ ಎಂದರೆ ಆಗಾಗ ಇತರರನ್ನು ಪೇಚಿನಲ್ಲಿ ಸಿಕ್ಕಿಸಿ ತಾನು ಮೋಜು ನೋಡುವುದು. ಆ್ಯಪಲ್‌ಬೇಯ ಎಲ್ಲ ಅಧಿಕಾರಿಗಳೂ ಒಂದಲ್ಲ ಒಂದು ಬಾರಿ ಅಂತಹ ಪೇಚಿನಲ್ಲಿ ಸಿಲುಕಿ ಅವನ ಹಾಸ್ಯಕ್ಕೆ ಗುರಿಯಾಗಿದ್ದರು.

ನನ್ನ ವಿಷಯದಲ್ಲೂ ಅಷ್ಟೆ. ಒಮ್ಮೆ ಆತ "Lonely Hearts Association" (ಒಂಟಿ ಹೃದಯಗಳ ಸಂಘ)ಕ್ಕೆ ನನ್ನ ಹೆಸರಿನಲ್ಲಿ ಚಂದಾದಾರನಾಗಿ ಆ ಮೂಲಕ ದೊರೆತ ಒಂಟಿ ಹೃದಯವೊಂದರ ಎಲ್ಲ ಪತ್ರಗಳಿಗೂ ಪ್ರತ್ಯುತ್ತರ ಬರೆಯುತ್ತ ಇದ್ದನು. ಈ ಪತ್ರವ್ಯವಹಾರ ಎಲ್ಲಿಯವರೆಗೆ ನಡೆಯಿತೆಂದರೆ, ಕಡೆಯಲ್ಲಿ ಆ ಒಂಟಿ ಹೃದಯದ ನಾಲ್ಕು ಮಕ್ಕಳ ತಾಯಿಯಾದ ವಿಧವೆ ಅರಿಜೋನಾದಿಂದ ಮನಿಲಾಗೆ ನನ್ನನ್ನು ಮದುವೆಯಾಗಲು ವಿಮಾನದಲ್ಲಿ ಬರುತ್ತಿರುವುದಾಗಿ ಕಳಿಸಿದ ಟೆಲಿಗ್ರಾಂ ನನ್ನ ಕೈಸೇರಿತು.

ಅಂತಹ ವ್ಯಕ್ತಿಯ ಮೇಲೆ ನಾವೆಲ್ಲಾ ಸೇರಿ ಒಂದು ಭಾರಿ ಜೋಕ್ ಮಾಡಲು ಯೋಜನೆ

ಯೊಂದನ್ನು ಸಿದ್ಧಪಡಿಸುತ್ತಿದ್ದೆವು. ನಮ್ಮ ವೈದ್ಯಾಧಿಕಾರಿಗಳು (ಕ್ಯಾಪ್ಟನ್ ಒಮ್ಮೆ ಅವರ ಸ್ಟೆತಾಸ್ಕೋಪಿನಲ್ಲಿ ಒದ್ದಾಡುವ ಕೀಟವೊಂದನ್ನು ಹಾಕಿಬಿಟ್ಟಿದ್ದರು) ಕ್ಯಾಪ್ಟನ್ನನ ಆಹಾರದೊಡನೆ ಭೇದಿ ಔಷಧಿ ಬೆರೆಸುವಂತೆ ಸಲಹೆ ಮಾಡಿದರು. ಮುಖ್ಯ ಇಂಜಿನಿಯರ್‌ರವರು "ಹಡಗಿನಲ್ಲಿರುವ ದೋಣಿಯ ಮೋಟಾರಿನ ಪ್ರೊಪೆಲ್ಲರ್ ನಟ್ ಸಡಿಲ ಮಾಡೋಣ. ಆಗ ಅದು ದೂರ ಹೋದ ನಂತರ ಬಿದ್ದು ಹೋಗುತ್ತದೆ. ಕ್ಯಾಪ್ಟನ್ ಸಮುದ್ರದ ಮಧ್ಯದಲ್ಲೇ..."

ಇವೆಲ್ಲಾ ಶಾಲಾಬಾಲಕರ ಯೋಜನೆಗಳಂತೆ ಕಂಡವು ನನಗೆ. ನನ್ನ ಯೋಜನೆ ಹೀಗಿತ್ತು. ಕ್ಯಾಪ್ಟನ್ನನಿಗೆ ಮನಿಲಾದಲ್ಲಿ ಒಂದು ಚೆನ್ನಾಗಿರುವ ಮನೆಯಿತ್ತು. ಆ ಮನೆಯಲ್ಲಿ ತನ್ನ ಹೆಂಡತಿ–ಮಕ್ಕಳೊಂದಿಗೆ ಇರುವುದೆಂದರೆ ಆತನಿಗೆ ಬಹಳ ಇಷ್ಟ. ವರ್ಷಕ್ಕೊಮ್ಮೆ ಬೇಸಿಗೆಯಲ್ಲಿ ಚೀನದ ಕಡೆಗೆ ಹಡಗಿನಲ್ಲಿ ಹೋಗುವುದೆಂದರೆ ಆತನಿಗೆ ಬಹಳ ದ್ವೇಷ. ಏಕೆಂದರೆ ಮೊದಲನೆಯದಾಗಿ ಆತ ತನ್ನ ಸಂಸಾರದಿಂದ ದೂರವಾಗಿ ಒಂಟಿಯಾಗಿರುವುದು, ಎರಡನೆಯದಾಗಿ ಆತನಿಗೆ ಸ್ವಲ್ಪವೂ ಹಿಡಿಸದ ಚೀನದ ಆಹಾರವನ್ನು ಸೇವಿಸುವುದು.

ಈ ಎಲ್ಲ ವಿಷಯಗಳೂ ಕ್ಯಾಪ್ಟನ್‌ನನ್ನು ಒಳ್ಳೆ ಪೇಚಿನಲ್ಲಿ ಸಿಲುಕಿಸುವುದರಲ್ಲಿ ನನ್ನ ಮನಸ್ಸಿನಲ್ಲಿ ಯಾವ ಅನುಮಾನವೂ ಉಳಿದಿರಲಿಲ್ಲ. ನಾವು ಆತನನ್ನು ಚೀನಕ್ಕೆ ಕಳಿಸೋಣ. ಅದಕ್ಕೆ ತಾತ್ಕಾಲಿಕವಾಗಿಯಾದರೂ ಆತ ಸಿಕ್ಕಿಹಾಕಿಕೊಂಡರೆ ಆತನ ಮನಸ್ಸಿಗೆ ಭಾರಿ ಆಘಾತವೆನಿಸುವುದು. ಇನ್ನುಳಿದ ಅಧಿಕಾರಿಗಳು ಈ ಯೋಜನೆಗೆ ತಲೆದೂಗಿದರು. ಅಲ್ಲದೆ ಅದನ್ನು ಕಾರ್ಯರೂಪಕ್ಕೆ ತರುವ ಜವಾಬ್ದಾರಿಯನ್ನು ನನಗೇ ವಹಿಸಿದರು.

ನಮ್ಮ ಇಲಾಖೆಯ ಸಂಪರ್ಕಾಧಿಕಾರಿಯಾದ ನನಗೆ ನಕಲಿ (ಸುಳ್ಳು) ಆದೇಶವೊಂದನ್ನು ತಯಾರಿಸುವುದು ಅಷ್ಟೇನೂ ಕಷ್ಟವಾಗಿರಲಿಲ್ಲ. ನಿಜವಾದ ಆಜ್ಞಾಪತ್ರವೊಂದರಂತೆ ಕಾಣುವ ಪತ್ರವೊಂದನ್ನು ಸಿದ್ಧಪಡಿಸಿದೆ. ಅದರಲ್ಲಿ ಕ್ಯಾಪ್ಟನ್ ಸ್ವೀನಿಗೆ ಆತನನ್ನು ಆ್ಯಪಲ್‌ಬೇಯಿಂದ ಚೀನದ ಚುಂಗ್‌ಕಿಂಗ್‌ಗೆ ವರ್ಗಾವಣೆ ಮಾಡಿರುವುದಾಗಿ ತಿಳಿಸಲಾಗಿತ್ತು. ಚುಂಗ್‌ಕಿಂಗ್ ಚೀನದ ಸುಮಾರು ೧೫ ನೂರು ಮೈಲಿಗಳಷ್ಟು ಒಳಭಾಗದಲ್ಲಿದೆ. ಅದು ನೌಕಾ ಸಂಸಾರಗಳಿಗೆ ಪ್ರವೇಶವಿಲ್ಲದ ಪ್ರದೇಶಗಳಲ್ಲೊಂದಾಗಿದ್ದು ಅಲ್ಲಿ ಚೀನೀ ಆಹಾರವಷ್ಟೇ ದೊರೆಯುವುದು.

ಆಗ ತಾನೆ ಬೆಳಗಿನ ಉಪಾಹಾರವನ್ನು ಮುಗಿಸಿ ಕ್ಯಾಪ್ಟನ್ ಸ್ವೀನಿ ತನ್ನ ಕ್ಯಾಬಿನ್‌ನಲ್ಲಿ ಕುಳಿತಿದ್ದನು. ಆಗ ಸೇವಕನೊಬ್ಬ ಅಂದು ಬೆಳಗಿನ ಪತ್ರಗಳು, ವರದಿಗಳು, ರೇಡಿಯೋ ವರದಿಗಳು ಮುಂತಾದವುಗಳಿಂದ ಕೂಡಿದ ಫೈಲೊಂದನ್ನು ಆತನಿಗೆ ತಂದು ಕೊಟ್ಟನು. ಅವುಗಳ ನಡುವೆ ನನ್ನ ಪತ್ರವೂ ಇದ್ದಿತು. ಅದರಲ್ಲಿ ಹೀಗೆ ಬರೆಯಲಾಗಿತ್ತು.

"ಲೆ. ಕ. ಜೆ. ಜೆ. ಸ್ವೀನಿ (USN) ಆ್ಯಪಲ್‌ಬೇಯಿಂದ ಕಮಾಂಡಿಗ್ ಆಫೀಸರ್ (USS) ಆಗಿ ಬೇರ್ಪಡಿಸಲಾಗಿದೆ. ಇದಕ್ಕಾಗಿ ಯಾವುದೇ ಪರಿಹಾರವನ್ನು ಕೊಡಲಾಗುವುದಿಲ್ಲ ಮತ್ತು ತಕ್ಷಣವೇ ಚೀನದ ಚುಂಗ್‌ಕಿಂಗ್‌ಗೆ ಕಮಾಂಡಿಂಗ್ ಆಫೀಸರ್ (USS) ಆಗಿ ಅಧಿಕಾರ ವಹಿಸಿಕೊಳ್ಳಲು ಹೊರಡುವುದು."

ಇದನ್ನು ಓದಿದ ಕೂಡಲೇ ಕೋಪೋದ್ರಿಕ್ತನಾಗಿ ಆ ಮುದುಕ ಅವರನ್ನು ಹಿಡಿ ಶಾಪಹಾಕುತ್ತ ಕಿರುಚಾಡುತ್ತಿದ್ದನು.

"ಅವರು ನನ್ನನ್ನು ಚುಂಗ್‌ಕಿಂಗ್‌ಗೆ ಕಳಿಸುತ್ತಿದ್ದಾರೆ...ಅದೂ ಸಹ ಕೇವಲ ಎಂಟು ದಿನಗಳ ಒಳಗಾಗಿಯೇ ..." ಎನ್ನುತ್ತಾ ಕಾಲಿನಿಂದ ನೆಲವನ್ನೊಮ್ಮೆ ಬಲವಾಗಿ ಕುಟ್ಟಿ ಗರ್ಜಿಸಿದ.

ನಂತರ ತನ್ನ ಕಾರ್ಯಪಾಲಕ ಅಧಿಕಾರಿಗಳತ್ತ ತಿರುಗಿ "ಹಡಗಿನ ದೋಣಿಯನ್ನು ಬೇಗನೆ ಕರೆಸಿರಿ" ಎಂದು ಆಜ್ಞಾಪಿಸಿದ. ಅದು ಹಡಗಿನ ಪಕ್ಕದಲ್ಲಿ ಬಂದು ನಿಂತಾಗ ಅದರಲ್ಲಿ ಕುಳಿತು ಮನಿಲಾಕ್ಕೆ ಹೊರಟು ಹೋದ ಆತ ಆ ದಿನ ಬೆಳಿಗ್ಗೆಯೆಲ್ಲಾ ಅಲ್ಲೇ ಇದ್ದು ಮಧ್ಯಾಹ್ನ ಊಟದ ವೇಳೆಗೆ ಹಡಗಿಗೆ ಹಿಂತಿರುಗಿದ.

ಸೋತವನ ಮುಖದಂತೆ ಏನೋ ಒಂದು ರೀತಿಯ ಮ್ಲಾನತೆ, ಬೇಸರ ತುಂಬಿದಂತಿತ್ತು ಆತನ ಮುಖ. ಎಂದಿನಂತೆ ಸಂತೋಷವಾಗಿ



ಮಾತನಾಡುತ್ತ ಸಂತೃಪ್ತಿಯಿಂದ ಆ ದಿನ ಊಟವನ್ನು ಮಾಡಲಿಲ್ಲ.

"ಇದೊಂದು ಭಾರಿ ನಿರಾಶೆ ಉಂಟುಮಾಡಿದ ವಿಷಯ, ಇದನ್ನು ನನ್ನ ಹೆಂಡತಿಗೆ ತಿಳಿಸಿದಾಗ ಆಕೆ ಅತ್ತೇಬಿಟ್ಟಳು" ಕ್ಯಾಪ್ಟನ್ ಹೇಳುತ್ತಾ ಇದ್ದನು. "ಆಕೆಗೆ ಇಲ್ಲಿ ಇರುವುದೆಂದರೇ ಇಷ್ಟ. ಸಾಮಾನ್ಯವಾಗಿ ಚುಂಗ್‌ಕಿಂಗ್‌ನಲ್ಲಿ ನನ್ನ ಡ್ಯೂಟಿಯ ಪ್ರವಾಸ ಒಂದು ವರ್ಷವಿರುತ್ತದೆ. ಮತ್ತು ಅದರಿಂದ ತಪ್ಪಿಸಿಕೊಳ್ಳುವ ಹಾಗೂ ಇಲ್ಲ. ಆದ್ದರಿಂದ ನನ್ನ ಸಂಸಾರವನ್ನೆಲ್ಲಾ ಅಮೇರಿಕಕ್ಕೆ ಕಳಿಸಲು ನಿರ್ಧಾರ ಮಾಡಿದ್ದೇನೆ."

ಈಗ ನನ್ನ ಯೋಜನೆ ನಿಜವಾಗಿಯೂ ಕೆಲಸ ಮಾಡುತ್ತಿದೆಯೆಂದು ಕಂಡು ನನಗೆ ಒಳಗೊಳಗೇ ಸಂತೋಷವಾಯಿತು.

"ಇದು ನಮಗೆ ಇಷ್ಟವಿಲ್ಲದ ಕೆಲಸವಾದರೂ ಪರವಾಗಿಲ್ಲ." ಕೆಂಪು ಕರವಸ್ತ್ರದಿಂದ ಮೂಗನ್ನು ಒರೆಸುತ್ತಾ ಕ್ಯಾಪ್ಟನ್ ಹೇಳುತ್ತಿದ್ದನು, "ಆದರೆ ಎಲ್ಲಾ ವಿಷಯಗಳಲ್ಲೂ ಒಂದೊಂದು ಒಳ್ಳೆಯ ಅಂಶಗಳೂ ಸೇರಿಕೊಂಡಿರುತ್ತವೆ." ಸಹಜ ಪ್ರಯತ್ನದ ಮುಗುಳ್ನಗೆಯಿಂದ ಮುಂದುವರಿಸಿದ. "ನಾನು ನಿಜವಾಗಿಯೂ ಅದೃಷ್ಟವಂತ, ಏಕೆಂದರೆ ಈ ದಿನ ಬೆಳಿಗ್ಗೆಯೇ ನನ್ನ ಮನೆಯನ್ನು ನಗದು ಹಣದೊಂದಿಗೆ ಕೊಂಡುಕೊಳ್ಳುವ ವ್ಯಕ್ತಿಯೊಬ್ಬ ನನಗೆ ಸಿಕ್ಕಿದ. ನಿಜ ಹೇಳಬೇಕೆಂದರೆ ಇದರಲ್ಲಿ ೧,೨೦೦ ಡಾಲರ್‌ಗಳಷ್ಟು ಲಾಭ ಗಳಿಸಿದ್ದೇನೆ." ಆತ ಒಬ್ಬ ಎಸ್ಟೇಟ್ ಏಜೆಂಟ್‌ನಿಂದ ಪಡೆದ ೧೭.೨೦೦ ಡಾಲರ್‌ಗಳ ಚೆಕ್ಕೊಂದನ್ನು ನನಗೆ ತೋರಿಸಿದ.

"ಇನ್ನು ಆರು ವಾರಗಳವರೆಗೆ ನಮ್ಮ ವಿಭಾಗದ ಯಾವುದೇ ಹಡಗು ಮನಿಲಾದಿಂದ ಹೊರಡುವುದಿಲ್ಲ." ಮುದುಕ ಹೇಳುತ್ತಲೇ ಇದ್ದ. "ಆದ್ದರಿಂದ ನನ್ನ ಸಂಸಾರವನ್ನು ವಾಣಿಜ್ಯ ನೌಕೆಯೊಂದರಲ್ಲಿ ನಾಡಿದ್ದು ಕಳಿಸುತ್ತಿದ್ದೇನೆ. ನಾಡಿದ್ದು ಅವರು ಜ್ಯೂಯಲ್ ಆಫ್ ಮನಿಲಾದಲ್ಲಿ ಹೋಗಲಿದ್ದಾರೆ" ಎನ್ನುತ್ತಾ ಸ್ಟೀಮರ್ ಹಡಗಿನ ನಾಲ್ಕು ಟಿಕೇಟುಗಳನ್ನು ಟೇಬಲ್ ಮೇಲಿಟ್ಟು "ಸಾಗಾಣಿಕೆದಾರರು ನಾಳೆ ಬರುತ್ತಾರೆ" ಎಂದನು.

ಈಗ ನಮ್ಮ ಜೋಕ್‌ನ ಅಪಾಯ ನಮಗೆ ಅರ್ಥವಾಗತೊಡಗಿತು. ಜೊತೆಗೆ "ಏಪ್ರಿಲ್ ಫೂಲ್" ಎಂದು ರಾಗವಾಗಿ ಹಾಡುವುದು ಯಾವಾಗ ?

ಕ್ಯಾಪ್ಟನ್ ಮುಂದುವರಿಸಿದ "ಆರ್ಡರ್ಸ್ ಅಂದ ಮೇಲೆ ಆರ್ಡರ್ಸ್. ಆದರೆ ಬೇಸರ ಬರಿಸುವ ವಿಷಯವೆಂದರೆ ಕೊಟ್ಟಿರುವ ಅಲ್ಪ ಅವಕಾಶ. ಆಡ್ಮಿರಲ್ ಅವರ ಜೊತೆ ಈ ವಿಷಯವಾಗಿ ಈಗಾಗಲೇ ಮಾತಾಡಿದ್ದೇನೆ. ಅವರೂ ಸಹ ವಾಷಿಂಗ್‌ಟನ್ನಿಗೆ ಪ್ರಬಲವಾದ ಸಂದೇಶವೊಂದನ್ನು ಕಳಿಸಿದ್ದಾರೆ..."

"ಏನು ಸಾರ್... ಆಡ್ಮಿರಲ್‌ರ...ವ...ರು?" ನಾನು ತಡವರಿಸಿದೆ.

"ಅವರು ನನ್ನನ್ನು ಚುಂಗ್‌ಕಿಂಗ್‌ಗೆ ವರ್ಗ ಮಾಡಿರುವುದು ಕಠಿಣವಾದುದು ಮತ್ತು ಅಕ್ರಮವಾದುದು, ಅಲ್ಲದೆ ಹಾಗೆ ಮಾಡುವಾಗ ಆತನ ಸಲಹೆಯನ್ನು ಪಡೆಯಬೇಕಾಗಿತ್ತು ಎಂದು ಪತ್ರ ಬರೆದು ಸಿಬ್ಬಂದಿ ವಿಭಾಗದ ಮುಖ್ಯಾಧಿಕಾರಿಗಳನ್ನು ಅವರ ಈ ನಿರಂಕುಶ ಕ್ರಮಕ್ಕಾಗಿ ಖಂಡಿಸಿದ್ದಾರೆ."

ನನಗೆ ನಾಲಿಗೆ ಬಾಗಿಹೋದಂತೆ ಅನುಭವವಾಗತೊಡಗಿತು. ಕಾರ್ಯಪಾಲಕ ಅಧಿಕಾರಿಗಳು ಅಲ್ಲಿಂದ ಹೊರಟು ಹೋದರು. "ಸರಿ, ಇನ್ನು ನಾನೂ ಪ್ಯಾಕಿಂಗ್ ಮಾಡಲು ಪ್ರಾರಂಭಿಸಬೇಕು" ಎನ್ನುತ್ತ ಮುದುಕ ಎದ್ದನು.

ನಾನೂ ಆತನ ಒಂದೆಯೇ ಕ್ಯಾಬಿನ್ನಿನವರೆಗೂ ಹಿಂಬಾಲಿಸಿಹೋಗಿ ಬಾಗಿಲ ಬಳಿಯೇ ನಿಂತೆ. ಆತ ಒಂದೊಂದಾಗಿ ತನ್ನ ಬಟ್ಟೆಗಳನ್ನು ಸೂಟ್‌ಕೇಸಿನಲ್ಲಿ ಮಡಿಚಿಡತೊಡಗಿದ. ಅದನ್ನೇ ದಿಟ್ಟಿಸಿ ನೋಡುತ್ತಿದ್ದ ನಾನು, "...ಸರ್... ಕ್ಯಾ...ಕ್ಯಾಪ್ಟನ್" ಕಡೆಗೂ ಪ್ರಯತ್ನ ಮಾಡಿ ಬಾಯಿಬಿಟ್ಟೆ. "ಆ...ನಿಮ್ಮ ಆರ್ಡರ್ ...ಅದೂ ಅದು ನನ್ನ ತಪ್ಪಿನಿಂದಾದುದು." ಅಷ್ಟರಲ್ಲೇ ಆತ ನನ್ನ ಮಾತುಗಳನ್ನು ತಡೆದು "ನಾನು ಹೊರಟು ಹೋಗ್ತೀನಿ ಅಂತ ನಿಮಗೆ ಯಾಕಿಷ್ಟು ಬೇಸರ...ಅದೆಲ್ಲಾ ಮರೆತುಬಿಡಿ... Be cheerful. Of course, we will have a party. ಆರ್ಮಿ-ನೇವಿ ಕ್ಲಬ್‌ನಲ್ಲೇ ಏರ್ಪಡಿಸೋಣ. ನೀವು ಈಗಲೇ ಮನಿಲಾ ಹೊಟೆಲಿಗೆ ಹೋಗಿ..."

"ಇಲ್ಲಾ ಸಾರ್...ನೀವು ನನ್ನನ್ನು ತಪ್ಪು ತಿಳಿದಿದ್ದೀರಿ...ನಿಮ್ಮ ಆ ಆರ್ಡರ್ಸ್...ಚುಂಗ್‌ಕಿಂಗ್‌ಗೆ... ಅವೆಲ್ಲಾ ಸುಳ್ಳುಪತ್ರಗಳು...ಅದು ಕೇವಲ ಏಪ್ರಿಲ್ ಫೂಲಿಗಾಗಿ ಮಾಡಿದ ಜೋಕ್ ಅಷ್ಟೇ..."

ಕ್ಯಾಬಿನ್ ನೆಲವನ್ನು ಬಲವಾಗಿ ಕುಟ್ಟಿದಂತೆ ಹೆಜ್ಜೆ ಹಾಕುತ್ತಾ ನನ್ನ ಹತ್ತಿರ ಬಂದು ತಮ್ಮ ಕೆಂಪಾದ ಮುಖವನ್ನು ಹತ್ತಿರ ತಂದು "ಮಿಸ್ಟರ್ ಈಗ ನಾನು ನಿನ್ನಿಂದ ಕೇಳಿದ್ದೆಲ್ಲಾ ನಿಜವೆ?"

"ಹೌ...ಹೌದು ಸಾರ್."

ಹಾಸಿಗೆಯ ಒಂದು ತುದಿಯಲ್ಲಿ ಕುಳಿತುಕೊಳ್ಳುತ್ತ ಕ್ಯಾಪ್ಟನ್ "ನಾನು ನನ್ನ ಮನೆಯನ್ನು ಮಾರಿಬಿಟ್ಟೆ. ನನ್ನ ಸಂಸಾರವನ್ನು ಹಿಂತಿರುಗಿ ಕಳಿಸಲು ವ್ಯವಸ್ಥೆ ಮಾಡಿದ್ದೇನೆ ಮತ್ತು ಅಡ್ಮಿರಲ್‌ರವರು ನೌಕಾ ವಿಭಾಗಕ್ಕೆ ಕೋಪಗೊಂಡು ಪತ್ರ ಬರೆದಿದ್ದಾರೆ. ...ಒಂದೇ ಒಂದು ಸುಳ್ಳು ಸಂದೇಶದಿಂದ ಆಗುವ ಅನಾಹುತಗಳು ಏನು ಅಂತ ನಿನಗೆ ಗೊತ್ತಿದೆಯೇನು?" ಎಂದು ಕಿರುಚಿದನು.

"ಹೌ...ಹೌದು ಸಾರ್...ನಾನು ಕೋರ್ಟ್ ಮಾರ್ಶಲ್‌ಗೆ ಒಳಗಾಗಬೇಕು." ಎಂದೆ.

"ಅದು ಏಪ್ರಿಲ್ ಫೂಲ್ ಜೋಕ್ ಅಲ್ಲ" ಕ್ಯಾಪ್ಟನ್ ಗುಡುಗಿದ. "ನೀನು ನಿಜವಾಗಿಯೂ ಎಲ್ಲ ವಿಷಯಗಳನ್ನೂ ಆ ನಿನ್ನ ಅನುಭವ ಶಾಲಿ ಪ್ರಜ್ಞೆಯಿಂದ ಹಾಳುಮಾಡಿಬಿಟ್ಟೆ. ಆದರೆ ಇವೆಲ್ಲವುಗಳನ್ನೂ ಮತ್ತೆ ಮೊದಲಿನಂತೆ ಸರಿಪಡಿಸಲು ನಿನಗೆ ಒಂದು ಅವಕಾಶವನ್ನು ಕೊಡುತ್ತೇನೆ."

ಆತ ನನಗೆ ಮೂರು ವಸ್ತುಗಳನ್ನು ಕೊಟ್ಟ. ೧೭,೨೦೦ ಡಾಲರ್‌ಗಳ ಒಂದು ಚೆಕ್ಕು, ಸಿನಿಮಾದ ನಾಲ್ಕು ಟಿಕೆಟುಗಳು ಮತ್ತು ಅಡ್ಮಿರಲ್‌ರವರು ಸಿಬ್ಬಂದಿ ವಿಭಾಗಕ್ಕೆ ರವಾನಿಸಿದ್ದ ಪತ್ರದ ಒಂದು ಪ್ರತಿ.



"ರುಚಿಯಾಗಿ ಪಲ್ಯಮಾಡಿ ಆಫೀಸಿಗೆ ತನ್ನಿ ನಮ್ಮ ಸಾಹೇಬರಿಗೆ ಹೇಳಿ ಕೆಲಸಕ್ಕೆ ಶಿಫಾರಸು ಮಾಡಿಸ್ತೀನಿ."

"ನೀನು ಈಗ ಆ ಎಸ್ಟೇಟ್ ಏಜೆಂಟ್ ಬಳಿಗೆ ಹೋಗಿ ನನಗೆ ಯಾವ ನಷ್ಟವೂ ಉಂಟಾಗದಂತೆ ನನ್ನ ಮನೆಯನ್ನು ಹಿಂದಕ್ಕೆ ಕೊಂಡುಕೋ. ನಂತರ ಸ್ಟೀಮರ್ ಬಳಿಹೋಗಿ ಈ ಟಿಕೆಟ್‌ಗಳ ಹಣವನ್ನು ವಾಪಸು ಪಡೆದುಕೋ, ಅನಂತರ ಅಡ್ಮಿರಲ್‌ರವರ ಹತ್ತಿರ ಹೋಗಿ ಈ ನಿನ್ನ ಸಣ್ಣ ಜೋಕನ್ನು ತಿಳಿಸಿ ನನ್ನ–ಅವರ ಅವಾಂತರ ತಪ್ಪಿಸು."

"ಸರಿ...ಸರಿ ಸಾರ್" ನಾನು ಹೇಳಿದೆ.

ಆತ ತನ್ನ ವಾಚಿನೆಡೆಗೆ ನೋಡುತ್ತಾ "ಈಗ ಎರಡು ಗಂಟೆಗೆ ಹತ್ತು ನಿಮಿಷವಿದೆ. ನಾನು ನಿನ್ನ ವಿರುದ್ಧ ಕೋರ್ಟ್ ಮಾರ್ಶಲ್ ಕೈಗೊಳ್ಳುವ ಮೊದಲು ಈ ಎಲ್ಲ ವಿಷಯಗಳನ್ನು ಸರಿಪಡಿಸಲು ನಾಳೆ ಬೆಳಿಗ್ಗೆ ವರೆಗೆ ಕಾಲಾವಕಾಶ ಕೊಟ್ಟಿದ್ದೇನೆ" ಎಂದನು. ಸ್ವಲ್ಪ ಹೊತ್ತಿನಲ್ಲಿಯೇ ದೋಣಿಯೊಂದನ್ನು ಹಿಡಿದು ತಲುಪಿದೆನು.

ಎಸ್ಟೇಟ್ ಏಜೆಂಟ್ ತಾನಾಗಲೇ ಆ ಮನೆಯನ್ನು ಇನ್ನೊಬ್ಬ ಗಿರಾಕಿಗೆ ೧೮,೦೦೦ ಡಾಲರ್‌ಗಳಿಗೆ ಮಾರಿಬಿಟ್ಟಿರುವುದಾಗಿ ಹೇಳಿದನು.ಆ ಮನೆ ಇರುವ ಜಾಗವೂ ಬಹಳ ಒಳ್ಳೆಯದೇ ಆಗಿರುವದರಿಂದ ಅದೇನು ಅಷ್ಟು ಆಶ್ಚರ್ಯವಾಗಿರಲಿಲ್ಲ.

ಸುಮಾರು ಒಂದು ಗಂಟೆಯವರೆಗೆ ಆತನೊಡನೆ ಚರ್ಚೆಮಾಡಿದ ನಂತರ ನಾನು ಹೇಳಿದೆ, "ನೋಡಿ ದಯವಿಟ್ಟು ಈ ಚೆಕ್‌ನಲ್ಲಿರುವಷ್ಟು ಹಣಕ್ಕೆ ಕ್ಯಾಪ್ಟನ್‌ರ ಮನೆಯನ್ನು ಹಿಂತಿರುಗಿ ಕೊಟ್ಟು ಬಿಡಿ. ಇದಲ್ಲದೆ ೮೦೦ ಡಾಲರುಗಳನ್ನು ನನ್ನ ಕೈಯಿಂದಲೇ ಕೊಡುತ್ತೇನೆ. ಆದರೆ ಈಗ ತಕ್ಷಣಕ್ಕೆ ನನ್ನಲ್ಲಿ ಹಣವಿಲ್ಲ. ತಿಂಗಳಿಗೆ ಐವತ್ತು ಡಾಲರ್‌ಗಳನ್ನು ತಪ್ಪದೆ ಕಳಿಸಿಕೊಡುತ್ತೇನೆ."

ನಂತರ ನನ್ನ ಪರಿಸ್ಥಿತಿಯನ್ನು ವಿವರವಾಗಿ ಆತನಿಗೆ ತಿಳಿಸಿದೆ. ಹಾಗೆಯೇ ನಾನೇನಾದರೂ ಕೋರ್ಟ್ ಮಾರ್ಶಲ್‌ಗೆ ಒಳಗಾದರೆ ಖಂಡಿತವಾಗಿಯೂ ಶಿಕ್ಷೆಗೊಳಗಾಗುವನೆಂದೂ ತಿಳಿಸಿದೆನು.

"ಸರಿ" ಕಡೆಗೆ ಏಜೆಂಟ್ ಹೇಳಿದ, "ಇದೋ ಕ್ಯಾಪ್ಟನ್ನರ ಚೆಕ್ಕಿಗೆ ರಸೀತಿ. ಉಳಿದ ವಿಷಯಗಳನ್ನು ನಾಳೆ ಬೆಳಗಿನ ಹೊತ್ತಿಗೆ ತಿಳಿಸುತ್ತೇನೆ."

ಕೃತಜ್ಞತೆಯಿಂದ ಆತನನ್ನು ವಂದಿಸುತ್ತಾ ರಸ್ತೆಗೆ ಓಡಿ ಟ್ಯಾಕ್ಸಿ ಹತ್ತಿದೆ.

ಸ್ಟೀಮರ್ ಹಡಗು ತಲುಪಿದಾಗ ಆರು ಗಂಟೆಗೆ ಇನ್ನು ೧೫ ನಿಮಿಷಗಳಿದ್ದವು. ಅಲ್ಲಿನ ಅಧಿಕಾರಿ ಅಷ್ಟು ಅಲ್ಪ ಕಾಲಾವಕಾಶದಲ್ಲಿ ಟಿಕೆಟ್ಟಿನ ಹಣವನ್ನು ಹಿಂದಿರುಗಿಸಲು ಸಾಧ್ಯವಿಲ್ಲವೆಂದೂ ಅದು ಕಾನೂನಿಗೆ ವಿರೋಧವೆಂದೂ ಹೇಳಿದನು.

"ಇದಕ್ಕೆ ಒಬ್ಬರೇ ಅಧಿಕಾರವುಳ್ಳ ವ್ಯಕ್ತಿಯೆಂದರೆ–ನಮ್ಮ ಫಾರ್ ಈಸ್ಟರ್ನ್ ಆಫೀಸಿನ ಮ್ಯಾನೇಜರ್ ಮಿ. ಗಾಂಜಾಲೆಸ್" ಆತ ಹೇಳಿದನು.

"ನಾನು ಅವರನ್ನು ಹೇಗೆ ಭೇಟಿಯಾಗಬಹುದು."

"ಅವರು ಈಗ ಪೋಲೋ ಕ್ಲಬ್‌ನಲ್ಲಿ ಕಾಕ್‌ಟೈಲ್ ಪಾರ್ಟಿಯಲ್ಲಿದ್ದಾರೆ. ಅಲ್ಲಿ ಸುಮಾರು ಮುನ್ನೂರು ಜನ ಅತಿಥಿಗಳಿದ್ದಾರೆ. ಅಲ್ಲದೆ ಮಿ. ಗಾಂಜಾಲೆಸ್ ಅವರು ನಾಳೆ ಬೆಳಿಗ್ಗೆ ಆರು ಗಂಟೆಗೇ ಹಾಂಗ್‌ಕಾಂಗಿಗೆ ಹೊರಡಲಿದ್ದಾರೆ..."

ಪೋಲೋ ಕ್ಲಬ್ ಹತ್ತಿರ ಬಂದಾಗ ಆಗಲೇ ಆರು ಗಂಟೆಯಾಗಿತ್ತು. ಸಂಜೆಯುಡುಪು ಧರಿಸಿದ್ದ ಆಹ್ವಾನಿತರೆಲ್ಲಾ ಒಳಗಡೆ ಹೋಗುತ್ತಿದ್ದರು. ಬಾಗಿಲ ಬಳಿ ನಿಂತಿದ್ದ ಸೇವಕನೊಬ್ಬ ಅತಿಥಿಗಳಿಂದ ಆಹ್ವಾನ ಪತ್ರಿಕೆಗಳನ್ನು ಪಡೆದು ಅವರನ್ನು ಒಳಗೆ ಬಿಡುತ್ತಿದ್ದನು.

"ಯೆಸ್...ಪ್ಲೀಸ್" ನನ್ನನ್ನೂ ಪ್ರಶ್ನಿಸಿದ.

"ಮಿಸ್ಟರ್ ಗಾಂಜಾಲೆಸ್ ಅವರನ್ನು ಬಹಳ ಅರ್ಜೆಂಟಾಗಿ ಕಾಣಬೇಕಾಗಿದೆ. ಅವರಿಗಾಗಿ ಬಹಳ ಮುಖ್ಯವಾದ ಸುದ್ದಿಯೊಂದನ್ನು ತಂದಿದ್ದೇನೆ."

"ಕ್ಷಮಿಸಿ, ಕೇವಲ ಆಹ್ವಾನ ಪತ್ರಿಕೆಯನ್ನು ಹೊಂದಿರುವ ಮತ್ತು ಸಂಜೆಯುಡುಪು ಧರಿಸಿರುವವರಿಗೆ ಮಾತ್ರ ಇಲ್ಲಿ ಪ್ರವೇಶ."

"ಸರಿ, ಹಾಗಿದ್ದರೆ ದಯವಿಟ್ಟು ಮಿ. ಗಾಂಜಾಲೆಸ್ ಅವರನ್ನು ಕರೆಯಿರಿ. ನಾನು ಇಲ್ಲಿಯೇ ಅವರೊಂದಿಗೆ ಮಾತನಾಡುತ್ತೇನೆ."

"ಓಹ್! ಇಲ್ಲ. ಅದು ಸಾಧ್ಯವೇ ಇಲ್ಲ" ಸೇವಕ ಹೇಳಿದ.

ಭಿಕ್ಷೆಯನ್ನು ತಿರಸ್ಕರಿಸಲ್ಪಟ್ಟ ಭಿಕ್ಷುಕನ ಸ್ಥಿತಿಯುಂಟಾಗಿತ್ತು ನನ್ನ ಸ್ಥಿತಿ. ಇಂತಹ ಸಂದಿಗ್ಧ ಪರಿಸ್ಥಿತಿಯಲ್ಲಿ ಆಶಾಕಿರಣವೊಂದು ಮೂಡುವಂತೆ ನನ್ನ ಸ್ನೇಹಿತೆಯೊಬ್ಬಳು ಅದೇ ಸಮಯಕ್ಕೆ ಕಾರಿನಲ್ಲಿ ಅಲ್ಲಿಗೆ ಬಂದಳು. ಆಕೆಯ ಹೆಸರು ಜೆಸ್ಸಿ

ಹಾಕೆಟ್. ಆಕೆ ಮನಿಲಾದ ಬುಲೆಟಿನ್ ಪತ್ರಿಕೆಯಲ್ಲಿ ಸಮಾಜ ವಿಭಾಗದ ಸಂಪಾದಕಿಯಾಗಿದ್ದಳು.

"ಆ್ಯಪಲ್‌ಬೇ ಬಿಟ್ಟು ಇಲ್ಲೇನು ಮಾಡುತ್ತಿದ್ದೀಯ ?" ಆಕೆ ಕೇಳಿದಳು, ನಾನು ಹೇಳಿದೆ.

"ಬನ್ನಿ…ನನ್ನ ಬಳಿ ಒಂದು ಎಕ್ಸ್‌ಟ್ರಾ ಆಹ್ವಾನ ಪತ್ರಿಕೆಯಿದೆ" ಎನ್ನುತ್ತಾ ನನ್ನನ್ನು ಕಾರಿನೊಳಕ್ಕೆ ತಳ್ಳಿದಳು.

ಮನೆಯಲ್ಲಿ ಚೆಸ್ಸಿ ಆಹ್ವಾನ ಪತ್ರಿಕೆಯನ್ನು ಹುಡುಕಿ ತೆಗೆದಳು ಮತ್ತು ಆಕೆಯ ಅಣ್ಣನ ಸಂಜೆಯುಡುಪನ್ನೂ ಹೊರತೆಗೆದು ಕೊಟ್ಟಳು. ಆಕೆಯ ಅಣ್ಣ ಜಾನ್ ೨೦೦ ಪೌಂಡ್ ತೂಕವಿದ್ದು ೬ ಅಡಿ ಎತ್ತರವಿದ್ದರೆ ನಾನು ೧೪೦ ಪೌಂಡ್ ತೂಕವಿದ್ದು ೫ ಅಡಿ ೯ ಅಂಗುಲ ಎತ್ತರವಿದ್ದೇನೆ.

ಆ ಪಾಯಿಜಾಮದ ತುದಿಗಳನ್ನು ಒಂದು ಅಡಿಯಷ್ಟು ಮಡಿಸಿ ಪಿನ್ ಹಾಕಿದೆವು. ಸೊಂಟದ ಸುತ್ತಲೂ ಎಷ್ಟೊಂದು ಹೆಚ್ಚು ಬಟ್ಟೆಯಿತ್ತೆಂದರೆ ಅದನ್ನೆಲ್ಲಾ ನೆರಿಗೆ ಹಿಡಿದಂತೆ ಮಡಿಸಬೇಕಾಯಿತು. ನನ್ನ ಮೇಲುಡಿಗೆಯು ನನ್ನ ಮುಂಡಿಗಿಂತ ಒಂದೆರಡು ಇಂಚು ಎತ್ತರದಲ್ಲಿದ್ದರೆ ಕೋಟಂತೂ ಮಂಡಿಯನ್ನೇ ಮುಟ್ಟಿದ್ದಿತು.

ಅರ್ಧ ಗಂಟೆಯೊಳಗಾಗಿ ನಾನು ಮತ್ತು ಚೆಸ್ಸಿ ಕ್ಲಬ್‌ಗೆ ಹಿಂದಿರುಗಿದೆವು. ಚೆಸ್ಸಿ ಸೇವಕನೊಡನೆ ಸ್ವಲ್ಪ ಹೊತ್ತು ವಾದಮಾಡಿದ ನಂತರ ಆತ ನನ್ನನ್ನು ಒಳಗೆ ಬಿಟ್ಟ. ನಾನು ಒಳಗೆ ಪ್ರವೇಶಿಸಿದಾಗ ಎಲ್ಲರೂ ಆಶ್ಚರ್ಯದಿಂದ ಒಮ್ಮೆ ನನ್ನ ಕಡೆ ನೋಡಿದರು. ನಂತರ ನಕ್ಕುಬಿಟ್ಟರು. ಸಹಾಯಕ ಮ್ಯಾನೇಜರ್ ಸೌಜನ್ಯದಿಂದ ತಾನು ವಿದೂಷಕರನ್ನು ಆಹ್ವಾನಿತರೊಡನೆ ಬೆರೆಯಲು ಬಿಡುವುದಿಲ್ಲವೆಂದು ನನಗೆ ತಿಳಿಸಿದನು. ಅಂತೂ ಕಡೆಗೆ ಗಾಂಜಾಲೆಸ್‌ನನ್ನು ಭೇಟಿಯಾದೆ. ಸ್ವಲ್ಪ ಹೊತ್ತು ಮಾತನಾಡಿದ ನಂತರ ಆತ ಸ್ಟೀಮರ್ ಟಿಕೆಟುಗಳ ಹಣವನ್ನು ಹಿಂತಿರುಗಿಸುವಂತೆ ಚೀಟಿಯೊಂದನ್ನು ಗೀಚುತ್ತಿರುವಾಗ ನಾನು ಆತನ ಜಿನ್ ಬಾಟಲ್ ಹಿಡಿದುಕೊಂಡೇ ನಿಂತಿದ್ದೆ.

ಆಗಲೇ ರಾತ್ರಿ ಹತ್ತು ಘಂಟೆಯಾಗುತ್ತಾ ಬಂದಿದೆ. ಆದರೆ ನಾನು ಇನ್ನೂ ಆಡ್ಮಿರಲ್‌ರವರನ್ನು ಕಂಡಿಲ್ಲ. ಮತ್ತೆ ಯುನಿಫಾರ್ಮ್ ಧರಿಸಿ ಅವರ ಮನೆ ಕಡೆ ಹೊರಟೆ. ಅದು ಸುಮಾರು ಹತ್ತು ಮೈಲಿಗಳ ದೂರದಲ್ಲಿತ್ತು. "ಆಡ್ಮಿರಲ್‌ರವರು ನಿದ್ದೆ ಮಾಡುತ್ತಿದ್ದಾರೆ" ಬಾಗಿಲು ತೆರೆದ ಸೇವಕ ಹೇಳಿದ. "ಅಲ್ಲದೆ ತಮ್ಮನ್ನು ಕೇವಲ ಆಫೀಸಿನ ವಿಷಯವಾಗಿ ಅಥವಾ ಅತ್ಯಂತ ಮುಖ್ಯವಾದ ವಿಷಯಗಳಲ್ಲದೆ ಬೇರೆ ಯಾವ ವಿಷಯಕ್ಕೂ ನಿದ್ರೆಯಿಂದ ಎಚ್ಚರಿಸಬಾರದೆಂದು ಅವರ ಕಟ್ಟಾಜ್ಞೆಯಿದೆ."

"ಆಡ್ಮಿರಲ್‌ರವರನ್ನು ಕರೆ. ಅವರನ್ನು ತುರ್ತಾಗಿ ಕಾಣಬೇಕಾಗಿದೆ" ನನ್ನ ಚಿನ್ನದ ಬಣ್ಣದ ಪಟ್ಟಿಯ ಕಡೆಗೆ ಬೆರಳು ಮಾಡಿ ತೋರಿಸುತ್ತಾ ಹೇಳಿದೆ.

ಸ್ವಲ್ಪ ಸಮಯದ ನಂತರ ಆಡ್ಮಿರಲ್‌ರವರು ತಮ್ಮ ಕೃತಕ ದಂತಗಳನ್ನು ಸರಿಯಾಗಿ ಹಾಕಿಕೊಳ್ಳುತ್ತಾ ಮತ್ತು ತಮ್ಮ ಪಾಯಿಜಾಮವಾ ಸರಿಪಡಿಸಿಕೊಳ್ಳುತ್ತಾ ಮಹಡಿಯಿಂದ ಕೆಳಗಿಳಿದು ಬಂದರು.

ನಾನು ಬಂದ ವಿಷಯವನ್ನು ಅವರಿಗೆ ತಿಳಿಸಿದಾಗ ಒಮ್ಮೆ ಅಡಿಯಿಂದ ಮುಡಿಯವರೆಗೆ ದಿಟ್ಟಿಸಿ ನೋಡಿ ನಂತರ ಪಕ್ಕದ ಕೋಣೆಗೆ ಹೋಗಿ ಫೋನ್ ಮಾಡಲಾರಂಭಿಸಿದರು.

"ಈಗ ನೀನು ಆ್ಯಪಲ್‌ಬೇಗೆ ಹಿಂತಿರುಗಬಹುದು" ರೂಮಿನಿಂದ ಹೊರಬಂದ ಆಡ್ಮಿರಲ್ ಹೇಳಿದರು. "ಕ್ಯಾಪ್ಟನ್ ಸ್ವಿನಿಯವರಿಗೆ ಒಂದು ಸಂದೇಶ ಕಳಿಸಿ ವಾಷಿಂಗ್‌ಟನ್ನಿಗೆ ಕಳಿಸಬೇಕಾಗಿದ್ದ ಪತ್ರವನ್ನು ರದ್ದುಗೊಳಿಸುವಂತೆ ಆದೇಶ ನೀಡಿದ್ದೇನೆ. ಮತ್ತು ನಿಮ್ಮ ವಿರುದ್ಧ ಸರಿಯಾದ ಶಿಸ್ತಿನ ಕ್ರಮವನ್ನು ಕೈಗೊಳ್ಳುವಂತೆ ತಿಳಿಸಿದ್ದೇನೆ."

ನಾನು ಮತ್ತೆ ಆ್ಯಪಲ್‌ಬೇ ತಲುಪಿದಾಗ ಬೆಳಗಿನ ೨ ಗಂಟೆಯ ಸಮಯ. ಕ್ಯಾಪ್ಟನ್ ಆಗಲೇ ಎಚ್ಚರಗೊಂಡು ನನ್ನನ್ನೇ ಎದುರು ನೋಡುತ್ತಿದ್ದನು.

"ಆಡ್ಮಿರಲ್‌ರವರು ನನಗೆ ಒಂದು ಸಂದೇಶ ಕಳಿಸಿದ್ದರು" ಆತ ಹೇಳಿದ "ಅಲ್ಲಿ ಏನು ನಡೆಯಿತೆಂದು ನನಗೆ ತಿಳಿಯಿತು. ಆದರೆ ಇನ್ನೂ ಕೆಲವು ವಿಷಯಗಳು ಹಾಗೆ ಇವೆ."

ಮನೆಯ ರಶೀತಿ ಮತ್ತು ಗಾಂಜಾಲೆಸ್ ಬರೆದ ಚೀಟಿಯನ್ನು ಆತನಿಗೆ ಕೊಟ್ಟೆ.

"ಸರಿ" ತುಸು ಕರುಣೆಯಿಂದ ನುಡಿದ. "ಆಮೇಲೆ ನಿನ ಮೇಲೆ ನಾನು ತೆಗೆದುಕೊಳ್ಳಬೇಕಾದ ಏರ್ಪ

ರಿಸಿರುವ ಶಿಸ್ತಿನ ಕ್ರಮದ ಬಗ್ಗೆ ಅಡ್ಮಿರಲ್‌ರವರು ಏನನ್ನಾದರೂ ಹೇಳಿದರೆ?"

"ಇಲ್ಲ ಸಾರ್."

"ನನ್ನಾಣೆ ಇವು ನೀನು ಬೆಳಗ್ಗೆ ಮಾಡಿದ ಅವಿವೇಕದ ಕೆಲಸ" ಕೆಲವು ಪತ್ರಗಳನ್ನು ಎತ್ತಿ ಹಿಡಿದು ಹೇಳಿದರು. "ಈ ಎಲ್ಲ ಪತ್ರಗಳೂ ಈ ರಾತ್ರಿ ಅಂಚೆಯಲ್ಲಿ ಹೋಗಲೇಬೇಕು. ಕಾರ್ಯನಿರ್ವಾಹಕ ಅಧಿಕಾರಿ ಮತ್ತು ನಾನು ಅವುಗಳನ್ನೆಲ್ಲಾ ಒಮ್ಮೆ ಪರಿಶೀಲಿಸಿ ಸರಿಯಾಗಿದೆ ಎಂದು ತಿಳಿದಿದ್ದೇವೆ. ಆದರೆ ಸಂಪರ್ಕಾಧಿಕಾರಿಯಾಗಿ ಅವು ಸರಿಯಾಗಿವೆಯೇ ಎಂದು ಖಚಿತಪಡಿಸಿಕೊಳ್ಳುವುದು ನಿನ್ನ ಕರ್ತವ್ಯ."

"ಸರಿ...ಸರಿ ಸಾರ್" ಎನ್ನುತ್ತಾ ನನ್ನ ಮರಣಶಾಸನದಂತಿದ್ದ ಅವುಗಳನ್ನು ತೆಗೆದುಕೊಂಡೆ.

ಕ್ಯಾಪ್ಟನ್ ಹೇಳುವುದನ್ನು ಮುಂದುವರಿಸಿದ "ನಮ್ಮ ಮೋಟಾರ್ ಬೋಟ್ ನಿನ್ನನ್ನು ನೌಕಾನೆಲೆದ ಅಂಚೆ ಕಛೇರಿ ಬಳಿಗೆ ಒಯ್ಯುತ್ತದೆ. ಬಹುಶಃ ಈಗಾಗಲೇ ಅದು ಬಾದಿರಬಹುದು...ದಾರಿಯಲ್ಲಿಯೇ ಪತ್ರಗಳನ್ನೆಲ್ಲಾ ಒಮ್ಮೆ ಪರಿಶೀಲಿಸು. ನಿನ್ನ ವಿಷಯದಲ್ಲಿ ಯಾವುದಾದರೂ ತಪ್ಪುಗಳಿದ್ದರೆ ಅವುಗಳನ್ನು ತಿದ್ದುವ ಅಧಿಕಾರವನ್ನು ನಿನಗೆ ಕೊಟ್ಟಿದ್ದೇನೆ...ಬೇಗನೆ ಹೊರಡು" ಎನ್ನುತ್ತಾ "ಮಧ್ಯರಾತ್ರಿಯ ಅಂಚೆ ಬಂದ್ ಆಗಲು ಇನ್ನು ಕೇವಲ ಇಪ್ಪತ್ತು ನಿಮಿಷಗಳು ಮಾತ್ರ ಇವೆ" ಎಂಬ ಎಚ್ಚರಿಕೆಯನ್ನು ಕೊಟ್ಟನು.

ಕ್ಯಾಬಿನ್ನಿನಿಂದ ಸರಸರನೆ ಮೇಲಕ್ಕೆ ಹತ್ತಿ ನಾನು ಮೋಟಾರ್‌ಬೋಟಿನೊಳಕ್ಕೆ ಜಾರುವ ಏಣಿಯ ಮೂಲಕ ವೇಗದಲ್ಲೇ ಸೇರಿದೆ. ಗರ್ಜಿಸುತ್ತಾ ಬೋಟ್ ಹೊರಟಿತು. ಬೋಟನಲ್ಲಿದ್ದ ಯುದ್ಧಕಾಲದಲ್ಲಿ ಉಪಯೋಗಿಸುವ ಲಾಂದ್ರಗಳನ್ನು ಹಚ್ಚಿ ಅದರ ಪ್ರವೇಶ ದ್ವಾರದ ಬಳಿ ನೇತು ಹಾಕಿದೆ. ನಂತರ ಸೀಟಿನ ಮೃದು ಹಾಸಿನ ಮೇಲೆ ಕುಳಿತುಕೊಂಡು ಪತ್ರಗಳನ್ನು ಓದತೊಡಗಿದೆ.

ಅವುಗಳಲ್ಲಿ ಕೇವಲ ಮೂರು ಪತ್ರಗಳಿದ್ದವು. ಒಂದು ಅಡ್ಮಿರಲ್‌ರವರಿಗೆ, ಒಂದು ಅದೇ ಏಸ್ಟೇಟ್ ಏಜೆಂಟನಿಗೆ ಮತ್ತು ಇನ್ನೊಂದು ಗಾಂಜಾಲೆಸ್‌ಗೆ ಬರೆಯಲಾಗಿತ್ತು. ಇನ್ನು ಆಶ್ಚರ್ಯಕರವಾದ ವಿಷಯವೆಂದರೆ ಅವುಗಳ ವಿಳಾಸವೊಂದನ್ನು ಬಿಟ್ಟರೆ ಉಳಿದ ವಿವರಗಳೆಲ್ಲವೂ ಒಂದೇ ಆಗಿದ್ದವು.

"ಪ್ರಿಯ ಮಿತ್ರರೇ,................

ನಮ್ಮ ಸಂಪರ್ಕಾಧಿಕಾರಿಯನ್ನು ಪೇಚಿಗೆ ಸಿಲುಕಿಸಿ ನಗೆಪಾಟಲುಮಾಡಲು ಮಾಡುವ ಈ ಕೆಲಸದಲ್ಲಿ ನೀವು ನನಗೆ ಬಹಳ ಸಹಕಾರ ನೀಡಿದ್ದಕ್ಕಾಗಿ ತುಂಬಾ ಧನ್ಯವಾದಗಳು. ಪಾಪ, ಆತನೂ ತಾನಾಗಿಯೇ ಈ ಜಾಲದಲ್ಲಿ ಸುಲಭವಾಗಿ ಸಿಕ್ಕಿಬಿದ್ದನು. ನಾನು ನನ್ನ ಜೀವನದಲ್ಲಿ ಅನೇಕ ಹಾಸ್ಯ ಸನ್ನಿವೇಶಗಳನ್ನು ನಿರ್ಮಿಸಿದ್ದೇನೆ. ಆದರೆ ನಿಜವಾಗಿಯೂ ಇದು ಒಂದು ನಾನು ಮಾಡಿದ ಎಲ್ಲ ಜೋಕುಗಳಿಗಿಂತಲೂ ಬಹಳ ಒಳ್ಳೆಯ ಏಪ್ರಿಲ್ ಫೂಲ್ ಜೋಕು.

ನಿಮ್ಮ ವಿಶ್ವಾಸಿ,
ಜೆ. ಕೆ. ಸ್ಮಿತ್
ಕಮಾಂಡಿಂಗ್ ಆಫೀಸರ್
ಯು. ಎಸ್. ಎಸ್. ಆ್ಯಪಲ್ ಬೇ."



ಚೆಸ್ಟರ್‌ಟನ್‌ರಿಗೆ ಬಹಳ ಮರೆವು. ಒಮ್ಮೆ ಅವರು ಒಂದು ಕಡೆ ಭಾಷಣ ಮಾಡಬೇಕಾಗಿದ್ದರು. ತನ್ನ ಪತಿಯ ಮರೆವಿನ ಅರಿವಿದ್ದ ಅವರ ಪತ್ನಿ ಕಾರ್ಯಕ್ರಮದ ಪಟ್ಟಿಯನ್ನು ಅವರ ಕೋಟಿಗೆ ಸಿಕ್ಕಿಸಿದ್ದಳು. ಆದರೆ ಅವರು ಆ ಕೋಟನ್ನೇ ಮರೆತು ಹೊರಟರು.

ಸ್ವಾತಂತ್ರ್ಯ ಬಂದುದಕ್ಕಾಗಿ
ಅವರು ಬೆಲೆ
ತೆತ್ತಬೇಕಾಯಿತು !

'ಇದಿ' ಅಮೀನನ ನಾಡಿನಲ್ಲಿ



ಡಾ. ಪ್ರಕಾಶ ಕೊಣ್ಣೂರ

೧೯೭೬ನೆಯ ವರ್ಷದ ನವೆಂಬರ್ ತಿಂಗಳು. ನಾನು ಹುಬ್ಬಳ್ಳಿಯಲ್ಲಿ ಮನೋವೈದ್ಯಕೀಯ ಚಿಕಿತ್ಸೆಯ ಖಾಸಗೀ ದವಾಖಾನೆಯನ್ನು ಆರಂಭಿಸಿ ಎರಡು ವರ್ಷದ ಮೇಲಾಗಿತ್ತು. ಅದರ ಜೊತೆಗೆ ಭಾರತ ಸರಕಾರದ ಸಿಬ್ಬಂದಿ ಖಾತೆಯಲ್ಲಿ ಪರದೇಶಗಳಲ್ಲಿ ನೌಕರಿಗಾಗಿಯೂ ನನ್ನ ಹೆಸರನ್ನು ರಜಿಸ್ಟರ್ ಮಾಡಿಸಿದ್ದೆ, ಸ್ವಂತ ಖರ್ಚಿಲ್ಲದೆಯೇ ವಿದೇಶ ಗಮನದ ಅವಕಾಶ ಸಿಕ್ಕರೆ ಹೋಗಿ ಬರಲು. ೧೯೭೬ರ ನವೆಂಬರ್‌ನಲ್ಲಿ ಹೊಸ ದಿಲ್ಲಿಯ ಯುಗಾಂಡಾ ರಾಯಭಾರೀ ಕಚೇರಿಯಿಂದ [illegible] ಓಲೆ ಬಂತು. ಭಾರತ ಸರಕಾರದವರು ನನ್ನ ಹೆಸರನ್ನು ಯುಗಾಂಡಾದಲ್ಲಿ ಮೆಡಿಕಲ್ ಸ್ಪೆಶಲಿಸ್ಟ್ ಹುದ್ದೆಗಾಗಿ ಸೂಚಿಸಿದ್ದು ಆ ಸಂಬಂಧವಾಗಿ ಒಂದು ಸಂದರ್ಶನಕ್ಕಾಗಿ ದಿಲ್ಲಿಗೆ ಕರೆದಿದ್ದರು. ರಾಯಭಾರೀ ಕಚೇರಿಯವರೇ ಪ್ರಯಾಣ ವೆಚ್ಚವನ್ನು ದಿನಭತ್ತೆ ಮುಂತಾದ್ದನ್ನು ಕೊಟ್ಟಿದ್ದರಿಂದ ಸಂದರ್ಶನಕ್ಕೆ ಹೋದೆ. ಸಂದರ್ಶನ ಮುಗಿದ ನಂತರ ನನ್ನನ್ನು ಆಯ್ಕೆ ಮಾಡಿರುವದಾಗಿಯೂ ನೌಕರಿಯ ಇತರ ವಿವರಗಳ ಬಗ್ಗೆ ನಂತರ ತಿಳಿಸುವದಾಗಿಯೂ ಆ ಸಂದರ್ಶನ ಸಮಿತಿಯ ಅಧ್ಯಕ್ಷರು ಹೇಳಿದರು.

ದುಗುಡ

ಯುಗಾಂಡದಲ್ಲಿ ಇದಿ ಅಮೀನರು ೧೯೭೨ರಲ್ಲಿ ಭಾರತೀಯ ಮೂಲದ ಸಾವಿರಾರು ನಾಗರಿಕರನ್ನು ದೇಶ ಬಿಡಿಸಿ ಓಡಿಸಿದ ಸಂಗತಿಗಳ ಬಗ್ಗೆ ನಾನು ಈ ಮೊದಲೇ ಸಾಕಷ್ಟು ಓದಿದ್ದೆ. ಅಲ್ಲದೆ ಗೋವೆಯ ಕಾಲೇಜಿನಲ್ಲಿ ಮನೋವೈದ್ಯಕೀಯದ ಸ್ನಾತಕೋತ್ತರ ಅಭ್ಯಾಸ ಮಾಡುತ್ತಿದ್ದಾಗ ಯುಗಾಂಡಾದಿಂದ ಹೊರದೂಡಲ್ಪಟ್ಟ ಗೋವನ್ನರ ಕಡೆಯಿಂದ ಅಲ್ಲಿಯ ವಿದ್ಯಮಾನಗಳ ಬಗ್ಗೆ ಸಾಕಷ್ಟು ಕೇಳಿಯೂ ಇದ್ದೆ. ಆದ್ದರಿಂದ ಸಾಕಷ್ಟು ದುಗುಡದಿಂದಲೇ ನಾನು ಈ ಕೆಲಸವನ್ನು ಸ್ವೀಕರಿಸಿದೆ.

ಯುಗಾಂಡಾ ಸರಕಾರದವರು ನನ್ನ ಮತ್ತು ನನ್ನ ಕುಟುಂಬದ ಪ್ರಯಾಣದ ವ್ಯವಸ್ಥೆಮಾಡುವದಕ್ಕೆ ಒಂದು ವರ್ಷವೇ ಹಿಡಿಯಿತು. ೧೯೭೭ರ ನವೆಂಬರ್ ತಿಂಗಳಲ್ಲಿ ನಾನು ಬೆಳಗಾವಿಯಿಂದ ಮುಂಬಯಿಯ ಮಾರ್ಗವಾಗಿ ಇಥಿಯೋಪಿಯನ್ ಏರ್‌ಲೈನ್ಸ್ ಮೂಲಕ ಅಡಿಸ್ ಆಬಾಬಾಕ್ಕೆ ಪ್ರಯಾಣಿಸಿದೆ. ಅಡಿಸ್ ಅಬಾಬಾದಲ್ಲಿ ಎರಡು ದಿನ ಕಳೆದು ನೈರೋಬಿಯ ಮೂಲಕ ಯುಗಾಂಡಾದ 'ಬಹುಚರ್ಚಿತ' ಅಂತಾರಾಷ್ಟ್ರೀಯ ವಿಮಾನ ನಿಲ್ದಾಣವಾದ ಎಂಟೆಬ್ಬೆಯಲ್ಲಿ ಬಂದಿಳಿದೆ. ಅಡಿಸ್ ಅಬಾಬಾದಿಂದ ನೈಜೀರಿಯದ ಲಾಗೋಸ್ ನಗರಕ್ಕೆ ಹೊರಟಿದ್ದ ಆ ವಿಮಾನದಲ್ಲಿ ಎಂಟೆಬ್ಬೆಯಲ್ಲಿ ಇಳಿದವರು ಸುಮಾರು ಇಪ್ಪತ್ತು ಜನ. ಅದರಲ್ಲಿ ಭಾರತೀಯರೆಂದರೆ, ನಾನು, ನನ್ನ ಪತ್ನಿ, ಇಬ್ಬರು ಮಕ್ಕಳು ಮಸ್ಸೂರಿಯಲ್ಲಿ ಶಾಲೆ ಕಲಿಯುತ್ತಿದ್ದ ಯುಗಾಂಡಾದಲ್ಲಿಯೇ ಹುಟ್ಟಿ ಬೆಳೆದ ಒಬ್ಬ ಸಿವಿಲ್ ಎಂಜಿನಿಯರರ ಇಬ್ಬರು ಮಕ್ಕಳು.

ವಿಮಾನದಿಂದ ಇಳಿದು ಭವ್ಯವಾದ ನಿಲ್ದಾಣದ ಕಡೆಗೆ ನೋಡುತ್ತಲೇ ಎದುರಿಗೆ ಸುಮಾರು ಹದಿನೈದು ಅಡಿ ಎತ್ತರದ ಇದಿ ಅಮೀನರ ಭಾವಚಿತ್ರ. ಆ ಚಿತ್ರವನ್ನು ನೋಡುತ್ತಲೇ ಮೈ ನಡುಗಿತು. ಒಂದು ನಿಮಿಷ ಹಿಂದಿರುಗಿ ವಿಮಾನದಲ್ಲಿ ಕುಳಿತು ಹೋಗಿಬಿಡೋಣವೇ ಎನಿಸಿತು. ಧೈರ್ಯ ತಂದುಕೊಂಡು ಒಳಗೆ ಪ್ರವೇಶಿಸಿದೆವು. ಯಾವ ತೊಂದರೆಯಿಲ್ಲದೆ ಇಮಿಗ್ರೇಶನ್ ಮತ್ತು ಕಸ್ಟಮ್ಸ್ ಖಾತೆಯ ಮೂಲಕ ಹಾಯ್ದು ಸರಕಾರದವರು ನಮಗಾಗಿ ಸ್ಥಳ ಕಾಯ್ದಿರಿಸಿದ್ದ ಲೇಕ್ ವಿಕ್ಟೋರಿಯಾ ಹೊಟೆಲಿಗೆ ಬಂದಿಳಿದಾಗ ರಾತ್ರಿಯ ಎಂಟು ಗಂಟೆಯಾಗಿತ್ತು. ಕಾರಿನಿಂದ ಇಳಿಯುತ್ತಲೇ ಹೊಟೆಲಿನ ವಿಶಾಲವಾದ ಅಂಗಣದಲ್ಲಿ ರವಿವಾರದ ಸಂಜೆಯ ಕಿವಿ ಗಡಚಿಕ್ಕುವ ಸಂಗೀತ, ಉನ್ಮತ್ತರಾಗಿ ಕುಣಿಯುತ್ತಿರುವ ಜೊತೆಗಳು. ಬಿಯರ್ ಕುಡಿಯುತ್ತ ಕುಳಿತಲ್ಲಿಂದಲೇ ಉತ್ಸಾಹಿತರಾಗಿ ಕೂಗುತ್ತ ಅಥವಾ ಚಪ್ಪಾಳೆಯಿಕ್ಕುತ್ತಿರುವ ಪ್ರೇಕ್ಷಕ ಗಣ. ಸ್ವಲ್ಪ ಮುಜುಗರದಿಂದಲೇ ಈ 'ಉಮರ್ ಖಯ್ಯಾಂ' ವಾತಾವರಣದಲ್ಲಿ ಹೊಟೆಲನ್ನು ಪ್ರವೇಶಿಸಿದೆವು. ನಮಗಾಗಿ ಕಾಯ್ದಿರಿಸಿದ ಕೋಣೆ ಹೋಟೆಲಿನ ಮುಖ್ಯ ಕಟ್ಟಡದಲ್ಲಿ ಇರದೆ ಬದಿಯ ಒಂದು ವಿಸ್ತರಣದಲ್ಲಿ ಇದ್ದದರಿಂದ ಮತ್ತೆ ಕುಣಿತದ ಗುಂಪಿನಲ್ಲಿ ಹಾಯ್ದು ನಮ್ಮ ಕೋಣೆಯನ್ನು ಪ್ರವೇಶಿಸಿ ವಿಶ್ರಮಿಸಿದೆವು.

ಸೌಂದರ್ಯನಿಧಿ

ಎಂಟೆಬ್ಬೆ ಯುಗಾಂಡಾದ ಹಳೆಯ ರಾಜಧಾನಿ. ಈಗಲೂ ಯುಗಾಂಡಾದ ಹಣಕಾಸು, ಆರೋಗ್ಯ, ಕೃಷಿ, ಯೋಜನೆ ಮುಂತಾದ ಮಹತ್ವದ ಶಾಖೆಗಳ ಮುಖ್ಯ ಕಚೇರಿಗಳು ಎಂಟೆಬ್ಬೆಯಲ್ಲಿಯೇ ಇವೆ. ಸುಮಾರು ಇಪ್ಪತ್ತು ಸಾವಿರ ಜನವಸತಿಯಿರುವ ಎಂಟೆಬ್ಬೆ ವಿಕ್ಟೋರಿಯಾ ಸರೋವರದ ಮೇಲೆ ನೆಲೆಸಿರುವ ಅವರ್ಣನೀಯ ಪ್ರಾಕೃತಿಕ ಸೌಂದರ್ಯದಿಂದ ಕೂಡಿರುವ ಪಟ್ಟಣ. ವಿಷುವವೃತ್ತದಿಂದ ಕೇವಲ ಮೂವತ್ತು ಮೈಲು ಉತ್ತರಕ್ಕೆ ಇರುವ ಈ ಪ್ರದೇಶದಲ್ಲಿ ಹನ್ನೆರಡು ತಿಂಗಳೂ ಹಸಿರು ಮುಚ್ಚಿಯುತ್ತಿದೆ. ಟಾರ್ಮ್ಯಾಕ್ ರಸ್ತೆಗಳನ್ನು ಬಿಟ್ಟರೆ ಒಣ ನೆಲ ಎಲ್ಲಿಯೂ ಕಾಣಸಿಗಲಾರದು. ನಿಸರ್ಗದತ್ತ ಪ್ರಾಕೃತಿಕ ಸೌಂದರ್ಯಕ್ಕೆ ಉಗಾಂಡಾವನ್ನು ಹಿಂದೆ ಆಳಿದ ಬ್ರಿಟಿಶರ ಅಸಮಾನ ಸೌಂದರ್ಯ ಪ್ರಜ್ಞೆಯೂ ಸೇರಿ ಯುಗಾಂಡಾದ ಈ ಸಣ್ಣ ಪಟ್ಟಣಕ್ಕೆ ಒಂದು ವಿಶಿಷ್ಟ ರೂಪವನ್ನೇ ಕೊಟ್ಟಿದೆ. ವಿಕ್ಟೋರಿಯಾ ಸರೋವರದ ದಂಡೆಯ ಮೇಲೆ ಇರುವ ಇಳುಕಲಿನಲ್ಲಿಯ ವಿಶಾಲವಾದ ಗಾಲ್ಫ್ ಮೈದಾನ, ಅದರ ಬದಿಗೆ ರಾಷ್ಟ್ರೀಯ ಸಸ್ಯಶಾಸ್ತ್ರೀಯ ಉದ್ಯಾನ.

ಪ್ರಾಣಿಶಾಲೆ, ಮತ್ತು ಒಂದು ದೊಡ್ಡ ಉದ್ಯಾನದ ನಡುವೆಯೇ ಕಟ್ಟಿದಂತಿರುವ ಬ್ರಿಟಿಶರ ಕಾಲದ ವಿವಿಧ ಕಟ್ಟಡಗಳು ಒಂದು ಕಮನೀಯ ವಾತಾವಾರಣವನ್ನೇ ಉಂಟುಮಾಡುತ್ತವೆ. ವಿಮಾನದಿಂದ ಇಳಿಯುವ ಪರದೇಶದ ಯಾತ್ರಿಕನ ಮುಂದೆ ಎಂಟೆಬ್ಬೆ ಇಡೀಯ ದಕ್ಷಿಣ ಯುಗಾಂಡಾದ ಪ್ರಾಕೃತಿಕ ಸೌಂದರ್ಯದ ಪ್ರತಿನಿಧಿಯಾಗಿ ನಿಲ್ಲುತ್ತದೆ.

ಎಂಟೆಬ್ಬೆಯಲ್ಲಿಯೇ ಇರುವ ಆರೋಗ್ಯ ಮಂತ್ರಿ ಶಾಖೆಯಲ್ಲಿ ನಾನು ನನ್ನ ನೌಕರಿಗೆ ಸಂಬಂಧಿಸಿದ ಎಲ್ಲ ವಿಧಿಗಳನ್ನೂ ಪೂರೈಸಿದೆ, ಮತ್ತು ನನ್ನ ನೌಕರಿಯು ಸ್ಥಾನವಾದ ಯುಗಾಂಡಾದ ಪ್ರಸಕ್ತ ರಾಜಧಾನಿ ಕಂಪಾಲಾಕ್ಕೆ ಪ್ರಯಾಣ ಬೆಳೆಸಿದೆ. ಕಂಪಾಲಾ ಎಂಟೆಬ್ಬೆಯಿಂದ ಮೂವತ್ತು ಮೂರು ಕಿಲೋಮೀಟರುಗಳ ದೂರದಲ್ಲಿ ವಿಕ್ಟೋರಿಯಾ ಸರೋವರದ ದಂಡೆಯೇ ಮೇಲೆಯೇ ಇದೆ.

ಮನೆಗಳ ತುಟಾಗ್ರತೆಯಿರುವ ಕಂಪಾಲಾದಲ್ಲಿ ಸರಕಾರದವರು ನನ್ನ ವಾಸದ ವ್ಯವಸ್ಥೆಯನ್ನು ನನ್ನ ಆಸ್ಪತ್ರೆಯ ಸಮೀಪದಲ್ಲಿಯೇ ಇರುವ ಸಿಲ್ವರ್ ಸ್ಪ್ರಿಂಗ್ ಹೋಟೆಲಿನಲ್ಲಿ ಮಾಡಿದ್ದರು. ವಾತಾನುಕೂಲತೆಯನ್ನು ಹೊರತು ಪಡಿಸಿ, ಪಂಚತಾರಾ ಹೊಟೇಲುಗಳಲ್ಲಿ ಇರುವ ಎಲ್ಲ ಸೌಲಭ್ಯಗಳನ್ನೂ ಹೊಂದಿರುವ ಈ ಹೋಟಲಿನ 'ಆಫ್ರಿಕನ್ ವಿಲಾಜ್' ಎಂಬ ವಿಭಾಗದಲ್ಲಿ ಒಂದು 'ಕುಟೀರ'ವನ್ನು ನಮ್ಮ ವಾಸಕ್ಕೆ ಕೊಟ್ಟರು. ಬಾಡಿಗೆ, ಊಟ, ತಿಂಡಿ ಕೂಡಿ ದಿನಕ್ಕೆ ಸುಮಾರು ಒಂಬತ್ತುನೂರು ರೂಪಾಯಿ ವೆಚ್ಚ ಬರುತ್ತಿದ್ದ ಈ ಹೋಟೇಲಿನಲ್ಲಿ ಇದಿ ಅಮೀನರ ಸರಕಾರದ ಕೃಪೆಯಿಂದ ನಾವು ಸುಮಾರು ಒಂದೂವರೆ ವರ್ಷ ಕಳೆದೆವು.

ಆರ್ಥಿಕ ಯುದ್ಧ

ಕಂಪಾಲಾ ಧಾರವಾಡದಂತೆಯೇ ಏಳು ಗುಡ್ಡಗಳ ಮೇಲೆ ನೆಲೆಸಿರುವ ಪಟ್ಟಣ. ಸುಮಾರು ಐದು ಲಕ್ಷ ಜನಸಂಖ್ಯೆ. ಕೆನ್ಯಾ, ಟಾಂಜಾನಿಯಾ, ಮತ್ತು ಯುಗಾಂಡಾಗಳನ್ನು ಒಳಗೊಳ್ಳುವ ಪೂರ್ವ ಆಫ್ರಿಕದಲ್ಲಿ ಕಂಪಾಲಾ ಶೈಕ್ಷಣಿಕ ರಾಜಧಾನಿ ಎನಿಸಿಕೊಳ್ಳುತ್ತದೆ. ಪೂರ್ವ ಆಫ್ರಿಕದಲ್ಲಿಯೇ ಅತಿ ಹಳೆಯದಾದ ಮಕರೇರಿ ವಿಶ್ವವಿದ್ಯಾಲಯ ಐವತ್ತು ವರ್ಷಗಳ ಹಿಂದೆಯೇ ಕಂಪಾಲಾದಲ್ಲಿ ಸ್ಥಾಪಿತವಾಯಿತು. ಎಂಟೆಬ್ಬೆಯಂತೆಯೇ ಕಂಪಾಲಾ ಸಹ ಹನ್ನೆರಡು ತಿಂಗಳೂ ಹಸಿರು ಸೂಸುತ್ತಿರುತ್ತದೆ. ಹಿತಕರವಾದ ಹವಾಮಾನ. ಇಲ್ಲಿ ಸೆಕೆಯಾಗುವುದು ತೀರ ಕಡಿಮೆ. ಸಮುದ್ರ ಮಟ್ಟದಿಂದ ಸುಮಾರು ಮೂರೂವರೆ ಸಾವಿರ ಅಡಿ ಎತ್ತರದಲ್ಲಿದೆ. ನಗರದ ಸುತ್ತಲೂ ಸುಂದರ ಉಪನಗರಗಳು, ನಗರ ಮಧ್ಯದಲ್ಲಿ ಅತ್ಯಾಧುನಿಕ ಗಗನಚುಂಬಿ ಕಟ್ಟಡಗಳು. ವಿನ್‌ಸ್ಟನ್ ಚರ್ಚಿಲ್ ಕಂಪಾಲಾ ಮತ್ತು ಅದರ ಪರಿಸರವನ್ನು 'Pearl of Africa'(ಆಫ್ರಿಕದ ಮುತ್ತು) ಎಂದು ಕರೆದರು.

೧೯೭೨ರಲ್ಲಿ ಅಮೀನರು ಆರ್ಥಿಕಯುದ್ಧ (Economic War)ವನ್ನು ಸಾರುವ ಮೊದಲು ಯುಗಾಂಡಾದಲ್ಲಿ ಸುಮಾರು ಎಂಬತ್ತು ಸಾವಿರ ಭಾರತೀಯ ಮೂಲದ ಜನರಿದ್ದರು. ಇದರಲ್ಲಿ ಹೆಚ್ಚು ಜನ ಗುಜರಾತಿಗಳು ಮತ್ತು ಪಂಜಾಬಿಗಳು. ಕಂಪಾಲಾದಲ್ಲಿಯೇ ಭಾರತೀಯರ ಸಂಖ್ಯೆ ಮೂವತ್ತು ಸಾವಿರದ ಮೇಲಿತ್ತು. ಯುಗಾಂಡಾದ ಅಧಿಕಾರ ವ್ಯಾಪಾರೋದ್ಯಮ ಭಾರತೀಯ ಮೂಲದ ಜನರ ಕೈ-ಯಲ್ಲಿ ಕೇಂದ್ರೀಕೃತವಾಗಿತ್ತು. ಮಾಧವಾನಿ ಮತ್ತು ಮೆಹತಾ ಕುಟುಂಬಗಳು ಬಟ್ಟೆ, ಸಕ್ಕರೆ, ಸಿಮೆಂಟು, ಮದ್ಯ ಮುಂತಾದ ಎಲ್ಲ ದೊಡ್ಡ ಉದ್ಯಮಗಳನ್ನು ನಿಯಂತ್ರಿಸುತ್ತಿದ್ದವು. ಕಾಫಿ, ಚಹ ಮತ್ತು ಹತ್ತಿ ದೊಡ್ಡ ಪ್ರಮಾಣದಲ್ಲಿ ಬೆಳೆಯುವ ಯುಗಾಂಡಾವನ್ನು ಆಫ್ರಿಕದ ಅತಿ ಮುಂದುವರಿದ ರಾಷ್ಟ್ರವನ್ನಾಗಿ ಮಾಡಿದ ಶ್ರೇಯಸ್ಸಿನಲ್ಲಿ ಭಾರತೀಯರ ಪಾಲು ಗಣನೀಯ.

ಮೊದಮೊದಲು ಯುಗಾಂಡಾದಲ್ಲಿಯ ಜೀವನ ವೆಚ್ಚ ನನ್ನನ್ನು ದಿಗ್ಮೂಢನನ್ನಾಗಿ ಮಾಡಿತು. ಒಂದು ಕಿಲೋ ಅಕ್ಕಿ ಅಥವಾ ಸಕ್ಕರೆಗೆ ೪೫ ರೂ. ಯುಗಾಂಡಾದಲ್ಲಿಯೇ ತಯಾರಾಗುವ ೨೦ ಸಿಗರೇಟುಗಳ ಒಂದು ಪ್ಯಾಕೆಟ್ಟಿಗೆ ೨೨ ರೂ, ಒಂದು ಬಿಯರ್ ಬಾಟಲಿಗೆ ಸರಕಾರದ ಅಧಿಕೃತ ಬೆಲೆ ೨೫ ರೂ, ಪೇಟೆಯಲ್ಲಿ ಮಾರುವ

ಬೆಲೆ ೫೫ ರಿಂದ ೬೦ ರೂ, ಇತ್ಯಾದಿ. ಇದರ ಮೇಲಿನಿಂದ ಬಟ್ಟೆಗಳು, ಪಾದರಕ್ಷೆಗಳು, ದಿನ ಬಳಕೆಯ ಸಾಮಾನುಗಳ ಬೆಲೆಗಳನ್ನು ನೀವೇ ಊಹಿಸಬಹುದು. ಆದರೆ ಪರದೇಶಗಳಿಂದ ಬಂದವರಿಗೆ, ತಂತ್ರಜ್ಞರಿಗಾಗಿ ಒಂದು ವಿಶೇಷ ದಿನಸಿ ಮತ್ತು ಐಷಾರಾಮಿ ವಸ್ತುಗಳ ಅಂಗಡಿಯನ್ನು ಸರಕಾರವು ನಡೆಸುತ್ತಿದ್ದು ಅವುಗಳಲ್ಲಿ ಖರೀದಿಗಾಗಿ ನಮಗೆ ವಿಶೇಷ ಗುರುತಿನ ಕಾರ್ಡುಗಳನ್ನು ಕೊಟ್ಟಿತ್ತು. ಈ ಅಂಗಡಿಯಲ್ಲಿ ಮಾತ್ರ ವಸ್ತುಗಳ ಬೆಲೆ ಭಾರತದಲ್ಲಿಯ ಬೆಲೆಗಳ ಎರಡು ಅಥವಾ ಮೂರು ಪಟ್ಟು ಇರುತ್ತಿತ್ತು. ಇದಲ್ಲದೆ ವಿದೇಶೀಯರಿಗೆ ಅವರ ಆಗಮನದ ಆರು ತಿಂಗಳೊಳಗೆ ತಮಗೆ ಬೇಕಾದ ವಸ್ತುಗಳನ್ನು (ಕಾರು, ರೆಫ್ರಿಜರೇಟರ್) ಇತ್ಯಾದಿ ಕರರಹಿತವಾಗಿ ತರಿಸಿಕೊಳ್ಳುವ ಸೌಲಭ್ಯ ಕೊಡಲಾಗಿತ್ತು. ಸರಕಾರದವರಿಂದ ಇದ-ಕ್ಕಾಗಿ ವಿದೇಶವಿನಿಮಯವನ್ನು ಮುಂಗಡವಾಗಿ ಪಡೆಯಬಹುದಿತ್ತು. ಆದ್ದರಿಂದ ಸ್ಥಾನೀಯ ಯುಗಾಂಡನ್ನರ ಜೊತೆಗೆ ಹೋಲಿಸಿದರೆ ನಮ್ಮಂತಹ ವಿದೇಶಿಯರು ಬಹಳ ಸುಖಿಗಳಾಗಿದ್ದಾರೆಂದು ಹೇಳಬಹುದು.



“ಬ್ಲಡ್‌ಪ್ರೆಶರ್ ಇದಕ್ಕಾರಣ ‘ಚೆನ್ನಾಗಿ ಗಾಳಿ ಸೇವನೆ ಮಾಡು’ ಅಂತ ಡಾಕ್ಟರರು ಹೇಳಿದ್ದಾರೆ. ಕಿಟಿಕಿಯಿಂದ ಕೊಂಚ ಸರಿದು ಕುಳಿತುಕೊಳ್ತೀರಾ ಸ್ವಲ್ಪ ?”

ಪುಡಿ ಹಾಲು

ಯುಗಾಂಡಾದ ಮುಖ್ಯ ಆಹಾರ ಬಾಳೆಯ ಕಾಯಿಯ ಹಿಟ್ಟಿನಿಂದ ತಯಾರಿಸುವ ಮಟೋಕೆ ಎಂಬ ಪದಾರ್ಥ. ಅದನ್ನು ಅವರೆ ಕಾಯಿಯ ಪಲ್ಯ, ಮಾಂಸ ಮತ್ತು ಮೀನುಗಳ ಜೊತೆ ತಿನ್ನುತ್ತಾರೆ. ಯುಗಾಂಡಾದ ಉತ್ತರದಲ್ಲಿ ಗೋವಿನ ಜೋಳ ಮುಖ್ಯ ಆಹಾರ. ಮಾಂಸವನ್ನು ಅರ್ಧ ಬೇಯಿಸಿ ತಿನ್ನುವುದು ಇಲ್ಲಿಯ ರೂಢಿ. ಹಸಿ ಮಾಂಸ ಮತ್ತು ಪೂರ್ಣ ಬೇಯಿಸಿದ ಮಾಂಸಗಳಲ್ಲಿ ಒಂದನ್ನು ಆರಿಸಲು ಕೇಳಿದರೆ ಇಲ್ಲಿಯ ಜನ ಹಸಿ ಮಾಂಸವನ್ನೇ ಆರಿಸಿಕೊಳ್ಳುತ್ತಾರೆ. ಯುಗಾಂಡಾದಲ್ಲಿ ಹೈನವು ವಿಪುಲವಾಗಿದ್ದು ಮೊದಲು ಹಾಲಿನ ಸಮೃದ್ಧಿಯಿತ್ತು. ಇದಿ ಅಮೀನರ ಆಗಮನದ ನಂತರ ಅವರ ಸೈನಿಕರು ಮನಬಂದಂತೆ ಜನರ ದನಗಳನ್ನು ಕದ್ದು ಕೊಯ್ದು ತಿನ್ನುತ್ತಿದ್ದುದರಿಂದ ಯು-ಗಾಂಡಾದಲ್ಲಿ ಹಾಲಿನ ತೀವ್ರ ಅಭಾವ ಉಂಟಾಯಿತು. ಸರಕಾರವು ಡೆನ್ಮಾರ್ಕಿನಿಂದ ಹಾಲಿನ ಪುಡಿಯನ್ನು ತರಿಸಿ ದ್ರವರೂಪದಲ್ಲಿ ಪರಿವರ್ತಿಸಿ ಅದನ್ನೇ ಹಾಲು ಎಂದು ಮಾರುತ್ತಿತ್ತು. ಇಂತಹ ಅರ್ಧ ಲಿಟರ್ ಹಾಲಿನ ಬೆಲೆ ವಿದೇಶಿಯರಿಗೆ ೨॥ ರೂ. ಯುಗಾಂಡನ್ನರಿಗೆ ೧೦ರಿಂದ ೧೫ ರೂ.

ದಿನ ಕಳೆದಂತೆ ನನಗೆ ಸ್ಥಾನೀಯ ಯುಗಾಂಡನ್ನರ ಸಂಪರ್ಕ ಬರತೊಡಗಿತು. ಅಮೀನರ ಅಥವ ಅವರ ಸರಕಾರದ ವಿರುದ್ಧ ವೈಯಕ್ತಿಕವಾಗಿ ಒಂದು ಶಬ್ದವನ್ನೂ ಆಡುವ ಧೈರ್ಯ ಯಾರಿಗೂ ಇರಲಿಲ್ಲ. ಆದರೆ ಒಳಗೊಳಗೇ ಕುದಿಯುತ್ತಿದ್ದ ಅಸಂತೋಷವನ್ನು ಅಮೀನರ ದೃಢ ಪ್ರಶಂಸಕನೂ ಗುರುತಿಸಬಹುದಿತ್ತು. ಆಸ್ಪತ್ರೆಯಲ್ಲಿ ನನ್ನ ಜೊತೆಗೆ ಕೆಲಸ ಮಾಡುವ ಡಾಕ್ಟರರು ಮತ್ತು ನರ್ಸುಗಳಲ್ಲಿ ಹೆಚ್ಚು

ಕಡಿಮೆ ಪ್ರತಿಯೊಬ್ಬರೂ ತಮ್ಮ ಒಬ್ಬ ಸಂಬಂಧಿಯನ್ನೋ - ಅಥವಾ ಮಿತ್ರನನ್ನೋ ಅಮೀನರ ಸೈನಿಕರ ಕಗ್ಗೊಲೆಗಳ ಮೂಲಕ ಕಳೆದುಕೊಂಡಿದ್ದರು. ನಾನು ವಾಸಿಸುತ್ತಿದ್ದ ಹೊಟೆಲಿನ ಕೆಲಸಗಾರರಲ್ಲಿ ಕನಿಷ್ಠ ನಾಲ್ಕು ಜನನ ನಗೆ ತಮ್ಮ ಸಂಬಂಧಿಕರು ಸೈನಿಕರಿಂದ ಕೊಲ್ಲಲ್ಪಟ್ಟ ಬಗ್ಗೆ ಹೇಳಿದರು. ಅಮೀನರ ಸೈನಿಕರಿಗೆ ನಾಗರಿಕರನ್ನು ಕಾಡಿಸಲು ಅಥವಾ ಕೊಲ್ಲಲು ಬಹಳ ಗಂಭೀರ ಕಾರಣಗಳು ಬೇಕಾಗುತ್ತಿರಲಿಲ್ಲ. ಸೈನಿಕರು ಮನೆಗಳನ್ನು ನುಗ್ಗಿ ಲೂಟಿ ಮಾಡುವದು ಕಂಪಾಲಾದಲ್ಲಿ ಸಾಮಾನ್ಯವಾಗಿತ್ತು. ವಿಶ್ವಸಂಸ್ಥೆಯಲ್ಲಿ ಕೆಲಸ ಮಾಡುವ ನನ್ನ ಪರಿಚಯದ ಒಬ್ಬ ಭಾರತೀಯನ ಮನೆಗೆ ನುಗ್ಗಿ ಸುಮಾರು ಮೂವತ್ತು ಜನ ಸೈನಿಕರು ಮಧ್ಯರಾತ್ರಿಯಲ್ಲಿ ಅವರ ಮನೆಯನ್ನೇ ಲೂಟಿ ಮಾಡಿದರು. ನಾಗರಿಕರಿಂದ ಬಲಾತ್ಕಾರವಾಗಿ ವಾಹನಗಳನ್ನು ಕಸಿದುಕೊಂಡು ಹೋಗುವದು ಸಾಮಾನ್ಯವಾಗಿತ್ತು. ಯುಗಾಂಡಾದ ನಾಗರಿಕತೆಯನ್ನು ಸ್ವೀಕರಿಸಿದ ಪಾಕಿಸ್ತಾನೀ ಮೂಲದ ಒಬ್ಬ ನಾಗರಿಕನ ಕಾರನ್ನು ಕಸಿದುಕೊಂಡು ದಿನಾಲು ಅವನ ಮುಂದೆ ಅದೇ ಕಾರಿನಲ್ಲಿ ಅಡ್ಡಾಡುತ್ತಿದ್ದ ಒಬ್ಬ ಸೈನಿಕನ ವಿರುದ್ಧ ದೂರು ಕೊಡುವ ಧೈರ್ಯ ಯಾರಿಗೂ ಇರಲಿಲ್ಲ. ಇಂತಹ ಅಕ್ಷರಶಃ ಉದಾಹರಣೆಗಳು ನೂರಾರು. ಸೈನ್ಯದಲ್ಲಿ ಕಾರ್ಪೋರಲ್ ಕೆಲಸ ಮಾಡುವವನೂ ಸ್ವಂತದ ಮೂರು ನಾಲ್ಕು ಕಾರುಗಳನ್ನಿಟ್ಟ ಸಂಗತಿಯನ್ನು ನಾನು ನೋಡಿದ್ದೇನೆ. ಬೆಳಗಿನ ೧೦ ಗಂಟೆಗೆ ಕಂಪಾಲಾದ ಮುಖ್ಯ ರಸ್ತೆಯಲ್ಲಿ ಮಿಲಿಟರಿ ಸಮವಸ್ತ್ರಗಳಲ್ಲಿಯ ಜನರು ತಮ-ಗಾಗದವರನ್ನು ಬೆನ್ನಟ್ಟಿ ಕೊಂದ ಉದಾಹರಣೆಗಳೂ ಇವೆ. ಕಂಪಾಲಾದ ಅತಿ ದೊಡ್ಡ ಮುಲಾಗೋ ಆಸ್ಪತ್ರೆಯ ವ್ಯಾನನ್ನು ಸುಮಾರು ಹತ್ತು ಲಕ್ಷ ರೂ. ಸಹಿತ ಬೆಳಗಿನ ೧೧ ಗಂಟೆಗೆ ಕೊಳ್ಳೆ ಹೊಡೆಯಲಾಯಿತು. ನಮ್ಮ ಆಸ್ಪತ್ರೆಯಿಂದ ಕದ್ದ ಅಂಬುಲನ್ಸ್ ಒಂದನ್ನು ಅವರ ಮೇಲಿನ ನಮ್ಮ ಆಸ್ಪತ್ರೆಯ ಹೆಸರನ್ನೂ ಅಳಿಸದೆ ಮಿಲಿಟರಿ ಬರಾಕಿನಲ್ಲಿ ಇಟ್ಟಿದ್ದನ್ನು ನನ್ನ ಪರಿಚಯದ ಹಲವರು ಆಫ್ರಿಕನ್ನರು ನೋಡಿದ್ದಾರೆ. ದಕ್ಷಿಣ ಕೋರಿಯದ ರಾಯಭಾರಿಯ ಮರ್ಸಿಡಿಸ್ ಕಾರನ್ನು ಕದ್ದು ಒಯ್ದ ಒಬ್ಬ ಸೈನಿಕ ಅಧಿಕಾರಿ ಆ ಕಾರನ್ನು ಅಧ್ಯಕ್ಷ ಅಮೀನರೇ ಸ್ವತಃ ಹೇಳಿದಾಗ ಮರಳಿ ತಂದು ಕೊಟ್ಟನೆಂದು ನಾನು ಕೇಳಿದ್ದೆ. ನನ್ನ ಒಬ್ಬ ಕನ್ನಡಿಗ ಮಿತ್ರನಿಗೆ ಅವರ ಕಂಪನಿಯವರು ಉಪಯೋಗಿಸಲು ಕೊಟ್ಟ ಸ್ಟೇಶನ್ ವ್ಯಾಗನ್ನನ್ನು ಹಗಲಿನ ಹನ್ನೆರಡು ಗಂಟೆಗೆ ಅವರ ಕಚೇರಿಯ ಎದುರಿನಿಂದ ಹಾರಿಸಿಕೊಂಡು ಹೋದರು. ಬೀಗ ಹಾಕಿಟ್ಟ ಭಾರತೀಯ ಡಾಕ್ಟರರೊಬ್ಬರ ಕಾರನ್ನು ಬೆಳಗಿನ ೯ ಗಂಟೆಗೆ ಆ ಆಸ್ಪತ್ರೆಯ ಆವರಣದಿಂದ ಹಾರಿಸಲಾಯಿತು. ಸೈನಿಕ ತಾನಾಶಾಹಿಯ ಕೈಯಲ್ಲಿ ಒಂದು ಜನಾಂಗದ ಗತಿ ಏನಾಗ ಬಹುದೆಂಬುದನ್ನು ಯುಗಾಂಡಾದಲ್ಲಿ ಪ್ರತ್ಯಕ್ಷ ನೋಡಬಹುದಾಗಿತ್ತು.

ಅಮೀನ್ ಪೂರ್ವದ ಯುಗಾಂಡಾ

ಯುಗಾಂಡಾ ಪೂರ್ವ ಆಫ್ರಿಕದ ದೇಶಗಳಲ್ಲಿ ವಿಸ್ತಾರದ ದೃಷ್ಟಿಯಿಂದ ಅತಿ ಸಣ್ಣ ದೇಶ. ಉತ್ತರಕ್ಕೆ ಸೂಡಾನ್, ದಕ್ಷಿಣಕ್ಕೆ ಟಾಂಜಾನಿಯ, ಪಶ್ಚಿಮಕ್ಕೆ ಕೆನ್ಯಾ ಮತ್ತು ಪೂರ್ವಕ್ಕೆ ಜಾಯಿರ್ (ಮೋಬುಟುರ ಕಾಂಗೋ) ಇದರ ಗಡಿಗಳು. ಯುಗಾಂಡಾದ ಒಟ್ಟು ವಿಸ್ತಾರದಲ್ಲಿ ಕಾಲು ಭಾಗದಷ್ಟು ಸಿಹಿನೀರಿನ ಸರೋವರಗಳಿಂದ ಕೂಡಿದೆ. ವಿಕ್ಟೋರಿಯಾ ಸರೋವರ ಜಗತ್ತಿನ ಎರಡನೆಯ ಅತಿ ದೊಡ್ಡ ಸಿಹಿನೀರಿನ ಸರೋವರ. ಸುಮಾರು ಮೂರು ನೂರು ಮೈಲು ಅಗಲ ಮತ್ತು ಎರಡು ನೂರು ಮೈಲು ಉದ್ದವಿರುವ ಈ ಸರೋವರವನ್ನು ಕೆನ್ಯಾ, ಯುಗಾಂಡಾ ಮತ್ತು ಟಾಂಜಾನಿಯಾಗಳು ಸುತ್ತುವರಿದಿವೆ. ಜಗತ್ಪ್ರಸಿದ್ಧ ನೈಲ್ ನದಿ ವಿಕ್ಟೋರಿಯಾ ಸರೋವರದ ಒಂದು ಭಾಗದಿಂದಲೇ ಸುಡಾನ್ ಮತ್ತು ಈಜಿಪ್ತ್‌ಗಳ ಕಡೆಗೆ ಮೂರು ಸಾವಿರ ಮೈಲು ಉದ್ದದ ತನ್ನ ಪ್ರಯಾಣವನ್ನು ಆರಂಭಿಸುತ್ತದೆ. ಉತ್ತರ ಯುಗಾಂಡಾದಲ್ಲಿ ನೈಲ್ ನದಿಯ ಎರಡೂ ಬದಿಗಳಲ್ಲೂ ಬಹು ದೊಡ್ಡ ಹುಲ್ಲುಗಾವಲುಗಳು ಹಬ್ಬಿಕೊಂಡಿದ್ದು ರೈನೋ, ಹಿಪ್ಪೋ, ಆನೆ, ಸಿಂಹ, ಜಿರಾಫೆಗಳ ಸಮಾವೇಶ.

ಹಲವಾರು ಪ್ರಾಣಿಗಳು ಇಲ್ಲಿ ವಾಸಿಸುತ್ತವೆ. ದಕ್ಷಿಣ ಯುಗಾಂಡಾ ಪರ್ವತಮಯವಾಗಿದ್ದು ಹಿಮ ಮುಚ್ಚಿದ ಪರ್ವತಗಳಿಂದ ಕೂಡಿದೆ. ಪೂರ್ವಕ್ಕೆ ಹತ್ತಿರುವ ಪ್ರದೇಶವನ್ನು ಮೌಂಟ್ ಎಲ್ವಾನ್ ಆವರಿಸಿದೆ.

ಯುಗಾಂಡಾದ ಒಟ್ಟು ಜನಸಂಖ್ಯೆ ಸುಮಾರು ೧ ಕೋಟಿ ೨೦ ಲಕ್ಷವಿದ್ದು ಬಂಟು ಬುಡಕಟ್ಟಿನ ವಿವಿಧ ಜನಾಂಗಗಳು ಇಲ್ಲಿ ವಾಸಿಸುತ್ತವೆ. ಸಾಕ್ಷರತೆ ಸುಮಾರು ೪೦ ಪ್ರತಿಶತವಿದೆ. ಸುಮಾರು ನೂರು ವರ್ಷಗಳ ಹಿಂದೆ ಬ್ರಿಟಿಶರ ಆಗಮನಕ್ಕೆ ಮೊದಲು ಈ ದೇಶದ ಬಹುಭಾಗವನ್ನು ಬಗಾಂಡಾ, ಟೋರೋ ಮತ್ತು ಅಂಕೋಲೆಗಳ ನಿಗ್ರೋ ಅರಸರು ಆಳುತ್ತಿದ್ದರು. ನೀಲ್ ನದಿಯ ಎರಡೂ ಬದಿಗೆ ಅದರಲ್ಲೂ ಕೆನ್ಯಾಕ್ಕೆ ಹತ್ತಿರುವ ಪೂರ್ವಭಾಗದಲ್ಲಿ ಅತ್ಯಂತ ಅನಾಗರಿಕ ಜನಾಂಗಗಳು ವಾಸಿಸುತ್ತಿದ್ದವು. (ಈಗಲೂ ಈ ಪ್ರದೇಶದಲ್ಲಿ ಮೈಮೇಲೆ ಬಟ್ಟೆಗಳನ್ನು ಹಾಕಿಕೊಳ್ಳಲು ನಿರಾಕರಿಸುವ ಜನ ವಾಸಿಸುತ್ತಾರೆ). ಬಗಾಂಡಾ. ಟೋರೋ ಮತ್ತು ಅಂಕೋಲೆಗಳ ಪ್ರದೇಶ ಫಲವತ್ತಾಗಿದ್ದು ಇದು ಪೂರ್ವ ಆಫ್ರಿಕದ ಶ್ರೀಮಂತ ಒಳನಾಡಾಗಿದೆ. ಬ್ರಿಟಿಶರು ೧೯೭೦ರ ದಶಕದಲ್ಲಿ ಈ ಮೂರೂ ಅರಸೊತ್ತಿಗೆಗಳನ್ನು ಸೋಲಿಸಿ ಯುಗಾಂಡಾ ಎಂಬ ಹೆಸರಿನಿಂದ ಈ ಪ್ರದೇಶವನ್ನು ತಮ್ಮ ಸಾಮ್ರಾಜ್ಯದ ಭಾಗವನ್ನಾಗಿ ಮಾಡಿಕೊಂಡರು. ಇದರ ಜೊತೆಗೇ ಕ್ರಿಶ್ಚಿಯನ್ ಮಿಶನರಿಗಳ ಪ್ರವೇಶವಾಗಿ ಇಡಿಯ ದೇಶವನ್ನು ಆಂಗ್ಲಿಕನ್, ಪ್ರೊಟೆಸ್ಟಂಟ್, ಕೆಥೋಲಿಕ್ ಮುಂತಾಗಿ ಧರ್ಮಾಂತರ ಮಾಡಲಾಯಿತು. ಇದರ ಜೊತೆಗೇ ಸಣ್ಣ ಪ್ರಮಾಣದಲ್ಲಿ ಇಸ್ಲಾಂನ ಪ್ರವೇಶವೂ ಆಗಿ ಸುಮಾರು ಐದು ಪ್ರತಿಶತ ಜನ ಮುಸ್ಲಿಮರಾದರು.

ಮೊದಲ ಅಧ್ಯಕ್ಷ

೧೯೬೨ರಲ್ಲಿ ಬ್ರಿಟಿಷರು ಯುಗಾಂಡಾವನ್ನು ಸ್ವತಂತ್ರ ರಾಷ್ಟ್ರವೆಂದು ಘೋಷಿಸಿದರು. ಸ್ವಾತಂತ್ರ್ಯಕ್ಕೆ ಮೊದಲೇ ಪ್ರಧಾನ ಮಂತ್ರಿಯೆಂದು ಕೆಲಸ ಮಾಡುತ್ತಿದ್ದ ಉತ್ತರ ಯುಗಾಂಡಾದ ಓಲಾಂಗೋ ಬುಡಕಟ್ಟಿನ ಮಿಲ್ಟನ್ ಓಬೋಟೆ ಪ್ರಧಾನ ಮಂತ್ರಿಯಾಗಿ ಮುಂದುವರಿದ. ಫೆಡರಲ್ ತರಹದ ಸರಕಾರವನ್ನು ರಚಿಸಿ ಹಳೆಯ ರಾಜರಿಗೆ ಕೆಲವು ಅಧಿಕಾರಗಳನ್ನು ಕೊಡಲಾಯಿತು. ಈ ರಾಜರಲ್ಲಿ ಅತೀ ಪ್ರತಿಷ್ಠಿತನಾದ ಬಗಾಂಡಾ 'ಕಬಾಕಾ' ಸರ್ ಫ್ರೆಡ್ ಮುಟೇಸಾನನ್ನು ಯುಗಾಂಡಾ ಗಣರಾಜ್ಯದ ಮೊದಲನೆಯ ಅಧ್ಯಕ್ಷನನ್ನಾಗಿ ಮಾಡಲಾಯಿತು. ತನ್ನ ಸಾರ್ವಭೌಮತ್ವವನ್ನು ಕಳೆದುಕೊಂಡ ಮುಟೇಸಾನಿಗೂ ಪ್ರಧಾನಮಂತ್ರಿ ಮಿಲ್ಟನ್ ಓಬೋಟೆಗೂ ರಾಜಕೀಯ ಘರ್ಷಣೆ ಆರಂಭವಾಗಿ ೧೯೬೬ರಲ್ಲಿ ಓಬೋಟೆ ಆಗ ಸೈನ್ಯದ ದಳಪತಿಯಾಗಿದ್ದ ಇದಿ ಅಮೀನನ ಸಹಾಯದಿಂದ ಕಂಪಾಲಾದಲ್ಲಿಯ 'ಕಬಾಕಾ' ಮುಟೇಸಾನ ಅರಮನೆಯ ಮೇಲೆ ದಾಳಿ ಮಾಡಿದ. ಅರಸನ ಸಂರಕ್ಷಕ ಪಡೆಗೂ ಅಮೀನನ ಸೈನ್ಯಕ್ಕೂ ಯುದ್ಧವಾಗಿ ಅರಸನ ಸೈನ್ಯಕ್ಕೆ ಸೋಲುಂಟಾಯಿತು. ಕಬಾಕಾ ಅರಮನೆಯ ಹಿತ್ತಿಲಬಾಗಿಲಿನಿಂದ ಪಾರಾಗಿ ಇಂಗ್ಲಂಡಿಗೆ ಓಡಿ ಹೋಗಿ ೧೯೬೯ರಲ್ಲಿ ಅಲ್ಲಿಯೇ ಸತ್ತ. ಓಬೋಟೆಯು ಸ್ಥಾನ ಈ ರೀತಿ ಭದ್ರವಾದರೂ ತಮ್ಮ ಅರಸನನ್ನು ದೇಶ ಬಿಟ್ಟು ಓಡಿಸಿದ ಓಬೋಟೆಯನ್ನು ಯುಗಾಂಡಾದ ಮುಂದುವರಿದ ಜನಾಂಗವಾದ ಬಗಾಂಡರು ಕ್ಷಮಿಸಲಿಲ್ಲ. ಉತ್ತರದ ಅಚೋಲಿ ಮತ್ತು ಲ್ಯಾಂಗಿಗಳಿಗೂ ದಕ್ಷಿಣದ ಬಗಾಂಡರಿಗೂ ರಾಜಕೀಯ ಚದುರಂಗ ಪ್ರಾರಂಭವಾಗಿ ಯುಗಾಂಡಾದ ರಾಜಕೀಯ ಸಂದಿಗ್ಧವಾಗುತ್ತ ಹೋಯಿತು. ಕೊನೆಗೆ ಓಬೋಟೆ ಯುಗಾಂಡಾವನ್ನು ಏಕಪಕ್ಷೀಯ ರಾಷ್ಟ್ರವನ್ನಾಗಿ ಘೋಷಿಸಿ ತನ್ನನ್ನು ಅಧ್ಯಕ್ಷನನ್ನಾಗಿ ಮಾಡಿಕೊಂಡ. ತನ್ನ ಸಹಾಯಕನಾಗಿದ್ದ ಇದಿ ಅಮೀನನಿಗೆ ಬಡತಿ ಕೊಡುತ್ತ ಅವನನ್ನು ಮೇಜರ್ ಜನರಲ್ ಪದವಿಯವರೆಗೂ ಒಯ್ದ. ಈ ನಡುವೆ ಅಮೀನನಿಗೂ ಅಧಿಕಾರದ ಆಸೆ ಹತ್ತಿ ೧೯೭೧ರ ಜನವರಿ ತಿಂಗಳಲ್ಲಿ ಓಬೋಟೆ ಕಾಮನ್‌ವೆಲ್ತ್ ವರಿಷ್ಠರ ಪರಿಷತ್ತಿಗೆ ಹೋದಾಗ ಯುಗಾಂಡಾವನ್ನು ಅಮೀನ್ ಸೈನ್ಯದ ವಶಕ್ಕೆ ತೆಗೆದುಕೊಂಡ.

ಇದಿ ಅಮೀನ್ ಯುಗಾಂಡಾದ ವಾಯುವ್ಯ ಭಾಗದಲ್ಲಿ ಜಾಯಿರ್ ಮತ್ತು ಸೂಡಾನ್‌ಗಳ

ಸೀಮೆಗೆ ಅತಿ ಹತ್ತಿರದ ಕೊಬೋಕೊ ಎಂಬ ಊರಲ್ಲಿ ೧೯೨೫–೨೮ರ ಸುಮಾರಿಗೆ ಜನಿಸಿದ. ಅವನ ಕಕುವಾ ಬುಡಕಟ್ಟಿನ ಜನರು ಸೂಡಾನ್, ಜಾಯಿರ್ ಮತ್ತು ಯುಗಾಂಡಾಗಳಲ್ಲಿ ಹಂಚಿ ಹೋಗಿದ್ದು ಅವರು ಸೂಡಾನೀ ಭಾಷೆಯನ್ನಾಡುತ್ತಾರೆ. ಅಮೀನ ಚಿಕ್ಕ ಹುಡುಗನಾಗಿದ್ದಾಗಲೇ ಅವನ ತಾಯಿ ಗಂಡನಿಂದ ಬೇರೆಯಾಗಿ ಲುಗಾರ್ಜಿಯಲ್ಲಿ ಮೆಹತಾ ಕುಟುಂಬದ ಸಕ್ಕರೆ ಕಾರಖಾನೆಯ ತೋಟಗಳಲ್ಲಿ ಕೆಲಸ ಮಾಡ ತೊಡಗಿದಳು. ನಂತರ ಸೇನೆಯಲ್ಲಿಯ ಒಬ್ಬ ಕಾರ್ಪೋರಲ್‌ನ ಗೆಳೆತನವಾಗಿ ಅವನ ಜೊತೆ ಜಿಂಜಾಕ್ಕೆ ಬಂದಳು. ಅಮೀನ್ ಅವಳೊಡನೆಯೇ ಬೆಳೆದ. ಅವನು ಯಾವ ಶಾಲೆಗೂ ಹೋದಂತೆ ಕಾಣುವದಿಲ್ಲ.

೧೯೪೬ರಲ್ಲಿ ಇದಿ ಅಮೀನ್ ಯುಗಾಂಡಾದ ಬ್ರಿಟಿಶ್ ಸೇನೆಯಲ್ಲಿ ಅಡಿಗೆಯ ಆಳಾಗಿ ಸೇರಿಕೊಂಡ. ಅವನ ಆರು ಫೂಟು ನಾಲ್ಕು ಇಂಚು ಎತ್ತರದ ಅಜಾನುಬಾಹು ದೇಹವನ್ನು ನೋಡಿದ ಬ್ರಿಟಿಶ್ ಅಧಿಕಾರಿಗಳು ಅವನನ್ನು ನಿಯಮಿತ ಸೈನಿಕನನ್ನಾಗಿ ನಂತರದಲ್ಲಿ ಶೀಘ್ರವೇ ಸೇರಿಸಿಕೊಂಡರು. ಅಮೀನ್ ಒಬ್ಬ ಒಳ್ಳೆಯ ಸೈನಿಕನೆಂದು ಹೆಸರು ಗಳಿಸಿ ಬ್ರಿಟಿಶ್ ಸೈನ್ಯಾಧಿಕಾರಿಗಳ ವಿಶ್ವಾಸ ಸಂಪಾದಿಸಿಕೊಂಡ. ಈ ನಡುವೆ ಅವನು ಬಾಕ್ಸಿಂಗ್‌ನಲ್ಲಿ ಪ್ರಾವೀಣ್ಯ ಸಂಪಾದಿಸಿ ಒಂಬತ್ತು ವರ್ಷಗಳವರೆಗೆ ಯುಗಾಂಡಾದ ಬಾಕ್ಸಿಂಗ್ ಚಾಂಪಿಯನ್ನಾದ. ೧೯೫೦ರ ದಶಕದಲ್ಲಿ ಜೋಮೋ ಕೆನ್ಯಾಟಾರ ಮೌ–ಮೌ ಚಳುವಳಿ ಕೆನ್ಯಾದಲ್ಲಿ ಗಂಭೀರ ಪರಿಸ್ಥಿತಿಯನ್ನುಂಟು ಮಾಡಿದಾಗ ಇದಿ ಅಮೀನನ್ನು ಕೆನ್ಯಾಕ್ಕೆ ಕಳಿಸಲಾಯಿತು. ಅಲ್ಲಿ ಅವನು ತನ್ನ ಒಡೆಯರಾದ ಬ್ರಿಟಿಶರ ವಿಶ್ವಾಸ ಸಂಪಾದಿಸಲು ಏನೆಲ್ಲವನ್ನೂ ಮಾಡಿದ. ಈ ಸೇವೆಯ ಫಲವಾಗಿ ೧೯೬೧ರಲ್ಲಿ ಸ್ವಾತಂತ್ರ್ಯಕ್ಕೆ ಮೊದಲು, ಇದಿ ಅಮೀನ ಯುಗಾಂಡಾ ಸೇನೆಯ ಮೊದಲನೆಯ ನಿಗ್ರೋ ಕಮೀಶನ್ಡ್ ಅಧಿಕಾರಿಯಾದ. ಸೈನ್ಯದಲ್ಲಿಯ ಸೇವೆಯುದ್ದಕ್ಕೂ ಒಬ್ಬ ನಿರ್ದಯಿ ಕಟುಕ ವೃತ್ತಿಯ ಮನುಷ್ಯನೆಂದೇ ಪರಿಚಿತನಾಗಿದ್ದ. ನೊಣಗಳನ್ನು ಕೊಂದಂತೆ ಮನುಷ್ಯರನ್ನು ಕೊಲ್ಲುವ ಈ ವ್ಯಕ್ತಿಯನ್ನು ಕುರಿತು ಯುಗಾಂಡಾದ ಗವರ್ನರನಾಗಿದ್ದ ಸರ್ ವಾಲ್ಟರ್ ಕೋಟ್ಸ್ ಮಿಲ್ಟನ್ ಓಬೋಟೆಗೆ ಎಚ್ಚರಿಕೆ ಕೊಟ್ಟ. ಇದಕ್ಕೆ ಗಮನ ಕೊಡದ ಓಬೋಟೆಗೆ ಅಮೀನ್ ನಂತರ ಮುಳುವಾಗಿ ಪರಿಣಮಿಸಿದ.

ಅಧಿಕಾರಕ್ಕೆ ಬಂದ ಇದಿ ಅಮೀನ್ ತನ್ನ ಜೊತೆಯೇ ಸೈನ್ಯದಲ್ಲಿ ಅಡಿಗೆಯವನಾಗಿ ಸೇರಿಕೊಂಡ ಮುಸ್ತಫಾ ಅದ್ರೀಸಿಯನ್ನು ಉಪಾಧ್ಯಕ್ಷನನ್ನಾಗಿ ನೇಮಿಸಿಕೊಂಡ. ಓಬೋಟೆಯ ಕಾಲದ ರಾಜಕೀಯ ಗೊಂದಲದ ವಾತಾವರಣದಿಂದ ಬೇಸತ್ತಿದ್ದ ಜನ ಅಮೀನನನ್ನು ತಮ್ಮ ಸಂರಕ್ಷಕನೆಂದು ಸ್ವಾಗತಿಸಿದರು. ಕಂಪಾಲಾದ ಬೀದಿಗಳಲ್ಲಿ ಅವನ್ನು ಅಭೂತಪೂರ್ವ ರೀತಿಯಲ್ಲಿ ಸ್ವಾಗತಿಸಲಾಯಿತು.

ಯೋಜಿತ ಕೊಲೆಗಳು

ಅಧಿಕಾರಕ್ಕೆ ಬಂದಕೂಡಲೇ ಇದಿ ಅಮೀನ್ ತನ್ನ ಸ್ಥಾನವನ್ನು ಭದ್ರಪಡಿಸಿಕೊಳ್ಳತೊಡಗಿದ. ಓಟೋಟೆಯ ಬುಡಕಟ್ಟಿಗೆ ಸೇರಿದ ಓಲಾಂಗೋ ಮತ್ತು ಅಚೋಲಿ ಜನಾಂಗಗಳ ಸೈನಿಕ ಮತ್ತು



ನಾಗರಿಕ ಅಧಿಕಾರಿಗಳನ್ನು ದೊಡ್ಡ ಪ್ರಮಾಣ ದಲ್ಲಿ ಕೊಲ್ಲಲಾಯಿತು. ಈ ಜನಾಂಗಗಳಿಗೆ ಸೇರಿದ ಅಳಿದುಳಿದ ಅಧಿಕಾರಿಗಳು ನೆರೆಯ ಟಾಂಜಾನಿಯಾ ಮತ್ತು ಕೆನ್ಯಾಗಳಿಗೆ ಓಡಿ ಹೋದರು. ಅಮೀನನ ಆಳಿಕೆಯಲ್ಲಿ ತಮಗೆ ಹೆಚ್ಚಿನ ಅಧಿಕಾರಗಳು ಸಿಗುವವೆಂಬ ಆಸೆ ಹೊಂದಿದ್ದ ಬಗಾಂಡರಿಗೂ ಭ್ರಮ ನಿರಸನವಾಯಿತು. ಬಗಾಂಡರೂ ಅವನ ವಿರುದ್ಧ ಕತ್ತಿ ಮಸೆಯ ತೊಡಗಿದರು. ಇದರ ಪರಿಣಾಮವಾಗಿ ಬಗಾಂಡರ ಗುಂಪು ಕೊಲೆಗಳು. ಪೂರ್ವ ಆಫ್ರಿಕದಲ್ಲಿ ಅತಿ ಮುಂದುವರಿದ ಬಗಾಂಡಾ ಬುದ್ಧಿಜೀವಿಗಳು ದೊಡ್ಡ ಪ್ರಮಾಣದಲ್ಲಿ ದೇಶವನ್ನು ಬಿಟ್ಟು ಓಡಿಹೋದರು. ಒಬೋಟೆಯ ಸಮಾಜವಾದೀ ಧೋರಣೆಗಳಿಂದ ತಮ್ಮ ಹಿತಗಳಿಗೆ ಧಕ್ಕೆಯಾಗುವದೆಂದು ಹೆದರಿ ಬ್ರಿಟಿಶರು ಮತ್ತು ಇಸ್ರೇಲಿಗಳು ಅಮೀನನಿಗೆ ಅಧಿಕಾರಕ್ಕೆ ಬರಲು ಸಹಾಯ ಮಾಡಿದ್ದರು. ಆದರೆ ಅಧಿಕಾರಕ್ಕೆ ಬರುತ್ತಲೇ ಅಮೀನ್ ಮುಸಲ್ಮಾನ ಮತ್ತು ಅರಬ್ ರಾಷ್ಟ್ರಗಳೊಡನೆ ತನ್ನ ಸಂಬಂಧವನ್ನು ಬಲಪಡಿಸಿಕೊಳ್ಳತೊಡಗಿದ. ವಿದೇಶಯಾತ್ರೆಗೆ ಹೋದಾಗಲೆಲ್ಲ ಟೆಲ್ ಅವೀವ್‌ನ ಮೂಲಕವಾಗಿಯೇ ಹೋಗುತ್ತಿದ್ದ ಅಮೀನ ೧೯೭೨ರ ಆರಂಭದಲ್ಲಿ ಲಿಬಿಯಾಕ್ಕೆ ಹೋಗಿ ಟ್ರಿಪೋಲಿಯಲ್ಲಿ ಮುಅಮ್ಮರ್ ಗದ್ದಫಿಯನ್ನು ಭೇಟಿ ಮಾಡಿದ. ಅಲ್ಲಿಂದ ಹಿಂದಿರುಗಿದ ಕೂಡಲೇ ಅಲ್ಲಿಯವರೆಗೆ ತನ್ನ ಘನಿಷ್ಠ ಮಿತ್ರರಾಗಿದ್ದ ಇಸ್ರೇಲಿಗಳನ್ನು ಮೂರು ದಿನಗಳೊಳಗಾಗಿ ದೇಶ ಬಿಟ್ಟು ಹೊರಡಲು ಆಜ್ಞಾಪಿಸಿದ. ಇದರ ಸೇಡನ್ನು ೧೯೭೬ರಲ್ಲಿ ಇಸ್ರೇಲಿಗಳು ಯಾವ ರೀತಿಯಲ್ಲಿ ತೀರಿಸಿಕೊಂಡರೆಂಬುದು ತಿಳಿದೇ ಇದೆ.

ಬಹುಮಾನ

೧೯೭೨ರ ಆಗಸ್ಟ್ ತಿಂಗಳಲ್ಲಿ ಅಮೀನ್ ತನಗೆ ಕನಸಿನಲ್ಲಿ ದೇವರು ಭೆಟ್ಟಿಯಾಗಿ ಯುಗಾಂಡಾದಲ್ಲಿಯ ಎಲ್ಲ ಏಶಿಯನ್ನರನ್ನು ಹೊರಗೆ ಹಾಕಲು ಆಜ್ಞಾಪಿಸಿರುವದಾಗಿ ಹೇಳಿ ಯುಗಾಂಡದ ನಾಗರಿಕರಾಗಿರುವವರನ್ನು ಒಳಗೊಂಡು ಎಲ್ಲ ೮೦,೦೦೦ ಏಶಿಯನ್ನರು (ಭಾರತೀಯರು ಸೇರಿ) ದೇಶ ಬಿಟ್ಟು ಹೊರಡಬೇಕೆಂದು ಆಜ್ಞಾಪಿಸಿದ. ಇಷ್ಟರಲ್ಲೇ ಯುಗಾಂಡಾ ಹಾಯ್‌ಕೋರ್ಟಿನ ಮುಖ್ಯ ನ್ಯಾಯಾಧೀಶನಾಗಿದ್ದ ಬೆನ್ ಕಿವಾನುಕಾನನ್ನು ಅವನ ಕಚೇರಿಯಿಂದ ಹೊರಗೆಳೆದು ಕೊಲ್ಲಲಾಯಿತು. ಬ್ರಿಟಿಶರು ಕಂಪಾಲಾದಲ್ಲಿಯ ತಮ್ಮ ರಾಯಭಾರೀ ಕಚೇರಿಯನ್ನು ಮುಚ್ಚಿದರು. ಏಶಿಯನ್ನರು ಬಿಟ್ಟು ಹೋದ ನೂರಾರು ಕೋಟಿ ರೂ, ಬೆಲೆ ಬಾಳುವ ಕಾರ್ಖಾನೆ, ಅಂಗಡಿ, ತೋಟ ಮತ್ತು ಮನೆಗಳನ್ನು ಇದಿ ಅಮೀನ್ ತನ್ನ ಕೊಲೆಗಡುಕ ಸಹಾಯಕರಲ್ಲಿ ಹಂಚಿದ. ಇದರ ಲಾಭ ಮುಖ್ಯವಾಗಿ ಸೋಮಾಲೀ ಮತ್ತು ಸೂಡಾನೀ ಮುಸ್ಲಿಮರಿಗೆ ಆಯಿತು. ಏಶಿಯನ್ನರ ನಿರ್ಗಮನದ ನಂತರ ಕೂಡಲೇ ಯುಗಾಂಡಾದ ಆರ್ಥಿಕ ಅವನತಿ ಆರಂಭವಾಯಿತು. ಕಾರ್ಖಾನೆಗಳಿಗೂ ಕೆಲಸವೇ ಇಲ್ಲದ್ದಾಯಿತು. ಜೀವನ ವೆಚ್ಚ ೧೯೭೪ರಿಂದ ೧೯೭೭ರ ಅವಧಿಯಲ್ಲಿ ಹತ್ತರಿಂದ ಇಪ್ಪತ್ತು ಪಟ್ಟು ಹೆಚ್ಚಾಯಿತು. ಉದಾಹರಣೆಗೆ ೧೯೭೪ರಲ್ಲಿ ಒಂದೂ ಮುಕ್ಕಾಲು ರೂಪಾಯಿಗೆ ಒಂದು ಕಿಲೋ ಸಿಗುತ್ತಿದ್ದ ಸಕ್ಕರೆಗೆ ೧೯೭೭ರಲ್ಲಿ ಐವತ್ತು ರೂಪಾಯಿಯಾಗಿತ್ತು.

೧೯೭೭ರಲ್ಲಿ ತನ್ನ ವಿರುದ್ಧ ಸಂಚು ಮಾಡುತ್ತಿದ್ದರೆಂದು ಅಮೀನ ಯುಗಾಂಡಾದ ಆರ್ಚ್‌ಬಿಶಪ್ ಮತ್ತು ತನ್ನ ಇಬ್ಬರು ಮಂತ್ರಿಗಳನ್ನು ಕಾರ್ ಅಪಘಾತದ ನೆಪಮಾಡಿ ಕೊಲ್ಲಿಸಿದ. ಇದರೊಡನೆಯೇ ಅಚೋಲಿ ಮತ್ತು ಲ್ಯಾಂಗಿಗಳ ಮತ್ತೊಂದು ಹನನ ಸತ್ರವನ್ನು ಆರಂಭಿಸಿ ಸುಮಾರು ಒಂದು ಲಕ್ಷ ಜನರನ್ನು ಮುಗಿಸಲಾಯಿತು.

೧೯೭೮ರ ಆರಂಭದಲ್ಲಿ ತನ್ನ ಉಪಾಧ್ಯಕ್ಷ ಮುಸ್ತಫಾ ಅದ್ರೀಸಿಯನ್ನು ಕೊಲ್ಲಿಸಲು ಪ್ರಯತ್ನಿಸಿದ. ಆದರೆ ಗುಂಡು ಅದ್ರೀಸಿಯ ಮೊಣಕಾಲಿಗೆ ಬಡಿದು ಅವನನ್ನು ಕಾಯ್‌ರೋಕ್ಕೆ ಉಪಚಾರಕ್ಕೆ ಕಳಿಸಲಾಯಿತು. ಅದ್ರೀಸಿಯ ವಿರುದ್ಧದ ಈ ಪ್ರಯತ್ನದಿಂದ ಸೈನ್ಯದಲ್ಲಿ ಎರಡು ಭಾಗಗಳಾಗಿ ಆಂತರಿಕ ಕದನ ಆರಂಭವಾಯಿತು. ಟಾಂಜಾನಿಯದ ಸೀಮೆಯ ಹತ್ತಿರದ ಮಸಾಕಾದಲ್ಲಿ

ಅಮೀನರನ ವಿರುದ್ಧ ಬಂಡಾಯವಾಯಿತು. ಈ ಆಂತರಿಕ ಅಶಾಂತಿಯಿಂದ ರಕ್ಷಿಸಿಕೊಳ್ಳಲು ಅಕ್ಟೋಬರ್ ೧೯೭೮ರಲ್ಲಿ ಅಮೀನ್ ಟಾಂಜಾನಿಯದ ಮೇಲೆ ದಾಳಿ ಮಾಡಿ ಸುಮಾರು ೭೫೦ ಚದುರ ಮೈಲು ಪ್ರದೇಶವನ್ನು ವಶಪಡಿಸಿಕೊಂಡ. ಇದು ಅಮೀನನ ಪತನಕ್ಕೆ ನಾಂದಿಯಾಯಿತು.

ಪಣ

ಅಮೀನನ ಕಟ್ಟಾ ವಿರೋಧಿ ಟಾಂಜಾನಿಯದ ಅಧ್ಯಕ್ಷ ಜ್ಯೂಲಿಯಸ್ ನೈರೇರೆ ಅಮೀನನನ್ನು ಅಧಿಕಾರದಿಂದ ಇಳಿಸುವ ಆಣೆ ಮಾಡಿ ತನ್ನ ಸೈನ್ಯವನ್ನು ಕಟ್ಟತೊಡಗಿದ. ಅವನೊಂದಿಗೇ ಯುಗಾಂಡಾದ ಅಮೀನ್ ವಿರೋಧಿ ಪಡೆಗಳು ಸೇರಿಕೊಂಡು ಯುಗಾಂಡದ ಮೇಲೆ ದಾಳಿಯಾಯಿತು. ಈ ವರ್ಷದ ಮಾರ್ಚ್ ತಿಂಗಳ ಹೊತ್ತಿಗೆ ಟಾಂಜಾನಿಯದ ಪಡೆಗಳು ದಕ್ಷಿಣ ಯುಗಾಂಡಾದ ಮುಖ್ಯ ನಗರ ಮಸಾಕಾವನ್ನು ವಶಪಡಿಸಿಕೊಂಡವು.

ಮುಂದೆ ಹದಿನೈದು ದಿನಗಳಲ್ಲಿಯೇ ಕಂಪಾಲಾದಲ್ಲಿಯ ನಮಗೆ ದೂರದ ಅಂತರದ ತೋಫುಗಳ ಸಪ್ಪಳ ಕೇಳಿ ಬರತೊಡಗಿತು. ಮಾರ್ಚ್ ಕೊನೆಯ ವಾರದ ಹೊತ್ತಿಗೆ ಯುದ್ಧ ಗಂಭೀರ ಸ್ವರೂಪವನ್ನೇ ತಳೆಯಿತು. ಮಾರ್ಚ್ ಮೂವತ್ತೊಂದರಂದು ಟಾಂಜಾನಿಯದ ಮಿಗ್-೨೧ ವಿಮಾನಗಳು ಕಂಪಾಲಾದ ಮೇಲೆ ಬಾಂಬು ದಾಳಿ ಮಾಡಿ ಅನೇಕ ಮಹತ್ವದ ಸ್ಥಳಗಳಿಗೆ ಧಕ್ಕೆಯನ್ನುಂಟು ಮಾಡಿದವು. ಇಡಿಯ ನಗರದ ಮೇಲೆ ವ್ಯಾಪಕ ಶೆಲಿಂಗ್ ಪ್ರಾರಂಭವಾಯಿತು. ಏಪ್ರಿಲ್ ಎರಡನೆಯ ದಿನಾಂಕದಂದು ನಾವು ಸುಮಾರು ಒಂದು ನೂರು ಭಾರತೀಯ ತಜ್ಞರು ಯುದ್ಧದ ಗಂಭೀರತೆಯನ್ನು ಮನಗಂಡು ನಮ್ಮ ರಾಯಭಾರಿ ಶ್ರೀ ಮದನ್‌ಜಿತ್ ಸಿಂಗರ ಸಲಹೆಯ ಮೇರೆಗೆ ತಾತ್ಕಾಲಿಕವಾಗಿ ಯುಗಾಂಡದ ಗಡಿ ದಾಟಿ ಕೆನ್ಯಾದ ರಾಜಧಾನಿ ನೈರೋಬಿಗೆ ಬಂದೆವು.

ಏಪ್ರಿಲ್ ೧೧ ರಂದು ಕಂಪಾಲಾದಲ್ಲಿ ಅಮೀನ್ ದಾದಾನ ಪತನವಾಯಿತು. ಅವನು ಉತ್ತರಕ್ಕೆ ತನ್ನ ಊರಾದ ಕೊಬೋಕೋದ ಕಡೆಗೆ ಪಲಾಯನ ಮಾಡಿದ.

ಅಮೀನ್ ಆಳ್ವಿಕೆಯ ಸ್ವಾರಸ್ಯಗಳು

ಒಬ್ಬ ನಿರ್ದಯಿ, ಕ್ರೂರ ಕೊಲೆಗಾರನೆಂದೇ ಹೆಚ್ಚು ಕುಖ್ಯಾತನಾಗಿದ್ದರೂ ಅಮೀನ್ ವರ್ಣಮಯ ವ್ಯಕ್ತಿತ್ವದ ಮನುಷ್ಯನಾಗಿದ್ದ. ಶಾಲೆಯಲ್ಲಿ ನಾಲ್ಕಕ್ಷರಗಳನ್ನು ಕಲಿಯದ ಈ ಮನುಷ್ಯ ಇಪ್ಪತ್ತನೆಯ ಶತಮಾನದ ಉತ್ತರಾರ್ಧದಲ್ಲಿ ಎಂಟು ವರ್ಷಗಳವರೆಗೆ ಒಂದು ದೇಶವನ್ನು ಆಳಿದ್ದು ಈ 'ವಿಶಿಷ್ಟ' ವ್ಯಕ್ತಿತ್ವದ ಮೂಲಕವೇ. ಅಮೀನ್‌ನನ್ನು ಪ್ರತ್ಯಕ್ಷವಾಗಿ ನಾನು ಭೇಟಿ ಮಾಡದಿದ್ದರೂ ನನ್ನ ಹಿರಿಯ ಸಹೋದ್ಯೋಗಿಗಳಲ್ಲಿ ಕೆಲವರು ಅವನನ್ನು ನಿಕಟದಿಂದ ನೋಡಿದವರಿದ್ದರು. ವಿದೇಶಿಯರೆದುರಿಗೆ ವಿಶೇಷವಾಗಿ ಅಮೀನ ತನ್ನ ವ್ಯಕ್ತಿತ್ವದ ಇನ್ನೊಂದು ಮುಖವನ್ನು ತೋರಿಸುತ್ತಿದ್ದ. ಪಶ್ಚಿಮದ ಸುದ್ದಿಸಂಸ್ಥೆಗಳು ಪ್ರಚಾರ ಮಾಡುವಂತೆ ತಾನು ರಾಕ್ಷಸನೇನೂ ಅಲ್ಲವೆಂದೂ ತಾನೊಬ್ಬ ಕುಟುಂಬವತ್ಸಲ ದೇವಭೀರು ಗೃಹಸ್ಥನೆಂದೂ ಹೇಳಿಕೊಳ್ಳುತ್ತಿದ್ದ. ಅವನು ಮಾತನಾಡುತ್ತಿದ್ದ ರೀತಿ, ಜನರೊಡನೆ ಸರಳವಾಗಿ ಬೆರೆಯುವ ರೀತಿ, ಸ್ನೇಹಮಯ ಭಾಷೆಗಳಿಂದ ಎಷ್ಟೋ ವಿದೇಶೀಯರೂ ಅವನ ಬಗ್ಗೆ ಒಳ್ಳೆಯ ಅಭಿಪ್ರಾಯ ಹೊಂದಿಯೇ ಮರಳುತ್ತಿದ್ದರು. ಆಫ್ರಿಕದ ಇತರ ರಾಷ್ಟ್ರಗಳಲ್ಲಿ ಅಮೀನ ಸಾಕಷ್ಟು ಜನಪ್ರಿಯನೂ ಆಗಿದ್ದ. ಅವನ ಆತ್ಮವಿಶ್ವಾಸ ಮತ್ತು ತುಳಿಯಲ್ಪಟ್ಟಿದ್ದ ಕಪ್ಪು ಜನಾಂಗದ ವಕ್ತಾರನೆಂದು ಘೋಷಿಸಿಕೊಳ್ಳುವ ರೀತಿ ಅವನಿಗೆ ಗೆಬಾನ್‌ನಲ್ಲಿ ನಡೆದ ಆಫ್ರಿಕಾ ರಾಷ್ಟ್ರಕೂಟದ ಸಮ್ಮೇಳನದಲ್ಲಿ 'ಆಫ್ರಿಕೆಯ ಅರಸ' ಎಂಬ ಬಿರುದನ್ನು ತಂದು ಕೊಟ್ಟಿತು. ನೈರೋಬಿಯಲ್ಲಿ ಜೋಮೋ ಕೆನ್ಯಾಟಾರ ಅಂತ್ಯಕ್ರಿಯೆಗೆ ಹೋದ ರಾಷ್ಟ್ರ ಧುರಿಣರಲ್ಲಿ ಅಲ್ಲಿಯ ಜನರಿಂದ ಎಲ್ಲಕ್ಕೂ ಹೆಚ್ಚು ಸ್ವಾಗತ ಪಡೆದವ ಇದಿ ಅಮೀನ್.

ಅಮೀನ ತನ್ನ ಸ್ಥಾನವನ್ನು ಭದ್ರಪಡಿಸಿಕೊಳ್ಳುವದಕ್ಕಾಗಿ ಯುಗಾಂಡದಾದ್ಯಂತ ಕ್ರಿಶ್ಚಿಯನ್ನರನ್ನು ಇಸ್ಲಾಂಗೆ ಮತಾಂತರಿಸಲು ಒಂದು ದೊಡ್ಡ ಕಾರ್ಯವನ್ನೇ ಆರಂಭಿಸಿದ್ದ

ಅರಬ್ ರಾಷ್ಟ್ರಗಳು ಅದರಲ್ಲೂ ಲಿಬಿಯಾ ಮತ್ತು ಸೌದಿ ಅರೇಬಿಯಗಳಿಂದ ಇದಕ್ಕಾಗಿ ದೊಡ್ಡ ಪ್ರಮಾಣದಲ್ಲಿ ದ್ರವ್ಯ ಸಹಾಯವಾಗುತ್ತಿತ್ತು. ರವಿವಾರದ ಜೊತೆಗೆ ಶುಕ್ರವಾರವನ್ನು ಸಾರ್ವತ್ರಿಕ ರಜೆಯದಿನವೆಂದು ಘೋಷಿಸಿದ. ಪ್ರತಿ ಶುಕ್ರವಾರ ಬೇಸರ ಬರುವಂತೆ ರೇಡಿಯೋ ಮತ್ತು ಟೆಲಿವಿಜನ್‌ಗಳ ಮೂಲಕ ಇಸ್ಲಾಂನ ಪ್ರಚಾರವಾಗುತ್ತಿತ್ತು. 'ಮೌಲೇದಿ'ಗಳನ್ನು ನಡೆಸಿ ಗುಂಪು ಮತಾಂತರವನ್ನು ಮಾಡಲಾಗುತ್ತಿತ್ತು. ತೊಂಬತ್ತು ಪ್ರತಿಶತಕ್ಕೂ ಹೆಚ್ಚು ಕ್ರಿಶ್ಚಿಯನ್ನರಿರುವ ಯುಗಾಂಡವನ್ನು ಅಮೀನ್ ಮುಸ್ಲಿಂ ಮತ್ತು ಅರಬ್ ರಾಷ್ಟ್ರಗಳ ಅಭಿವೃದ್ಧಿ ಬ್ಯಾಂಕಿನ ಸದಸ್ಯರಾಷ್ಟ್ರವನ್ನಾಗಿ ಮಾಡಿದ್ದನಲ್ಲದೆ ಮುಸ್ಲಿಂ ರಾಷ್ಟ್ರಗಳ ಎಲ್ಲ ಪರಿಷತ್ತುಗಳಿಗೂ ತನ್ನ ಪ್ರತಿನಿಧಿಗಳನ್ನು ಕಳಿಸುತ್ತಿದ್ದ.



"ಉಪಯೋಗವಿಲ್ದೆ ಬೀರುನಲ್ಲಿ ಇರೋ ಬದಲು 'ಲೀಂಗ್'ಗಾದ್ರೂ ಆಗ್ಲಿ ಅಂತ ತೆಗೆದಿಟ್ಟೆ."

'ಗುಡ್ ಹೋಪ್!'

ಐದು ಬಾರಿ ಅಧಿಕೃತವಾಗಿ ಮದುವೆ ಮಾಡಿಕೊಂಡ ಅಮೀನ್ ತನ್ನ ಪತ್ನಿಯರಲ್ಲಿ ಇಬ್ಬರನ್ನು ಕೊಲ್ಲಿಸಿದ. ಅವನ ಕೊನೆಯ ಮತ್ತು ಅತಿಪ್ರಿಯಳಾದ ಪತ್ನಿ ಸಾರಾಳನ್ನು (ಅವಳ ಮೊದಲನೆಯ ಗಂಡನನ್ನು ಕೊಲ್ಲಿಸಿ) ಮದುವೆ ಮಾಡಿಕೊಂಡ. ಅವನ ಪತನದ ಹೊತ್ತಿಗೆ ಅವನ ಸಂತತಿಯ ಸಂಖ್ಯೆ ಮೂವತ್ತನ್ನು ದಾಟಿತ್ತು. ಒಂದು ಸಾರೆ ಅವನ ಒಂದು ಮಗು ಹುಟ್ಟಿದ ಕೆಲವು ಗಂಟೆಗಳಲ್ಲಿಯೇ ತೀರಿಕೊಂಡಾಗ ಮಂತ್ರಿಗಳು, ಸೈನಿಕ ಅಧಿಕಾರಿಗಳು ಮತ್ತು ಸಾರ್ವಜನಿಕರಿಂದ ಬಂದ ಶೋಕ ಸಂದೇಶಗಳನ್ನು ರೇಡಿಯೋ ಮೂಲಕ ಒಂದು ಗಂಟೆಯ ವರೆಗೆ ಪ್ರಸಾರಮಾಡಲಾಯಿತು.

೧೯೭೭ರಲ್ಲಿ ಅಮೀನ 'ಲೈಂಗಿಕ ರೋಗಗಳ ಆರ್ಡಿನನ್ಸ್' ಹೊರಡಿಸಿದ. ಎಲ್ಲ ಲೈಂಗಿಕ ರೋಗಗಳನ್ನೂ 'ಗುಡ್ ಹೋಪ್' (Good Hope) ಎಂಬ ಹೊಸ ಹೆಸರಿನಿಂದ ಕರೆಯಬೇಕೆಂದು ಅಮೀನ್ ವಿಧಿಸಿದ. ಲೈಂಗಿಕ ರೋಗಗಳಿದ್ದವರು ಅದಕ್ಕಾಗಿ ಉಪಚಾರ ಪಡೆಯದೆ ಇರುವದು ದಂಡನಾರ್ಹ ಅಪರಾಧವೆಂದು ವಿಧಿಸಲಾಗಿತ್ತು.

ತನ್ನ ಆಳಿಕೆಯ ಎಂಟನೆಯ ವಾರ್ಷಿಕೋತ್ಸವವನ್ನು ಅಮೀನ್ ಒಂದೇ ದಿನ ಮೂರು ಸ್ಥಳಗಳಲ್ಲಿ ಆಚರಿಸಿದ. ಈ ಸಮಾರಂಭಕ್ಕಾಗಿ ಎಲ್ಲ ಉಚ್ಚ ಅಧಿಕಾರಿಗಳನ್ನು ರಾಯಭಾರೀ ವರ್ಗದವರನ್ನೂ ವಿಶೇಷ ವಿಮಾನಗಳಲ್ಲಿ ಅಮೀನನ ಹುಟ್ಟೂರಾದ ಕೋಬೋಕೋಕ್ಕೆ ಒಯ್ಯಲಾಯಿತು. ಕಂಪಾಲಾದಿಂದ ಉತ್ತರಕ್ಕೆ ಮೂರುನೂರು ಮೈಲುಗಳ ಮೇಲಿರುವ ಕೋಬೋಕೊದಲ್ಲಿಯ ಸಮಾರಂಭ ಮುಗಿಯುತ್ತಲೇ ಅವರೆಲ್ಲರನ್ನೂ ಯುಗಾಂಡಾ ದಕ್ಷಿಣ ತುದಿಯಲ್ಲಿ ಕೊಬೋಕೋದಿಂದ ಆರು ನೂರು ಮೈಲುಗಳ ಮೇಲಿರುವ ಬರಾರಾಕ್ಕೆ ತರಲಾಯಿತು. ಅಲ್ಲಿಯ ಸಮಾರಂಭ ಮುಗಿದ ಬಳಿಕ ಕಂಪಾಲಾದ ಮತ್ತೊಂದು ಸಮಾರಂಭಕ್ಕೆ ಅತಿಥಿಗಳನ್ನು ಅದೇ ವಿಮಾನಗಳ ಮೂಲಕ ಒಯ್ಯಲಾಯಿತು.

ಬೊಕ್ಕಸ ಲೂಟಿ

ಅಮೀನನ ಮಂತ್ರಿಮಂಡಳವು ಮುಖ್ಯವಾಗಿ ಟ್ಯಾಕ್ಸಿ ಮತ್ತು ಟ್ರಕ್ ಡ್ರೈವರರಿಂದ ತುಂಬಿತ್ತು. ಸರಕಾರದ ಕೆಲವು ವರಿಷ್ಠ ಅಧಿಕಾರಿಗಳನ್ನು ಪ್ರಾಥಮಿಕ ಶಿಕ್ಷಣವನ್ನೂ ಪೂರ್ಣ ಮುಗಿಸದ ತನ್ನ ಕೆಲವು ಗೆಳೆಯರಲ್ಲಿ ಹಂಚಿದ್ದ ಅಮೀನ್. ಇಂಥವರು ಕೆಲವರು ಅಧಿಕಾರಕ್ಕೆ ಬರುತ್ತಲೇ ಸರಕಾರದ ಬೊಕ್ಕಸವನ್ನು ಮನಬಂದಂತೆ ಲೂಟಿ ಹೊಡೆದು ಅಮೀನನಿಗೆ ಇದರ ಸುದ್ದಿ ಹತ್ತುವ ಮೊದಲೇ ಕೆನ್ಯಾದಲ್ಲಿಯೋ, ಸೂಡಾನದಲ್ಲಿಯೋ ಅಂತರ್ಧಾನರಾಗಿಬಿಡುತ್ತಿದ್ದರು. ಇದಿ ಅಮೀನನ ಪ್ರೀತಿಯ ಸಂಸ್ಥೆಯಾಗಿದ್ದ ಮುಸ್ಲಿಂ ಸುಪ್ರೀಂ ಕೌನ್ಸಿಲ್ಲಿನ ಅಧ್ಯಕ್ಷ ೬೦ ಲಕ್ಷ ರೂಪಾಯಿಗಳೊಡನೆ ಕೆನ್ಯಾದಲ್ಲಿ ಅಂತರ್ಧಾನನಾದ. ಪ್ರವಾಸೋದ್ಯಮ ಶಾಖೆಯ ಮಂತ್ರಿ ೬೦ ಲಕ್ಷ ರೂಪಾಯಿಗಳಲ್ಲದೇ ಕಂಪಾಲಾದ ದೊಡ್ಡ ದೊಡ್ಡ ಹೋಟೆಲುಗಳಲ್ಲಿಯ ಊಟದ ತಟ್ಟೆ ಮತ್ತು ಅಡಿಗೆಯ ಪಾತ್ರೆಗಳನ್ನೂ ಕಳವು ಮಾಡಿಕೊಂಡು ರಾತ್ರೋರಾತ್ರಿಯೇ ಮಾಯವಾದ.

ನಾನು ಅಮೀನನ ರಾಜ್ಯದಲ್ಲಿ ಇದ್ದ ೧೬ ತಿಂಗಳಲ್ಲಿ ಸುಮಾರು ಹತ್ತು ಜನ ಮಂತ್ರಿಗಳು ಕಿತ್ತಿ ಹಾಕಲ್ಪಟ್ಟರು. ಮೂರು ನಾಲ್ಕು ಜನ ಪರದೇಶಗಳಿಗೆ ಓಡಿ ಹೋದರು. ಸರಕಾರೀ ವರಿಷ್ಠ ಅಧಿಕಾರಿಗಳನ್ನು ಅಮೀನ ತನ್ನ ಮನಬಂದಂತೆ ಕಿತ್ತಿಹಾಕುತ್ತಿದ್ದ ಅಥವಾ ನೇಮಿಸುತ್ತಿದ್ದ. ಈ ರೀತಿಯ ಆಡಳಿತದ ಪರಿಣಾಮವಾಗಿ ಅವನ ಪತನದ ಹೊತ್ತಿಗೆ ಇಡೀ ವ್ಯವಸ್ಥೆ ಅಸ್ತವ್ಯಸ್ತವಾಗಿತ್ತು. ೧೯೭೯ರ ಆರಂಭದ ಹೊತ್ತಿಗೆ ಯುಗಾಂಡಾ ಆರ್ಥಿಕವಾಗಿ ದಿವಾಳಿಯ ಸ್ಥಿತಿಯನ್ನು ಮುಟ್ಟಿತ್ತು. ದೇಶದ ಆರ್ಥಿಕ ಬೆನ್ನೆಲುಬಾದ ಚಹ ಮತ್ತು ಕಾಫಿಯ ಮಾರಾಟ ಅಮೇರಿಕದ ಆರ್ಥಿಕ ದಿಗ್ಬಂಧನದ ಪರಿಣಾಮವಾಗಿ ಕಡಿಮೆಯಾಗಿತ್ತು. ಅರ್ಧಕ್ಕರ್ಧ ಕಾಫಿಯನ್ನು ಸೈನಿಕರೇ ಕೆನ್ಯಾ, ಸೂಡಾನ್ ಮತ್ತು ರುವಾಂಡಾಗಳಿಗೆ ಕಳ್ಳ ಸಾಗಾಟ ಮಾಡುತ್ತಿದ್ದರು. (ವರ್ಷಕ್ಕೆ ೧೬ ಸಾವಿರ ಟನ್ ಕಾಫಿ ಬೆಳೆಯುವ ರುವಾಂಡಾ ಹೋದ ವರ್ಷ ೫೦ ಸಾವಿರ ಟನ್ ಕಾಫಿಯನ್ನು ನಿರ್ಯಾತ ಮಾಡಿತ್ತು.) ಕಾಫಿಯನ್ನು ಯುರೋಪಿನ ಪೇಟೆಗಳಿಗೆ ಸಾಗಿಸುತ್ತಿದ್ದ ಬೆಲ್ಜಿಯಂನ ಸಬೇನಾ ವಿಮಾನ ಸಂಸ್ಥೆ ತನ್ನ ದರಗಳನ್ನು ಏರಿಸಿತು. ಇದರ ಮೇಲೆ ದೇಶದ ಗಳಿಕೆಯ ಸುಮಾರು ೭೦ ಪ್ರತಿಶತ ರಶಿಯಾ ಮತ್ತು ಫ್ರಾನ್ಸ್‌ಗಳಿಂದ ಅತ್ಯಾಧುನಿಕ ಶಸ್ತ್ರಾಸ್ತ್ರಗಳನ್ನು ಖರೀದಿಸಲು ವ್ಯಯವಾಗುತ್ತಿತ್ತು.

ವಿಚಿತ್ರ ಬಯಕೆ

ಇದಕ್ಕೆ ಕಳಸವಿಟ್ಟಂತೆ ಅಮೀನ್ ನ್ಯೂಯಾರ್ಕಿನಲ್ಲಿ ವಿಶ್ವಸಂಸ್ಥೆಯಲ್ಲಿಯ ರಾಯಭಾರೀ ಕಚೇರಿಗಾಗಿ ಹದಿನೆಂಟು ಅಂತಸ್ತುಗಳ ಭವ್ಯ ಕಟ್ಟಡವನ್ನು ಅಪಾರ ಹಣ ವೆಚ್ಚ ಮಾಡಿ ಕಟ್ಟಿಸಿದ. ಪರಿಸರದಲ್ಲಿಯ ಎಲ್ಲ ಕಟ್ಟಡಗಳಿಗಿಂತ ಇದು ಎತ್ತರವಾಗಬೇಕೆಂದೂ ಅದರ ಉದ್ಘಾಟನೆಗಾಗಿ ಹೆಲಿಕಾಪ್ಟರಿನಲ್ಲಿ ಬರುವಾಗ ನೆರೆಯ ಅಮೇರಿಕೆಯ ರಾಯಭಾರಿ ಕಚೇರಿಯ ಮೇಲೆ ತಾನು ಮೂತ್ರ ವಿಸರ್ಜನೆ ಮಾಡುವದಾಗಿಯೂ ಅಮೀನ್ ಹೇಳಿಕೆ ಕೊಟ್ಟಿದ್ದ.

ಯುಗಾಂಡದಲ್ಲಿ ಅಶಿಕ್ಷಿತ ಮತ್ತು ಅರ್ಧಶಿಕ್ಷಿತ ಜನರ ಸರಕಾರ ಹೋಗಿ ಈಗ ಅತಿಶಿಕ್ಷಿತ ಜನರ ಸರಕಾರ ಸ್ಥಾಪನೆಯಾಗಿದೆ. (ಯೂಸುಫು ಲುಲೇಯ ಸರಕಾರದಲ್ಲಿ ಹೆಚ್ಚು ಜನರು ಡಾಕ್ಟರೇಟ್ ಡಿಗ್ರಿಗಳನ್ನು ಪಡೆದವರಿದ್ದಾರೆ.)

ಕತ್ತಲೆ ಕಳೆಯಿತೆಂದು ಆಶಿಸೋಣವೇ? ✡

ನಾಮ ವಿಶೇಷ

ಇದಿ ಅಮೀನ ದಾದಾ–ಈ ಹೆಸರಿನ ಮೂರು ಶಬ್ದಗಳು ವೈಶಿಷ್ಟ್ಯಪೂರ್ಣ. 'ಇದಿ' ಎಂಬುದು 'ವಿಧಿ'ಯ ಅಪಭ್ರಂಶ ರೂಪ. ಆತ 'ಇದಿ'ಯಂತೆ ಕಾಡಿದ. 'ಅಮೀನ' ಎಂದರೆ 'ಧರ್ಮದರ್ಶಿ' ಎಂದರ್ಥ. ಈ ವ್ಯಕ್ತಿಗೆ ಕ್ರೌರ್ಯವೇ ಧರ್ಮವಾಗಿತ್ತು ಆತ ಆ ಧರ್ಮದ 'ಧರ್ಮದರ್ಶಿ'ಯಾಗಿದ್ದ. 'ದಾದಾ' ಎಂದರೆ 'ಅಣ್ಣ' ಎಂದು. ಆತ ಅಣ್ಣನಾಗಿರಲಿಲ್ಲ. ಆದರೆ 'ದಾದಾಗಿರಿ' ಎಂಬ ಶಬ್ದದ ಸಾಕಾರವಾಗಿದ್ದ.

ಮೊದಲನೆಯದಕ್ಕೆ
ತಡ ಮಾಡಿ

ಎರಡನೆಯದಕ್ಕೆ
ಅಂತರ ಇಡಿ

ಭಾವೀ
ತಾಯಿತಂದೆಯರಿಗೆ
ಉತ್ತಮ ಸಲಹೆ

ಮೂರನೆಯದು...
ಬೇಡ ಬಿಡಿ

ನಿಮಗೆ ಅಗತ್ಯದ ಸಲಹೆ ಮತ್ತು ಸಾಧನಗಳನ್ನು ನೀಡಲು ನಿಮ್ಮ ಸಮೀಪದ ಕುಟುಂಬ ಯೋಜನಾ ಕೇಂದ್ರ, ಪ್ರಾಥಮಿಕ ಆರೋಗ್ಯ ಕೇಂದ್ರದ ಸಿಬ್ಬಂದಿಯವರು ಅಥವಾ ಗ್ರಾಮ ಆರೋಗ್ಯ ಸಹಾಯಕ ಸಿದ್ಧವಾಗಿದ್ದಾರೆ.

ಅವರ ಬಳಿಗೆ ಇಂದೇ ಹೋಗಿ

davp 79/62

ಪದಾರ್ಥ ಚಿಂತಾಮಣಿ

– ೬ –

ವಿಕ್ರಮ **ಶಕ**, ಶಾಲಿವಾಹನ **ಶಕ** ಮತ್ತು ಯುರೋಪಿಯನ್ನರ ಅಭಿಯೋಗದ ನಂತರ ಕ್ರಿಸ್ತ **ಶಕ** ಎಂಬ ವರ್ಷಗಣನಾ ಪದ್ಧತಿಗಳು ನಮ್ಮಲ್ಲಿ ರೂಢಿಯಲ್ಲಿವೆ. **ಶಕ** ಶಬ್ದಕ್ಕೆ ಯಾವನಾದರೊಬ್ಬ ಮಹಾಪುರುಷನ ಹೆಸರಿನಲ್ಲಿ ಪ್ರಾರಂಭವಾದ ವರ್ಷಪದ್ಧತಿಯೆಂಬ ಅರ್ಥ ಬಂದುಹೋಗಿದೆ. ಅದರ ಕಥೆ ಕುತೂಹಲದ್ದು.

ಕಪ್ಪು ಸಮುದ್ರದ ಉತ್ತರ ಈಶಾನ್ಯ ಪ್ರದೇಶಗಳಲ್ಲಿದ್ದ **ಶಕ**ರೆಂಬ ಜನರು ಕ್ರಿಸ್ತಪೂರ್ವದಲ್ಲೇ ಭಾರತದ ವಾಯುವ್ಯ ಭಾಗದ ಮೇಲೆ ದಾಳಿ ಮಾಡಿ ಅನೇಕ ಪ್ರದೇಶಗಳನ್ನು ವಶಪಡಿಸಿಕೊಂಡು ಆಳತೊಡಗಿದ್ದರು. ಯುರೋಪಿನಲ್ಲಿ ಈ ಜನರನ್ನು ಸಿಥಿಯನ್ನರೆಂದು ಕರೆಯುತ್ತಾರೆ. ಅಲ್ಲಿಯೂ ಇಲ್ಲಿಯೂ ಇವರು ಯುದ್ಧ ಮತ್ತು ರಾಜ್ಯ ನೀತಿಯಲ್ಲಿ ತಮ್ಮ ಕ್ರೂರತನದಿಂದ ಬಹಳ ದ್ವೇಷಪಾತ್ರರಾಗಿದ್ದರು. (ಅವರನ್ನು ಸೋಲಿಸಿ ಹಿಂದಕ್ಕಟ್ಟಿದ್ದಕ್ಕಾಗಿ ಶಕಾರಿ ವಿಕ್ರಮಾದಿತ್ಯನು ನಮ್ಮ ಪೂರ್ವಜರಿಗೆ ಅತ್ಯಂತ ಪ್ರೀತಿಪಾತ್ರ ರಾಜನಾಗಿದ್ದನು) ಮಾಳವ ದೇಶದವರೆಗೂ ಕಾಲು ಚಾಚಿದ್ದ ಶಕರು ಉಪಯೋಗಿಸುತ್ತಿದ್ದ ವರ್ಷಗಣನಾ ಪದ್ಧತಿ **ಶಕ** ವರ್ಷವೆನಿಸುತ್ತಿತ್ತು. ಅದು ಪ್ರಾರಂಭವಾದದ್ದು ಕ್ರಿಸ್ತ ವರ್ಷ ೭೮ ರಿಂದ.

ಕಾಲಾಂತರದಲ್ಲಿ ಶಕರ ರಾಜ್ಯ ಹೋಯಿತು. ಅವರು ಇಲ್ಲಿನ ಜನಸಾಗರದಲ್ಲಿ ಸೇರಿಹೋದರು. ಅವರ ಮೇಲಿನ ದ್ವೇಷವೂ ಮರೆತುಹೋಯಿತು. ಅವರು ಆರಂಭಿಸಿದ ವರ್ಷಗಣನಾ ಪದ್ಧತಿ ಮಾತ್ರ ಉಳಿಯಿತು. ಇದಕ್ಕೆ ಕಾರಣವೆಂದರೆ ಇಲ್ಲಿ ಒಂದೊಂದು ಪ್ರದೇಶದಲ್ಲಿಯೂ ಒಂದೊಂದು ರಾಜ್ಯದಲ್ಲಿಯೂ ಒಬ್ಬೊಬ್ಬ ರಾಜನು ಪಟ್ಟಕ್ಕೆ ಬಂದಂದಿನಿಂದ ಅವನ ಹೆಸರಿನಲ್ಲಿ ವರ್ಷಗಳನ್ನು ಲೆಕ್ಕಿಸುತ್ತಿದ್ದುದರಿಂದ ತುಂಬಾ ಗೊಂದಲವುಂಟಾಗುತ್ತಿತ್ತು. ಶಕರು ಒಬ್ಬೊಬ್ಬ ರಾಜನಿಂದಲೂ ವರ್ಷಗಳನ್ನೆಣಿಸದೆ ಒಂದು ವಿಶಿಷ್ಟ ವರ್ಷದಿಂದ (ಕ್ರಿ. ವರ್ಷ ೭೮) ಎಣಿಸುತ್ತಿದ್ದರು. ಅದರಿಂದ ಅದು ಅನುಕೂಲವಾಗಿದ್ದು ಸರ್ವಗ್ರಾಹ್ಯವಾಯಿತು. ಎಷ್ಟು ಸರ್ವಗ್ರಾಹ್ಯವೆಂದರೆ ಇದು ನಮ್ಮ ಅತ್ಯಂತ ದ್ವೇಷಾಸ್ಪದ ಜನಾಂಗದಿಂದ ಪ್ರಾರಂಭವಾದದ್ದೆಂದೂ ಮರೆತುಹೋಗಿ, ಎಲ್ಲಾ ವರ್ಷಗಣನಾ ಪದ್ಧತಿಗಳಿಗೂ **ಶಕ**ವೆಂದೇ ಹೆಸರಾಯಿತು. ಹೀಗೆ ಉತ್ತರ ಭಾರತದಲ್ಲಿ ಕ್ರಿ. ಪೂರ್ವ ೫೭ ರಿಂದ ನಡೆಯುತ್ತಿತ್ತೆಂದು ಭಾವಿಸಲಾದ ವಿಕ್ರಮ ವರ್ಷವನ್ನು ವಿಕ್ರಮ **ಶಕ**ವೆಂದೇ ಕರೆಯಲಾರಂಭವಾಯಿತು. **ಶಕಾರಿ** ವಿಕ್ರಮಾದಿತ್ಯನಿಗೆ ಒಳ್ಳೆಯ ಉಡುಗೊರೆ ಇದು! ಮುಂದೆ ಕ್ರಿಸ್ತವರ್ಷವೂ ಕ್ರಿಸ್ತ **ಶಕ**ವೆಂದೇ ಪ್ರಸಿದ್ಧಿಗೆ ಬಂತು. ಕ್ರಿಸ್ತಶಕ ೧೦೭೬ ರಲ್ಲಿ ಕರ್ನಾಟಕದ ಚಾಲುಕ್ಯ ವಿಕ್ರಮಾದಿತ್ಯನು ತನ್ನ ಹೆಸರಲ್ಲೇ ಒಂದು ವರ್ಷಗಣನೆಯನ್ನು ತೊಡಗಿಸಬೇಕೆಂದು ಮಾಡಿದಾಗ ಅದೂ ಚಾಲುಕ್ಯ ವಿಕ್ರಮ **ಶಕ**ವೆಂದೇ ಹೆಸರು ಪಡೆಯಿತು. (ಆದರೆ ಅದು ಬಹುಕಾಲ ಟಿಕಾಯಿಸಲಿಲ್ಲ). ಅಷ್ಟು ಮಾತ್ರವಲ್ಲ, ಯಾವನಾದರೂ ಮಹಾಪುರುಷನು ಬಹುಕಾಲ ನೆನೆಯುವ ಮಹತ್ಕಾರ್ಯ ಮಾಡಿದರೆ ಅವನನ್ನು **ಶಕಪುರುಷ** ಎಂದು ವಿಶೇಷಿಸುವವರೆಗೂ ಶಕರ ಅಚ್ಚು ನಮ್ಮ ಮೇಲೆ ಒತ್ತಿಬಿಟ್ಟಿದೆ.

ಪ್ರಾರಂಭದ ಹತ್ತು ಶತಮಾನ ಕಾಲ ಇದನ್ನು ಶಾಸನಗಳಲ್ಲಿ **ಶಕ** ವರ್ಷವೆಂದೇ ಹೆಸರಿಸಿದ್ದು ಕಾಣಿಸುತ್ತದೆ. ಆ ಮೇಲೆ ಯಾರೋ ಯಾಕೋ ಇದನ್ನು ಶಾಲಿವಾಹನ ಶಕವೆಂದು ಕರೆಯತೊಡಗಿದರು. ನಿಜಕ್ಕೂ ಶಾತವಾಹನ ಅಥವಾ ಶಾಲಿವಾಹನನಿಗೂ ಈ ಶಕಕ್ಕೂ ಏನೂ ಸಂಬಂಧವಿಲ್ಲ.

ನರರ ದುಷ್ಕರ್ಮಗಳು ಅವರೊಡನೆ ನಶಿಸುವವು
ಸತ್ಕರ್ಮಗಳು ಮಾತ್ರ ಚಿರಕಾಲ ಉಳಿಯುವವು

–ಎಂಬ ವಾಕ್ಯವನ್ನು ಶಕವರ್ಷದ ಕಥೆ ಸತ್ಯವಾಗಿಸಿದೆ.

— ಶಾವೆಂ.



"ಈಗ ಯಾಕೆ ಬರ್ಬೇಕು ಸಾವಿತ್ರಿ?" ಪತ್ರವನ್ನು ಓದಿ ಮುಗಿಸಿದ ರಂಗಮ್ಮ ಗೊಣಗಿದರು.

"ಸ್ವಂತ ಮಗಳು ಬರೋದೇ ಇಷ್ಟ ಇಲ್ವಾ ನಿಂಗೆ?" ಸುಬ್ಬಣ್ಣ ಗದರಿಸಿದರು.

"ಹಾಗಂತಲ್ಲ."

"ಮತ್ತೆ?"

"ಪಟ್ಟಣಕ್ಕೆ ಹೋದ್ಮೇಲೆ ಅವಳು ಏನೋ ಒಂದು ತರಹಾ ಆಗ್ಬಿಟ್ಟಿದ್ದಾಳೆ, ಹೇಗೇಗೋ ಮಾತಾಡ್ತಾಳೆ.

"ನಾಲ್ಕು ದಿನ ಅಷ್ಟೇ…" ಸುಬ್ಬಣ್ಣ ನಕ್ಕರು– "ಪಟ್ಟಣದ ಜಂಬ ತಲೆಗೇರಿದೆ, ಸ್ವಲ್ಪ ದಿವಸ ಆದ್ಮೇಲೆ ತಾನೇತಾನಾಗಿ ಇಳಿಯುತ್ತೆ."

ಸಾವಿತ್ರಿ ಅವರ ಹಿರಿಯ ಮಗಳು. ಚಿಕ್ಕಂದಿನಿಂದಲೂ ಅಷ್ಟೇ, ಈಗಲೂ ಅಷ್ಟೇ. ಅವಳದೇ ಒಂದು ತರಹ! ಏನೇನೋ ಕನಸು– ಯಾವುಯಾವುದೋ ದೊಡ್ಡಮನುಷ್ಯತನ !

"ನಮ್ಮಂಥಾವ್ರಿಗೆ ಅದೆಲ್ಲಾ ಸಲ್ಲದಮ್ಮಾ; ಎಲ್ಲಿರ್ಬೇಕೋ, ಅಲ್ಲಿರ್ಬೇಕು"–ಅಂತ ತಾಯಿ ನೂರು ಮಾತಿಗೂ ಹೇಳಿ ಅವಳನ್ನ ತಿದ್ದೋದಕ್ಕೆ ಪ್ರಯತ್ನಿಸಿದ್ದು ವ್ಯರ್ಥವಾಯಿತು.

ಓದಲ್ಲಿ ತುಂಬಾ ಜಾಣೆಯಾದ ಅವಳು, ಎಸ್. ಎಸ್. ಎಲ್. ಸಿ. ಯನ್ನು ಫಸ್ಟ್‌ಕ್ಲಾಸಿನಲ್ಲಿ ಪಾಸು ಮಾಡಿದಳು. ಮೊಂಡು ಹಿಡಿದು ಹೈಸ್ಕೂಲ್ ಸೇರಿದವಳು ಈಗ ಯಾವುದೋ ಟ್ರೈನಿಂಗ್ ತೆಗೀತಾ ಇದ್ದಳು ಬೆಂಗಳೂರಲ್ಲಿ.

ಟ್ಯಾಕ್ಸೀಲಿ ಬಂದಿಳಿದ ಸಾವಿತ್ರಿಯನ್ನು ಕಂಡು



ಅಭಿಮಾನ

* ಎನ್. ಪಂಕಜ

ತಾಯಿ ಬೆಪ್ಪಾಪರು, ಜಟಕಾ ಮಾಡಿಕೊಂಡು ಬರೋಪಕ್ಕೇನಾಗಿತ್ತು ಇವಳಿಗೆ ಅಂತ.

"ದೊಡ್ಡ ಮನೆಯವರು ಏನಾದ್ರೂ ಇದನ್ನು ನೋಡಿಬಿಟ್ರೇ?" ಗಾಬರಿಯಿಂದ ತಮ್ಮ ಧಣಿಗಳ ಮುಂಬಾಗಿಲ ಕಡೆ ನೋಡಿದಳು.

ಲೀಲಾದೇವಿ ಕಿಟಕಿಯ ಹತ್ತಿರ ನಿಂತಿದ್ದಳು.

ಟ್ಯಾಕ್ಸಿಯಿಂದ ಇಳಿದು ಸ್ಟೈಲಿಷ್ಷಾಗಿ ತಮ್ಮ ಕಾಂಪೌಂಡನ್ನು ಪ್ರವೇಶಿಸಿದ ಸಾವಿತ್ರಿಯನ್ನು ಕಂಡು ವ್ಯಂಗ್ಯವಾಗಿ ನಕ್ಕಳು ಜೋರಾಗಿ!

ಸಾವಿತ್ರಿಗೆ ಇದು ಗೊತ್ತಾಗದೆ ಇರಲಿಲ್ಲ.

ಸಿಟ್ಟಿನಿಂದ ಮುಖ ಕೆಂಪಗಾಯಿತು.

"ಯ್ಯಾರಮ್ಮಾ ಅದು?" ಪ್ರಶ್ನಿಸಿದಳು. ಸಾವಿತ್ರಿ.

"ಅದೇ ನಮ್ಮ ಚಿಕ್ಕಮ್ಮಾವ್ರು..."

"ಚಿಕ್ಕಮ್ಮಾವ್ರು?"

"ದೊಡ್ಡಮ್ಮನವರ ಮಗಳು ನಮಗೆ ಚಿಕ್ಕಮ್ಮಾವರಲ್ವೇ?"

"ಓ!" ಸಾವಿತ್ರಿ ಅಸಡ್ಡೆಯಿಂದ ಭುಜ ಕುಣಿಸಿದಳು.

"ಯಾಕಪ್ಪಾ ಬಂದಳು ಇವಳಿಲ್ಲಿಗೆ!" ಅವ್ಯಕ್ತ ಭೀತಿಯ ಮೊಳೆಯೊಂದು ರಂಗಮ್ಮನ ಮನಸ್ಸನ್ನು ಚುಚ್ಚಿತು.

ಗಿರಿಜಾ ಅಕ್ಕನ ಆಧುನಿಕ ವೇಷವನ್ನೇ ನೋಡುತ್ತಾ ನಿಂತುಬಿಟ್ಟಳು.

ತೆಳುವಾದ ನೈಲಾನ್ ಸೀರೆ, ತೋಳಿಲ್ಲದ ರವಿಕೆ, ಬಲಗೈಗೆ ರಿಸ್ಟ್‌ವಾಚು, ಎಡಗೈಗೆ ಪ್ಲಾಸ್ಟಿಕ್ ಬಳೆ, ಕಾಲಿಗೆ ಪೈಹೀಲ್, ಕೇಶರಾಶಿಯನ್ನೆಲ್ಲಾ ಮೇಲಕ್ಕೆತ್ತಿ, ಯಾವುದೋ ಶಿಖರವನ್ನು ತಲೆಯ ಮೇಲೆ ಸ್ಥಾಪಿಸಿಕೊಂಡಿದ್ದಳು !

"ಹೇಗಪ್ಪಾ ಇದ್ದೀ?" ಕೂಲಿಂಗ್‌ಗ್ಲಾಸನ್ನು ತೆಗೆದ ಸಾವಿತ್ರಿ ಕೇಳಿದಾಗ, ತಂದೆಗೆ ಹೃದಯ ತುಂಬಿಬಂದಿತು.

ಎಷ್ಟಾದರೂ ತಮ್ಮ ಚೊಚ್ಚಲು ಕೂಸು! ತಬ್ಬಿಕೊಂಡರು.

"ಇದೇನೇ ಇದು—ನಿನ್ನ ಸೂಟ್‌ಕೇಸ್ ಮೇಲೆ

'ಸವಿತಾ' ಅಂತ ಹಾಕಿದೆ!" ಕೈಗೆ ಅವಳ ಸೂಟ್ ಕೇಸನ್ನು ತೆಗೆದುಕೊಂಡ ರಂಗಮ್ಮ ನಿರುಕಿಸಿ ನಿರುಕಿಸಿ ನೋಡುತ್ತಾ ಉದ್ಗರಿಸಿದರು—"ಬಸ್ನಲ್ಲಿ ನೋಡದೆ ಬೇರೆ ಯಾರದನ್ನೋ ತಂದ್ಬಿಟ್ಟಿದೀಯೋ ಅಂತೀನಿ! ಬಸ್ ಮೇಲೆ ಸಾಮಾನನ್ನು ಇಟ್ರೆ, ಹೀಗಾಗೋದುಂಟಂತೆ..."

ಸಾವಿತ್ರಿ ಕಿಲಕಿಲನೆ ನಕ್ಕಳು.

"ಬೇರೆ ಯಾರ್ದೂ ಅಲ್ಲಾಮ್ಮಾ, ನಂದೇ. ಈಗ ನನ್ನ ಹೆಸರು, ಸಾವಿತ್ರಿ ಅಲ್ಲಾ ಸವಿತಾ."

ರಂಗಮ್ಮನಿಗೆ ಷಾಕ್ ಹೊಡೆದ ಹಾಗಾಯಿತು.

ಸಾವಿತ್ರಿ ಪುರಾಣದ ಹೆಸರು—ಮಹಾ ಪತಿ—ವ್ರತೆಯ ಹೆಸರು! ಅಲ್ಲದೆ ತಮ್ಮ ಅತ್ತೆಯ ಹೆಸರು!

ಅದರೆ ಸವಿತಾ—ಯಾವ ಹೆಸರು?

"ಪಟ್ಟಣದ ಹೆಸರು" ತಾಯಿಯ ಮನಸ್ಸಿನ ಪ್ರಶ್ನೆಗೆ ಸಾವಿತ್ರಿ ಉತ್ತರಕೊಟ್ಟಳು— "ನನ್ನ ಫ್ರೆಂಡ್ ಎಲ್ರೂ 'ಸಾವಿತ್ರಿ' ಅನ್ನೋದು ಸ್ವಲ್ಪಾನೂ ಚೆನ್ನಾಗಿಲ್ಲ ಅಂದರು. ಅದಕ್ಕೇ ಈಗ ನನ್ನನ್ನ ಎಲ್ರೂ, 'ಸವಿತಾ ದೇವಿ' ಅಂತಲೇ ಕರಿಯೋದು.."

"ಹುಶ್! ಎಷ್ಟು ಗಟ್ಟಿಯಾಗಿ ಹೇಳ್ತೀ!" ಗಾಬರಿಯಿಂದ ರಂಗಮ್ಮ ದೊಡ್ಡ ಮನೆಯತ್ತ ನೋಡಿದರು.

ಎಲ್ಲರೂ ಕುಳಿತು ಟೀ ಕುಡಿಯುತ್ತಿದ್ದಾಗ, ಕಿಟಕಿಯನ್ನು ಯಾರೋ ಅಸಹನೆಯಿಂದ ಬಡಿದ ಶಬ್ದವಾಯಿತು.

ಆತಂಕದಿಂದ ರಂಗಮ್ಮ, ಗಿರಿಜಾ ಇಬ್ಬರೂ ಎದ್ದರು.

ಮುಂದಾಗಿ ಓಡಿಹೋದ ಗಿರಿಜಳ ಮುಖ ಹಿಂದಿರುಗಿದಾಗ ಬೆವೆತಿತ್ತು.

"ಚಿಕ್ಕಮ್ಮಾವ್ರು ಸೈಕಲ್‌ಬೆಲ್ ಮಾಡಿದ್ರಂತೆ ತಿಳೀಲಿಲ್ಲ, ಸಿಟ್ಟಾದ್ರು." ತಂದೆಗೆ ವಿವರಿಸಿದಳು.

"ಯಾರು? ಆ ಚೋಟಾ ಲೀಲಾ ತಾನೇ?" ಸಾವಿತ್ರಿ ಅಸಡ್ಡೆಯಿಂದ ಟೀ ಕಪ್ಪನ್ನು ಕೆಳಗಿಟ್ಟಳು. "ಮೊದಲಿನಿಂದ ಅಷ್ಟೇ, ಅತಿ ಜಂಬ ಅದಕ್ಕೆ. ಆಗಾಗ ಈ ರೀತಿ ಮಾಡಿದ್ರೆ ಬುದ್ಧಿ ಬರತ್ತೆ. ಅತಿ ಮರ್ಯಾದೆ ಮಾಡೋದಕ್ಕೆ ಯಾಕೆ ಹೋಗ್ತಿ?"

ಕೆಲ ಹೊತ್ತು ವಿಶ್ರಮಿಸಿಕೊಂಡ ಬಳಿಕ ಶೂಸ್ ಮೆಟ್ಟಿಕೊಂಡು, ಹ್ಯಾಂಡ್‌ಬ್ಯಾಗನ್ನು ನೇತು ಹಾಕಿಕೊಂಡು ನಿಂತ ಮಗಳನ್ನು ಕಂಡು, ತಾಯಿ ವಿಸ್ಮಯದಿಂದ ಪ್ರಶ್ನಿಸಿದರು, "ಈಗೆಲ್ಲಿ ಹೋಗ್ತಿ? ಅದೂ ಒಬ್ಳೇ!"

"ಇಲ್ಲಿಂದು ಫರ್ಲಾಂಗ್ ದೂರದಲ್ಲಿ 'ಮಂಜುಳಾದೇವಿ' ಅಂತ ಒಬ್ರು ಬೆಂಗಳೂರಿನಿಂದ ಹೊಸದಾಗಿ ಬಂದಿದಾರೆ. ಅವರನ್ನ ಹೋಗಿ ಸ್ವಲ್ಪ ಕಾಣ್ಬೇಕು"...

ತಾಯಿ ಉಸಿರು ಬಿಗಿಹಿಡಿದು ನಿಂತರು.

ಮಂಜುಳಾದೇವಿ ದೊಡ್ಡ ಮನೆಯವರಿಗೆ ಬಹಳವೆಂದರೆ ಬಹಳ! ಆಗಾಗ ಇಲ್ಲಿಗೆ ಬರೋದುಂಟು. ಅಂಥಾ ಶ್ರೀಮಂತರು ಸಾವಿತ್ರಿಗೆ ಪರಿಚಯವಾದರೂ ಹೇಗೆ ಆದರು?

"ಅದ್ರಲ್ಲಿ ಏನು ಆಶ್ಚರ್ಯ?" ಇಂಥಾವರು ನಮ್ಮ ಬೆಂಗಳೂರಲ್ಲಿ, ಅದೆಷ್ಟು ಜನ ಗೊತ್ತುಂಟೊ ನಂಗೆ! ನಿನ್ನ ದೊಡ್ಡ ಮನೆಯವರನ್ನ ಕೊಂಡುಕೊಳ್ಳೋ, ಅಂಥಾ ವ್ಯಕ್ತಿಗಳನ್ನು ಬೇಕಾದ್ರೆ ತೋರಿಸ್ತೀನಿ," ಸಾವಿತ್ರಿ ತಾಯಿಯ ಮುಖದ ಮೇಲಿನ ಆಶ್ಚರ್ಯದಿಂದಲೆ ಮನಸ್ಸಿನಲ್ಲಿದ್ದುದನ್ನು ಊಹಿಸಿ ಹೇಳಿದಳು.

"ಮೆಲ್ಲಗೆ, ಮೆಲ್ಲಗೆ ಮಗು" ರಂಗಮ್ಮ ಕಿಟಕಿಯ ಬಳಿ ಓಡಿಹೋದರು. ಅದರೋ, ಇಲ್ಲ, ಆಳು ಕಾಳುಗಳು ಯಾರಾದರೂ, ಕೇಳಿಸಿಕೊಂಡು ಬಿಟ್ಟಾರೋ ಎಂಬ ಭಯದಿಂದ!

ಮಗಳ ನಡೆ—ನುಡಿ, ಆತ್ಮವಿಶ್ವಾಸ, ಎಲ್ಲವನೂ ಕಂಡು ತಂದೆತಾಯಿಗಳಿಗಿಬ್ಬರಿಗೂ ಮೆಚ್ಚಿಗೆಯಾಗಿದ್ದರೂ ಅವಳು ಊರಲ್ಲಿರುವವರೆಗೂ ಜೀವ ಹಿಡಿಯಾಗಿ ನಿಂತಿತ್ತು.

ಏನೆಂದರೂ, ಅವರುಗಳು ಆ ದೊಡ್ಡ ಮನೆಯ ಆಶ್ರಿತರು, ತಲೆ ತಲೆತಲಾಂತರಗಳಿಂದ ಅದರ ವಾಚ್‌ಮೆನ್ ಆಗಿ ಬಾಳಿದವರು, ದೊಡ್ಡ ಮನೆಯ ಐಯ್ಯನವರ ದೊಡ್ಡ ಗುಣ – ಗೇಟಿನ ಬಳಿಯೇ ಅಚ್ಚುಕಟ್ಟಾದ ಮುದ್ದುಮನೆಯೊಂದನ್ನು ಕಟ್ಟಿಸಿಕೊಟ್ಟಿದ್ದರು.

ಆ ಊರಿಗೆಲ್ಲಾ ಪ್ರಮುಖರೆನಿಸಿದ್ದ ಆ ದೊಡ್ಡ ಮನೆಯವರ ಮರ್ಜಿಯನ್ನು ನೋಡಿಕೊಂಡು ಬಾಳುವುದೇ ಈ ರಂಗಣ್ಣನ ಸಂಸಾರದ ಗುರಿ. ಅದರಿಂದಾಗಿಯೆ ಜೀವನ ನಡೆಯಬೇಕು.

ಆದರೆ, ಸಾವಿತ್ರಿಯಿಂದ ಹಾಗಿರಲು ಸಾಧ್ಯವೇ? ದೊಡ್ಡ ಮನೆಯವರಿಗೆ ಅವಳು ಹಿಡಿಸುವಳೇ?

*

ಆದರೆ ತಾಯಿಯ ಹತ್ತಿರ ಜಂಬ ಕೊಚ್ಚಿಕೊಂಡಂತೆ, ಮಂಜುಳಾದೇವಿಯ ಪರಿಚಯ ಸಾವಿತ್ರಿಗೆ ಇರಲೇ ಇಲ್ಲ. ಭೇಟಿಯಾಗಿ, ದಾಕ್ಷಿಣ್ಯಕವಾಗಿ ಮಾತಾಡಿ, ತಾನೇ ಪರಿಚಯಮಾಡಿಕೊಂಡಳು.

ಮಂಜುಳಾದೇವಿಗೆ ಈ ಹುಡುಗಿಯ ನಡೆ, ನುಡಿ, ರೂಪ ಎಲ್ಲವೂ ಬಹಳ ಹಿಡಿಸಿತು.

"ನೀವಿರೋದು ಎಲ್ಲಿ?" ಆಸಕ್ತಿಯಿಂದ ಕೇಳಿದರು.

"ಇಲ್ಲೇ ನಮ್ಮವರ ಹತ್ರ ಇಳಿದುಕೊಂಡಿದ್ದೇನೆ"–ಸಾವಿತ್ರಿ ಮಾತು ಹಾರಿಸಿದಳು.

"ಎಲ್ಲಿ ತಿಳಿಸಿ–ನಾನೂ ಆ ಕಡೆ ಬಂದ್ರೆ ನಿಮ್ಮನ್ನ ಕಾಣ್ತೇನಿ."

"ನಾನು... ನಾನು ಇನ್ನೇನು, ನಾಳೇನೋ ನಾಡಿದ್ದೋ, ಊರಿಗೆ ಹೊರಡೋದ್ರಲ್ಲಿದೀನಿ..."

ಆ ಹೊತ್ತಿಗೆ ಸರಿಯಾಗಿ ಬೇರೊಬ್ಬಾಕೆ ಮಂಜುಳಾದೇವಿಯ ಡ್ರಾಯಿಂಗ್‌ರೂಮನ್ನು ಪ್ರವೇಶಿಸಿದಳು.

ಲೀಲಾದೇವಿ–ದೊಡ್ಡಮನೆಯ ಚಿಕ್ಕಮ್ಮನವರು!

ಸಾವಿತ್ರಿಯನ್ನಲ್ಲಿ ನೋಡಿ, ಆಕೆಗೆ ವಿಪರೀತ ಆಶ್ಚರ್ಯವಾಯಿತು.

ಮಂಜುಳಾದೇವಿ ಗುರುತು ಮಾಡಿಕೊಟ್ಟಾಗ ಅಸಡ್ಡೆಯಿಂದ ಮುಖ ತಿರುಗಿಸಿದಳು. 'ಸವಿತಾದೇವಿ' ಎಂಬ ಹೆಸರನ್ನು ಕೇಳಿ ವ್ಯಂಗ್ಯವಾಗಿ ನಕ್ಕಳು.

ಸಾವಿತ್ರಿಯ ಸ್ವಾಭಿಮಾನಕ್ಕೆ ಬರೆ ಎಳೆದಂತಾಯಿತು.

ಅಷ್ಟೇ ಧೋರಣೆಯಿಂದ ತಲೆತಿರುಗಿಸಿ ಕುಳಿತಳು.

"ನೀವೂ ಸೈಕಲ್ ಮೇಲೆ ಬಂದಿದೀರೇನು?"–ಮಂಜುಳಾದೇವಿ ಸಾವಿತ್ರಿಯತ್ತ ತಿರುಗಿ, ಪ್ರಶ್ನಿಸಿದಳು.

"ಇಲ್ಲ–ನಂಗೆ ಸೈಕಲ್ ಕಲಿಯೋದಕ್ಕೆ ಪುರಸೊತ್ತೇ ಆಗಿಲ್ಲ..."

"ಪುರುಸೊತ್ತಿದ್ದರೂ ಸೈಕಲ್ ಕೊಳ್ಳೋದಕ್ಕೆ ಎಲ್ಲರಿಗೂ ಶಕ್ತಿ ಬೇಕಲ್ಲ? ಅಬ್ಬಾಬ್ಬಾ, ಏನು ಬೆಲೆ! ಏನು ಬೆಲೆ! ಬಡವರಿಗಂತೂ ಸೈಕಲ್ ಒಂದು ಕನಸೇ ಸರಿ!"

ಈ ವಿಷಕ್ತ ಬಾಣ ತನಗಾಗಿ ಎನ್ನುವುದು ಸಾವಿತ್ರಿಗೆ ಗೊತ್ತಾಗದೆ ಇರಲಿಲ್ಲ. ಇನ್ನು ಅಲ್ಲಿ ಕೂರಲಾಗಲಿಲ್ಲ.

"ನಾನಿನ್ನು ಬರ್ತೇನೆ," ಎನ್ನುತ್ತಾ ಎದ್ದಳು.

ಅವಳನ್ನು ಇಷ್ಟು ಬೇಗ ಕಳುಹಿಸುವುದಕ್ಕೆ ನಿಜವಾಗಿಯೂ ಮಂಜುಳಾದೇವಿಗೆ ಮನಸ್ಸಿರಲಿಲ್ಲ.

"ಚೆನ್ನಾಗಿತ್ತು ಮಾತು ಕಥೆ, ಮತ್ತೊಮ್ಮೆ ಬನ್ನಿ" ಎಂದು ಆಹ್ವಾನಿಸಿ ಬಾಗಿಲವರೆಗೂ ಬಿಟ್ಟು ಬಂದಳು.

ಹೊರಗೆ ಬಂದ ಸಾವಿತ್ರಿಯ ಕೆನ್ನೆಗಳು ಅವಮಾನದಿಂದ ಕೆಂಪಾಗಿದ್ದವು.

'ನಾ ಯಾರು ಎಂಬೋದನ್ನ ಈಗ ಆ ದೊರೆಸಾನಿ ತಮ್ಮ ಮಂಜುಳಾದೇವಿಯ ಹತ್ತಿರ ಹೇಳದೆಯೇ ಇರುವಳೆ! ಛೀ ಅವಮಾನ! ಶುದ್ಧ ಅವಮಾನ!'

ಅಸಹಾಯಕತೆಯಿಂದ ಹಲ್ಲು ಕಡಿದಳು.

ಮನೆ ಮುಟ್ಟಿದಾಗ ಆ ಹೂಸು, ಸೀರೆ, ತಲೆಯ ಮೇಲೆಲ್ಲಾ ಲಾರಿಗಳ ಧೂಳು ಬಿದ್ದು ಅವತಾರವಾಗಿತ್ತು.

ಸಾವಿತ್ರಿ ಸಣ್ಣ ಗೇಟನ್ನು ತೆಗೆಯುವುದಕ್ಕೂ ಒಂದುಗಡೆಯೇ ಸೈಕಲ್ ಶಬ್ದ ಆಗುವುದಕ್ಕೂ ಸರಿ ಹೋಯಿತು.

ಹಿಂದಿರುಗಿ ನೋಡುವರೆ ಲೀಲಾದೇವಿ!

"ಆ ದೊಡ್ಡ ಗೇಟನ್ನ ತೆಗಿ" [illegible]ನಿಂದ ಆಜ್ಞಾಪಿಸಿದಳು.

ಸಾವಿತ್ರಿಯ ಸಿಟ್ಟು ನೆತ್ತಿಗೇರಿತು.

ಮರು ಮಾತಾಡದೆ, ಚಿಕ್ಕ ಗೇಟಿನೊಳಕ್ಕೆ ನುಸುಳಿದಳು.

"ನಾ ಹೇಳಿದ್ದು ಕೇಳಿಸಲಿಲ್ಲವೇ?" ಲೀಲಾ ಅಸಹನೆಯಿಂದ ಕೂಗಿಕೊಂಡಳು, "ಆ ದೊಡ್ಡ ಗೇಟನ್ನ ತೆಗಿ ಅಂದೆ."

"ಓ ನಂಗಾ ನೀ ಹೇಳಿದ್ದು!" ಸಾವಿತ್ರಿ ಕೃತ್ರಿಮ ಆಶ್ಚರ್ಯದಿಂದ ಉತ್ತರ ಕೊಟ್ಟಳು. "ನಿನ್ನ ಆಳು ಕಾಳುಗಳ ಪೈಕಿ ಯಾರನ್ನೋ ಕರೆದು ಹೇಳಿದೆ ಅಂದುಕೊಂಡೆ."

ಲೀಲಾದೇವಿ ಒಂದು ಸಲ ಕೆಟ್ಟ ಕಣ್ಣಿನಿಂದ ನೋಡಿ, ಕೆಳಗಿಳಿದು, ದೊಡ್ಡ ಗೇಟನ್ನು ತೆಗೆದ ವೇಳೆ ಬಿರುಗಾಳಿಯ ರಭಸದಿಂದ ಒಳಗೆ ಹೋದಳು.

ರಂಗಮ್ಮ ಗಾಬರಿಯಿಂದ ದುಡು ದುಡು ಓಡೋಡಿ ಬಂದರು.

"ಇದೇನು ಮಾಡಿಬಿಟ್ಟೆ! ನೀನಿದ್ದೀ–ಗೇಟ್ ತೆಗೀತಿ, ಅಂತ ಅಂದ್ಕೊಂಡವಳು, ನಾ ಬರಲಿಲ್ಲ. ಅಷ್ಟಗಲ ತೆಗೆದಿದ್ರೆ ಏನಾಗಿತ್ತು? ಹಾಗಾ ಮಾತಾಡೋದು! ಈಗೇನು ಗತಿ? ನಿಂಗೇನು ಬುದ್ಧಿಗಿದ್ಧಿ ಇದೆಯೋ, ಇಲ್ಲವೋ ?"

"ನಂಗೂ, ಈ ಜಾಗಕ್ಕೂ ಹೊಂದಲ್ಲವಮ್ಮಾ" ಸಾವಿತ್ರಿ ಉತ್ತರಿಸಿದಳು, "ಈ ನಿಮ್ಮ ದೀನ ಸ್ಥಿತಿ ನನ್ನ ತಲೇಗೇ ಬರಲ್ಲ. ಅದಕ್ಕೇ, ನಾಳೆ ಬೆಳಿಗ್ಗೇ ಬೆಂಗಳೂರಿಗೆ ಹೊರಟುಹೋಗೋಣ ಅಂತಿದೀನಿ."

ಸಾವಿತ್ರಿಯೇನೊ ಒರಟ ಮಾತನಾಡಿಬಿಟ್ಟಳು. ಆದರೆ ಅವಳೆಣಿಸಿದಂತೆ ವಿಷಯ ಅಷ್ಟು ಸುಲಭವಾಗಿ ಮುಗಿಯುವಂತೆ ಕಾಣಲಿಲ್ಲ.

ಮಗಳ ನಡತೆಯ ಬಗ್ಗೆ ಕ್ಷಮಾಪಣೆಯನ್ನು ಕೇಳಲು ರಂಗಮ್ಮ ದೊಡ್ಡ ಮನೆಗೆ ಹೋದರು.

ಆದರೆ ದೊಡ್ಡಮ್ಮನವರಾಗಲಿ ಚಿಕ್ಕಮ್ಮನವರಾಗಲಿ ಆಕೆಯನ್ನು ನೋಡಲು ನಿರಾಕರಿಸಿದರು.

ಎಂದೂ ರಂಗಮ್ಮನ ಬಗ್ಗೆ ಹಾಗವರು ಮಾಡಿದ್ದಿಲ್ಲ.

ರಂಗಮ್ಮನನ್ನು ಎದುರುಗೊಂಡ ಅಡಿಗೆಯಾಕೆಯ ಮುಖ ಕಠಿಣವಾಗಿತ್ತು.

"ಅಮ್ಮಾವ್ರ ಅಜ್ಞೆ–ನೀವು ಆದಷ್ಟು ಬೇಗ ಈ ಮನೆಯನ್ನು ಖಾಲಿಮಾಡಿ ಹೋಗ್ಬೇಕಂತೆ"– ನಿರ್ವಿಕಾರ ಧ್ವನಿಯಲ್ಲಿ ತಿಳಿಸಿದಳು– "ನಿಮಗೆ ಎರಡು ತಿಂಗಳ ಕಾಲಾವಕಾಶವನ್ನು ಕೊಟ್ಟಿದ್ದಾರೆ. ಹೊಸಬರು ಬರೋ ಹೊತ್ತಿಗೆ ಅದು ಸಿದ್ಧವಾಗಿರ್ಬೇಕು."

ಬಡಪಾಯಿ ರಂಗಮ್ಮ ನೆಲದ ಮೇಲೆ ಕುಸಿದರು; ಯಾವ ಮಾತೂ ಆಕೆಯ ಬಾಯಿಯಿಂದ ಹೊರಬರಲಿಲ್ಲ.

ಅಳು ಉಕ್ಕಿ ಬಂತು.

ಹುಚ್ಚು ಹಿಡಿದವರಂತೆ ಹೊರಗೋಡಿದರು.

"ಏನಿದು ಗಲಾಟೆ ?" ಕೋಣೆಯಲ್ಲಿ ಕುಳಿತು, ಏನನ್ನೋ ಓದುತ್ತಿದ್ದ ಸಾವಿತ್ರಿ ಕೊಟ್ಟೆಯೊಳಗೆ ಬಂದಳು.

ಸಮಾಚಾರವನ್ನು ತಿಳಿಸಿದ ರಂಗಮ್ಮ ಹಂಗಿಸಿದರು, "ನಿಂಗೀಗ ಸಮಾಧಾನವಾಯ್ತು ತಾನೆ ? ಚೆನ್ನಾಗಿ ಬಂದೆಯಲ್ಲಾ ನೀನು !"

ಸಾವಿತ್ರಿ ಬೆಪ್ಪಾಗಿ ಗೋಡೆಗೆ ಒರಗಿದಳು.

"ಏನೂ ಯೋಚಿಸ್ಬೇಡ ಮಗು," ಅವಳ ಗಲಿಬಿಲಿ–ಗಾಬರಿಯನ್ನು ಅರ್ಥಮಾಡಿಕೊಂಡ ತಂದೆ ಸಮಾಧಾನ ಹೇಳಿದರು, "ನಾಳೆ ಬೆಳಿಗ್ಗೆ ಎದ್ದ ತಕ್ಷಣ ದೊಡ್ಡಮನೆಗೆ ಹೋಗಿ, ಐಯ್ಯನವರನ್ನ ನೋಡ್ತೀನಿ, ಐಯ್ಯನವರಿಗೆ ನನ್ನನ್ನ ಕಂಡರೆ ಬಹಳ ಇಷ್ಟ. ಖಂಡಿತ ನನ್ನನ್ನ ಈ ಮುದಿ ವಯಸ್ಸಲ್ಲಿ– ಈ ಪಾಯಿಂಟ್ನಲ್ಲಿ, ಹೊರಗೆ ಕಳಿಸೊಲ್ಲ! ಮಲಕ್ಕೋ ಹೋಗು."

ಸಾವಿತ್ರಿ ಲಗುಬಗೆಯಿಂದ ತನ್ನ ಸಾಮಾನುಗಳನ್ನು ಕಟ್ಟಿದಳು. ಅವಳಿಗೆ ಈ ಊರು ಸಾಕಾಗಿತ್ತು. ಮತ್ತೆ ಇಲ್ಲಿಗೆ ಬರಲೇಬಾರದು ಅಂದುಕೊಂಡಳು.

ಬೆಳಿಗ್ಗೆ ಅಷ್ಟು ಹೊತ್ತಿಗೇ ದೊಡ್ಡ ಮನೆಗೆ ಹೋಗಿ ಬಂದ ಸುಬ್ಬಣ್ಣನ ಮುಖ ಬಾಡಿತ್ತು.

"ಐಯ್ಯನವರು ನನ್ನ ಕೂಡ ಮಾತಾಡಲೇ ಇಲ್ಲ ! ನೀನುಂಟು–ಅಮ್ಮಾವರುಂಟು, ನಿನ್ನ ಮಗಳು ನಮ್ಮ ಲೀಲಾದೇವಿಗೆ ತುಂಬಾ ಅವಮಾನ ಮಾಡಿಬಿಟ್ಟಿದ್ದಾಳೆ. ಏನಾದ್ರೂ ಸರಿ, ನೀನು ಮನೆ ಬಿಡ್ಲೇಬೇಕು! ಅಂತ ಅಂದು ಬಿಟ್ರು!" ಇಷ್ಟು ಹೇಳಿದವರೇ, ಸುಬ್ಬಣ್ಣ ಆತಂಕ, ನಿಶ್ಶಕ್ತಿ, ಮುದಿತನ, ಇವುಗಳಿಂದಾಗಿ ಕೆಳಗೆ ಬಿದ್ದುಬಿಟ್ಟರು.

"ನೋಡಮ್ಮಾ ನೋಡು, ನೀನು ಮಾಡಿರೋ ಕೆಲಸಾನ!" ರಂಗಮ್ಮ ಅಳಲು ಆರಂಭಿಸಿದರು.

"ನೀನೇನೋ ಜೋರಾಗಿ ನಿನ್ನ ಪಟ್ಟಣಕ್ಕೆ ಹೊರಟು ಹೋಗ್ತಿ; ನಾನೇನು ಮಾಡಲಿ? ಅಮ್ಮ ಅಪ್ಪನ ಹಿಂದೆ ಬೀದೀಲಿ ಅಲೀಬೇಕು; ಭಿಕ್ಷೆ ಬೇಡ್ಬೇಕು! ಹೀಗಾ ಮಾಡೋದು ನಮಗೆ!" ತಂಗಿ ರೋಷದಿಂದ ಆಕ್ಷೇಪಿಸಿದಳು.

ಸಾವಿತ್ರಿ ತಲೆತಗ್ಗಿಸಿಕೊಂಡು ಹೊರಗೆ ಹೋದಳು.

ಒಬ್ಬಳೇ ಒಂದಷ್ಟು ಹೊತ್ತು ಕಲ್ಲುಗೊಂಬೆಯಂತೆ ನಿಂತಳು.

ಕೊನೆಗೆ ಪ್ರಯಾಸದಿಂದ ಒಂದು ನಿರ್ಧಾರಕ್ಕೆ ಬಂದಳು.

ದೊಡ್ಡ ಮನೆಯ ಹತ್ತಿರ ಬಂದಾಗ, ಅವಳಲ್ಲಿಯ ಸತ್ವವೆಲ್ಲಾ ಹೀರಿಹೋಗಿತ್ತು.

"ಆಳುಗಳು ಹೀಗೆಲ್ಲಾ ಮುಂದಿನ ಬಾಗಿಲಿಗೆ ಬರಬಾರ್ದು; ಹಿಂದಿನ ಬಾಗಿಲಿಗೆ ಬಾ." ಅಡಿಗೆಯಮ್ಮ ಸಾವಿತ್ರಿಯನ್ನು ಕಂಡು ಹುಕುಂ ಮಾಡಿದರು.

ಸಾವಿತ್ರಿ ತಲೆತಗ್ಗಿಸಿಕೊಂಡು ಹಿಂದಿನ ಬಾಗಿಲಿಗೆ ನಡೆದಳು.

ಅಲ್ಲಿ, ದೊಡ್ಡ ಮನೆಯ ಆಳುಗಳೆಲ್ಲಾ ಗುಂಪು ಗೂಡಿದ್ದರು.

ಅವರೆಲ್ಲರೂ ಈ ಸಾವಿತ್ರಿಯನ್ನು ದಿಟ್ಟಿಸಿ ನೋಡುವವರೇ!

ಸಾವಿತ್ರಿ ಅವಮಾನದಿಂದ ಕುಸಿದುಹೋದಳು.

"ನಮ್ಮ ಅಮ್ಮಾವರನ್ನ ನೀ ಯಾಕೆ ನೋಡ್ಬೇಕು? ನಿಂಗೇನು ಬೇಕು? ಕೆಲಸಾನೆ? ಇಲ್ಲಿ ಯಾವ ಕೆಲಸಾನೂ ಸಧ್ಯಕ್ಕೆ ಖಾಲಿಯಿಲ್ಲ..." ಅಡಿಗೆಯಮ್ಮ ಬೇಕೆಂದೇ ಹೇಳಿದಳು.

ಆಳುಕಾಳುಗಳು ಮುಸಿ ಮುಸಿ ನಕ್ಕರು.

ಸಾವಿತ್ರಿ ಬಲು ಕಷ್ಟದಿಂದ ಉಕ್ಕಿ ಬಂದ ಅಳುವನ್ನು ಹತ್ತಿಕ್ಕಿಕೊಂಡು. "ಸ್ವಲ್ಪ...ಸ್ವಲ್ಪ... ನೋಡ್ಬೇಕು.. ನಾನು ಹಾಗೆ ಚಿಕ್ಕಮ್ಮಾವ್ರಿಗೆ ಅವಮಾನ ಮಾಡಿದ್ದು ತಪ್ಪು...ನನ್ನ ಅಮ್ಮ-ತಪ್ಪು..." ತೊದಲಿದಳು.

'ಚಿಕ್ಕಮ್ಮಾವ್ರು...' ಎನ್ನುವ ಹೊತ್ತಿಗೆ ಪ್ರಾಣ ಬತ್ತಿಹೋಗಿತ್ತು.

"ಆಯ್ತಲ್ಲ, ಈಗೇನೂ ಮಾಡೋ ಹಾಗಿಲ್ಲ... ನಡಿ ಮನೆಗೆ..." ಅಡಿಗೆಯಮ್ಮ ಅಧಿಕಾರ ವಾಣಿಯಲ್ಲಿ ಆಜ್ಞೆ ಮಾಡಿದಳು.

"ಇಲ್ಲ.... ದಯವಿಟ್ಟು ನನ್ನನ್ನ ಅವರು ಕ್ಷಮಿಸೋ ಹಾಗೆ ಮಾಡಿ; ನನ್ನನ್ನ ಅವರಲ್ಲಿಗೆ ಕರೆದುಕೊಂಡು ಹೋಗಿ, ನನ್ನಿಂದಾಗಿ ನನ್ನ ಅಮ್ಮ-ಅಪ್ಪ ಕಷ್ಟಪಡೋದು ಬೇಡ..." ಬೇಡಿಕೊಂಡಳು.

"ಕೇಳಿ ನೋಡ್ತೀನಮ್ಮ... ಕೂತಿರು..."

ಸಾವಿತ್ರಿ ಅಲ್ಲೆ ಆ ಬೆಂಚಿನ ಮೇಲೆ ಕುಳಿತಳು.

ಅರ್ಧ ಗಂಟೆ ಕಳೆಯಿತು, ಒಂದು ಗಂಟೆ ಕಳೆಯಿತು. ಯಾರೂ ಅವಳನ್ನು ಮಾತನಾಡಿಸಲೂ ಇಲ್ಲ, ಒಳಗೆ ಕರೆಯಲೂ ಇಲ್ಲ.

'ಎದ್ದು ಹೊರಟುಹೋಗೋಣ' ಎನ್ನುವಷ್ಟು ಜಿಗುಪ್ಸೆ ಮೂಡಿದರೂ, ತಾಯಿಯ ಆಸಂಕಟ, ತಂದೆಯ ಆ ದೀನ ಮುಖ, ಕಣ್ಣು ಮುಂದೆ ಭೀಕರ ನಾಟ್ಯವಾಡಿ ಅವಳನ್ನಲ್ಲಿಯೇ ಕಟ್ಟಿಹಾಕಿತು.

"ನಿಮ್ಮನ್ನ ಕರೀತಿದಾರೆ." ಕೊನೆಗೆ ಆಳು ಬಂದು ಹೇಳಿದ.

ಮೌನವಾಗಿ ಸಾವಿತ್ರಿ ಅವನನ್ನು ಹಿಂಬಾಲಿಸಿದಳು. ಅವಳ ದೇಹ ಕಂಪಿಸುತಿತ್ತು.

ಡ್ರಾಯಿಂಗ್ ರೂಮಿನಲ್ಲಿ ಕುಳಿತಿದ್ದ ತಾಯಿ ಮಗಳು ಬೇಕೆಂದು ಬಹು ಹೊತ್ತು ಅವಳ ಕಡೆ ತಿರುಗಿ ಸಹ ನೋಡಲಿಲ್ಲ. ತಮ್ಮದೇ ಆದ ಸಂಭಾಷಣೆಯಲ್ಲಿ ತೊಡಗಿದ್ದರು.

ಕೊನೆಗೆ ಸರಿಯಾಗಿ ಒಂದು ಯುಗ ಎಂದು



"ಸರಕಾರದ ವಿರುದ್ಧ ಜನರನ್ನು ಎತ್ತಿ ಕಟ್ಟು ಅಂದರೆ ಹೀಗಾ ಮಾಡೋದು!"

ಸಾವಿತ್ರಿಗೆ ಅನ್ನಿಸಿದ ಮೇಲೆ, ತಾಯಿ ತಲೆಯನ್ನು ಹಾಲಿ, ದರ್ಪದಿಂದ ಪ್ರಶ್ನಿಸಿದರು—"ಏನು ಬೇಕು?"

"ನಾ…ನಾನು…ನಾನು" ಸಾವಿತ್ರಿ ತೊದಲಿದಳು—"ನಂದು ತಪ್ಪಾಯ್ತು, ಬಹಳ ತಪ್ಪಾಯ್ತು ದಯವಿಟ್ಟು ಕ್ಷಮಿಸಿ,…"

"ಓ…" ಆಕೆ ಅಟ್ಟಹಾಸದಿಂದ ನಕ್ಕಳು, "ಕೊನೆಗಾದ್ರೂ ನಿಂಗೆ ಬುದ್ಧಿ ಬಂತಲ್ಲ… ಬಹಳ ಸಂತೋಷ… ಆದ್ರೆ ನಿನ್ನ ಈ ಕ್ಷಮಾಪಣೆ ಚಿಕ್ಕಮ್ಮಾವರಿಗೆ ಸಲ್ಲಬೇಕು; ಆಕೆ ಕೇಳೋ ಹಾಗಿದ್ರೆ… "

ಸಾವಿತ್ರಿಗದೊಂದು ಭೀಕರ ಘಳಿಗೆ!

"ಚಿಕ್ಕಮ್ಮಾವ್ರೇ…" ತೊದಲಿದಳು—"ನನ್ನನ್ನ ದಯಮಾಡಿಟ್ಟು ಕ್ಷಮಿಸಿ… ನಂದು ಬಹಳ ತಪ್ಪಾಯ್ತು. ನಾನು ಹಾಗೆ ಮಾಡಬಾರ್ದಿತ್ತು…"

ಮುಂದಕ್ಕೆ ಹೇಳಲಾಗಲಿಲ್ಲ.

ಶ್ರೀಮಾದೇವಿಯ ಮುಖದ ಮೇಲೆ ವಿಜಯದ ನಗೆ ನರ್ತಿಸಿತು. ಧೂಳನ್ನು ನೋಡಿ ಕೊಡಹುವಂತೆ ಸಾವಿತ್ರಿಯನ್ನು ಒಂದು ಬಾರಿ ಅಸಡ್ಡೆಯಿಂದ [illegible] ತಾಯಿಯ ಪಕ್ಕ ತಿರುಗಿ ನುಡಿದಳು—"ಮೊದಲು ಈ ದರಿದ್ರನನ್ನ ಹೊರಗೆ ಕಳಿಸಮ್ಮ."

ಸಾವಿತ್ರಿಯ ತಲೆಗೆ ರಕ್ತವೇರಿತು. ತನ್ನ ತುಟಿಗಳವರೆಗೂ ಬಂದಿದ್ದ ಮಾತಿನ ರಭಸವನ್ನು ಅದು ಹೇಗೆ ತಾನೆ ತಡೆದುಕೊಂಡಳೊ!

"ನೀನಿನ್ನು ಹೊಗಬಹುದು."

ಅಬ್ಬಾ, ಈ ಶ್ರೀಮಂತ ಜೋರೇ!

"ಹಾಗಾದ್ರೆ…" ತಡೆಯದೆ ಕೇಳಿಕೊಂಡಳು, "ನನ್ನ ತಂದೆತಾಯೀನ ಆ ಮನೆಯಿಂದ ಕಳಿಸೋದಿಲ್ಲ ತಾನೆ? ಇಲ್ಲೇ ಇರಬಹುದುತಾನೆ?"

"ನಿಂಗ್ಯಾಕೆ ಆ ಸುದ್ದಿ? ಮೊದಲು ನೀನು ನಿನ್ನೂರಿಗೆ ಹೊರಡು; ಮತ್ತೆ ಬರಬೇಡ, ಏನಾದ್ರೂ ಸರಿ, ಈ ದೊಡ್ಡ ಮನೆ ಗೇಟ್ ಒಳಗೆ ಕಾಲಿಡಬಾರ್ದು ಗೊತ್ತೇ?"

ಸಾವಿತ್ರಿ ಅಲ್ಲಿಂದ ಹೇಗೆ ಹಿಂತಿರುಗಿದಳೋ, ದೇವರಿಗೇ ಗೊತ್ತು!

"ಎಲ್ಲಾ ಸರಿಹೋಯ್ತಾ?" ಹಿಂಬಾಗಿಲಲ್ಲೇ ನಿಂತಿದ್ದ ಆಳು ಕೇಳಿದನು.

ಸಾವಿತ್ರಿ ತೀವ್ರ ಅವಮಾನದಿಂದ ಹೊರಗೋಡಿದಳು, ದೂರ ಹೋಗಿ, ಮರವೊಂದನ್ನು ತಬ್ಬಿಕೊಂಡು, ಮನಬಿರಿಯುವಂತೆ ಅತ್ತಳು.

ಅಂದೇ ಅವಳು ಮನೆಯವರಾರಿಗೂ ತಿಳಿಸದೆಯೇ ತನ್ನ ಪಟ್ಟಣಕ್ಕೆ ಹೊರಟು ಹೋದಳು.

ಒಂದೆರಡು ದಿವಸಗಳಾದ ಮೇಲೆ ಗಿರಿಜೆಯಿಂದ ಅವಳಿಗೆ ಪತ್ರ ಬಂದಿತು.

"ನಮ್ಮನ್ನಿಲ್ಲೇ ಇರು— ಅಂದಿದ್ದಾರೆ, ದೊಡ್ಡಮ್ಮಾವರು, ಏನೋ ಸಿಟ್ಟು ಬಂದಿತ್ತು, ಸರಿ, ಹಾಗೆ ಸುಮ್ಮಸುಮ್ಮನೆ ಹೆದರಿಸಿದರು ಅಂತ ಕಾಣತ್ತೆ, ಈಗೆಲ್ಲ ಸರಿಹೋಯ್ತು. ದೇವರ ದಯ, ತುಂಬಾ ಒಳ್ಳೇಯವರು—ನಮ್ಮ ದೊಡ್ಡಮ್ಮಾವರು, ಚಿಕ್ಕಮ್ಮಾವರು…

ಸಾವಿತ್ರಿಯ ಕಣ್ಣಿನಿಂದ ಎರಡು ಹನಿಗಳು ಉದುರಿದವು. ✡

(ಒಂದು ಇಂಗ್ಲಿಷ್ ಕಥೆಯ ಆಧಾರದಿಂದ ರಚಿತ)



ಮುಂದೆ ಹುಟ್ಟುವ ಪ್ರತಿಭಾಶಾಲಿಗಳೆಲ್ಲ 'ರೊಡ್ಡಗೈ'ಯವರಾಗಿರುತ್ತಾರೆಂದು ಕೆಲವು ವಿಜ್ಞಾನಿಗಳ ಅಭಿಪ್ರಾಯ. ಎಡಗೈಯಿಂದ ಕೆಲಸ ಮಾಡುವವರೆಲ್ಲ ಬಹುತೇಕವಾಗಿ ಪ್ರತಿಭಾವಂತರೆಂಬುದು ಈ ವಿಜ್ಞಾನಿಗಳ ತರ್ಕ. ಈ ರೊಡ್ಡರಲ್ಲಿ ರಚನಾತ್ಮಕತೆ, ವಿಚಾರಶೀಲತೆ ಹೆಚ್ಚಂತೆ. ಪೂರ್ವ ಜರ್ಮನಿಯ ಜೀವ ವಿಜ್ಞಾನಿಗಳು ಇದನ್ನು ಸಿದ್ಧಪಡಿಸಿದ್ದಾರಲ್ಲದೇ ಈ ದಿಶೆಯಲ್ಲಿ ಸಂಶೋಧನೆ ನಡೆಸಿದ್ದಾರೆ.

ಆಂಧ್ರಪ್ರದೇಶದ ಪಕ್ಷಿಪುರಾಣ

ಭೂಗರ್ಭಶಾಸ್ತ್ರ ಇಲಾಖೆಯ ಪಳೆಯುಳಿಕೆಗಳ ತಜ್ಞ ಶ್ರೀ ಯಾದಗಿರಿಯವರ ಆಕಸ್ಮಿಕ ಶೋಧದಿಂದಾಗಿ ಆಂಧ್ರಪ್ರದೇಶದ ಮುಕ್ಕಳಪೇಟೆಯೆಂಬ ಹೆಸರಿಲ್ಲದ ಹಳ್ಳಿ ಇದೀಗ ಹೆಸರಿಗೆ ಬಂದಿದೆ.

ಅದು ನಡೆದದ್ದು ಹೀಗೆ: ಕಶೇರುಕ ಪ್ರಾಣಿವರ್ಗಕ್ಕೆ ಸೇರಿದ ತಲೆಬುರುಡೆಯ ಪಳೆಯುಳಿಕೆಯೊಂದು ಆಕಸ್ಮಾತ್ತಾಗಿ ಯಾದಗಿರಿಯವರ ಕೈಗೆ ಸಿಕ್ಕಿದಾಗ ಅದು ಪಕ್ಷಿಯೊಂದರ ಅವಶೇಷವೆಂದು ಅವರಿಗೆ ಅನಿಸಲೇ ಇಲ್ಲ. ಆದರೆ ಅದನ್ನು ವಿವರವಾಗಿ ಪರಿಶೀಲಿಸಿದಾಗ ಅದು ಪಕ್ಷಿಯೊಂದರ ತಲೆಬುರುಡೆಯೆಂಬುದು ಗೊತ್ತಾಯಿತು. ಅದರ ಈ ಪಕ್ಷಿ ಸುಮಾರು ಹದಿನೆಂಟು ಕೋಟಿ ವರ್ಷಗಳ ಹಿಂದೆಯೆ ಜೀವಿಸಿತ್ತು ಎಂಬ ಮಹತ್ವದ್ದಾದ ವಿಷಯ ಅದರೊಟ್ಟಿಗೇ ಹೊರಬಿತ್ತು. ೧೮೬೧ ರಲ್ಲಿ ಬವೇರಿಯದಲ್ಲಿ ಹದಿನೈದು ಕೋಟಿ ವರ್ಷಗಳಷ್ಟು ಹಳೆಯದಾದ ಪಕ್ಷಿಯೊಂದರ ಅವಶೇಷವೇ ಪಕ್ಷಿಕುಲದ ಅತಿ ಹಳೆಯದಾದ ಅವಶೇಷವೆಂದು ಈ ವರೆಗೆ ಭಾವಿಸಲಾಗುತ್ತಿತ್ತು. ಆದರೆ ಈಗ ಮುಕ್ಕಳಪೇಟೆಯಲ್ಲಿ ಸಿಕ್ಕ ಅವಶೇಷ ಈ ದಾಖಲೆಯನ್ನು ಮುರಿದಿದೆ.

ಆ ಸ್ಥಳವನ್ನು ವಿವರವಾಗಿ ಪರಿಶೀಲಿಸಿದಾಗ ಆ ಪಕ್ಷಿ ಜಾತಿಗೆ ಸೇರಿದ ಕವಲು ಮೂಳೆ, ಪಕ್ಕೆಲವು ಹಾಗೂ ಗರಿಗಳದ್ದು ಪಳೆಯುಳಿಕೆಗಳೂ ದೊರೆತವು. ಅರ್ಥಾತ್ ಬವೇರಿಯದ ಪಕ್ಷಿಗಿಂತ ಈ ಪಕ್ಷಿಕುಲ ಹೆಚ್ಚು ವಿಕಾಸಗೊಂಡಿತ್ತು. ಇದು ಪಕ್ಷಿಕುಲ ವಿಕಾಸಗೊಂಡ ಕಾಲವನ್ನು ಇನ್ನೂ ೩ ಕೋಟಿ ವರ್ಷಗಳಷ್ಟು ಹಿಂದೆ ತಳ್ಳುತ್ತದೆ. ಬವೇರಿಯದಲ್ಲಿ ದೊರೆತ ಪಕ್ಷಿ ತಲೆಯಿಂದ ಬಾಲದವರೆಗೆ ೧೫ ಸೆಂಟಿಮೀಟರುಗಳಷ್ಟು ಉದ್ದವಾಗಿದ್ದರೆ ಆಂಧ್ರಪ್ರದೇಶದಲ್ಲಿ ದೊರೆತ ಪಕ್ಷಿಯ ತಲೆಬುರುಡೆಯೊಂದೆ ೧೭ ಸೆಂಟಿಮೀಟರುಗಳಷ್ಟು ಉದ್ದವಾಗಿದೆ.

ವಿಕಾಸವಾದದ ಅಧ್ವರ್ಯುವಾದ ಡಾರ್ವಿನ್ನನಿಗೆ ಸರೀಸೃಪಗಳು ವಿಕಾಸಗೊಂಡು ಪಕ್ಷಿಕುಲ ಹೇಗೆ ಉದ್ಭವಿಸಿತೆಂಬುದಕ್ಕೆ ಆಧಾರಗಳು ದೊರೆಯಲಿಲ್ಲ. ಈ ಅವಶೇಷಗಳು ಆ ಕಳಚಿಹೋದ ಕೊಂಡಿಯನ್ನು ಪ್ರತಿನಿಧಿಸುತ್ತವೆಯೆ? ಖಂಡಿತವಾಗಿಯೂ ಇಲ್ಲ. ಆದರೆ 'ಕಳಚಿಹೋದ ಕೊಂಡಿ' ಇಲ್ಲಿ ದೊರೆಯುವದೆಂಬ ಅದಮ್ಯ ಆಶೆಯಿಂದ ವಿಜ್ಞಾನಿಗಳೀಗ ಉತ್ಖನನವನ್ನು ಕೈಗೊಂಡಿದ್ದಾರೆ. ಅವರ ಆಶೆ ಆಶೆಯಾಗಿಯೆ ಉಳಿಯಬಹುದು. ಹಾಗಾದರೂ ಸರಿ, ಕೊನೆಗೆ ಪಕ್ಷಿಕುಲ ಹೇಗೆ ವಿಕಾಸಗೊಂಡಿತೆನ್ನುವುದಾದರೂ ತಿಳಿಯುತ್ತದೆ ಎನ್ನುತ್ತಾರೆ ಈ ವಿಜ್ಞಾನಿಗಳು. ಅದಕ್ಕಾಗಿಯೇ ಈ ಹಳ್ಳಿಗೆ ಈಗ ಅಷ್ಟು ಮಹತ್ವ.

ಎಂ. ಆರ್. ಎಸ್.



"ಇತ್ತೀತ್ತಲಾಗಿ ತಿಂದ ಕೂಳು ಇದ್ದಲ್ಲೇ ಇರತೈತಿ. ತುತ್ತು ಬಾಯಿಗೆ ಓವರ ಮಾರಿ ಪ್ಯಾತಿ ಬಡದಾಂಗ ಆಗತೈತರಿ. ಹಾ ಹಾ... ಅಂತೈತರಿ. ನಿಮಗ ತೋರಿಸಬೇಕಂತ ಬಂದೇನ್ರಿ. ಕಾಳಜಿ ತುಗೊಂಡು ಮಾಡರಿ." ಎಂದಳು ಹಣಮಂತಿ.

ಹಣಮಂತಿ ನನಗೆ ಅಪರಿಚಿತಳೇನೂ ಅಲ್ಲ; ಹಾಗೆಂದು ತೀರ ಪರಿಚಿತಳೂ ಅಲ್ಲ. ಆಗೊಮ್ಮೆ ಈಗೊಮ್ಮೆ ನನ್ನ ಕಡೆಗೆ ಉಪಚಾರಕ್ಕೆ ಬರುವದಿತ್ತು. ಹುಡುಗರಿಗಾಗಿಯೋ ತನಗೋ ಯಾವಾಗಲಾದರೊಮ್ಮೆ ಔಷಧೋಪಚಾರಕ್ಕೆಂದು ಬರುತ್ತಿದ್ದಳು.

ಮುಖ್ಯವಾಗಿ ನನಗೆ ಅವಳಿಗಿಂತ ಅವಳ ಗಂಡನಲ್ಲಿ ಹೆಚ್ಚು ಆಸಕ್ತಿ. ನನ್ನ ಬಾಲ್ಯದಲ್ಲಿ ಆತ ಪ್ರಸಿದ್ಧ ನಾಟಿ ವೈದ್ಯನಾಗಿದ್ದುದು ಇನ್ನೂ ನನಗೆ ನೆನಪಿನಲ್ಲಿದೆ. ಪ್ರತಿ ಬುಧವಾರ, ರವಿವಾರ ಆತನ ಉಪಚಾರದ ದಿನಗಳು ಅಥವಾ ಕನ್‌ಸಲ್ಟೇಶನ್ ದಿನಗಳು. ಕನ್‌ಸಲ್ಟೇಶನ್ ಫೀಜು ಇಲ್ಲ, ಪರೀಕ್ಷಾ ಫೀ ಇಲ್ಲ, ಎಕ್ಸ್‌ರೇ ಇಲ್ಲ, ಪೆಥಾಲಾಜಿಕಲ್ ಟೆಸ್ಟ್ ಇಲ್ಲ. ನಾಡಿಯನ್ನು ನೋಡಿದವನೇ ರೋಗದ ಲಕ್ಷಣಗಳನ್ನು ಒಂದೇ ಸಮನೆ ಹೇಳತೊಡಗಿದನೆಂದರೆ ಎಂಥವರೂ ದಂಗು ಬಡಿದು ಹೋಗಬೇಕು. ಕೊಡುತ್ತಿದ್ದ ಉಪಚಾರ ೧೪ ದಿನ, ೨೧ ದಿನ, ೪೨ ದಿನ ಹೀಗೆ. ಪಥ್ಯ ಕಠಿಣತಮವಾದದ್ದು. ಕೇವಲ ದುಗ್ಧಾಹಾರ. ನೀರನ್ನು ಕೈಯಿಂದ ಮುಟ್ಟಲು ಕೂಡದು. ಸ್ತ್ರೀಸ್ಪರ್ಶ ವರ್ಜ್ಯ; ಸಂಗದ ಮಾತು



ನಿರ್ಣಾಯಕ

ಡಾ. ವಿಷ್ಣು ಶರ್ಮ ವನಹಳ್ಳಿ

ದೂರವೇ ಉಳಿಯಿತು. ಕುಂಬಳ ಕಾಯಿ, ಹಸಿ ಮೆಣಸಿನ ಕಾಯಿ, ಬದನೇ ಕಾಯಿ ಮುಂತಾದ ವಾತ ಪದಾರ್ಥಗಳು ನಿಷಿದ್ಧ. 'ಗಿಣ್ಣವನ್ನು ತಿಂದರೆ ನುಣ್ಣಗಾದೀರಿ' ಎಂದು ಮೊದಲೇ ಎಚ್ಚರಿಸುತ್ತಿದ್ದ. ಆದ್ದರಿಂದ ಆತನ ಔಷಧಿಯ ಬಗ್ಗೆ ನಮ್ಮ ಮಾಮಲೇದಾರರಾಗಿದ್ದ ಪರುಳೇಕರ ಅವರು ಒಂದು ಗಾದೆಯನ್ನೇ ತಯಾರಿಸಿ ಜನಪ್ರಿಯಗೊಳಿಸಿದ್ದರು. "ಭೀಮರಾಯಾಚಿ ಮಾತ್ರಾ ಸ್ವರ್ಗಾಚಿ ಯಾತ್ರಾ" (ಭೀಮರಾಯನ ಮಾತ್ರೆ–ಸ್ವರ್ಗದ ಯಾತ್ರೆ) ಎಂದು. ಆದರೂ ಬುಧವಾರ ಹಾಗೂ ರವಿವಾರಗಳಲ್ಲಿ ಆತನ ಮನೆ ಪೂರ್ತಿ ಭರ್ತಿಯಾಗಿರುತ್ತಿತ್ತು. ಯಾರಿಗೆ ಯಾರೋ ಪ್ರಚಾರ ಮಾಡುತ್ತಿದ್ದರು. ಎಲ್ಲಿಂದಲೋ ರೋಗಿಗಳು ಬರುತ್ತಿದ್ದರು. ಆತ ಹಣ ಕೇಳುತ್ತಿರಲಿಲ್ಲವಾದ್ದರಿಂದ ರೋಗಿಗಳೇ ತಮಗೆ ತಿಳಿದಷ್ಟು ಇಟ್ಟು ಹೋಗಬೇಕು. ಹೀಗಾಗಿ ಆತನ ಕೆಲಸ ನಿರಂತರವಾಗಿ ಸಾಗಿಯೇ ಇತ್ತು. ಹೀಗಿದ್ದ ಮನುಷ್ಯ ಒಮ್ಮೆಲೆ ಔಷಧೋಪಚಾರ ನಿಲ್ಲಿಸಿಬಿಟ್ಟ. ಜನರನ್ನು ಭೆಟ್ಟಿಯಾಗುವುದನ್ನೂ ನಿಲ್ಲಿಸಿದ. ಓಡಾಟವನ್ನೂ ನಿಲ್ಲಿಸಿದ. ಮೂಲದಲ್ಲೇ ವಾಸ್ತವ್ಯ ಮಾಡುತ್ತಿದ್ದ. ಆತನಿಗೆ ಚರ್ಮವ್ಯಾಧಿ ಎಲ್ಲಮ್ಮನ ಹೂವಿನ ರೂಪದಲ್ಲಿ ಆರಂಭವಾಗಿ ಶರೀರದ ತುಂಬೆಲ್ಲಾ ವ್ಯಾಪಿಸ

ತೊಡಗಿ ಮುಖ, ಕಿವಿ, ಕೈ ಕಾಲು, ಬೆರಳುಗಳು ವಿಕಾರವಾಗಿ ಊದಿ ಮಿರಮಿರನೆ ಮಿಂಚುವ ರೂಪ ತಳೆದದ್ದು, ದೊಡ್ಡ ರೋಗದ ಆಕಾರ ಪಡೆಯುತ್ತಿದೆ ಎಂಬ ಸುದ್ದಿ ಕರ್ಣೋಪಕರ್ಣವಾಗಿ ಹಬ್ಬಿತ್ತು. ಮೊದಲು ವದಂತಿಯಾದದ್ದು ಮುಂದೆ ಅಧಿಕೃತ ಸುದ್ದಿಯಾಗಿತ್ತು. ಮುಂದೆ ನಾಲ್ಕಾರು ವರುಷಗಳಲ್ಲಿ ಭೀಮರಾಯ ಪಂಚಭೂತಗಳಲ್ಲಿ ಲೀನವಾಗಿದ್ದ. ಮೂವರು ಮಕ್ಕಳು ಹಾಗೂ ಆತನ ಹೆಂಡತಿ ಹಣಮಂತಿ ಹಿಂದೆ ಉಳಿದಿದ್ದರು.

"ಮಲಗವಾ" ಎಂದೆ ಹಣಮಂತಿಗೆ.

ಪರೀಕ್ಷಾ ಟೇಬಲ್ಲಿನ ಮೇಲೆ ಅಂಗಾತಾಗಿ ಹಣಮಂತಿ ಮಲಗಿದಳು. ಒಂದೊಂದೇ ಅಂಗಗಳನ್ನು ಪರೀಕ್ಷಿಸಿ ಹೊಟ್ಟೆಯ ಮೇಲೆ ಕೈಯಿರಿಸಿದೆ. ಎದೆ ಧಸಕ್ ಎಂದಿತು.

ಹಣಮಂತಿಯ ಗರ್ಭಾಶಯ ಕೈಗೆ ಸ್ಪಷ್ಟವಾಗಿ ಹತ್ತುತ್ತಿತ್ತು. ರೋಗದ ಬಗ್ಗೆ ಸಂಶಯವೇ ಉಳಿಯಲಿಲ್ಲ ಪದ್ಧತಿಯಂತೆ ಕಣ್ಣು, ನಾಲಿಗೆ ಉಗುರುಗಳನ್ನು ನಿರೀಕ್ಷಿಸಿದೆ. ಎದೆಯ ಬಡಿತವನ್ನು ಆಲಿಸಿದೆ. ಹಣಮಂತಿಯ ಅರುಚಿ ರೋಗ, ವಾಂತಿಯ ವಿಕಾರಕ್ಕೆ ಬೆಳೆಯುತ್ತಿರುವ ಭ್ರೂಣವೇ ಕಾರಣವಾಗಿತ್ತು.

"ಹಣಮಂತೀ" ಎಂದೆ.

"ಏನ ಕೊಡತೀರಿ ಸಾಯೇಬರ?" ಎಂದಳು.

"ಎಷ್ಟು ದಿವಸ ಆತು?"

"ಐದ ತಿಂಗಳಾ."

"ಮದ್ಲ ಯಾಕ ಬರಲಿಲ್ಲ?

"..................."

"ಈಗೇನ ಬೇಕು? ಔಷಧ ಕೊಡಲಿಕ್ಕೆ ಬರೋದಿಲ್ಲ."

"ಹ್ಯಾಂಗಾರ ಇಸಾ ಕಡೀಕ ಮಾಡ್ರಿ ಸಾಯೇಬರ."

"ದಿವಸ ಬಾಳ ಆಗಿದಾವು. ಮದಲ ಬಂದಿದ್ರ ಆಗ್ತಿತ್ತು. ಈಗ ಜೀವಕ್ಕ ಅಪಾಯ ಆಗಬಹುದು. ಹ್ಯಾಂಗ ಮಾಡೂದು?"

"ನೋಡ್ರಿ ಸಾಯೇಬರ ಏನಾರ ಮಾಡ್ರಿ. ಬಿದ್ದಷ್ಟು ರೊಕ್ಕಾ ಕೊಡತೀನಿ. ನಿಮ್ಮದೇನೂ ನಾ ಇಟಗೊಳ್ಳೂದಿಲ್ಲ."

"ರೊಕ್ಕದ ಮಾತು ಇರಲಿ. ಇದು ಸಾದಾ ರೀತೀದ ಮಾಡಲಿಕ್ಕೆ ಬರೂ ಮಾತು ಅಲ್ಲ. ಮತ್ತೊಬ್ಬ ಸ್ಪೇಶಾಲಿಸ್ಟ ಡಾಕ್ಟರನ್ನ ಕರಸಬೇಕು. ಭಾಳ ಖರ್ಚಿನ ಕೆಲಸಾ ಆದೀತು," ಎಂದೆ.

"ಬಿದ್ದಷ್ಟು ಬೀಳಲ್ರಿ. ಅಜಮಾಸ್ ಕರ್ಚು ಎಷ್ಟು ಬಂದೀತರಿ?"

"ಐನೂರು ಆರು ನೂರು ರೂಪಾಯಿ ಬಂದೀತು. ಆದರೂ ಆ ಡಾಕ್ಟರು ಒಪ್ತಾರೋ ಇಲ್ಲೋ ನಾ ಹೇಳಲಾರೆ."

"ಅಷ್ಟು ಬರತೈತೇನರಿ? ಹಾಂಗಾದರ ಅವನ್ನs ಕರಕೊಂಡು ಬರತೇನರಿ ನಾಳಿಂದ" ಎಂದಳು ಪಿಸು ಧ್ವನಿಯಲ್ಲಿ.

"ಹೆಂಗs ಆಗಲಿ" ಎಂದೆ.

"ಬರತೇನ್ರೆಪ್ಪ" ಎಂದು ಹಣಮಂತಿ ಹೊರಗೆ ನಡೆದಳು.

ನಾನು ಗರ್ಭಪಾತದ ವಿರೋಧಿ. ಇತ್ತೀಚೆಗೆ ಇದೆಲ್ಲ ಕ್ರಮಬದ್ಧವಾಗಿದ್ದರೂ ನಾನು ಭ್ರೂಣ ಹತ್ಯೆಗೆ ಸಿದ್ಧನಾಗಿರಲಿಲ್ಲ. ಅಷ್ಟೇ ಅಲ್ಲ ಅದನ್ನು ಪ್ರೋತ್ಸಾಹಿಸುತ್ತಲೂ ಇರಲಿಲ್ಲ. ಆದರೂ ಹಣಮಂತಿಯ ಬಗ್ಗೆ ನನಗೆ ಕನಿಕರ ಮೂಡತೊಡಗಿತ್ತು. ಪರಿಸ್ಥಿತಿ ಕೈ ಮೀರಿತ್ತು. ಸುಲಭದಲ್ಲಿ ಗರ್ಭಪಾತವಾಗುವ ಸ್ಥಿತಿ ಇರಲಿಲ್ಲ. ಏನಾದರಾಗಲಿ ನಾಳೆ 'ಆ ಮನುಷ್ಯ' ಬರುತ್ತಾನೆ. ನೋಡಿದರಾಯಿತು, ಎಂದೆ. ಬೇಡವೆಂದರೂ ಆ ಮನುಷ್ಯ ಯಾರಿದ್ದಾನು ಎಂದು ಮನಸ್ಸು ಚಿಂತಿಸತೊಡಗಿತು.

*

ಮಾರನೆಯ ದಿನ ಹಣಮಂತಿಯೊಂದಿಗೆ 'ಆ ಮನುಷ್ಯ' ಹಾಜರಾಗಿದ್ದ. ಜನರಿಗೆ ಸಂಶಯ ಬಂದೀತೆಂದು ಮೊದಲು ಆತ ಬಂದಿದ್ದ. ಅರ್ಧ ಗಂಟೆಯ ನಂತರ ಹಣಮಂತಿ ಆಗಮಿಸಿದ್ದಳು. ನಾನು ಆತನನ್ನು ಕರೆದೆ.

"ಏನ್ರಿ ಸಾಯೇಬರ?"

"ಏನಪಾ?"

"ಏನ ಮಾಡಬೇಕಂತೀರಿ? ಎಷ್ಟು ಕರ್ಚು ಬರತೈತಿ?"

"ಮಾಡಾವ ನಾ ಅಲ್ಲಾ... ಇನೊಬ ರು... ಖರ್ಚಿನ ಕೆಲಸ. ಐನೂರು ಆರುನೂರು

ರೂಪಾಯಿ ಬಂದೀತು. ಏನಂತೀ?"

ಆತನ ಮುಖ ಕಪ್ಪಿಟ್ಟಿತು. ಅಷ್ಟೊಂದು ಹಣ ಹೊಂದಿಸುವದು ಆತನಿಗೆ ತೊಂದರೆಯ ದೆನ್ನಿಸಿರಬೇಕು.

"ಅಷ್ಟು ಬರತೈತ್ರ್ಯಾ? ನನಗೆ ಗೊತ್ತಿರಲಿಲ್ಲ. ಏನೋ ಸ್ವಲ್ಪದರಾಗ ಆಗತೈತಿ ಅಂತ ತಿಳದಿದ್ದೆ. ವಿಚಾರ ಮಾಡೂಣ್ರಿ" ಎಂದು ಇನ್ನೂ ಸ್ವಲ್ಪ ಮುಂದಕ್ಕೆ ಬಾಗಿ ಪಿಸು ಧ್ವನಿಯಲ್ಲಿ, "ಸಾಯೇಬರ, ಇದು ನಂದಲ್ರಿ" ಅಂದ.

"ಹಂಗಾದರ ಯಾರದು?"

"............"

ಮೂರು ನಾಲ್ಕು ನಿಮಿಷಗಳು ಮೌನವಾಗಿ ಕಳೆದ ಬಳಿಕ ನಾನೇ ಮಾತು ಮುಗಿಸುತ್ತಾ, "ವಿಚಾರ ಮಾಡು—ನಂತರ ತಿಳಿಸು"ಎಂದು ಆತನನ್ನು ಹೊರಗೆ ಕಳುಹಿಸಿದೆ.

ಸ್ವಲ್ಪ ಸಮಯದಲ್ಲೇ ಹಣಮಂತಿ ಒಳಗೆ ಬಂದವಳೇ,

"ಏನಾತರಿ ಸಾಯೇಬ್ರ? ಏನಂದ?" ಎಂದಳು.

"ಅಷ್ಟು ಕರ್ಚಿಗೆ ಆತ ತಯಾರಿದ್ದಾಂಗಿಲ್ಲ. ಇಷ್ಟು ಜುಲಮಿಂದ ನಾನೂ ಈ ಜವಾಬ್ದಾರಿ ಹೊರಲಿಕ್ಕೆ ತಯಾರ ಇಲ್ಲ" ಎಂದೆ. ಮುಂದುವರೆದ ಗರ್ಭಾವಸ್ಥೆಯಲ್ಲಿ ಗರ್ಭಪಾತದ ದುಷ್ಪರಿಣಾಮಗಳನ್ನು ಕುರಿತು ನನ್ನ ಮನಸ್ಸು ಚಿಂತಿಸುತ್ತಿತ್ತು. ಇದಕ್ಕೂ ಹೆಚ್ಚಾಗಿ ಪಾಪ ಪ್ರಜ್ಞೆ ಮನಸ್ಸನ್ನು ಕಾಡತೊಡಗಿತ್ತು. ಎದುರುಗಡೆ ಹಣಮಂತಿ ವಿಚಾರಮಗ್ನಳಾಗಿ ಕುಳಿತಿದ್ದಳು. ಸುಂದರವೇ ಎನ್ನಬಹುದಾದ ದುಂಡು ಮುಖ, ಎಣ್ಣೆಗೆಂಪು ಮೈ ಬಣ್ಣ, ಆರೋಗ್ಯ ಪೂರ್ಣ ಶರೀರ, ತುಂಬಿದ ತಾರುಣ್ಯ, ಹೀಗಿದ್ದಾಗ ವೈಧವ್ಯ ಆಕೆಗೆ ಕಷ್ಟದಾಯಕವಾಗಿದ್ದುದರಲ್ಲಿ ಅಸ್ವಾಭಾವಿಕವಾದುದೇನೂ ಇರಲಿಲ್ಲ. ಆದರೆ ಪ್ರಶ್ನೆ ಆಕೆಯ ಭಾವನೆಗಳ ಬಗೆಗಾಗಲಿ ದೈಹಿಕ ಮಾನಸಿಕ ಬೇಡಿಕೆಗಳ ಬಗೆಗಾಗಲಿ ಇರದೆ ಆಕೆಯ ಒಳಗಡೆ ಬೆಳೆಯುತ್ತಿದ್ದ ಭ್ರೂಣರೂಪಿ ನಿಷ್ಪಾಪಿ ಜೀವದ್ದಾಗಿತ್ತು. ಅದರ ಸಾಮಾಜಿಕ ಮನ್ನಣೆಯದಾಗಿತ್ತು.

"ಅಷ್ಟ ಅಲ್ಲ, ಅಂವಾ ಇದು ನಂದು ಅಲ್ಲಾ ಅಂತಾನ. ಹ್ಯಾಂಗ ಮಾಡತಿ ಹಣಮಂತಿ?"ಎಂದೆ.

ಹಣಮಂತಿಯ ಗಂಭೀರ ಮುಖ ಮತ್ತಿಷ್ಟೂ ಗಂಭೀರವಾಯಿತು. ಮೂರು ನಾಲ್ಕು ಕ್ಷಣಗಳುರುಳಿದ ಬಳಿಕ, "ಸಾಯೇಬರ ದೇವರ ಸಮಾ ಅಂತ ನಿಮ್ಮ ಮುಂದ ಹೇಳತೀನು. ಅಂವಾ ಏನಾರ ಅನ್ಲಿ ಇದು ಅಂವಂದs ಅಂತೀನಿ. ನಿನ್ನೆ ಪೋಲೀಸರೂ ಕರಿಸಿದ್ದರು, ನನ್ನ ಗ್ಯಾಟಿಗೆ. ಯಾರೋ ಅವರ ಕಿವೀ ಮ್ಯಾಲೆ ಹಾಕಿದ್ದರು. ಏನೇನು ಹಕೀಕತಿ ಅಂತ ಕೇಳಿದರು. ನಾನೂ ಎಲ್ಲಾ ಹೇಳೇನ್ರಿ. ಜೀಂವದ ಸುತ್ತು ಬಂದ ಮ್ಯಾಲೆ ಎಲ್ಲೀ ಮಾನ? ಎಲ್ಲೀ ಮರೇದಿ? ಹವಾಲ್ದಾರ ಸಾಯೇಬರು ಎಲ್ಲಾ ಕೇಳಿಕೊಂಡು ಇದನ್ನ ಸೈಲ ಬಿಡಬ್ಯಾಡ ಅಂತ ಹೇಳ್ಯಾರ್ರಿ. ಕಡೀಕ ಅವರಿಗೆ ಹೇಳಿ ರೊಕ್ಕಾ ಕೊಡೂ ವೆವಸ್ತಾ ಮಾಡತೇನ್ರಿ. ಇನ್ನೂ ನೂರು ಹೆಚ್ಚು ಚಾರ್ಜ್ ಮಾಡ್ರಿ. ಅದರಾಗ ನೂರು ಆರಿಪ್ಪತ್ತು ರೂಪಾಯಿ ಕೊಡ್ರಿ—ಮೈ ಇಳದ ಮ್ಯಾಲೆ ಶಕ್ತೀ ಬರಾಕ ಬ್ಯಾಡ್ರಿ? ಇರೂ ಮಕ್ಕಳನ್ನ ಯಾರು ಜ್ವಾಪಾನ ಮಾಡಾವರು. ನೋಡ್ರಿ ಸಾಯೇಬರ ಇನ್ನೊಂದು ಮಾತು ಹೇಳತೇನು, ನಿಮ್ಮ ಹೊಟ್ಯಾಗ ಇರಲ್ರಿ; ಈಗ ಇರೂ ಮಕ್ಕಳು ಅದಾವ್ರ ನೋಡ್ರಿ—ಅವು ನನ್ನ ಗಂಡನ್ನೂ ಅಲ್ರಿ."

"ಮತ್ತ ಯಾರವು?"

"ನೋಡ್ರಿ ನನ್ನ ಗಂಡಗ ರೋಗ ಮದ್ಲಿಂದ ಇತ್ರಿ—ಹಿಂಗಾಗಿ ನಾ ದೂರ ಇದ್ದನ್ರಿ. ನಮ್ಮ ವೈದ್ಯನ ಮಕ್ಕಳು ಇವೆಲ್ಲಾ. ನಿಮಗ ಭೆಟ್ಟಿ ಆಗಿದ್ನಲ್ರಿ ಅವನ್ನೂ."

"ನಿನ್ನ ಗಂಡಗ ಗೊತ್ತಿದ್ದಿಲ್ಲೇನು ಇದು?"

"ಇರದ ಏನ ಮಾಡೀತರಿ, ಇತ್ತು. ಅಂವಗ ಹಿಂತಾ ರೋಗ ಗಂಟು ಬಿದ್ದ ಮ್ಯಾಲೆ ಸುಮ್ಮನ ಇದ್ದ. ಇಷ್ಟು ದಿನಾ ಅಂವಾ ಇದ್ದಾಗಿನ ಮಾತು ಆದದ್ದು ಆಗಿ ಹೋತು. ಈಗಿನ ಪರಸಂಗದಾಗ ಸುಮ್ಮನ ಇರಾಕ ಹ್ಯಾಂಗ ಬಂದೀತರಿ? ಏನ ಮಾಡೂದು ಮಾಡ್ರಿ. ಬೇಸ್ತವಾರ ಇಸಾ ಕಡೀಕ ಮಾಡ್ರಿ. ರೊಕ್ಕಾ ನಾ ತುಗೊಂಡು ಬರತೇನ್ರಿ" ಎಂದು ಬೀಳ್ಕೊಟ್ಟಳು.

ಕುಷ್ಠರೋಗಿ ಭೀಮರಾಯನ ಚಿತ್ರ ಮುಖದೆದುರು ಸುಳಿಯಿತು. ಮೊಂಡ ಮೂಗು, ಉದುರು ಬಿದ್ದ ಕಾಲು ಬೆರಳು, ವಿಕಾರವಾದ

ಮುಖ, ರಕ್ತ ತೊಟ್ಟಿಕ್ಕುತ್ತಿದ್ದ ಬೆರಳು ಗಾಯ ವೈದ್ಯಕೀಯವಾಗಿ ಭೀಕರವಾಗಿರದಿದ್ದರೂ ಜನಸಾಮಾನ್ಯರಿಗೆ ಭೀತಿ ಹುಟ್ಟಿಸುವಂತಿದ್ದ ಭೀಮರಾಯ ಆಸ್ಪತ್ರೆಗೆ ಹೋಗದೆ ಹೊಲದ ಬದುವಿನಲ್ಲಿ ಮಲಗಿ ನರಳುತ್ತಿದ್ದ. ಇಂಥ ವನನ್ನು ಸಾಯುವವರೆಗೆ ಆಸಕ್ತಿಯಿಂದ ಜೋಪಾನ ಮಾಡಿದ ಹಣಮಂತಿಯ ಬಗ್ಗೆ ನನಗೆ ಅಭಿಮಾನ ವೆನ್ನಿಸಿತು. ದೇಹಧರ್ಮ ಯಾರಿಗೆ ಬಿಟ್ಟಿಲ್ಲ? ಅಲ್ಲದೆ ಪ್ರಾಮಾಣಿಕತೆಯಿಂದ ಇದ್ದುದನ್ನು ಒಪ್ಪಿಕೊಳ್ಳುವ ಗತ್ತಿನಿಂದ ಮತ್ತೂ ಆಕರ್ಷಕ ವೆನ್ನಿಸಿತು. ಏನೇ ಇದ್ದರೂ ಈ ಪ್ರಸಂಗದಲ್ಲಿ ಆಕೆಯ ಕೈಹಿಡಿಯುವುದು ಸರಿಯೆಂದೆನ್ನಿಸಿತು. ನೂರಿನ್ನೂರು ರೂಪಾಯಿ ಕಡಿಮೆ ಕೊಟ್ಟರೂ ಸರಿ ಗರ್ಭಪಾತ ಮಾಡಿಸಿ ಬಿಡಬೇಕು. ಅದರಿಂದ ಅನೇಕ ನೋವಿನ ಅಹಿತಕರ ಪ್ರಸಂಗಗಳು ದೂರವಾಗಿ, ಹಣಮಂತಿ ನಿಶ್ಚಿಂತಳಾಗಿ ಈಗಿರುವ ಪರಿಸರದಲ್ಲೇ ಬದುಕಿ ಉಳಿಯುವಳು. ಬರುವ ಗುರುವಾರ ಆಕೆಯ ಸೂಚನೆಯಂತೆ ಗರ್ಭಪಾತ ಮಾಡುವ ಏರ್ಪಾಡು ಮಾಡಲು ಸಿಸ್ಟರ್ ಮಾರ್ಥಾಗೆ ತಿಳಿಸಿದೆ.

ಗುರುವಾರ ಬಂದು ಸಂಜೆ ಮುಗಿಯಿತು. ಹಣಮಂತಿಯ ಪ್ರತೀಕ್ಷೆಯಲ್ಲೇ ಕಾಯುತ್ತಿದ್ದೆ. ನಿರೀಕ್ಷಿಸಿದಂತೆ ಆಕೆ ಬಂದೇಬಿಟ್ಟಳು. ನಾನು ಹೇಳಿದೆ:

"ಹಣಮಂತಿ, ನಿನ್ನ ಸಲುವಾಗಿ ನಿರ್ಣಯ ತುಗೊಂಡು ತಯಾರಿ ಮಾಡೀನಿ. ನಾ ಇಂಥಾದ್ದ ಮಾಡೂದುಲ್ಲ. ಆದರೂ ಇದೊಮ್ಮೆ ಮಾಡಿ ಬಿಡೂದು ಅಂತ ತಯಾರಿ ಮಾಡೀನಿ. ನೂರಿನ್ನೂರು ಕಡಿಮೆ ಕೊಟ್ಟರೂ ಚಿಂತಿಲ್ಲ..."

ಇನ್ನೂ ಹೇಳುತ್ತಿದ್ದಂತೆಯೇ ಹಣಮಂತಿ ನಡುವೆ ಬಾಯಿ ಹಾಕಿ, "ಇಲ್ರಿ ಡಾಕ್ಟ್ರ ಸಾಹೇಬ್ರ" ಎಂದು ಆಕ್ಷೇಪಿಸಿದಳು.

"ಹಾಗಾ ನಾನ ರೊಕ್ಕಾ ಕೊಡೂದು ಬ್ಯಾಡ್ರಿ— ನಾ ನನ್ನ ಕೂಸು ಕೊಲ್ಲೂದೂ ಬ್ಯಾಡ್ರಿ—ಹ್ಯಾಂಗಾದರೂ ನನ್ನ ಎಲ್ಲಾ ಮಕ್ಕಳು ನನ್ನ ಗಂಡನ್ನೂ ಅಪ್ರಿ—ತೊಯ್ದುಕೊಂಡ ಮ್ಯಾಲೆ ಮತ್ತ ಅಂಜಿಕಿ ಯಾಕ್ರಿ? ಹನ್ನೊಂದ ಆದಮ್ಯಾಲೆ ಇನ್ನೊಂದ— ಕೇನ್ರಿ— ಅದs ರೊಕ್ಕ ನನ್ನ ಮಕ್ಕಳಿಗೆ ಅರಿವಿ ಅಂಚಡಿಗೆ ಆದೀತ. ನಿಮಗ ಹೇಳೂನ ಅಂತ ಬಂದೆರಿ" ಎಂದಳು.

ನಾನು ದಿಗ್ಮೂಢನಾಗಿ, "ಹಾಗಾದರೆ ನಿನ್ನ ಕಡೀ ನಿರ್ಣಯಾ ಏನು?" ಎಂದೆ.

"ಹೌದರಿ" ಎನ್ನುತ್ತ ಹೊರಗೆ ನಡೆದಳು ಹಣಮಂತಿ. ✡

ಕೆಲವರು ಏನು ಮಾಡಿದರೂ, ಮಾಡಿಕೊಂಡರೂ ಲಾಭದಾಯಕವಾಗೆ ಮುನ್ನಡೆಯುತ್ತಾರೆ. ಅಂಥ ಅದೃಷ್ಟಶಾಲಿಗಳಲ್ಲೊಬ್ಬ ಫರ್ನಾಂಡೇಲ್. ಆತ ಅಮೇರಿಕದ ಶ್ರೇಷ್ಠ ಹಾಸ್ಯಗಾರ. ಒಮ್ಮೆ ಆತನ ಎಡದವಡೆ ಹಲ್ಲೊಂದು ಬಹಳ ನೋಯಲಾರಂಭಿಸಿತು. ದಂತವೈದ್ಯರ ಬಳಿ ಹೋದ. ಆತ ಪರೀಕ್ಷಿಸಿ ಹಲ್ಲು ಕಿತ್ತಿ ಆ ಜಾಗಕ್ಕೆ ಬೆಳ್ಳಿ ತುಂಬಿದ. ಹಾಗೇ ಹಾಸ್ಯ ಚಟಾಕಿಗಳನ್ನು ಹಾರಿಸುತ್ತ ಫರ್ನಾಂಡೇಲ್ ಮನೆಗೆ ಬಂದುಬಿಟ್ಟ. ಕೆಲ ದಿನಗಳ ನಂತರ ಆತನ ಹೆಸರಿಗೊಂದು ಲಕೋಟೆ ಬಂತು; ಒಡೆದ. ಪತ್ರವೊಂದಿತ್ತು. "ಪ್ರಿಯ ಫರ್ನಾಂಡೇಲ್, ನೀವು ಬಿಲ್ಲು ಕೊಡದೇ ಹಾಗೇ ಹೋದರೂ ನಾನು ಅರ್ಧ ಬಿಲ್ಲು ವಸೂಲು ಮಾಡಿದ್ದೇನೆ. ನಿಮ್ಮ ಹಲ್ಲನ್ನು ನಿಮ್ಮ ಪ್ರೇಮಿಯೊಬ್ಬನಿಗೆ ಮಾರಿದ್ದೇನೆ. ಅದರಿಂದ ಬಂದ ಹಣ ನನ್ನ ಬಿಲ್ಲಿನ ಅರ್ಧ ಹಣಕ್ಕೆ ಸಮವಾಯಿತು. ಉಳಿದದ್ದರ ಬಗ್ಗೆ ಈ ಪತ್ರ. ಬೇಗ ಚುಕ್ತಾಮಾಡಿ. ನಿಮ್ಮ ವಿಶ್ವಾಸಿ-" ಫರ್ನಾಂಡೇಲ್ ಮತ್ತೊಂದು ಹಲ್ಲು ನೋಯುತ್ತಿದೆಯೆಂದು ದಂತವೈದ್ಯನ ಬಳಿ ಹೋದ.

ಇದುವೆ ಜೀವ ಇದು ಜೀವನ

ನಮ್ಮ ಪರಿಚಿತರಲ್ಲಿ ಕೃ. ಮೂ. ಭಾರತ ಸರಕಾರದ ಪ್ರಥಮ ದರ್ಜೆಯ ಅಧಿಕಾರಿಗಳು. ಪ್ರಥಮ ದರ್ಜೆಯ ಅಧಿಕಾರಿಯೆಂದರೆ ಮಾನವ ಜಾತಿಯ ಒಂದು ವಿಶಿಷ್ಟ ವರ್ಗದ ವ್ಯಕ್ತಿ ಎನ್ನುವುದು ಅವರ ಅಭಿಮತ. ಕನ್ನಡಿಗರ ಸೌಜನ್ಯ ಲೋಕವಿದಿತ. ಆದರೆ ಕೃ. ಮೂ. ಇದರಿಂದ ಹೊರತಾದವರು

ನವದೆಹಲಿಯಲ್ಲಿ ಸರ್ಕಾರದ ಯಾವುದೋ ಮೀಟಿಂಗ್‌ನಲ್ಲಿ ಭಾಗವಹಿಸಿ ವಾರಾಣಸಿಗೆ ಹಿಂದಿರುಗುತ್ತಿದ್ದರವರು. ಕೃ.ಮೂ.ರವರು ಪ್ರಯಾಣ ಮಾಡುತ್ತಿದ್ದ ಪ್ರಥಮ ದರ್ಜೆಯ ಕ್ಯಾಬಿನ್ನಿಗೆ ದೊಗಲೆ ಶರಾಯಿ ಮತ್ತು ಗುಂಡು ಉಣ್ಣೆಯ ಟೋಪಿಯನ್ನು ಧರಿಸಿದ ಮುಸಲ್ಮಾನರೊಬ್ಬರು ದೆಹಲಿ ಸ್ಟೇಷನ್ನಿನಲ್ಲಿ ಹತ್ತಿದರು. ನಾಲ್ಕಾರು ಗಂಟೆಗಳು ಕಳೆದರೂ ಕೃ. ಮೂ. ಸಹ-ಪ್ರಯಾಣಿಕನ ಕಡೆಗೆ ತಲೆ ಎತ್ತಿಯೂ ನೋಡಲಿಲ್ಲ. ಮುಸಲ್ಮಾನ ಸಹಪ್ರಯಾಣಿಕನಾದರೋ ಬಹಳ ಸೌಜನ್ಯದಿಂದ ನಾಲ್ಕಾರು ಬಾರಿ ಕೃ.ಮೂ.ರವರನ್ನು ಲೋಕಸಹಜ ಪ್ರಶ್ನೆಗಳಿಂದ ಮಾತನಾಡಿಸಲು ಪ್ರಯತ್ನಿಸಿದನು. ಆದರೆ ಕೃ. ಮೂ.ರವರ ಏಕಶಬ್ದದ ಉತ್ತರದಿಂದ ಅತ ಸುಮ್ಮನಾಗಬೇಕಾಯಿತು.

ಊಟದ ವೇಳೆಯಲ್ಲಿ ಸಹಪ್ರಯಾಣಿಕ ಕೃ. ಮೂ.ರವರು ನೋಡುತ್ತಿದ್ದಂತೆ ಹೊರಗೆ ಇಳಿದು ಪ್ಲಾಟ್‌ಫಾರಂ ಮೇಲೆ ಮಾರುತ್ತಿದ್ದ ಪೂರಿ ಮತ್ತು ಸಬ್ಜಿಯನ್ನು ತಿಂದು ಗಾಡಿಯನ್ನು ಹತ್ತಿದನು. ಕೃ.ಮೂ.ರವರಾದರೋ ಬೇರರ್‌ನಿಂದ ಸಾಂಗೋಪಾಂಗವಾದ ಊಟವನ್ನು ಟ್ರೇಯಲ್ಲಿ ತರಿಸಿಕೊಂಡು ಊಟ ಮಾಡಿದರು. ಕೃ. ಮೂ. ತಮ್ಮ ಪ್ರತಿಯೊಂದು ನಡವಳಿಕೆಯಲ್ಲೂ ತಾವೊಬ್ಬ ದೊಡ್ಡ ವ್ಯಕ್ತಿ ಎನ್ನುವುದನ್ನು ತೋರಿಸಲು ಮರೆಯಲಿಲ್ಲ

ರೈಲು ವಾರಾಣಸಿಗೆ ಸೇರಲು ಒಂದು ಗಂಟೆ ಇರುವಾಗ ಮುಸಲ್ಮಾನ್ ಸಹಪ್ರಯಾಣಿಕ ಕೃ. ಮೂ.ರವರನ್ನು ಮಾತಾಡಿಸುವ ಧೈರ್ಯ ಮಾಡಿದ. ಇವರು ಶ್ರೀಮದ್ಗಾಂಭೀರ್ಯದಿಂದ ತಾವು ಭಾರತ ಸರಕಾರದ ಹಿರಿಯ ಅಧಿಕಾರಿ ಎನ್ನುವುದನ್ನು ತಿಳಿಸುತ್ತಾ ತಮಗೆ ಏರೋಪ್ಲೇನಿನಲ್ಲಿ ಸೀಟು ದೊರೆಯದ ಕಾರಣ ಈ ರೈಲಿನಲ್ಲಿ ಪ್ರಯಾಣ ಮಾಡುವ ಅನಿಷ್ಟ ಒದಗಿತೆಂದು ಒತ್ತಿ ಹೇಳಿದರು.

ಕೊನೆಗೂ ಕೃ. ಮೂ. ಸಹಪ್ರಯಾಣಿಕನನ್ನು "ಏನು ಮಾಡುತ್ತಿರುವೆ ?" ಎಂದು ಪ್ರಶ್ನಿಸಿದರು. ಉತ್ತರವಾಗಿ ಆ ವ್ಯಕ್ತಿ, "ನಾನೊಬ್ಬ ಸಾಧಾರಣ ಸಂಗೀತಗಾರ, ಹೀಗೆಯೇ ಕಲೋಪಾಸಕರು ಕರೆಸಿಕೊಂಡಿದ್ದರು" ಎಂದು ಉತ್ತರಿಸಿದನು.

ಸ್ವಲ್ಪ ಸಮಯದಲ್ಲಿಯೇ ರೈಲು ವಾರಾಣಸಿ ಸ್ಟೇಷನ್ನನ್ನು ತಲುಪಿತು. ಪ್ಲಾಟ್‌ಫಾರಂ ಮೇಲೆ ಸುಮಾರು ಇನ್ನೂರು ಮುನ್ನೂರು ಜನರು ಹೂವಿನ ಹಾರಗಳನ್ನು ಹಿಡಿದುಕೊಂಡು ನಿಂತಿರುವುದನ್ನು ಕೃ.ಮೂ.ರವರು ನೋಡಿದರು. 'ಯಾವ ಮಿನಿಸ್ಟರೋ ಕಾಣ ಬರುತ್ತಿರುವುದು' ಎಂದು ಯೋಚಿಸುತ್ತಾ ಕೃ.ಮೂ.ರವರು ಕ್ಯಾಬಿನ್ನಿನಿಂದ ಹೊರಗೆ ಬರಲು ಪ್ರಯತ್ನಿಸಿದರು. ಆ ತಂಡದವರು ಇವರ ಕ್ಯಾಬಿನ್ನಿಗೆ ನುಗ್ಗಿ ಇವರ ಸಹಪ್ರಯಾಣಿಕನಿಗೆ ಹಾರ ತುರಾಯಿಗಳನ್ನು ಅರ್ಪಿಸಿ ಕೈ ಕುಲುಕುತ್ತಿದ್ದರು. ಕೃ.ಮೂ.ರವರಿಗೆ ಈ ತಂಡವನ್ನು ಭೇದಿಸಿಕೊಂಡು ಹೊರಬರುವುದೇ ಕಷ್ಟವಾಯಿತು.

ಇವರ ಮುಜುಗರವನ್ನು ನೋಡಿದ ಸಹಪ್ರಯಾಣಿಕ "ಆಪ್ ಪಹಿಲೇ ಉತರ್ ಜಾಯಿಯೇ" (ನೀವು ಮೊದಲು ಇಳಿಯಿರಿ) ಎಂದು ಕೃ.ಮೂ.ರವರಿಗೆ ಜಾಗ ಮಾಡಿಸಿಕೊಟ್ಟನು. ಪ್ಲಾಟ್‌ಫಾರಂ ಮೇಲೆ ನಿಂತು

ದೀರ್ಘವಾದ ಶ್ವಾಸವನ್ನೆಳೆದುಕೊಂಡ ಕೃ.ಮೂ.ರವರಿಗೆ ಇನ್ನು ಕುತೂಹಲ ತಡೆಯಲಾಗಲಿಲ್ಲ. ಪ್ಲಾಟ್‌ಫಾರಂನ ಮೇಲೆ ನಿಂತಿದ್ದ ಒಬ್ಬ ವ್ಯಕ್ತಿಯನ್ನು "ಈಗ ಇಳಿಯುತ್ತಿದ್ದಾರಲ್ಲಾ ಅವರು ಯಾರು?" ಎಂದು ತಮ್ಮ ಸಹಪ್ರಯಾಣಿಕನ ಕಡೆಗೆ ಬೆರಳು ತೋರಿಸಿದರು. "ನಿಮಗೆ ಗೊತ್ತಿಲ್ಲವೇ ಶಹನಾಯಿ ಸಾರ್ವಭೌಮ ಬಿಸ್ಮಿಲ್ಲಾ ಖಾನರು. ಇದೇ ತಾನೆ ಯುರೋಪಿನಲ್ಲಿ ತಮ್ಮ ಸಂಗೀತ ಪ್ರವಾಸವನ್ನು ಮುಗಿಸಿಕೊಂಡು ತಮ್ಮ ಮನೆಗೆ ಹಿಂದಿರುಗುತ್ತಿದ್ದಾರೆ" ಇಂತಹ ಹಿರಿಯ ವ್ಯಕ್ತಿಯನ್ನರಿಯದ ಶುಂಠನಿವನ್ಯಾವನೋ ಎನ್ನುವಂತೆ ಕೃ.ಮೂ.ರವರನ್ನು ನೋಡಿದನು ಆ ವ್ಯಕ್ತಿ.

ಬಿಸ್ಮಿಲ್ಲಾ ಖಾನರ ಹಿರಿಮೆ ಮತ್ತು ಅವರ ಸೌಜನ್ಯದ ವಿಚಾರವನ್ನು ಕೆಲವೇ ದಿನಗಳ ಹಿಂದೆ 'ಟೈಮ್ಸ್ ಆಫ್ ಇಂಡಿಯಾ' ಪತ್ರಿಕೆಯಲ್ಲಿ ಓದಿದ್ದ ಕೃ.ಮೂ.ರವರಿಗೆ ದೊಡ್ಡ ಆಘಾತವಾದಂತಾಯಿತು. ಇಂತಹ ಹಿರಿಯ ವ್ಯಕ್ತಿಯೊಡನೆ ತಾನು ಎಷ್ಟು ನಿಷ್ಠುರವಾಗಿ ನಡೆದುಕೊಂಡೆ ಎನ್ನುವ ವ್ಯಥೆ ಕೃ.ಮೂ.ರವರ ಮನಸ್ಸಿನ ಮೇಲೆ ಎಂತಹ ಪರಿಣಾಮ ಮಾಡಿತೆಂದರೆ, ಅವರು ಅಂದಿನಿಂದ ತಮ್ಮ ಅಧಿಕಾರದ ಕೃತಕ ಮುಖವಾಡವನ್ನು ಕಳಚಿ ಹಾಕಿ ಈಗ ಸಾಮಾನ್ಯ ಮತ್ತು ಸರಳ ಜೀವನದ ಸವಿಯನ್ನನುಭವಿಸುತ್ತಿದ್ದಾರೆ

ಪ್ರಭಾವತಿ ಸಂಪತ್

*

ಮುಂಬಯಿ ಜೀವನ ಯಾಂತ್ರಿಕ ನಿಜ. ಈ ಅವಾಢವ್ಯ ನಗರದಲ್ಲಿ ಮಾನವತೆ ಸತ್ತಿಲ್ಲ.

ಮಾತುಂಗಾ ಸ್ಟೇಶನ್ನಿನಲ್ಲಿ ದಾದಾ ಕಡೆ ಹೋಗುವ ಗಾಡಿಗೋಸ್ಕರ ಹಾದಿ ಕಾಯುತ್ತಿದ್ದೆ. ಅಷ್ಟರಲ್ಲಿ ರೇಲ್ವೆ ಸ್ಟಾಲಿನಲ್ಲಿ ನನ್ನ ಮಿತ್ರರೊಬ್ಬರು (ನನಗೆ ಅವರ ಹೆಸರು ಗೊತ್ತಿಲ್ಲ ನನ್ನ ಅಕೌಂಟ್ ಇರುವ ಮಾತುಂಗಾದ ರಾಷ್ಟ್ರೀಕೃತ ಬ್ಯಾಂಕಿನ ನೌಕರರು. ಮುಖಪರಿಚಯ ಮಾತ್ರವಿದೆ.) ಒಬ್ಬ ಸುಮಾರು ಹದಿನಾಲ್ಕು ವರುಷದ ಬಾಲಕನನ್ನು ಸಂತೈಸುತ್ತಾ ಅವನಿಗೆ ಇನ್ನಷ್ಟು ತಿಂಡಿ ತಿನ್ನಲು ಒತ್ತಾಯಿಸುತ್ತಿದ್ದರು. ಆ ಬಾಲಕನ ಕಣ್ಣಲ್ಲಿ ನೀರು ತುಂಬಿ ಸಂಕೋಚದಿಂದ ನಿರಾಕರಿಸುತ್ತಿದ್ದ.

ನಮ್ಮ ಮಿತ್ರರ ಕಣ್ಣಲ್ಲಿಯೂ ನೀರು. ಅವರ ಪಕ್ಕದಲ್ಲಿ ಒಬ್ಬ ರೇಲ್ವೆ ರಕ್ಷಣಾ ಪೋಲೀಸನೊಬ್ಬನಿದ್ದ. ಅವನನ್ನು ಸಂತೈಸಿ, ಪೋಲೀಸನೊಂದಿಗೆ ಮಾತಾಡಿ ನಮ್ಮ ಮಿತ್ರರು ಹೊರಟರು. ಕುತೂಹಲ ತಡೆಯಲಾರದೆ ಅವರ ಬಳಿ ಹೋಗಿ ಹಲೋ ಹೇಳಿದೆ. ಅವರು ತುಂಬಾ ಕಳಕಳಿಯಿಂದ ನಡೆದ ಸಂಗತಿಯನ್ನು ಹೇಳಿದರು.

ಅವರು ಮಾತುಂಗಾದಲ್ಲಿ ಇಳಿಯುವ ವೇಳೆಗೆ ಆ ಬಾಗಿಲಲ್ಲಿ ನಿಂತ ಆ ಹುಡುಗ ಇವರ ಮೈಮೇಲೆ ಮೂರ್ಛೆ ಬಂದು ಬಿದ್ದನಂತೆ. ಅವನನ್ನು ಕೆಳಗಿಳಿಸಿ ಮಲಗಿಸಿದರಂತೆ. ಬಹುಶಃ ಕುಡಿದಿರಬಹುದೆಂದು ಇವರು ಅಷ್ಟು ಆಸ್ಥೆ ತೆಗೆದುಕೊಳ್ಳದೆ ಹೊರಟರಂತೆ. ಆದರೂ ಮನಸ್ಸು ತಡೆಯದೆ ಅವನ ಬಳಿ ತಿರುಗಿದಾಗ ಅವನು ಏನೇನೋ ಬಡಬಡಿಸುತ್ತಿದ್ದನಂತೆ. ಅವನನ್ನು ಸಂತೈಸಿದಾಗ ತಿಳಿದ ಸಂಗತಿಯೆಂದರೆ ಕಳೆದ ಮೂರು ದಿನದಿಂದ ಅತ ಉಪವಾಸವಿದ್ದನಂತೆ. ಕೊನೆಯ ಉಪಾಯವಾಗಿ ಕರಿರೋಡಿನಲ್ಲಿರುವ ತನ್ನ ದೂರದ ಸಂಬಂಧಿಕರನ್ನು ನೋಡಲು ಹೊರಟಿದ್ದನಂತೆ. ಮಾತುಂಗಾ ಬರುವದರಲ್ಲಿ ಎಚ್ಚರತಪ್ಪಿ ಬಿದ್ದನಂತೆ. ನಮ್ಮ ಮಿತ್ರರು ಅವನಿಗೆ ಹೊಟ್ಟೆ ತುಂಬಾ ತಿನಿಸಿ, ರೇಲ್ವೆ ಪೋಲೀಸನಿಗೆ ಅವನ ಬಗ್ಗೆ ಕಾಳಜಿ ತೆಗೆದುಕೊಳ್ಳಲು ಹೇಳಿ ಹೊರಟಿದ್ದರು.

ಘಟನೆಯು ಹಿನ್ನೋಟ ಮನಸ್ಸಿಗೆ ನೋವು ಮಾಡಿದರೂ ಈ ಬೃಹತ್ ನಗರದಲ್ಲಿ ಮಾನವತೆ ಸತ್ತಿಲ್ಲವೆಂದು ಸಂತೋಷವಾಯಿತು.

—ಬಿ. ಕೆ. ಕುಲಕರ್ಣಿ

ನಿಮ್ಮ ಶಬ್ದಭಾಂಡಾರ ಬೆಳೆಯಲಿ

ಶಬ್ದ ಭಾಂಡಾರವು ಹಣದ ಭಾಂಡಾರಕ್ಕಿಂತಲೂ ಅಮೂಲ್ಯವಾಗಿದೆ

ಇಲ್ಲಿ ಪ್ರತಿ ತಿಂಗಳೂ ಕೆಲವು ಶಬ್ದಗಳನ್ನು ಪರಿಚಯ ಮಾಡಿಕೊಡಲಾಗುವುದು. ಆಯಾ ಶಬ್ದದ ಮುಂದೆ ನಾಲ್ಕು ಅರ್ಥಗಳನ್ನು ಕೊಟ್ಟಿದ್ದು ಅವುಗಳಲ್ಲಿ ಒಂದು ಮಾತ್ರ ಸರಿಯಾಗಿರುತ್ತದೆ. ನಿಮಗೆ ಸರಿಯೆನಿಸಿದ ಅರ್ಥವನ್ನು ಮೊದಲು ಆರಿಸಿಕೊಳ್ಳಿ. ಆಮೇಲೆ ಇದರ ಬೆನ್ನಿನ ಪುಟ ನೋಡಿರಿ. ಅಲ್ಲಿ ಸರಿಯಾದ ಅರ್ಥವನ್ನು ವಿವರಿಸಿದೆ.

೧. **ಅರ್ಥಿತ**
(ಅ) ಸಂತೋಷ (ಆ) ಚಿಟ್ಟು (ಇ) ಬೇಡಿದ (ಈ) ಹಣದ ವಿಚಾರ

೨. **ಅನರ್ಥ**
(ಅ) ಕೇಡು (ಆ) ಬಯಸಿದಂಥ (ಇ) ಬೇಡದೆ ಇದ್ದದ್ದು (ಈ) ಬೆಲೆ ಬಾಳುವ

೩. **ಅಪ್ರಾರ್ಥಿತ**
(ಅ) ನಮಸ್ಕಾರ (ಆ) ಬಯಸದ್ದು (ಇ) ತಪ್ಪು ಮಾತು (ಈ) ಪ್ರಸಿದ್ಧ-ವಲ್ಲದ

೪. **ಅಪಾರ್ಥ**
(ಅ) ಅಡ್ಡಲಾಭ ((ಆ) ನಷ್ಟ (ಇ) ಪ್ರಯೋಜನವಿಲ್ಲದ್ದು (ಈ) ತಪ್ಪು ಅರ್ಥ

೫. **ಅರ್ಥಾಂತರ**
(ಅ) ಗುಟ್ಟಾದ ಅಭಿಪ್ರಾಯ (ಆ) ನಿಜವಾದ ಅರ್ಥ (ಇ) ತಿಳಿವಳಿಕೆ (ಈ) ಬೇರೆ ಅರ್ಥ

೬. **ವೈಯರ್ಥ್ಯ**
(ಅ) ಕುದುರೆ ಸವಾರಿ (ಆ) ಒಪ್ಪಿಗೆ (ಇ) ಇಚ್ಛಿಸಿದ್ದು ಆಗದಿರುವುದು (ಈ) ಸುಲಭ ಅರ್ಥ

೭. **ಅನ್ವರ್ಥಕ**
(ಅ) ವಿಪತ್ತಿಗೆ ಕಾರಣ (ಆ) ಬಯಸಿದ್ದಕ್ಕೆ ತಕ್ಕ (ಇ) ಲಾಭಕರ (ಈ) ಸ್ವಾರ್ಥದ

೮. **ಸಾರ್ಥಕ್ಯ**
(ಅ) ಸಫಲವಾಗುವುದು (ಆ) ತನ್ನ ಲಾಭದ ಆಶೆ (ಇ) ಬಲಿಷ್ಠ (ಈ) ದಕ್ಷತೆ

೯. **ಕಾಳಾಗು**
(ಅ) ರಾತ್ರಿಯಾಗು (ಆ) ಕೆಟ್ಟು ಹೋಗು (ಇ) ಕಪ್ಪಾಗು (ಈ) ತಡವಾಗು

೧೦. **ಕಿತಬಿ**
(ಅ) ಪುಸ್ತಕಾಲಯ (ಆ) ಜಗಳ (ಇ) ಬೇಡದ ಕೆಲಸ (ಈ) ಬಿರುದು

೧೧. **ಕೆಯ್ತು**
(ಅ) ಕೊಚ್ಚುವಿಕೆ (ಆ) ನಿದ್ದೆ (ಇ) ಗದ್ದೆ (ಈ) ಕೃತ್ಯ

೧೨. **ಕೊರಚು**
(ಅ) ಕೆಟ್ಟ ಮಾತು (ಆ) ಹೊಲಸು (ಇ) ಮುದ್ದೆ (ಈ) ಕೊಯ್ಯುವಿಕೆ

೧. **ಅರ್ಥಿತ** (ಇ) ಬೇಡಿದ್ದು, ಅಪೇಕ್ಷಿಸಿದ್ದು. ಉದಾ:— ಅರ್ಥಿತ ಕಾರ್ಯ ಕೈಗೂಡಿತು. [ಸಂ. ಅರ್ಥ್ = ಬೇಡು— ಎಂಬುದರಿಂದ.]

೨. **ಅನರ್ಥ** (ಅ) ಕೇಡು, ವಿಪತ್ತು; ಉಪಯೋಗವಿಲ್ಲದ್ದು, ಅರ್ಥವಿಲ್ಲದ್ದು; ಉದಾ:— ದೊಡ್ಡ ಅನರ್ಥವಾಯಿತು; ಅನರ್ಥವಾದ ವಾದ ಹೂಡಬೇಡ. [ಸಂ. ಅನ್ = ಇಲ್ಲ + ಅರ್ಥ = ಪ್ರಯೋಜನ]

೩. **ಅಪ್ರಾರ್ಥಿತ** (ಅ) ಬಯಸದೇ ಇದ್ದದ್ದು, ಬೇಡದೆ ಇದ್ದದ್ದು; ತಾನಾಗಿಯೆ ಆಗಿದ್ದು. ಉದಾ:— ಅಪ್ರಾರ್ಥಿತವಾಗಿ ಬಂದ ಗೌರವ. [ಸಂ. ಅ = ಅಲ್ಲ + ಪ್ರ = ಮುಂದಾಗಿ + ಅರ್ಥಿತ = ಬೇಡಿದ್ದು.]

೪. **ಅಪಾರ್ಥ** (ಈ) ತಪ್ಪು ಅರ್ಥ, ಕೆಟ್ಟ ಅರ್ಥ. ಉದಾ:— ನನ್ನ ಹೇಳಿಕೆಗೆ ಅಪಾರ್ಥ ಮಾಡಬೇಡ. [ಸಂ. ಅಪ= ಕೆಟ್ಟ + ಅರ್ಥ.]

೫. **ಅರ್ಥಾಂತರ** (ಈ) ಬೇರೊಂದು ಅರ್ಥ, ಎಣಿಸದ ಅರ್ಥ. ಉದಾ:— ಕೃತಿಗೆ ಅರ್ಥಾಂತರವನ್ನು ಹಚ್ಚಿದರು. [ಸಂ. ಅಂತರ = ಬೇರೆ + ಅರ್ಥ.]

೬. **ವೈಯರ್ಥ್ಯ** (ಇ) ಇಚ್ಛಿಸಿದ್ದು ಕೈಗೂಡದಿರುವುದು; ಕೆಲಸ ಕೆಡುವುದು; ಉದಾ:— ಪ್ರಯತ್ನದ ವೈಯರ್ಥ್ಯದಿಂದ ಕಂಗೆಟ್ಟ. [ಸಂ. ವಿ = ವಿರುದ್ಧವಾದ + ಅರ್ಥ = ಅಪೇಕ್ಷೆ.]

೭. **ಅನ್ವರ್ಥಕ** (ಅ) ಬಯಸಿದಂತೆ, ಇಚ್ಛೆಗನುಸಾರವಾದ, ಸಾರ್ಥಕ. ಉದಾ:— ಇಟ್ಟ ಹೆಸರು ಅನ್ವರ್ಥಕವಾಯಿತು. [ಸಂ. ಅನು = ಹೊಂದಿಕೆಯಾದ + ಅರ್ಥ.]

೮. **ಸಾರ್ಥಕ್ಯ** (ಅ) ಸಫಲವಾಗುವಿಕೆ, ಕೈಗೂಡುವಿಕೆ, ಸಿದ್ಧಿ. ಉದಾ:— ಪ್ರಯತ್ನದ ಸಾರ್ಥಕ್ಯ; ಬದುಕಿನ ಸಾರ್ಥಕ್ಯ, [ಸಂ. ಸ = ಒಡಗೂಡಿದ + ಅರ್ಥಕ ಪ್ರಯೋಜನ.]

೯. **ಕಾಳಾಗು** (ಅ) ಕೆಟ್ಟು ಹೋಗು, ಹಾಳಾಗು; ದುಷ್ಟವಾಗು. ಉದಾ:— ಹೋದ ಕೆಲಸ ಕಾಳಾಯಿತು. [ಕನ್ನಡ— ಕಾಳ್ = ಕೆಟ್ಟದ್ದು + ಆಗು.]

೧೦. **ಕಿತಬಿ** (ಇ) ಬೇಡದ ಕೆಲಸ, ಸಲ್ಲದ ಕಾರ್ಯ; ಅಧಿಕಪ್ರಸಂಗ, ಉಸಾಬರಿ, ಕಿತಾಪತಿ. ಉದಾ:— ಕಿತಬಿ ಎಬ್ಬಿಸುವುದು. [?]

೧೧. **ಕೆಯ್ತ** (ಈ) ಕೃತ್ಯ, (ಕೆಟ್ಟ) ಕೆಲಸ; ವಂಚನೆ, ಮೋಸ. ಉದಾ:— ಅವನ ಕೆಯ್ತಗಳಿಗೆ ತಕ್ಕ ಶಿಕ್ಷೆ ಆಗಲಿ. [ಕನ್ನಡ— ಕೆಯ್ = ಮಾಡು + ತ]

೧೨. **ಕೊರಚು** (ಅ) ಕೆಟ್ಟ ಮಾತು, ಮೂದಲಿಕೆ, ಹಂಗಿಸುವಿಕೆ, ತೆಗಳುವಿಕೆ. ಉದಾ:— ಕೊರಚಾಡಿ ಗಂಡನನ್ನು ನೋಯಿಸಿದಳು. [ಕನ್ನಡ]

●

ನಿಮ್ಮ ಶಬ್ದಶಕ್ತಿಯ ತರಗತಿ

ನೀವು ಎಷ್ಟು ಶಬ್ದಗಳಿಗೆ ಅರ್ಥ ಅರಿಸಿದ್ದು ಸರಿಯಾಗಿದೆಯೆಂದು ಎಣಿಸಿ, ಕೆಳಗಿನಂತೆ ನಿಮ್ಮ ಶಬ್ದಶಕ್ತಿಯ ತರಗತಿಗಳನ್ನು ತಿಳಿಯಿರಿ.

೬—೮ ಸರಿಯಿದ್ದರೆ	...	ಸಾಧಾರಣ
೯—೧೦ ,,	...	ಉತ್ತಮ
೧೧—೧೨ ,,	...	ಅತ್ಯುತ್ತಮ

●

ನುಲಿಗೊರಳು ಮತ್ತು ತಲೆದೂಗುವಿಕೆ

ಡಾ. ಕೆ. ಎಂ. ಧ್ರುವಕುಮಾರ

ಮಾನವನ ಜೀವನವೇ ಒಂದು ಸಮಸ್ಯೆ. ಸಮಸ್ಯೆಗಳನ್ನು ಯಾರೂ ಸ್ವಾಗತಿಸುವುದಿಲ್ಲವಾದರೂ ಅವುಗಳನ್ನು ಎಲ್ಲರೂ ಅನುಭವಿಸಲೇಬೇಕು. ಸಮಸ್ಯೆಗಳಿಲ್ಲದ ಜೀವನ ಬರಡು. ಕಹಿಯನ್ನುಂಡವನಿಗೆ ಮಾತ್ರ ಸಿಹಿ ರುಚಿಯ ಬೆಲೆ ತಿಳಿಯುವುದು. ಸಮಸ್ಯೆಗಳನ್ನು ಅನುಭವಿಸಿದವನಿಗೆ ಮಾತ್ರ ಜೀವನದ ಸವಿಯುನ್ನುಣ್ಣಲು ಸಾಧ್ಯವಾಗುವುದು. ವೃತ್ತಿ ಮಾನವನ ಜೀವನದಲ್ಲಿ ಒಂದು ಭಾಗ. ವೃತ್ತಿಯಲ್ಲೂ ಸಹ ನಾವು ಕಠಿಣ ಸಮಸ್ಯೆಗಳನ್ನೆದುರಿಸಬೇಕಾಗುತ್ತದೆ. ವೈದ್ಯನ ವೃತ್ತಿಯೂ ಸಹ ಇದಕ್ಕೆ ಹೊರತಲ್ಲ. ಇಂತಹ ಸುಸಂದರ್ಭವನ್ನು ನನಗೆ ಒದಗಿಸಿಕೊಟ್ಟ ಕೆಂಪೇಗೌಡನಗರದ ಡಾ. ಸತ್ಯನಾರಾಯಣವರು ನನ್ನ ಹಿತೈಷಿಗಳು. ನಾಗರಾಜ ಎಂಬುವನನ್ನು ಚಿಕಿತ್ಸೆಗೆ ನನ್ನ ಬಳಿ ಕಳುಹಿಸಿದರು.

ನಾಗರಾಜ ಸುಮಾರು ನಲವತ್ತೈದು ವರ್ಷ ವರ್ಷ ವಯಸ್ಸಿನವನು. ಅವನ ಕತ್ತು ಸಂಪೂರ್ಣವಾಗಿ ಬಲಗಡೆ ತಿರುಗಿದ್ದು ಅವನ ತಲೆ ಒಂದೇ ಸಮನೆ ತೂಗಾಡುತ್ತಿತ್ತು. ಈ ರೀತಿಯ ತೊಂದರೆಗೆ ಕ್ರಮವಾಗಿ ನುಲಿಗೊರಳು (Torticollis) ಮತ್ತು ತಲೆದೂಗುವಿಕೆ (Head nodding) ಎಂದು ಕರೆಯುತ್ತೇವೆ. ನಾಗರಾಜನಿಗೆ ಕತ್ತನ್ನು ಎಡಕ್ಕೆ ತಿರುಗಿಸಲು ಸಾಧ್ಯವೇ ಆಗುತ್ತಿರಲಿಲ್ಲ. ಅವನಿಗೆ ಕತ್ತಿನ ನೋವು ಸಹ ಇತ್ತು. ತಲೆ ಹಿಂದಕ್ಕೆ ಮತ್ತು ಮುಂದಕ್ಕೆ ಒಂದೇ ಸಮನೆ ತೂಗುತ್ತಲೇ ಇತ್ತು. ಡಾ. ಸತ್ಯನಾರಾಯಣರವರು ಅವನನ್ನು ಪರೀಕ್ಷಿಸಿದಾಗ ಯಾವ ದೈಹಿಕ ರೋಗವೂ ಇಲ್ಲವೆಂದು ಖಚಿತ ಮಾಡಿಕೊಂಡು ನನ್ನ ಬಳಿ ಕಳುಹಿಸಿದ್ದರು.

ರೋಗಿಯ ಪ್ರಕಾರ ಸುಮಾರು ಒಂದು ವರ್ಷದ ಹಿಂದೆ ಬೆನ್ನಿನ ನೋವು ಪ್ರಾರಂಭವಾಯಿತು. ಆಗ ಕ್ಯಾಲ್ಸಿಯಂ ಚುಚ್ಚುಮದ್ದನ್ನು ಕೊಟ್ಟ ನಂತರ ಬೆನ್ನು ನೋವು ಹೋಗಿ ಜ್ವರ ಪ್ರಾರಂಭವಾಯಿತು. ಜ್ವರ ಪ್ರಾರಂಭವಾಗುತ್ತಿದ್ದಂತೆಯೇ ಕತ್ತು ಬಲಗಡೆಗೆ ತಿರುಗಿತು. ಜ್ವರ ಸಂಪೂರ್ಣವಾಗಿ ವಾಸಿಯಾದರೂ ನುಲಿಗೊರಳು ಮಾತ್ರ ಹಾಗೆಯೇ ಉಳಿಯಿತು. ಎಷ್ಟೇ

ಪ್ರಯತ್ನಪಟ್ಟರೂ ಕತ್ತನ್ನು ಮಾತ್ರ ತಿರುಗಿಸಲು ಸಾಧ್ಯವಾಗುತ್ತಿರಲಿಲ್ಲ. ಕ್ರಮೇಣ ಕತ್ತಿನ ನೋವು ಮತ್ತು ತಲೆದೂಗುವಿಕೆ ಸಹ ಪ್ರಾರಂಭವಾಯಿತು. ನಾಗರಾಜ ಬೇರೆ ರಾಜ್ಯದಲ್ಲಿ ವಾಸಿಸುತ್ತಿದ್ದು ಅಲ್ಲಿಯ ನಾನಾ ವೈದ್ಯರಲ್ಲಿ ಚಿಕಿತ್ಸೆ ತೆಗೆದುಕೊಂಡರೂ ಅವನ ಕಾಯಿಲೆ ವಾಸಿಯಾಗಲಿಲ್ಲ. ಕಡೆಗೆ ಒಬ್ಬ ಮನೋರೋಗ ತಜ್ಞರ ಬಳಿ ಹೋದಾಗ ಅವರು ಅವನಿಗೆ ತಮ್ಮಿಂದ ಸಹಾಯ ಮಾಡಲಾಗುವುದಿಲ್ಲವೆಂದು ಹೇಳಿಬಿಟ್ಟರು. ಕಡೆಯ ಪ್ರಯತ್ನಕ್ಕೋಸ್ಕರ ಡಾ. ಸತ್ಯನಾರಾಯಣರವರನ್ನು ಕಂಡು ಅವರ ಮೂಲಕ ನನ್ನಲ್ಲಿಗೆ ಬಂದನು. ನುಲಿಗೊರಳು ಮತ್ತು ತಲೆದೂಗುವಿಕೆ ಸಾಯಂಕಾಲ ಹೆಚ್ಚಾಗಿರುತ್ತಿತ್ತು. ಮನಸ್ಸಿಗೆ ಬೇಸರವಾದಾಗ ಅವೆರಡೂ ಹೆಚ್ಚಾಗುತ್ತಿದ್ದವು. ಅವನಿಗಿದ್ದ ಒಂದೇ ಒಂದು ಬೇಸರವೆಂದರೆ ತನಗೆ ಕೆಲಸವಿಲ್ಲದೇ ಇರುವುದು.

ನಿರುದ್ಯೋಗ

ನಾಗರಾಜನಿಗೆ ಮದುವೆಯಾಗಿ ಸುಮಾರು ಇಪ್ಪತ್ತು ವರ್ಷಗಳ ಮೇಲಾಗಿದ್ದು ಮೂರು ಮಕ್ಕಳು ಸಹ ಇದ್ದರು. ದಾಂಪತ್ಯ ಸಮಸ್ಯೆಯಾಗಲಿ ಅಥವಾ ಮಕ್ಕಳಿಂದ ಯಾವ ತೊಂದರೆಯಾಗಲಿ ಇಲ್ಲವೆಂದರು. ಇಂಟರ್ ವಿದ್ಯಾಭ್ಯಾಸ ಮುಗಿಸಿ ಒಂದು ಚಲನಚಿತ್ರ ವಿತರಣೆ ಕಂಪನಿಯಲ್ಲಿ ಇಪ್ಪತ್ತು ವರ್ಷ ಕೆಲಸ ಮಾಡಿದ ನಂತರ ಆ ಕಂಪನಿ ನಷ್ಟಕ್ಕೊಳಗಾಗಿ ಮುಚ್ಚಿತು. ಆಗ ನಾಗರಾಜನಿಗಾದ ದುಃಖ ಅಷ್ಟಿಷ್ಟಲ್ಲ. ಬಹಳ ಪ್ರಾಮಾಣಿಕ ಮತ್ತು ಮುತುವರ್ಜಿಯ ಕೆಲಸಗಾರ ಎಂದು ಹೆಸರು ಪಡೆದಿದ್ದ ನಾಗರಾಜನಿಗೆ ಪುನಃ ಕೆಲಸ ಸಿಗಲು ಕಷ್ಟವಾಗಲಿಲ್ಲ. ಇನ್ನೊಂದು ಚಲನಚಿತ್ರ ಕಂಪನಿಯಲ್ಲಿ ಮೂರು ವರ್ಷ ಕೆಲಸ ಮಾಡಿದನು. ನಂತರ ತಮ್ಮವನೇ ಆದ ಒಬ್ಬನನ್ನು ಕರೆತರಲೋಸುಗ ಆ ಕಂಪನಿಯವರು ಅವನನ್ನು ಕೆಲಸದಿಂದ ತೆಗೆದುಹಾಕಿದರು. ಒಂದೂವರೆ ವರ್ಷದಿಂದ ಅವನಿಗೆ ಕೆಲಸವಿಲ್ಲ. ಮೊದಲನೇ ಕೆಲಸದಿಂದ ಬಿಡುಗಡೆಯಾದಾಗ ಸುಮಾರು ರೂ. ೧೭,೦೦೦/— ಕೈಗೆ ಬಂದಿದ್ದು ಈಗ ಸುಮಾರು ರೂ. ೮,೦೦೦/— ಮಾತ್ರ ಕೈಯಲ್ಲಿ ಉಳಿದಿದೆ. ಅವನ ಹಿರಿಯ ಮಗ ಇಂಜಿನಿಯರಿಂಗ್ ಕಾಲೇಜಿನಲ್ಲಿ ಓದುತ್ತಿದ್ದುದರಿಂದ ಖರ್ಚು ಬಹಳ. ನಾಗರಾಜನ ತಂದೆಯಿಂದ ಸ್ವಲ್ಪ ಧನಸಹಾಯವಿದ್ದುದರಿಂದ ಅವನಲ್ಲಿ ಇಷ್ಟು ಹಣವಾದರೂ ಉಳಿದಿತ್ತು. ಅವನ ಹೇಳಿಕೆಯಂತೆ ಇದೇ ರೀತಿ ಮುಂದುವರೆದರೆ ಸುಮಾರು ಒಂದು ವರ್ಷದಲ್ಲಿ ತಾನು ಭಿಕಾರಿಯಾಗುವ ಸಂಭವವಿದೆಯೆಂದು ಅವನ ಭಾವನೆ. ಎಲ್ಲೆಲ್ಲಿಯೋ ಕೆಲಸಕ್ಕೋಸ್ಕರ ಪ್ರಯತ್ನಿಸಿ ವಿಫಲನಾಗಿದ್ದನು. ತಾನು ಮೊದಲು ಇಪ್ಪತ್ತು ವರ್ಷ ಕೆಲಸ ಮಾಡಿದ ಕಂಪನಿಯ ಭಾಗಸ್ಥರೊಬ್ಬರು ತಮ್ಮದೇ ಆದ ಒಂದು ಕಂಪನಿಯನ್ನು ತೆರೆದಿದ್ದರು. ಅವರಿಗೆ ನಾಗರಾಜನಲ್ಲಿ ಬಹು ವಿಶ್ವಾಸ. ಅವನ ಕಾಯಿಲೆ ಸಂಪೂರ್ಣವಾಗಿ ವಾಸಿಯಾದ ನಂತರ ತಮ್ಮನ್ನು ಕಾಣಲು ಹೇಳಿದ್ದರು. ನುಲಿಗೊರಳು ಮತ್ತು ತಲೆದೂಗುವಿಕೆಯಿಂದ ನಾಗರಾಜನಿಗೆ ಓದಲು ಸಹ ಆಗುತ್ತಿರಲಿಲ್ಲ. ಹೇಗಾದರೂ ಮಾಡಿ ತನ್ನ ಕಾಯಿಲೆಯನ್ನು ವಾಸಿಮಾಡಿಕೊಟ್ಟು ತನ್ನ ಕಾಲಿನ ಮೇಲೆ ತಾನೇ ನಿಲ್ಲುವಂತೆ ಮಾಡಬೇಕೆಂದು ಕೇಳಿಕೊಂಡಾಗ ಅವನ ಕಣ್ಣುಗಳಲ್ಲಿ ನೀರಿಳಿಯಿತು.

ನಾಗರಾಜ ಸುಮಾರು ೫। ಅಡಿ ಎತ್ತರ ಮತ್ತು ೧೧೦ ಪೌಂಡಿನ ಬಹು ಮೆದು ಸ್ವಭಾವದ ಮನುಷ್ಯ. ಕತ್ತನ್ನು ನೆಟ್ಟಗೆ ಮಾಡಲು ಪ್ರಯತ್ನಿಸಿ ವಿಫಲನಾದನು. ತಲೆದೂಗುವುದನ್ನು ಸಹ ಅವನಿಂದ ನಿಲ್ಲಿಸಲಾಗಲಿಲ್ಲ. ಈ ರೀತಿಯ ನುಲಿಗೊರಳು ಮತ್ತು ತಲೆದೂಗುವಿಕೆ ಕೆಲವು ಶಾರೀರಿಕ ಕಾಯಿಲೆಗಳಿಂದಲೂ ಬರಬಹುದು. ಡಾ. ಸತ್ಯನಾರಾಯಣರವರು ಆಗಲೇ ಪರೀಕ್ಷಿಸಿ ಯಾವ ಶಾರೀರಿಕ ಕಾಯಿಲೆಯೂ ಇಲ್ಲವೆಂದು ನನ್ನ ಬಳಿ ಕಳುಹಿಸಿದ್ದರು. ನಾನು ಸಹ ಅವನನ್ನು ಒಂದು ಬಾರಿ ಪರೀಕ್ಷಿಸಿ ಯಾವ ಶಾರೀರಿಕ ಕಾಯಿಲೆಯೂ ಇಲ್ಲವೆಂದು ಖಚಿತಪಡಿಸಿಕೊಂಡೆ. ನಾಗರಾಜನ ತೊಂದರೆ ಒಂದೂವರೆ ವರ್ಷದಿಂದ ಇದ್ದುದರಿಂದ ಇದು ಮೊದಲಿಗೆ ಮಾನಸಿಕವಾದಾಗ್ಯೂ ಈಗ ಮಾಂಸಖಂಡದಲ್ಲಿ ಶಾಶ್ವತವಾದ ಮಾರ್ಪಾಡು ಆಗಿರಬಹುದಾದ ಸಾಧ್ಯತೆಯಿದೆ. ನಮ್ಮ ಮಾಂಸಖಂಡಗಳು ಕೆಲಸ

ಮಾಡುತ್ತಿರಬೇಕು. ನಮ್ಮ ಶರೀರದ ಯಾವುದೇ ಒಂದು ಅಂಗವು ಒಂದೇ ಭಂಗಿಯಲ್ಲಿ ಬಹು ಕಾಲ ಇದ್ದರೆ ಮಾಂಸಖಂಡಗಳು ಶಾಶ್ವತವಾಗಿ ನಾರಾಗಿ (Fibrosis) ನಾವು ಆ ಅಂಗವನ್ನು ಅದೇ ಭಂಗಿಯಲ್ಲಿಟ್ಟುಕೊಳ್ಳಬೇಕಾಗುತ್ತದೆ. ಇಂತಹ ಸಂದರ್ಭಗಳಲ್ಲಿ ಶಸ್ತ್ರಕ್ರಿಯೆ ಮಾಡಿ ಮಾಂಸಖಂಡವನ್ನೇ ಕತ್ತರಿಸಬೇಕಾಗಬಹುದು. ಈ ರೀತಿ ಆಗಿದೆಯೋ ಅಥವಾ ಇಲ್ಲವೇ ಎಂಬುದನ್ನು ತಿಳಿಯಲು ನುರಿತ ತಜ್ಞರಿಗೆ ಬಹುಕಾಲ ಹಿಡಿಯುವುದಿಲ್ಲ. ಯಾವುದೇ ಸಮಯದಲ್ಲಿಯಾದರೂ ತನ್ನ ಕತ್ತು ಯಾವ ತೊಂದರೆಯೂ ಇಲ್ಲದೇ ಎಲ್ಲಾ ಕಡೆ ತಿರುಗಿಸಲು ಸಾಧ್ಯವಾಗುತ್ತಿದೆಯೇ ಎಂದು ವಿಚಾರಿಸಲು ನಾಗರಾಜ ರಾತ್ರಿ ಮಲಗಿಕೊಂಡ ಸಮಯ ಮತ್ತು ಬೆಳಿಗ್ಗೆ ಸ್ವಲ್ಪ ಹೊತ್ತು ಮಾತ್ರ ಈ ತೊಂದರೆ ಇರುವುದಿಲ್ಲವೆಂದು ತಿಳಿಸಿದನು. ಈ ಒಂದೇ ಒಂದು ವಿಷಯದ ಆಧಾರದ ಮೇಲೆ ನಾಗರಾಜನ ನುಲಿಗೊರಳು ಶಾರೀರಿಕ ಕಾಯಿಲೆಯಿಂದಲ್ಲವೆಂದೂ ಮತ್ತು ಮಾಂಸಖಂಡದಲ್ಲಿ ಶಾಶ್ವತವಾದ ಹಾನಿಯಾಗಿಲ್ಲವೆಂದೂ ಹೇಳಬಹುದು. ನುಲಿಗೊರಳು ಮಾನಸಿಕವೆಂದು ದೃಢಪಟ್ಟ ನಂತರ ತಲೆದೂಗುವುದರ ವಿಷಯ ಇನ್ನೂ ಉಳಿದಿತ್ತು. ಈ ರೀತಿ ತಲೆದೂಗುವಿಕೆ ಕಂಪವಾತ (Chorea) ಎಂಬ ನರರೋಗದಿಂದಲೂ ಆಗಬಹುದು. ಆದುದರಿಂದ ಒಬ್ಬ ನರರೋಗತಜ್ಞರ (Neurologist) ಬಳಿ ನಾಗರಾಜನನ್ನು ಸಲಹೆಗೆ ಕಳುಹಿಸಿದೆನು. ಅವರು ಅದು ಕಂಪವಾತವಲ್ಲವೆಂದು ಹೇಳಿದರು.

ನಾಗರಾಜನ ಎರಡು ತೊಂದರೆಗಳೂ ಮಾನಸಿಕವೆಂದು ಖಚಿತವಾಯಿತು. ಶರೀರದ ಪ್ರತಿಯೊಂದು ಭಾಗವು ಸಹ ಮನಸ್ಸಿನ ಪ್ರಭಾವಕ್ಕೊಳಗಾಗಿರುತ್ತದೆ. ಮಾನಸಿಕ ತುಮುಲ ಅತಿ ಹೆಚ್ಚಾದಾಗ ಮಾನಸಿಕ ಅಸ್ವಾಸ್ಥ್ಯವುಂಟಾಗುತ್ತದೆ. ಮಾನಸಿಕ ಅಸ್ವಾಸ್ಥ್ಯದಿಂದ ಕೆಲವು ಮಾಂಸಖಂಡಗಳು ಹೆಚ್ಚು ಸಂಕುಚಿತವಾಗಿ ಈ ರೀತಿಯ ತೊಂದರೆ ಆಗಲು ಸಾಧ್ಯ. ಇದು ಒಂದು ಬಗೆಯ ಹಿಸ್ಟೀರಿಯ. ಇದನ್ನು ವಾಸಿ ಮಾಡುವುದು ಹೇಗೆ ಎಂಬುದು ಒಂದು ಸಮಸ್ಯೆಯಾಗಿಯೇ ಉಳಿಯಿತು. ಒಬ್ಬ ಮನೋರೋಗ ತಜ್ಞರು ಈಗಾಗಲೇ ತಮ್ಮಿಂದ ವಾಸಿ ಮಾಡಲಾಗುದಿಲ್ಲವೆಂದು ಹೇಳಿಬಿಟ್ಟಿದ್ದರು. ನಮ್ಮ ಮಾನಸಿಕ ಪಠ್ಯ ಪುಸ್ತಕಗಳು ಸಹ ಈ ಕಾಯಿಲೆಯಲ್ಲಿ ಚಿಕಿತ್ಸೆ ಯಶಸ್ವಿಯಾಗುವುದು ವಿರಳ ಎಂದು ವರ್ಣಿಸುತ್ತವೆ. ಕಾಯಿಲೆ ಬಹಳ ದಿನಗಳಿಂದಿದ್ದರೆ ವಾಸಿಮಾಡುವುದು ಸಹ ಕಷ್ಟ. ನಾಗರಾಜನ ಕಾಯಿಲೆ ಈಗಾಗಲೇ ಒಂದು ವರ್ಷದಿಂದಿರುವುದು. ಈ ಎಲ್ಲಾ ಕಾರಣಗಳಿಂದ ಅವನನ್ನು ಚಿಕಿತ್ಸೆಗೊಳಪಡಿಸುವುದಕ್ಕೆ ನನ್ನ ಮನಸ್ಸು ಒಂದು ರೀತಿಯಲ್ಲಿ ಹಿಂದೇಟು ಹಾಕಿತು. ಆದರೆ ರೋಗಿಯು ಬಹು ದೀನನಾಗಿ ಕೇಳಿಕೊಂಡಾಗ ನನ್ನಿಂದ ಇಲ್ಲವೆಂದು ಹೇಳಲಾಗಲಿಲ್ಲ.

ಚಿಕಿತ್ಸೆ

ಮೂರು ಬಗೆಯ ಚಿಕಿತ್ಸೆಗಳನ್ನು ಒಂದೇ ಬಾರಿಗೆ ಪ್ರಾರಂಭಿಸಿದೆ. ನಾಗರಾಜ ಬೇರೆ ರಾಜ್ಯದಲ್ಲಿದ್ದು ಇಲ್ಲಿಗೆ ಚಿಕಿತ್ಸೆಗೋಸ್ಕರವೇ ಬಂದಿದ್ದನು. ಕಾಲ ವಿಳಂಬ ಮಾಡಿದಷ್ಟೂ ಅವನ ಆರ್ಥಿಕ ಪರಿಸ್ಥಿತಿ ಹದಗೆಡುವುದು. ಆದುದರಿಂದ ರಾಸಾಯನಿಕ ನಿದಾನ (Chemo-therapy) ನಕಾರ ಇರುವುತ್ತಮಿಕೆ (Negative conditioning) ಮತ್ತು ಮನೋವಿಶ್ಲೇಷಣೆ ಎಂಬ ಮೂರು ಬಗೆಯ ಚಿಕಿತೆಗೊಳಪಡಿಸಿದೆ. ರಸಾಯನಿಕ ಚಿಕಿತ್ಸೆಯಲ್ಲಿ ಮಾನಸಿಕ ಒತ್ತಡ ಕಡಿಮೆ ಮಾಡಲು ಉಪಶಾಮಕವನ್ನು (Tranquiliser) ಬರೆದುಕೊಟ್ಟೆ. ಇದೇನಿದ್ದರೂ ತಾತ್ಕಾಲಿಕ ಪರಿಹಾರ. ಈ ಔಷಧಿಗಳನ್ನು ನಿಲ್ಲಿಸಿದರೆ ಮತ್ತೆ ಮಾನಸಿಕ ಒತ್ತಡ ಹೆಚ್ಚಾಗಬಹುದು. ಇವು ಮಾನಸಿಕ ಒತ್ತಡವನ್ನು ಕಡಿಮೆ ಮಾಡುತ್ತವೆಯೇ ಹೊರತು ಮಾನಸಿಕ ಒತ್ತಡಕ್ಕೆ ಯಾವುದು ಕಾರಣವೋ ಅದನ್ನು ತೆಗೆದುಹಾಕುವುದಿಲ್ಲ. ಗಿಡವನ್ನು ಮೇಲೆ ಮಾತ್ರ ಕತ್ತರಿಸಿದರೆ ಮತ್ತೆ ಬೆಳೆಯುವ ಸಾಧ್ಯತೆಯಿದೆ. ಆದರೆ ಅದನ್ನು ಬುಡ ಸಮೇತ ಕಿತ್ತರೆ ಮತ್ತೆ ಬೆಳೆಯುವುದಿಲ್ಲ. ಈ ಕಾಯಿಲೆಯನ್ನು ಬುಡ ಸಮೇತ ಕೀಳಲು ಮನೋವಿಶ್ಲೇಷಣೆಯನ್ನು ಉಪಯೋಗಿಸಲಾಯಿತು.

ಇರುವೃತ್ತಮಿಕೆ


ನಕಾರ ಇರುವೃತ್ತಮಿಕೆಯಲ್ಲಿ ರೋಗಿಯ ತಲೆಗೆ ವಿದ್ಯುತ್ ಶಕ್ತಿಯನ್ನು ಕೊಡಲಾಗುವುದು. ಇದು ಸಾಮಾನ್ಯವಾಗಿ ಬಳಕೆಯಲ್ಲಿರುವಂತೆ ಶಾಕ್ ಚಿಕಿತ್ಸೆಯಲ್ಲ. ಶಾಕ್ ಚಿಕಿತ್ಸೆ ಅಪಾಯಕಾರಿ ಮತ್ತು ಅದನ್ನು ಜ್ಞಾನ ತಪ್ಪಿಸಿ ಕೊಡಬೇಕು. ನಕಾರ ಇರುವೃತ್ತಮಿಕೆ ಚಿಕಿತ್ಸೆ ಅಪಾಯಕರವಲ್ಲ ಮತ್ತು ಇಲ್ಲಿ ರೋಗಿಯ ಪ್ರಜ್ಞೆಯನ್ನು ತಪ್ಪಿಸುವುದಿಲ್ಲ. ಇದನ್ನು ದವಾಖಾನೆಯಲ್ಲಿಯೇ ಸುಲಭವಾಗಿ ಕೊಡಬಹುದು. ನಕಾರ ಇರುವೃತ್ತಮಿಕೆ ಪ್ಯಾವ್ಲೊವ್‌ರವರ ಇರುವೃತ್ತಮಿಕೆ (Pavlovian conditioning) ತತ್ವದ ಆಧಾರವನ್ನು ಅವಲಂಬಿಸಿದೆ. ಪ್ಯಾವ್ಲೋವ್‌ರವರು ನಾಯಿಯ ಮೇಲೆ ಪ್ರಯೋಗವನ್ನು ನಡೆಸಿ ಈ ತತ್ವವನ್ನು ಕಂಡು ಹಿಡಿದರು.

(೧) ಘಂಟೆ ⟶ ಜಠರ ರಸ ಉದ್ಭವವಿಲ್ಲ

(೨) ಘಂಟೆ + ಆಹಾರ ⟶ ಜಠರ ರಸ ಉದ್ಭವ

(೩) ಘಂಟೆ ⟶ ಜಠರ ರಸ ಉದ್ಭವ.

ಕೇವಲ ಘಂಟೆ ಹೊಡೆದರೆ ನಾಯಿಯ ಹೊಟ್ಟೆಯಲ್ಲಿ ಜಠರ ರಸ ಉದ್ಭವವಾಗುವುದಿಲ್ಲ. ಪ್ರತಿ ಬಾರಿಯೂ ಘಂಟೆ ಹೊಡೆದು ಆಹಾರ ಕೊಡುತ್ತಾ ಹೋದರೆ ಕೆಲವು ಸಮಯದ ನಂತರ ನಾಯಿಗೆ ಘಂಟೆ ಹೊಡೆದಾಗಲೆಲ್ಲಾ ಆಹಾರ ಸಿಗುವುದೆಂದು ತಿಳಿದುಹೋಗುವುದು. ನಂತರ ಆಹಾರ ಕೊಡದೇ ಕೇವಲ ಘಂಟೆ ಹೊಡೆದರೂ ಕೂಡ ನಾಯಿಯ ಹೊಟ್ಟೆಯಲ್ಲಿ ಜಠರ ರಸ ಉದ್ಭವವಾಗುವುದು. ಇದನ್ನು ಪ್ಯಾವ್ಲೊವ್‌ರವರು ಇರುವೃತ್ತಮಿಕೆ ಎಂದು ಕರೆದರು. ಈ ಪ್ರಯೋಗದಲ್ಲಿ ಆಹಾರ ಯಾವ ರೀತಿ ಜಠರ ರಸ ಉದ್ಭವ ಮಾಡುವುದೋ ಅದೇ ರೀತಿ ತಟಸ್ಥ ಚೋದಕಾರಕವಾದ (Neutral stimulous) ಘಂಟೆಯಿಂದಲೂ ಜಠರ ರಸ ಉದ್ಭವವಾಗುವಂತೆ ಮಾಡಬಹುದು ಎಂದು ತೋರಿಸಿಕೊಟ್ಟರು. ಇದನ್ನು ನಕಾರ ಇರುವೃತ್ತಮಿಕೆ (Negative conditioning) ಎಂದು ಕರೆಯುತ್ತೇವೆ. ನಕಾರ ಇರುವೃತ್ತಮಿಕೆಯಲ್ಲಿ ರೋಗಿಯ ಇಕ್ಕೆಡೆಯ ಕಣತಲೆಗಳಿಗೆ (temples) ವಿದ್ಯುಗಣೆ (electrode) ಗಳನ್ನಿಟ್ಟು ನೋವಾಗುವಂತೆ ವಿದ್ಯುತ್ ಪ್ರವಾಹವನ್ನು ಬಿಡುತ್ತೇವೆ. ಇದಕ್ಕೆ ವಿಶೇಷವಾದ ಯಂತ್ರವಿರಬೇಕು. ಇದೇ ರೀತಿ ವಿದ್ಯುತ್ ಪ್ರವಾಹವನ್ನು ಕೊಡುತ್ತಾ ಬಂದಲ್ಲಿ ರೋಗಿಯ ಮನಸ್ಸು ಪ್ರವಾಹಕ್ಕೂ ತನ್ನ ಕಾಯಿಲೆಗೂ ಸಂಬಂಧ ಕಲ್ಪಿಸಿ ಕಾಯಿಲೆಯನ್ನು ಬಯಸದೇ ಇರುವಂತೆ ಮಾಡುತ್ತದೆ. ನೋವಾಗುವಂತಹ ವಿದ್ಯುತ್ ಪ್ರವಾಹ ಯಾವ ರೀತಿ ಬಯಸಲಸಾಧ್ಯವೋ ಅದೇ ರೀತಿ ಕಾಯಿಲೆಯು ಸಹ ಬಯಸಲಸಾಧ್ಯವಾಗುವಂತೆ ಆಗುತ್ತದೆ. ಆಗ ಮನಸ್ಸು ಕಾಯಿಲೆಯನ್ನು ಕೈ ಬಿಡಬೇಕಾಗುತ್ತದೆ. ಈ ಚಿಕಿತ್ಸೆಯು ಸಹ ಕಾಯಿಲೆಯನ್ನು ಬೇರಿನ ಸಮೇತ ಕಿತ್ತೊಗೆಯುವುದಿಲ್ಲ. ಕಾಯಿಲೆಗೆ ಕಾರಣವಾದ ಮಾನಸಿಕ ತುಮುಲ ಹಾಗೆಯೇ ಉಳಿಯುತ್ತದೆ. ಇಂತಹ ಸಂದರ್ಭಗಳಲ್ಲಿ ನಾವು



"'ನಿನಗೆ ಕೊಟ್ಟು ಮದುವೆ ಮಾಡೋ ಬದಲ ನನ್ನ ಮಗಳನ್ನ ಬಾವಿಗಾದರೂ ತಳ್ತೀನಿ' ಅಂದ್ರು ನಂ ಮಾವ, ಅದಕ್ಕೇ ಕಾಯ್ತಾ ಇದೀನಿ."

ಒಂದು ತೊಂದರೆ ಕೈ ಬಿಡುವಂತೆ ಮಾಡಿದರೆ ಪರಿಣಾಮ ಇನ್ನೊಂದು ತೊಂದರೆಯಲ್ಲಿ ಕಾಣಿಸಿಕೊಳ್ಳಬಹುದು. ಇದನ್ನು ನಾವು Syndrome shift ಎಂದು ಕರೆಯುತ್ತೇವೆ. ಉದಾಹರಣೆಗೆ, ನಾಗರಾಜನ ನುಲಿಗೊರಳು ವಾಸಿಯಾಗಿ ಲಕ್ವವುಂಟಾಗಬಹುದು. ಈ ರೀತಿ ಆಗದಿರುವಂತೆ ಮಾಡಲು ಇರುವ ಒಂದೇ ಒಂದು ದಾರಿಯೆಂದರೆ ಮಾನಸಿಕ ಒತ್ತಡಕ್ಕೆ ನಿಜವಾದ ಕಾರಣಗಳನ್ನು ಕೂಲಂಕುಷವಾಗಿ ಪರಿಶೀಲಿಸಿ ಮನಸ್ಸನ್ನು ಅರ್ಥಮಾಡಿಕೊಳ್ಳುವುದು. ಇದನ್ನು ಮನೋವಿಶ್ಲೇಷಣೆಯಲ್ಲಿ ಸಾಧಿಸಲಾಯಿತು.

ಮನೋವಿಶ್ಲೇಷಣೆಯಲ್ಲಿ ಏನೂ ತಡೆಯಿಲ್ಲದೆ ಮಾತನಾಡುವುದು ಬಹು ಮುಖ್ಯ. ನಾಗರಾಜ ಬಹು ಮೃದು ಮತ್ತು ಬಿಗು ಸ್ವಭಾವದವನಾದುದರಿಂದ ಅವನು ತಡೆಯಿಲ್ಲದೆ ಮಾತನಾಡುತ್ತಿರಲಿಲ್ಲ. ಪ್ರಾರಂಭದಲ್ಲಿ ತಮಗೆ ಮೇಲಾಗಿದೆಯೇ ಎಂದು ಕೇಳಿದರೆ ಇಲ್ಲವೆಂದು ಹೇಳಲು ಸಹ ಅವನಿಂದಾಗುತ್ತಿರಲಿಲ್ಲ. ಅವನನ್ನು ನೋಡಿದಾಗ ಮೇಲಾಗಿಲ್ಲವೆಂದೂ ಅವನು ಸುಮ್ಮನೆ ಮೇಲು ಎಂದು ಹೇಳುತ್ತಿದ್ದಾನೆಂದೂ ಸುಲಭವಾಗಿ ಹೇಳಬಹುದಿತ್ತು. ಇರುವುದನ್ನು ಮರೆಮಾಚದೆ ಇದ್ದಂತೆಯೇ ಹೇಳಿದರೆ ಮಾತ್ರ ನನಗೇನು ಮಾಡಬೇಕೆಂದು ತಿಳಿಯುವುದು ಎಂದು ತಿಳಿಸಿ ಬಿಚ್ಚು ಮನಸ್ಸಿನಿಂದ ಮಾತನಾಡಲು ಪ್ರೋತ್ಸಾಹಿಸಿದೆ.

ನಿರಾಶೆ

ತನ್ನ ಕಾಯಿಲೆ ವಾಸಿಯಾಗಬಹುದೆಂಬ ಭರವಸೆಯಿಲ್ಲವೆಂದೂ ತನ್ನ ಸಂಸಾರವನ್ನು ಸಹೋದರರು ನೋಡಿಕೊಳ್ಳಬೇಕಾಗಬಹುದೆಂದೂ ಆತ ನುಡಿದನು. ತಾನು ಪ್ರಾಮಾಣಿಕತೆ ಮತ್ತು ನಿಷ್ಠೆಯಿಂದ ಕೆಲಸ ಮಾಡಿದ್ದು, ಯಾರಿಗೂ ಯಾವ ರೀತಿಯಲ್ಲೂ ಅನ್ಯಾಯ ಮಾಡಿಲ್ಲದಿದ್ದರೂ ತನಗೇಕೆ ಈ ಗತಿ ಬಂದಿತೆಂದು ನೊಂದುಕೊಂಡನು. ಮಕ್ಕಳ ಮುಂದಿನ ವಿದ್ಯಾಭ್ಯಾಸ ಮತ್ತು ಸಂಸಾರದ ಗತಿಯೇನು ಎಂದು ಅವನು ಬಹಳ ಕೊರಗುತ್ತಿದ್ದು, ತಾನು ಏಕಾದರೂ ಈ ಪ್ರಪಂಚದಲ್ಲಿ ಹುಟ್ಟಿದೆನೋ ಎನಿಸುತ್ತಿತ್ತವನಿಗೆ. ಈ ಕಾಯಿಲೆ ವಾಸಿಯಾಗದಿದ್ದು ಎಲ್ಲೂ ಕೆಲಸ ಸಿಗದೇ ಇದ್ದರೆ ತನ್ನ ಸಹೋದರರು ಸಹಾಯ ಮಾಡಬಹುದು ಎಂಬ ನಂಬಿಕೆ ಒಂದು ಭಾಗದಲ್ಲಿದ್ದರೆ ಇನ್ನೊಂದು ಭಾಗದಲ್ಲಿ ಅವರು ಅಕಸ್ಮಾತ್ ಇಲ್ಲವೆಂದು ಹೇಳಿದರೇನು ಗತಿ ಎನ್ನುವುದು ಬಾಧಿಸುತ್ತಿತ್ತು. ತಾನು ತನ್ನ ಸಂಸಾರಕ್ಕೆ ಯಾವ ಸುಖವನ್ನೂ ಕೊಡಲಿಲ್ಲವೆಂದು ನೊಂದುಕೊಳ್ಳುವನು. ನಾಗರಾಜನಿಗೆ ಕಾಯಿಲೆ ಮತ್ತು ಜೀವನದ ಮೇಲೆ ಜಿಗುಪ್ಸೆ ಉಂಟಾಗಿದೆಯೆಂದು ಸುಲಭವಾಗಿ ವೇದ್ಯವಾಯಿತು.

ಧೈರ್ಯ

ನಾನು, "ನಿಮಗೆ ಬಂದಿರುವ ಕಷ್ಟ ಸಣ್ಣದಲ್ಲವೆಂಬುದೇನೋ ನಿಜ, ಆದರೆ ಇದರಿಂದ ಹೊರಬರುವ ದಾರಿಯೇ ಇಲ್ಲವೆಂಬುದನ್ನು ಮಾತ್ರ ನಾನು ಒಪ್ಪಿಕೊಳ್ಳುವುದಿಲ್ಲ. ಮನಸ್ಸಿದ್ದಲ್ಲಿ ಪ್ರತಿಯೊಂದಕ್ಕೂ ಮಾರ್ಗ ಉಂಟು" ಎಂದು ಬಿಂಬಿಸಿದೆ. ಅವನ ನಿರಾಶಾದಾಯಕ (pessimist) ಯೋಚನೆಯನ್ನು ಆಶಾದಾಯಕಕ್ಕೆ (Optimist) ಮಾರ್ಪಾಡು ಮಾಡುವುದು ನನ್ನ ಕರ್ತವ್ಯವಾಗಿತ್ತು. ನಾಗರಾಜ ಕಾಯಿಲೆಯ ಬಗ್ಗೆ ಹಲವಾರು ವೈದ್ಯರನ್ನು ಕಂಡಿದ್ದರೂ ಸರಿಯಾದ ತಜ್ಞರಿಂದ ಚಿಕಿತ್ಸೆಗೆ ಒಳಪಟ್ಟಿರಲಿಲ್ಲ. ಒಬ್ಬ ಮನೋರೋಗ ತಜ್ಞರು ತಮ್ಮಿಂದಾಗುವುದಿಲ್ಲವೆಂದು ಹೇಳಿದಾಗ ಅಲ್ಲಿಗೇ ಕೈಬಿಟ್ಟು ನಿರಾಶನಾಗಿದ್ದನು. ಸರಿಯಾದ ಚಿಕಿತ್ಸೆಯನ್ನೇ ಪಡೆಯದೆ ಕಾಯಿಲೆ ವಾಸಿಯಾಗುವುದಿಲ್ಲವೆಂದು ಹೇಳಲು ಸಾಧ್ಯವೇ? ಅದೇ ರೀತಿ ಕೆಲಸ ಸಿಗುವುದು ಸಾಧ್ಯವಿಲ್ಲವೆಂಬುದು ಪ್ರಯತ್ನಿಸಿದ ಮೇಲೆ ತಾನೆ ತಿಳಿಯುವುದು. ಯಾವ ಕೆಲಸವೂ ಸಿಗದಿದ್ದರೆ, ತಾನೇ ಯಾವುದಾದರೂ ಒಂದು ಸ್ವಂತ ವೃತ್ತಿಯನ್ನು ಮಾಡಿ ಜೀವಿಸಲು ಸಾಧ್ಯವಿಲ್ಲವೆ? ಈ ಪ್ರಶ್ನೆಗಳಿಗೆ ಅವನಿಂದ ಸಮಂಜಸವಾದ ಉತ್ತರಗಳಿರಲಿಲ್ಲ. ಎರಡು ಬಾರಿ ಕೆಲಸ ಹೋಗಿದ್ದುದರಿಂದ ಅಕಸ್ಮಾತ್ತಾಗಿ ಕೆಲಸ ಸಿಕ್ಕರೂ ಮತ್ತೆ ಅದೇ ರೀತಿ ಎಲ್ಲಾಗುವುದೋ ಎಂಬ ಭಯವಿದೆಯೆಂದು ಹೆದರಿದನು.

ಚಲನಚಿತ್ರ ವಿತರಣೆಯ ವಿಷಯ ತನಗೆ ಸಾಕಷ್ಟು

ತಿಳಿದಿದ್ದು ಅಲ್ಪ ಬಂಡವಾಳವಲ್ಲಿ ಕಮೀಶನ್ ಮೇಲೆ ತನ್ನ ಜೀವನವನ್ನು ನಡೆಸಲು ಸಾಧ್ಯವಿದೆಯೆಂದು ಒಪ್ಪಿಕೊಂಡನು. ಆದರೆ ಯಾವಾಗಲೂ ಸ್ವಂತ ವೃತ್ತಿಯನ್ನು ಮಾಡದಿದ್ದುದರಿಂದ ಅದು ತನ್ನಿಂದ ಸಾಧ್ಯವಾಗದೇ ಇರಬಹುದೆಂಬ ಭಯ ವಿತ್ತು. ಒಟ್ಟಿನಲ್ಲಿ ಕೆಲಸ ಸಿಕ್ಕಿದರೆ ಒಂದು ರೀತಿಯ ಕಷ್ಟ ಮತ್ತು ಕೆಲಸ ಸಿಗದಿದ್ದರೆ ಇನ್ನೊಂದು ರೀತಿಯಲ್ಲಿ ಕಷ್ಟ. ಮಾನವ ಸುಖ-ಜೀವಿ; ಕಷ್ಟವನ್ನು ಯಾರೂ ಬಯಸುವುದಿಲ್ಲ. ಫ್ರಾಯ್ಡ್‌ರವರ ಪ್ರಕಾರ ಪ್ರತಿಯೊಬ್ಬ ಮಾನವನೂ ಸುಲಭವಾದ ರೀತಿಯಲ್ಲೇ ಸುಖವನ್ನು ಪಡೆಯಲು ಪ್ರಯತ್ನಿಸುತ್ತಾನೆ.

ತುಮುಲ

ನಾಗರಾಜನ ಒಂದು ಭಾಗದ ಮನಸ್ಸಿನಲ್ಲಿ ಕೆಲಸ ಮಾಡಬೇಕೆಂದಿದ್ದರೆ ಇನ್ನೊಂದು ಭಾಗದಲ್ಲಿ ಯಾವ ಕೆಲಸ ಮಾಡಿದರೂ ಕಷ್ಟವೇ ಎಂಬುದಿತ್ತು. ಈ ರೀತಿಯ ಮಾನಸಿಕ ಹೊಯ್ದಾಟಕ್ಕೆ ಮಾನಸಿಕ ತುಮುಲ ಎಂದು ಕರೆಯುತ್ತೇವೆ. ಈ ರೀತಿಯ ಮಾನಸಿಕ ತುಮುಲಕ್ಕೆ ಮೂರು ರೀತಿಯ ಪರಿಹಾರ ಮಾತ್ರ ಸಾಧ್ಯ. ಮೊದಲನೆಯದಾಗಿ, ಇನ್ನೊಂದು ಕೆಲಸವನ್ನು ಹುಡುಕಿಕೊಳ್ಳುವುದು. ಹಿಂದೆ ಆದಂತೆಯೇ ಈ ಕೆಲಸದಲ್ಲಿಯೂ ಆಗಬಹುದೆಂಬ ಭಯವಿರುವುದರಿಂದ ಇದು ಕಷ್ಟ. ಎರಡನೆಯದಾಗಿ ಸ್ವಂತ ವೃತ್ತಿ ಮಾಡುವುದು. ಯಾವಾಗಲೂ ಇದು ಗಂಡಾಂತರದ್ದಾಗಿರುವುದರಿಂದಲೂ ಇದು ಕಷ್ಟ. ಮೂರನೆಯದು, ಯಾವ ಕೆಲಸವನ್ನೂ ಮಾಡದೇ ಇರುವುದು. ಇರುವ ಮೂರು ಪರಿಹಾರಗಳಲ್ಲಿ ಕಡೆಯದೊಂದೇ ಸುಲಭ. ಆದರೆ ಏನೂ ಕೆಲಸ ಮಾಡದೇ ಇನ್ನೊಬ್ಬರನ್ನು ಅವಲಂಬಿಸಿ ಜೀವನ ಮಾಡುವುದು ಬಹು ಜನರ ಒಂದು ಭಾಗದ ಮನಸ್ಸಿಗೆ (ಮೇಲಹಂ) ಒಗೆಪ್ಪಿಯಾಗುವುದಿಲ್ಲ. ಇದಕ್ಕೆ ನಾಗರಾಜನೂ ಹೊರತಲ್ಲ. ಒಟ್ಟಿನಲ್ಲಿ, ಇರುವ ಮೂರು ಪರಿಹಾರದಲ್ಲಿ ಎಲ್ಲವೂ ಅಸಾಧ್ಯವೆನ್ನುವ ಮಟ್ಟಕ್ಕೆ ಬಂದಿತು. ಈ ರೀತಿ ಯಾವ ನಿರ್ಧಾರಕ್ಕೂ ಬರದೆ ಎಷ್ಟು ದಿವಸ ಇರಲು ಸಾಧ್ಯ? ಮನಸ್ಸು ತನ್ನದೇ ಆದ ರೀತಿಯಲ್ಲಿ ಪರಿಹಾರ ಹುಡುಕುತ್ತದೆ. ತನಗೆ ತಿಳಿದಂತೆ ಕೆಲಸ ಮಾಡದೆ ಸುಮ್ಮನೆ ಕುಳಿತಿರುವುದು ಮೇಲಹಂಗೆ ಸಹಿಸಲಸಾಧ್ಯ. ಅದು ಮೇಲಹಂಗೆ ತಿಳಿಯುವಂತೆ ಅದನ್ನೇ ಬೇರೆ ರೂಪದಲ್ಲಿ ಸಾಧಿಸಿದರೆ ಆಗ ಯಾವ ತೊಂದರೆಯೂ ಇಲ್ಲ. ಈ ರೀತಿ ಮೇಲಹಂಗೆ ತಿಳಿಯದಂತೆ ಮಾಡಲು ಅದನ್ನೇ ಅಪಪ್ರಜ್ಞೆಗೆ (ಒಳಮನಸು) ನೂಕುತ್ತದೆ. ಈ ಮಾನಸಿಕ ಕೌಶಲ್ಯಕ್ಕೆ ಮನಶಾಸ್ತ್ರದ ದಮನ (repression) ಎಂದು ಕರೆಯುತ್ತೇವೆ. ಮಾನವ ಬುದ್ಧಿಜೀವಿಯಾದುದರಿಂದ ಯಾವುದನ್ನೂ ಕಾರಣವಿಲ್ಲದೆ ಒಪ್ಪಿಕೊಳ್ಳುವುದಿಲ್ಲ. ತನಗೆ ಕಾಯಿಲೆ ಬಂದಿದೆ. ಆದುದರಿಂದ ಕೆಲಸ ಮಾಡಲು ಆಗುವುದಿಲ್ಲವೆನ್ನುವುದು ಯಾರ ಮೇಲಹಂಗಾದರೂ ಸುಲಭವಾಗಿ ಒಪ್ಪಿಗೆಯಾಗುತ್ತದೆ. ಈ ಮಾನಸಿಕ ಕೌಶಲವನ್ನು ಪ್ರೊಜೆಕ್ಷನ್ ಎಂದು ಕರೆಯುತ್ತೇವೆ. ಅಲ್ಲಿಗೆ ರೋಗಿ ತನಗೆ ನಿಜವಾಗಿಯೂ ಕೆಲಸ ಮಾಡಲು ಸಾಧ್ಯವಿದೆಯೆಂದೂ, ಆದರೆ ಕಾಯಿಲೆಯಿಂದ ತನಗೆ ಕೆಲಸ ಮಾಡಲು ಸಾಧ್ಯ-ವಿಲ್ಲವೆಂದು ಸಮಾಧಾನ ಪಟ್ಟುಕೊಳ್ಳಲು ಪ್ರಯತ್ನಿಸುವನು.

ಇಲ್ಲಿ ನಿಜವಾದ ಕಾರಣ ಮತ್ತು ರೋಗಿ ಕೊಟ್ಟ ಕಾರಣ ಅವನಿಗೆ ತಿಳಿಯದಂತೆ ತಿರುವು ಮುರುವಾಗಿರುತ್ತದೆ. ಗಿಡ ಮೊದಲು ಹುಟ್ಟಿತೋ ಅಥವಾ ಬೀಜ ಮೊದಲು ಹುಟ್ಟಿತೋ ಎಂಬ ನಾಣ್ಣುಡಿಯಂತೆ ಇಲ್ಲಿ ನಿಜವಾಗಿಯೂ ನಾನಾ ಕಾರಣಗಳಿಂದ ರೋಗಿ ಕೆಲಸ ಮಾಡಲು ರೋಗಿಗೆ ಇಷ್ಟವಿಲ್ಲದಿರುವುದರಿಂದ ಕಾಯಿಲೆ ಹುಟ್ಟಿಕೊಂಡಿದೆ ಎನ್ನುವುದು ಅವನಿಗೇ ತಿಳಿದಿರುವುದಿಲ್ಲ. ನಿಜವಾಗಿಯೂ ರೋಗಿಗೆ ಕೆಲಸ ಮಾಡಲು ಇಷ್ಟವಿಲ್ಲದಿದ್ದರೆ ಕಾಯಿಲೆ ವಾಸಿಮಾಡಿಕೊಳ್ಳಲು ತನ್ನ ಬಳಿಗೆ ಏತಕ್ಕೋಸ್ಕರ ಬಂದ ಎನ್ನುವ ಪ್ರಶ್ನೆಯೇಳುತ್ತದೆ. ಅವನಿಗೆ ಕೆಲಸ ಮಾಡಲು ಇಷ್ಟವಿಲ್ಲದಿರುವುದು ನೂರಕ್ಕೆ ನೂರರಷ್ಟು ನಿಜವಲ್ಲ, ಇದು ಒಂದು ಭಾಗದ ಮನಸ್ಸಿನಲ್ಲಿ ಮಾತ್ರ ನಿಜ. ಮನುಷ್ಯ ಇನ್ನೊಬ್ಬರಿಗೆ ಮೋಸ ಮಾಡುವುದು ಸುಲಭ, ಆದರೆ ತನ್ನ ಮನಸ್ಸಿಗೆ ತಾನೇ ಮೋಸ ಮಾಡು

ವುದು (ತಿಳಿದಂತೆಯಾಗಲೀ ಅಥವಾ ತಿಳಿಯದಂತೆಯಾಗಲಿ) ಸುಲಭವಲ್ಲ. ನಾಗರಾಜನ ಒಂದು ಭಾಗದ ಮನಸ್ಸಿಗೆ ಕೆಲಸ ಮಾಡುವುದು ಇಷ್ಟವಿಲ್ಲದ್ದಾಗಿ ಕಾಯಿಲೆ ಒಂದು ನೆಪವಾಗಿದ್ದರೆ, ಇನ್ನೊಂದು ಭಾಗದ ಮನಸ್ಸಿಗೆ ನಿಜಸ್ಥಿತಿಯ ಅರಿವಿತ್ತು. ತನ್ನ ಅಂತರಾಳದಲ್ಲಿ ಹುದುಗಿದ್ದ ಆ ಭಾಗದ ಮನಸ್ಸು ಅವನನ್ನು ವೈದ್ಯರಲ್ಲಿಗೆ ಎಳೆದುಕೊಂಡು ಬಂದಿತ್ತು. ಎಷ್ಟೋ ವೈದ್ಯರಿಂದ ಚಿಕಿತೆ ನಿಷ್ಫಲವಾಗಿದ್ದರೂ ಮರಳಿ ಪ್ರಯತ್ನಿಸಲು ಪ್ರಚೋದಿಸಿತ್ತು. ಏಕೆಂದರೆ ಆ ಭಾಗದ ಮನಸ್ಸಿಗೆ ಇದು ವಾಸಿ ಮಾಡಲು ಸಾಧ್ಯವೆಂದು ತಿಳಿದಿತ್ತು. ಈ ರೀತಿಯ ಮಾನಸಿಕ ಹೊಯ್ದಾಟ ಬಹು ಸಾಮಾನ್ಯ ಮತ್ತು ನಾವೆಲ್ಲರೂ ಸದಾ ಅನುಭವಿಸುತ್ತಲೇ ಇರುವಂಥದು ಕೂಡ.ಆದರೆ ಈ ರೀತಿಯ ಹೊಯ್ದಾಟ ಹೆಚ್ಚಾಗಿ ಮನಸ್ಸು ಯಾವ ನಿರ್ಧಾರಕ್ಕೂ ಬರದೇ ಇದ್ದಾಗ ನಾಗರಾಜನಿಗಾದಂತಹ ತೊಂದರೆಗಳಾಗುತ್ತವೆ. ಮನೋವಿಶ್ಲೇಷಣೆಯಲ್ಲಿ ಮನಸ್ಸಿನ ನಾನಾ ಭಾಗಗಳನ್ನು ಕೂಲಂಕಷವಾಗಿ ಅನ್ವೇಷಿಸಿದಾಗ ಆಂತರಿಕ ಹೊಯ್ದಾಟದ ಅರಿವಾಗುತ್ತದೆ. ಈ ರೀತಿ ಅರಿವು ಮೂಡಿದಾಗ ಅಪಪ್ರಜ್ಞೆಗೆ ರೋಗಿತರವಾದ ಮಾನಸಿಕ ಕೌಶಲಗಳನ್ನು (unhealthy psychological defences) ಉಪಯೋಗಿಸಲು ಅಸಾಧ್ಯವಾಗುತ್ತದೆ. ಅನಾರೋಗ್ಯಕರವಾದ ಮನಸ್ಸಿನ ಭಾಗವನ್ನು ಅರ್ಥಮಾಡಿಕೊಂಡು ತಡೆ ಹಾಕಿದಾಗ ಆರೋಗ್ಯಕರವಾದ ಮನಸ್ಸಿನ ಭಾಗ ಬಲವಾಗಿ ಮಾನಸಿಕ ಆರೋಗ್ಯಕ್ಕೆಡೆಯಾಗುತ್ತದೆ.

ಗುಣಮುಖ

ಎಲ್ಲಾ ಚಿಕಿತ್ಸೆಗಳ ಪರಿಣಾಮವಾಗಿ ನಾಗರಾಜ ಕ್ರಮೇಣ ಗೆಲುವಾಗಲಾರಂಭಿಸಿದನು. ಮೊದಲಿನ ಎರಡು ವಾರದಲ್ಲೇ ತಲೆದೂಗುವಿಕೆ ನಿಂತು ಹೋಯಿತು. ನುಲಿಗೊರಳು ಸ್ವಲ್ಪ ಸ್ವಲ್ಪವಾಗಿಯೇ ಮೇಲಾಗಲಾರಂಭಿಸಿತು. ಐದು ವಾರ ಚಿಕಿತ್ಸೆ ನಂತರ ಅವನ ನುಲಿಗೊರಳು ಮುಕ್ಕಾಲು ಭಾಗದಷ್ಟು ಕಡಿಮೆಯಾಯಿತು. ನಂತರ ನಾಲ್ಕು ದಿನಗಳು ಅವನ ನುಲಿಗೊರಳು ಮತ್ತೆ ಸ್ವಲ್ಪ ಹೆಚ್ಚೆನಿಸಿತು. ಆಗ ನಾಗರಾಜ ಧೃತಿಗೆಟ್ಟು ಅಳಲು ಮೊದಲು ಮಾಡಿದನು. ಜೀವನದಲ್ಲಿ ಏರುಪೇರುಗಳು ಹೇಗೆ ಸಾಮಾನ್ಯವೋ ಅದೇ ರೀತಿ ಕಾಯಿಲೆಗಳಲ್ಲೂ ಸರ್ವೇ ಸಾಮಾನ್ಯ. ಕಾಯಿಲೆ ಹೆಚ್ಚಾದಾಗ ಧೃತಿಗೆಡಕೂಡದು. ಕೆಲವು ಸಮಯ ಕಾಯಿಲೆಗಳು ಹೆಚ್ಚಾದ ನಂತರ ವಾಸಿಯಾಗುವುದು. ಏಳು ವಾರಗಳಲ್ಲಿ ನುಲಿಗೊರಳು ಸಂಪೂರ್ಣವಾಗಿ ಗುಣವಾಯಿತು. ನಾಗರಾಜನಿಗಾದ ಸಂತೋಷ ಅಷ್ಟಿಷ್ಟಲ್ಲ. ಇಷ್ಟಲ್ಲದೇ ೩-೪ ಕಂಪನಿಗಳು ಅವನನ್ನು ಕೆಲಸಕ್ಕೆ ತೆಗೆದುಕೊಳ್ಳಲು ಆಸಕ್ತಿ ತೋರಿಸಿದ್ದವು. ತಾನು ಮೊದಲು ಕೆಲಸ ಮಾಡಿದ್ದ ಕಂಪನಿಯ ಭಾಗಸ್ಥರೊಬ್ಬರು ಕಾಯಿಲೆ ವಾಸಿಯಾಗಿದ್ದರೆ ಸ್ಥಳೀಯ ಮ್ಯಾನೇಜರನ್ನು ನೋಡಲು ತಿಳಿಸಿದ್ದುದು ಅವನಿಗೆ ಹೊಸ ಹುರುಪನ್ನು ಕೊಟ್ಟಿತು. ಅವನ ಕಾಯಿಲೆಯನ್ನು ವಾಸಿ ಮಾಡಿ ತನ್ನ ಕಾಲ ಮೇಲೆ ತಾನೇ ನಿಲ್ಲಲು ಸಹಾಯಕನಾದುದಕ್ಕೆ ನನಗೆ ಕೃತಜ್ಞತೆಗಳನ್ನರ್ಪಿಸಿದಾಗ ನಾಗರಾಜನ ಕಣ್ಣಿನಲ್ಲಿ ಪುನಃ ಕಣ್ಣೀರೂರಿತ್ತು. ನಾನು ಗುಡ್ ಬೈ ಹೇಳಿ ಅವನನ್ನು ಊರಿಗೆ ಕಳುಹಿಸಿದೆ. ಮನೋರೋಗ ತಜ್ಞರ ಬಳಿ ಬರುವ ರೋಗಿಗಳಲ್ಲಿ ನುಲಿಗೊರಳು ಮತ್ತು ತಲೆದೂಗುವಿಕೆಯಂತಹ ಕಾಯಿಲೆಗಳು ವಿರಳ. ಇಂತಹ ಕಾಯಿಲೆಗಳು ತಜ್ಞರ ಮಿದುಳನ್ನು ಕೆದರುತ್ತವೆ. ಈ ತರಹ ಸಮಸ್ಯೆಗಳಿದ್ದರೆ ಮಾತ್ರ ವೈದ್ಯರಿಗೆ ಸಹ ವೃತ್ತಿಯ ತೃಪ್ತಿ ದೊರೆಯುವುದು. ✡

ಅಹಂಭಾವದಿಂದ ಬೀಗಿದವನು ಆಧ್ಯಾತ್ಮದ ದಾರಿಯಲ್ಲಿ ನಡೆಯಲಾರ. ಆತ ಅಹಮಹಮಿಕೆಯ, ಸ್ವಪ್ರತಿಷ್ಠೆಯ ಭಾರದಿಂದಲೇ ಬಾಗಿಹೋಗಿರುತ್ತಾನೆ.

–ಪರಮಹಂಸ ಯೋಗಾನಂದ

ನಿದ್ದೆ ಬಾರದು ಇನ್ನು ಈ ಜನ್ಮಕೆ
ಬಿದ್ದ ಹಂಪೆಯು ಕಂಡು ಕೆಂಗೆಟ್ಟೆನು
ಕನ್ನಡದ ತಾಯ್ಬೇರು ನೀರಡಿಸಿದೆ
ಪೊನ್ನ ಪೊಳೆ ಅವರ ಬಳಿ ತಾನೋಡಿಗಿದೆ
ಚೆನ್ನ ಚಲುವಿನ ಹಂಪೆ ಹೆಳವಾಗಿದೆ,
ಎನ್ನ ತಾಯ್‌ಮನೆ ಧೇನು ಬರಡಾಗಿದೆ.

ವಿಜಯನಗರ ಸಾಮ್ರಾಜ್ಯದಲ್ಲಿ ನೀರಾವರಿ

ಎಸ್. ಕೆ. ಜೋಶಿ

ಇದು ಇಂದು ಕಾಣುವ ಹಂಪೆಯ ದಾರುಣ ಚಿತ್ರ. ಕನಿಕರದ ಕಂಪನದ ಹೃದಯ ಮಿಡಿತದಿಂದ ಅದ್ಯಾವ ಭಾವುಕನನ್ನು ಅಳಿದುಳಿದ ಹಂಪೆಯು ಅಲುಗಿಸದಿರದು? ಸನಾತನ ಧರ್ಮ, ಭಾರತೀಯ ಪರಂಪರೆಗೆ ಮೌಲ್ಯ, ಕಲೆ ಹಾಗೂ ಸಂಸ್ಕೃತಿಗಳನ್ನು ರಕ್ಷಿಸಲು ಪಣತೊಟ್ಟ, ಮಧ್ಯಯುಗೀನ ಸಾಮ್ರಾಜ್ಯಗಳಲ್ಲಿ ಶ್ರೇಷ್ಠತಮವೆಂದು ಹೆಸರು ಗಳಿಸಿದ ವಿಜಯನಗರ ಸಾಮ್ರಾಜ್ಯದ ದಾರುಣ ಕತೆಯು ಇತಿಹಾಸದ ಪುಟಗಳಲ್ಲಿ ಶಾಶ್ವತವಾಗಿ ಮೂಡಿದೆ.

ಕರ್ನಾಟಕ ಒಡೆತನ ಮಾಡಿದ ರಾಜಮನೆತನಗಳು ಹಲವು. ಅವುಗಳಿಗೆ ಒದಗಿದ ಆಘಾತ ಒಂದಲ್ಲ, ಎರಡಲ್ಲ ನೂರಾರು. ಹೀಗಾಗಿ ಕನ್ನಡ ನಾಡಿನ ವಿಸ್ತೀರ್ಣವು ಸಮಯಾನುಸಾರವಾಗಿ, ಹಿಗ್ಗಿ, ಕುಗ್ಗಿ, ಬಿದ್ದು, ಎದ್ದು. ಆದರೂ ತನ್ನ-ತನವನ್ನುಳಿಸಿಕೊಂಡು ಶತಮಾನಗಳ ಇತಿಹಾಸದಿಂದ ಮೆರೆದಿದ್ದರೂ, ವಿಜಯನಗರದರಸುಗಳ ಪಾತ್ರ, ತೇಜಸ್ಸಿನ ಕಾಲ. ನಿಜವಾಗಿಯೂ ಸುವರ್ಣ ಕಾಲ, ಕನ್ನಡಿಗರ ಹಿರಿಮೆಯ ಪರಾಕಾಷ್ಠೆಯ ಕಾಲ, ಕ್ರಿ. ಶ. ೧೩೩೬ ರಿಂದ [illegible] ರವರೆಗೆ.

ರಾಜಗುರು ವಿದ್ಯಾರಣ್ಯರ ಹಸ್ತದಿಂದ ಉದ್ದೀಪನಗೊಂಡ ವಿಜಯನಗರ ಸಾಮ್ರಾಜ್ಯದ ಜ್ಯೋತಿಯು ಎರಡೂ ಕಾಲು ಶತಕಗಳ ಸುದೀರ್ಘ ಸಮಯದಲ್ಲಿ, ಸಂಗಮ, ಸಾಳ್ವ, ತುಳುವ ಹಾಗೂ ಅರವೀಡು ಎಂಬ ನಾಮಧೇಯ ಹೊತ್ತ ನಾಲ್ಕು ಅರಸುಮನೆತನಗಳಲ್ಲಿ ನುಸುಳಿ ಜಾಜ್ವಲ್ಯಮಾನವಾಗಿ ಬೆಳಗಿ, 'ಬಹುಜನ ಹಿತಾಯ, ಬಹುಜನ ಸುಖಾಯ' ವೆಂಬ ದಿವ್ಯಮಂತ್ರವನ್ನು ತಾರಕವಾಗಿರಿಸಿಕೊಂಡು, ಜನತೆಯ ಕಲ್ಯಾಣಕ್ಕಾಗಿಯೇ ಕಾರಣೀಭೂತವಾದುದೊಂದು ಭಾರತೀಯ ಇತಿಹಾಸದಲ್ಲಿಯೇ ಜ್ವಲಂತ ವಿಷಯ.

ರಾಜಕೀಯ ವಿಪ್ಲವಗಳಿಂದಾಗಿ, ಕಾಲಚಕ್ರನ ಸುಳಿಯಲ್ಲಿ ಸಿಲುಕಿ, ಭ್ರಮೆ ಬರುವಂತೆ ತಿರುಗಿ [illegible]. ವಿಜಯನಗರ ಸಾಮ್ರಾಜ್ಯವು ತನ್ನ ವಿಸ್ತೀರ್ಣಕ್ಷೇತ್ರದಲ್ಲಿ, ಅಂದರೆ ಉತ್ತರದ ಕೃಷ್ಣೆಯಿಂದ ದಕ್ಷಿಣದ ಕನ್ಯಾಕುಮಾರಿಯವರೆಗೂ, ಪಶ್ಚಿಮದ ಕಡಲತೀರದಿಂದ ಪೂರ್ವದ ಓರಿಸ್ಸಾ ವರೆಗೂ, ಜನತೆಯ ಸಾಮಾಜಿಕ, ಆರ್ಥಿಕ, ಧಾರ್ಮಿಕ ಹಾಗೂ ಸಾಂಸ್ಕೃತಿಕ ಕ್ಷೇತ್ರಗಳ ಏಳ್ಗೆಯ ಬಗ್ಗೆ ಸಾಕಷ್ಟು ಗಮನ ಕೊಟ್ಟಿತ್ತು. ಏಳ್ಗೆಯ ಜೊತೆಗೆ ಲೆಕ್ಕಣಿಕೆಯೂ ಕೆಲಸ ಮಾಡಿತ್ತು;

ಇಂಥ ವಿಶಾಲ ಭೂಮಿಯಲ್ಲಿ ಕೃಷ್ಣೆ, ಘಟಪ್ರಭೆ, ಮಲಪ್ರಭೆ, ತುಂಗಭದ್ರೆ, ವರದೆ, ಧರ್ಮ,ಕಾಲಿ, ಶರಾವತಿ, ಪೆನ್ನಾರ, ಪಾಲಾರ, ಕಾವೇರಿ ಮೊದ

ಲಾದವುಗಳಿಂದ ಪುನೀತವಾದ ಮಣ್ಣನ್ನು ಹದಗೊಳಿಸಿ, ಕ್ಷೇತ್ರ ಸಿಂಚನಗೈದು, ಸಮೃದ್ಧಿಯ ಬಂಗಾರದ ಹೊಗೆ ಹಾಯ್ದಂತೆ ಪ್ರಯತ್ನಿಸಿದ ವಿಜಯನಗರದ ಅರಸರು ಅಭಿನಂದನೀಯರು.

ಉತ್ತರದ ಗಂಗಾ, ಸಿಂಧು, ಯಮುನಾ, ಸರಸ್ವತಿಯರು ಹರಿವ ವಿಶಾಲವಾದ ಫಲವತ್ತಾದ ನಾಡಿನಲ್ಲಿ, ಕೆರೆ-ಕಾಲುವೆ ಹಾಗೂ ಜಲಸಂಧಿಗಳ ನೀರಾವರಿ ಯೋಜನೆಗಳಿಗಾಗಿ ಬಹಳಷ್ಟು ಪರಿಶ್ರಮಪಡಬೇಕಾಗಿರಲಿಲ್ಲ. ಸಾವಿರಾರು ಮೈಲು ವಿಶಾಲವಾದ ಸಮಪಾತಳಿಯ ಕ್ಷೇತ್ರದಲ್ಲಿ ನದಿಗಳ ನೀರು ಸ್ವಾಭಾವಿಕವಾಗಿ ಹರಡಿ ನಿಸರ್ಗವೇ ಕ್ಷೇತ್ರ ಸಿಂಚನ ಗೈಯುವ ಸ್ಥಿತಿ ಉತ್ತರದಲ್ಲಿ. ಆದರೆ ಈ ಸ್ಥಿತಿಯು ದಕ್ಷಿಣದಲ್ಲಿ ಇರಲಿಲ್ಲ. ಅಸಮವಾದ ಪರಿಳಿತಗಳಲ್ಲಿ, ಕಲ್ಲು ಬಂಡೆಗಳಲ್ಲಿ, ಸಾಮಾನ್ಯವಾಗಿ ದಕ್ಷಿಣದ ನದಿಗಳೆಲ್ಲ ಹರಿದು, ವಿಷಮವಾದ ಶುಷ್ಕ ಭೂಮಿಯನ್ನು ನಿರ್ಮಾಣ ಮಾಡಿದುದರಿಂದ ದಕ್ಷಿಣ ಭಾರತದ ಅರಸುಮನೆತನದವರು ನದಿಗಳ ನೀರನ್ನು ಸಂಗ್ರಹಿಸುವ, ಕೆರೆ, ತಟಾಕ ಹಾಗೂ ಕಾಲುವೆಗಳನ್ನು ನಿರ್ಮಿಸುವ ತಾಂತ್ರಿಕ ಕಲೆ ಹಾಗೂ ಜಾಣ್ಮೆಯನ್ನು ರೂಢಿಸಿಕೊಳ್ಳಬೇಕಾಯಿತು. ಅವಶ್ಯಕತೆಯು ಶೋಧನೆಯ ಮಾತೃ. ಹೀಗಾಗಿ, ವಿಜಯನಗರದ ಅರಸರು ಇಂಥ ನೀರಾವರಿ ಯೋಜನೆಗಳಿಗೆ ಅವುಗಳ ಮಹೋದ್ದೇಶ ಸಾಧನೆಗಳಿಗೆ, ಬಹಳಷ್ಟು ಕೈ ಹಾಕಿದರು ಹಾಗೂ ಅವರು ದಕ್ಷಿಣದ ರಾಜಮನೆತನಗಳಲ್ಲಿಯೇ ಈ ದಿಸೆಯಲ್ಲಿ ಅಗ್ರಗಣ್ಯರೆಂದರೆ ಅತಿಶಯೋಕ್ತಿಯಾಗಲಾರದು.

ಪ್ರಾಯಶಃ ಅಣೆಕಟ್ಟು ಎಂಬ ಶಬ್ದವೇ (ಅಂಬುಮತ್ತು ಕಟ್ಟು ಅಬು ಮತ್ತು ಕಟ್ಟು ಮುಂತಾಗಿ) ವಿಜಯನಗರ ಸಾಮ್ರಾಜ್ಯದಲ್ಲಿ ಹುಟ್ಟಿ, ಕನ್ನಡ ಸಾಹಿತ್ಯಸಿರಿಯಲ್ಲಿ ಸೇರಿದೆ. ಅದಕ್ಕಿಂತ ಪೂರ್ವದಲ್ಲಿ ಈ ಶಬ್ದ ಬಳಕೆಯಲ್ಲಿ ವಿರಳ. ಈ ಕನ್ನಡ ಭಾಷೆಯ ಅಣೆಕಟ್ಟು, ಆದನಂತರ ಆಂಗ್ಲ ಭಾಷೆಯಲ್ಲಿ ನುಸುಳಿ, ಆನಿಕಟ್ ಆಗಿ ಶಬ್ದಭಂಡಾರವನ್ನು ಅಲಂಕರಿಸಿದೆ. ಇದು ಭಾಷೆಯ ದೃಷ್ಟಿಯಿಂದ, ಕನ್ನಡ ಶಬ್ದದ ಕೊಡುಗೆ ವಿಜಯನಗರದರಸುಗಳಿಂದ.

ಹೀಗಾಗಿ ಪರಂಪರೆಯಾಗಿ, ಬಳುವಳಿಯಾಗಿ ಬಂದ ಈ ಅಣೆಯನ್ನು ಕಟ್ಟುವ ಕಲೆಯು ವಿಜಯನಗರದ ಸಾಮ್ರಾಜ್ಯದ ಕಾಲದಿಂದ ನಮ್ಮ ಇಪ್ಪತ್ತನೆಯ ಶತಮಾನದವರೆಗೂ ನುಸುಳಿ ಬಂದಿದೆ. ಕರ್ನಾಟಕವು ಅಭಿಯಾಂತ್ರಿಕತೆಯ ಪ್ರಯೋಗಾಲಯವಾಗಿ, ಅಭಿಯಂತರ ತವರು ಮನೆಯಾಗಿ, ವಿಶ್ವೇಶ್ವರಯ್ಯರಂಥ ಹಿರಿಯ ತಾಂತ್ರಿಕ ಜೀವಿಯನ್ನು ರಾಷ್ಟ್ರಕ್ಕೆ ಕೊಡುಗೆಯಾಗಿ ಕೊಟ್ಟ ವಿಷಯ ಸರ್ವವಿದಿತ ಹಾಗೂ ಕನ್ನಡಿಗರಿಗೆ ಅಭಿಮಾನಾಸ್ಪದ.

ಮಧ್ಯಯುಗೀನ ವಿಜಯನಗರದ ಸಾಮ್ರಾಜ್ಯದ ವಿಸ್ತೀರ್ಣವನ್ನು ಸುತ್ತರಿದು ನೋಡಿದಾಗ ಅಲ್ಲಿ ದೊರೆತ ದೃಶ್ಯ ಹೃನ್ಮನಗಳನ್ನು ತಣಿಸುವಂಥದು.

> ಹಣ್ಣನೀವ ಕಾಯನೀವ ಪರಿಪರಿಯ
> ಮರಂಗಳೋ
> ಪತ್ರಮೀವ ಪುಷ್ಪಮೀವ ಲತೆಯ
> ತರತರಂಗಳೋ,
> ತೆನೆಯ ಕೆನೆಯ ಗಾಳಿಯೋ
> ಖಗಮೃಗೋರಗಾಳಿಯೋ
> ನದಿನಗರನ ಗಾಳಿಯೋ
> ಇಲ್ಲಿಲ್ಲದುಳಿಸುದೆ?

ಜೇನು ಸುರಿಯುವ, ಹಾಲು ಹರಿಯುವ ದಿವಂಭೂಮಿಗಿಳಿದಿದೆ. ಎಂಬ ಸುಂದರ ಸಂಪದ್ಭರಿತ ಚಿತ್ರಣವು ವೀಕ್ಷಕನ ಕಣ್ಮುಂದೆ ನುಸುಳದಿರದು. ಇಂಥ ಹಾಲು ಜೇನು ಹರಿವ ಭೂಮಿ ನಿರ್ಮಾಣದಲ್ಲಿ, ವಿಜಯ ನಗರದ ಅರಸುಗಳ ಪರಿಶ್ರಮ ಅವರ್ಣನೀಯ. ಅವರ ಕೃತಿಗಳು ಸಿಂಚನ ಕ್ಷೇತ್ರ ಹಾಗೂ ಜಲಸಂಚಯನಗಳಲ್ಲಿ ಮೈಲುಗಲ್ಲಾಗಿವೆ. ಉಳಿದವರಿಗೆ ದಾರಿದೀಪ-ಗಳಾಗಿವೆ.

ವಿಜಯನಗರ ಸಾಮ್ರಾಜ್ಯದ ಐತಿಹಾಸಿಕ ಹಿನ್ನಲೆಯೊಂದಿಗೆ ಅವರ ಆರ್ಥಿಕ ಜೀವನದಲ್ಲಿ ಇಣುಕಿ ನೋಡಿದಾಗ ಕೃಷಿಯೇ ಪ್ರಾಧಾನ

ವಾದ ಉದ್ಯೋಗವಾಗಿತ್ತು. ಚಕ್ರಾಧಿಪತ್ಯದ ಆಡಳಿತವಿದ್ದರೂ, ಆ ಚಕ್ರಾಧಿಪತಿಯ ಅಂಕಿತದಲ್ಲಿ ಬಹುನಿಷ್ಠೆಯಿಂದ ಸೇವೆ ಸಲ್ಲಿಸುವ ನೂರಾರು ನಾಯಕರು, ಮಾಂಡಲಿಕರು, ಗಾವುಂಡರು ರಾಜ್ಯದ ಆರ್ಥಿಕ ಪ್ರಗತಿಗೆ ಕಾರಣರಾಗಿದ್ದರು. ತಮ್ಮ ನಾಡು ಭೂಮಿಯಲ್ಲಿ ಬೆಳೆದ ಸಿರಿಯ ೧/೩ ದಷ್ಟು ಅಥವಾ ೧/೨ ದಷ್ಟು ಚಕ್ರಾಧಿಪತಿಯ ಸಂಗಾರವನ್ನು ಸೇರಿಸುತ್ತಿದ್ದರೆಂದು ಐತಿಹಾಸಿಕ ದಾಖಲೆಗಳಿಂದ ಲಭ್ಯ. ಮುಗ್ಗೋರು ಅಂದರೆ ೧/೩ ಹಾಗೂ ಸಾಂಗೋರು ಅಂದರೆ ೧/೨ ಎಂಬ ಪದಗಳು ಆ ಕಾಲದಲ್ಲಿ ಬಳಕೆಯಲ್ಲಿ ಇದ್ದು ಕಂದಾಯ ಸಂದಣೆಯ ಕಾಲಕ್ಕೆ ಲೆಕ್ಕಪತ್ರದಲ್ಲಿ ಬಳಸಲಾಗುತ್ತಿದ್ದವು.

ವಿಜಯನಗರ ಸಾಮ್ರಾಜ್ಯದಲ್ಲಿ ಈಗಿರುವಂತೆ ಪ್ರತ್ಯೇಕವಾದ ಕೇಂದ್ರಿಕೃತ ನೀರಾವರಿ ಯೋಜನೆಯ ತಾಂತ್ರಿಕ ವಿಭಾಗ ಇರಲಿಲ್ಲ. ಆದರೂ ಆದರ ಅರಸುಗಳು ಆಯಾ ಸ್ಥಾನಿಕ ನಾಯಕರುಗಳಿಗೆ ಅಥವಾ ಮಾಂಡಲೀಕರುಗಳಿಗೆ, ವ್ಯಾಪಾರಿ ಸಂಘಗಳಿಗೆ ಅಥವಾ ಬ್ರಾಹ್ಮಣ ಅಗ್ರಹಾರಗಳಿಗೆ, ಕೆರೆ, ಕಾಲುವೆ, ಬಾವಿ ಹಾಗೂ ನದಿಗಳಿಂದ ನೀರು ತರುವ ತೂಬು ಯೋಜನೆಗಳನ್ನು ಒಪ್ಪಿಸುತ್ತಿದ್ದರು. ಸ್ಥಾನಿಕ ಯೋಜನೆಗಳ ಅವಶ್ಯಕತೆ, ಅವುಗಳ ಸ್ಥಳ ನಿರ್ದಿಷ್ಟತೆ, ಯೋಜನೆಯ ನಂತರ ಪಡೆವ ಲಾಭಗಳ ಬಗ್ಗೆ ಸಂಪೂರ್ಣ ಜ್ಞಾನವು ಆಯಾ ಮಾಂಡಲೀಕರಿಗೆ ಬಿಟ್ಟುಕೊಟ್ಟ ವಿಷಯುವಾದ್ದರಿಂದ ಮಾಂಡಲೀಕರು ಇಂಥ ಸಾರ್ವಜನಿಕ ನೀರಾವರಿ ಯೋಜನೆಗಳನ್ನು ಕೈಕೊಳ್ಳುವಾಗ ಬಹಳ ಜಾಗ್ರತೆ ವಹಿಸುತ್ತಿದ್ದರೆಂದು ಹರಿಹರದಲ್ಲಿ ದೊರೆತ ಮೊದಲನೆಯ ದೇವರಾಯನ ಕ್ರಿ. ಶ. ೧೪೧೦ರ ಶಿಲಾಶಾಸನದಿಂದ ಕಂಡುಬಂದಿದೆ.

ಮಾಂಡಲೀಕರು ಅಥವಾ ನಾಯಕರು, ತಮ್ಮ ತಮ್ಮ ಕ್ಷೇತ್ರಗಳಲ್ಲಿ ನೀರಾವರಿ ಯೋಜನೆಗಳಿಗಾಗಿ, ಅಧೀಕ್ಷಕ, ಸಂರಕ್ಷಕ, ನೀರಿಕ್ಷಕ, ಹಾಗೂ ಜಲವಾಹಕರೆಂಬ ಅಧಿಕಾರಿಗಳನ್ನು ನಿಯಮಿಸುತ್ತಿದ್ದರೆಂದೂ ಅವರಿಗೆ ಕಂದಾಯವಿಲ್ಲದೆ ಕೆಲ ಭೂಮಿಗಳನ್ನು ಉಂಬಳಿಯಾಗಿ ಕೊಡುತ್ತಿದ್ದರೆಂದೂ ಬೇರೊಂದು ಶಾಸನದಿಂದ ತಿಳಿದು ಬಂದಿದೆ.

ಅಲ್ಲದೆ ಉಪ್ಪಾರ, ಬೋಯಾರ, ತಲವಾರ, ಸ್ಥಾನಕ ಹಾಗೂ ಕುಂಸ ಎಂಬ ತಾಂತ್ರಿಕ ವಿಭಾಗದ ಕುಶಲ ಕರ್ಮಿಗಳ ಹೆಸರುಗಳು ಜನರೂಢಿಯಾಗಿದ್ದು ಅವರು ನಾಡಿನ ನೀರಾವರಿ ಯೋಜನೆಗಳ ಪ್ರತ್ಯಕ್ಷ ನಿರ್ಮಾಣದಲ್ಲಿ ಸಕ್ರಿಯವಾಗಿ ಶ್ರಮಿಸುವ ಕೆಳವರ್ಗದ ಕುಶಲ ಕರ್ಮಿಗಳಾಗಿದ್ದರು. ಅವರಿಗೆ, ಅವರವರ ಯೋಗ್ಯತೆಗೆ ಅನುಸಾರವಾಗಿ ಆಗಿನ ಕಾಲದ ಪ್ರಚಲಿತ ನಾಣ್ಯ ವರಹಗಳ ಮೂಲಕ ಪರಿಶ್ರಮದ ಪ್ರತಿಫಲವಾಗಿ ಕೂಲಿ ಕೊಡಲಾಗುತ್ತಿತ್ತು ಅಥವಾ ಪ್ರತಿಭೂಮಿಯಲ್ಲಿ ಬೆಳೆದ ವರ್ಷಾಂತ್ಯದ ರಾಶಿಯ ಸಮಯದಲ್ಲಿ ಧಾನ್ಯದ ಪುಟ್ಟಿಯನ್ನು ಮಾನುವಿನ ಕೊಳಗ, ಅಥವಾ ಇಂತಿಷ್ಟು 'ಸೇರುವು'ಅನ್ನು ಕೊಡಬೇಕೆಂಬ ಅಧಿನಿಯಮವಿತ್ತೆಂದು ಅಧಿಕೃತವಾಗಿ ತಿಳಿದುಬಂದಿದೆ.

ನೀರಿನ ಹಂಚಿಕೆಯಲ್ಲಿ, ಕಾಲುವೆಯ ಮೇಲೆ, ದಂಡೆಯ ಜನ ಹಾಗೂ ಕೆಳದಂಡೆಯ ಜನರಲ್ಲಿ, "ನನಗೆ ಮೊದಲು, ನಿನಗೆ ಆಮೇಲೆ" ಎನ್ನುವ ಜಗಳ ಬರಬಾರದೆಂದು, ಮೇಲಿನ ಜನ ಮೊದಲು ಭೂಮಿ ಸಿಂಚನಗೊಳಿಸಿ, ತದನಂತರ ಕೆಳಗಿನ ಜನರಿಗೆ ನೀರು ಬಿಡುವ ಪದ್ಧತಿಯನ್ನು ರಾಜಶಾಸನದಿಂದ ನಿರ್ಧರಿಸಲಾಗಿತ್ತು. ಈ ಅಧಿನಿಯಮವನ್ನು ಮುರಿದವನಿಗೆ ಶಿಕ್ಷೆ ವಿಧಿಸಲಾಗುತ್ತಿತ್ತು ಹಾಗೂ ಅವನ ಭೂಮಿಗೆ ನೀರು ದೊರೆಯದಂತೆ ಕ್ರಮ ಕೈಕೊಳ್ಳಲಾಗುತ್ತಿತ್ತು. ಅಂದಿನ ಆ ರೂಢಿಯು ಇಂದಿಗೂ ನಮ್ಮ ಸಮಕಾಲೀನ ನೀರಾವರಿ ಯೋಜನೆಗಳಲ್ಲಿ ಬಳಕೆಯಲ್ಲಿದೆ.

ಭೌಗೋಲಿಕ ಹಾಗೂ ಪ್ರಾಕೃತಿಕ ಸಮೀಕ್ಷೆ ನಡೆಸಿ, ಬೆಟ್ಟಗಳಿಂದ ಹರಿದು ಬರುವ ನೀರನ್ನು ಕೊಳ್ಳಗಳಲ್ಲಿ ಅಡ್ಡಲಾಗಿ ವಡ್ಡು ಹಾಕಿ, ಜಲಾಶಯ ನಿರ್ಮಿಸಿ, ಅದರಿಂದ ಕೆಳ ಪ್ರದೇಶಗಳಲ್ಲಿ ನೀರುಣಿಸುವ ಕಾರ್ಯ ಅಭಿಯಾಂತ್ರಿಕ ಪಂಡಿತರಿಗೆ ಬಿಟ್ಟುಕೊಡಲಾಗಿತ್ತು ಇಂಥ ಒಂದು ವಿಸ್ತೀರ್ಣವಾದ ತಟಾಕದ ಅಗೆತದ ಕಾರ್ಯದ ದೃಶ್ಯವನ್ನು ಕ್ರಿ. ಶ. ೧೫೨೦ರಲ್ಲಿ ಕೃಷ್ಣದೇವರಾಯನ ಕಾಲದಲ್ಲಿ ಸಂದರ್ಶಿಸಿದ ವಿಜಾಪುರದ ಇತಿಹಾಸಕಾರ ರಫೀಉದ್ದೀನ ಇಬ್ರಾಹಿಮ್

ಶಿರಾಜ ಹೀಗೆ ಹೇಳುತ್ತಾನೆ.

"ಈ ನಾಗಲಾಪುರವು ದಕ್ಷಿಣದ ತುದಿಯಲ್ಲಿ ಇಳಿಜಾರಾದ ಪ್ರದೇಶದಲ್ಲಿ ಹಬ್ಬಿಕೊಂಡಿದೆ. ಅದರ ಆಚೆಗಿರುವ ಗುಡ್ಡದಿಂದ ಹರಿದು ಬರುವ ನೀರನ್ನು ಸಂಗ್ರಹಿಸುವ ಕಾರ್ಯ ನಾನು ಕಂಡೆ. ಇಲ್ಲಿ ಸುಮಾರು ೧೫೦೦೦ ದಿಂದ ೨೦೦೦೦ ಜನ ಅಗೆತದ ಕೆಲಸ ಮಾಡುತ್ತಿದ್ದು ಬಿಳಿಯ ಮೋಡ ಗಳು ಕೆಳಗಿಳಿದಂತೆ ಭಾಸವಾಗುವುದು. ಜನ ಇರುವೆಯ ಸಾಲುಗಳಂತೆ ಕಾಣುತ್ತಿದ್ದು ಮುಂದೆ ಮಧ್ಯೆ ಹಾಗೂ ತುದಿಗಳಲ್ಲಿ ಮೇಲ್ವಿಚಾರಕರು ಮಾರ್ಗದರ್ಶನ ಮಾಡುತ್ತಿರುವರು.

"ಹೀಗಾಗಿ ಇಡೀ ಭೂಮಿಯನ್ನೇ ಅಗಿದು ಪಾತಾಳಲೋಕವನ್ನು ತಲುಪುವರೋ ಎಂದು ಅನ್ನಿಸುತ್ತದೆ." ಇದೊಂದು ಶಿಸ್ತು, ಜಾಣ್ಮೆ ಹಾಗೂ ಅಚ್ಚುಕಟ್ಟುತನದ ಆ ಕಾಲ ಚಿತ್ರಣ.

ವಿಜಯನಗರ ಸಾಮ್ರಾಜ್ಯದ ವಿಸ್ತೀರ್ಣದಲ್ಲಿ ಪಶ್ಚಿಮ ಕರಾವಳಿ, ಮಲೆನಾಡು ಹಾಗೂ ಅದರ ಇಳಿಜಾರು ಪ್ರದೇಶದಲ್ಲಿ, ದಕ್ಷಿಣೋತ್ತರವಾಗಿ ಸಹ್ಯಾದ್ರಿಗೆ ಹಬ್ಬಿದ ನೂರಾರು ಮೈಲಿ ಉದ್ದ-ನೆಯ ಪಟ್ಟಿಗಳಲ್ಲಿ ಸ್ವಾಭಾವಿಕವಾಗಿ ಸಾಕಷ್ಟು ಮಳೆಯು ಸುರಿದು ನಿಸರ್ಗವೇ ದಯೆ ತೋರಿ ದುದರಿಂದ ಆ ಭಾಗದಲ್ಲಿ ನೀರಾವರಿ ಯೋಜನೆ ಗಳು ಅಷ್ಟು ವಿಶೇಷವಾಗಿ ಕಂಡು ಬರುವುದಿಲ್ಲ. ನದೀ ಯೋಜನೆಗಳಲ್ಲಿ, ತುಂಗಭದ್ರೆಗೆ ಹಂಪಿ ಯಲ್ಲಿ, ಹರಿದ್ರಾನದಿಗೆ ಹರಿಹರದ ಬಳಿ, ಕಾವೇರಿ ನದಿಗೆ ತಲಕಾಡಿನಲ್ಲಿ ಸೇತುಬಂಧ ಕಾಣಬಹುದು.

ಕ್ರಿ. ಶ. ೧೪೧೦ರಲ್ಲಿ ಕಟ್ಟಿದ ಹರಿದ್ರಾ ಅಣೆ ಕಟ್ಟು, ಅದರ ೧೫ ವರ್ಷಗಳ ಅಸ್ತಿತ್ವದಲ್ಲಿ ಒಡೆದುಹೋದ ವಿಷಯ ಹರಿಹರದ ಶಿಲಾಲೇಖನ ದಲ್ಲಿ ದೊರೆತಿದೆ. ಇದೇ ರೀತಿ ತಲಕಾಡಿನಲ್ಲಿ ಕಾವೇರಿಗೆ ಕಟ್ಟಿದ ಜಲಸಂಧಿ ಕಾಲಾಂತರದಿಂದ ಅದರ ಪರಿಸರದಲ್ಲಿ ಮಳಲುರಾಶಿ ನಿರ್ಮಾಣ ಮಾಡಿ, ನದಿಯ ಒಡಲಿನಲ್ಲಿ ಉಸುಕಿನ ಸುಂಟರ ಗಾಳಿಗಳೇಳುವಂತಾಯಿತು. ಈಗಲೂ ಈ ದಡ ದಲ್ಲಿರುವ ಶೈವ ದೇವಾಲಯಗಳಿಗೊಂದು ಇದರ ಉಸುಕು ಪ್ರಶ್ನೆಯಾಗಿ ಉಳಿದಿದೆ. ಪ್ರಾಯಶಃ ಇವೆರಡು ಅಣೆಕಟ್ಟುಗಳಲ್ಲಿ ಅಪ್ರೌ-ಢಿಮೆ ಇಣುಕಿರಲು ಸಾಕು.

ಹಂಪೆಯ ಪರಿಸರದ ಪಶ್ಚಿಮಕ್ಕೆ, ತುಂಗ ಭದ್ರೆಯನ್ನು ತಡೆಹಿಡಿದು, ಸಂಗ್ರಹಿಸಿದ ನೀರನ್ನು ಕಲ್ಲಿನ ಕಾಲುವೆಗಳ ಮೂಲಕ ರಾಜಧಾನಿಯ ಕಟ್ಟಡಗಳ ಮೇಲೂ ಕೆಳಗೂ, ಒಳಗೂ ಹೊರಗೂ ಸೈಫನ್ ಪದ್ಧತಿಯನ್ನು ಅಳವಡಿಸಿ, ಹರಿ ಸಿದ್ದಾರೆ. ಅಲ್ಲಿಯ ಅರಮನೆಗಳ ತೋಟ, ದೇವ ಮಂದಿರಗಳ ಹೂದೋಟ ಹಾಗೂ ಪುಷ್ಕರಣಿ ಗಳು ಹಣ್ಣು ಹಂಪಲುಗಳ ಉದ್ಯಾನ ಹಾಗೂ ಹತ್ತು ಲಕ್ಷ ಜನವಸತಿಯುಳ್ಳ ನಗರಕ್ಕೆ ನೀರಿನ ಸರಬರಾಜು ಮಾಡಿದ ವ್ಯವಸ್ಥೆಯು ಆ ಕಾಲದ ಜಲತಾಂತ್ರಿಕತೆಯ ಹಿರಿಮೆಯನ್ನು ತೋರಿಸು ತ್ತದೆ. ಗಂಗಾಂಬಿಕೆಯು ತನ್ನ ವೀರಕಂಪರಾಜ ಚರಿತೆಯಲ್ಲಿ ಹೇಳಿದಂತೆ "ವಿಜಯನಗರವು ಸಂಪ ತ್ಸಮೃದ್ಧವಾಗಿ, ಲಕ್ಷ್ಮಿಯು ಮಂಡಿಸಿದ ಕಮಲದಂತಿದೆ."

ಅಲ್ಲದೆ ಹಂಪೆಯ ಲೋಕಪಾವನ ಕೊಳ ಗಳೂ ಸಾರ್ವಜನಿಕ ಸ್ನಾನದ ಕೊಳಗಳೂ ಅಷ್ಟಕೋನಾಕೃತಿಯ ಕೊಳಗಳೂ ಕಟ್ಟೆಯ ಬಾವಿಗಳೂ, ಪಂಪಾಸರೋವರವೂ ಒಂದೇ ಎರಡೇ ನೀರಿನ ಮೂಲಗಳು ಅನಂತ ಅಲ್ಲಿ.

ಹಂಪೆಯಲ್ಲಿ ಬಳಸಿರುವ ಜಲಅಭಿಯಾಂತ್ರಿಕ ವಿಧಾನವು ವಿಭಿನ್ನ ಪಾತಳಿಗೆ ಅಳವಡಿಸಿದ್ದು. ಕಲ್ಲಿನಲ್ಲಿ ಕೊರೆದ ಕಾಲುವೆಗಳನ್ನು ಜೋಡಿಸಿ ಅವುಗಳನ್ನು ಕಲ್ಲು ಕಂಬಗಳ ಮೇಲೆ ಆಧರಿಸಿ, ನೀರು ಹರಿಯುವಂತೆ ಮಾಡಿದ್ದಾರೆ. ಭೂಗತವಾದ ಸುಟ್ಟಮಣ್ಣಿನ ಕೊಳವೆಮಾರ್ಗಗಳ ಜಾಳಿಗೆ ಯಂತೂ ಎತ್ತಣವೂ ಹಬ್ಬಿಕೊಂಡಿದೆ.

ವಿಜಯನಗರದ ದಕ್ಷಿಣ ಹಾಗೂ ಪೂರ್ವದ ರಾಜ್ಯಸೀಮೆಯಲ್ಲಿ, ಬಯಲು ನಾಡಿದ್ದು ಬರಡಾದ ಪ್ರದೇಶವಾದ್ದರಿಂದ ರಾಯಲ ಸೀಮೆ (ಅಂದರೆ ರಾಯನ ಸೀಮೆ) ಪೂರ್ವದ ಆಂಧ್ರ ಹಾಗೂ ದಕ್ಷಿಣದ ತಮಿಳುನಾಡಿನಲ್ಲೂ ಅನಂತ ಕೆರೆಯ ನೀರಾವರಿ ಯೋಜನೆಗಳು ಇದ್ದುದು ಸಮೀಕ್ಷಣೆ ಯಿಂದ ಉಪಲಬ್ಧ.

ಉದಾಹರಿಸಬೇಕೆಂದರೆ, ಕಮಲಾಪುರ, ನಾಗ ಲಾಪುರ, ತಾಂಬರಹಳ್ಳಿ, ಮಾಸೂರು, (ಧಾರ ವಾಡ ಜಿಲ್ಲೆ) ಧಾರಾಪುರ, ಅಣ್ಣಿಗೇರಿ, ಹುಲಿಗೆರೆ, ನಿಡುಗಲ್ಲು, ಅದೋನಿ, ರಾಯಚೂರು, ಚಾಂದೊ

ರ (ಗೋವಾ) ಬಂಕಾಪುರ, ಭಟ್ಕಳ, ಕೆಳದಿ, ಬಸವಪಟ್ಟಣ, ಅರಿಸಿಕೆರೆ, ಚಿತ್ರದುರ್ಗ, ಬಾರಕೂರು, ಶ್ರೀರಂಗಪಟ್ಟಣ, ಚಂದ್ರಗಿರಿ, ಚಂದ್ರಪೂರು, ಚಂದ್ರಗುತ್ತಿ, ಚಿಮಟನಕಲ್ಲು, ತಿರುಚೆರಪಳ್ಳಿ, ಅಮರಾವತಿ, ಪೋರುಮಾಮಿಲ್ಲಾ, ಉದಯಗಿರಿ, ಅರಗ, ಹೋಡಯ ಕುಸಿಪಾಳ, ಗುಂಡನಹಳ್ಳಿ, ಬೆನಕನಹಳ್ಳಿ, ಹಾರೋನಹಳ್ಳಿ, ಹೊಸೂರು, ಹಾವಮ್ಮನಗರ, ಸಾಮಂತಪುಡಿ, ಸಂಗಳಿ, ಕಾಳಹಸ್ತಿ ವೆಂಕಟರಾಯ-ಪಾಡು, ಗುಂಡನಹಕ್ಕಿ, ಭೂಪಸಮುದ್ರ, ತಿಮ್ಮಸಮುದ್ರ, ಕೊಂಡಸಮುದ್ರ, ಮಾಗಿ ಮಾವಿನಹಳ್ಳಿ, ಲೇಪಾಕ್ಷಿ, ಕುಕ್ಕಸಮುದ್ರ, ಕೊಡತ್ತೂರು ಮುಂತಾದವು ಅನಂತ. ಅನೇಕ. ದಕ್ಷಿಣ ಭಾರತದ ತುಂಬೆಲ್ಲ ಈ ರೀತಿಯ ಕೆರೆ ನೀರಾವರಿಯ ಯೋಜನೆಗಳು ನಗರವೃದ್ಧಿ ಹಾಗೂ ವಾಣಿಜ್ಯ ಕೇಂದ್ರಗಳಿಗೆ ಎಡೆಮಾಡಿದವು. ರಾಜ್ಯದ ಪ್ರಗತಿಯ ದ್ಯೋತಕಗಳಾದವು.

ಒಟ್ಟಿನಲ್ಲಿ ವಿಜಯನಗರ ಸಾಮ್ರಾಜ್ಯದ ಅರಸರು, ಅನಂತ ನಾಯಕರು, ಮಾಂಡಲೀಕರು, ಗಾಂವುಡರು, ನಾಡಿನ ಸರ್ವಾಂಗೀಣ ಉನ್ನತಿಗಾಗಿ,

ಕೆರೆಯಂ ಕಟ್ಟಿಸು
ಬಾವಿಯಂ ಸವೆಸು
ದೇವಾಗಾರಮಂ ಮಾಡಿಸು

ಎಂಬ ಹಿರಿಯ ಧ್ಯೇಯವನ್ನು ಸಾಧನಗೊಳಿಸಿ ಎಲ್ಲಿ ನೋಡಿದರೂ ಎತ್ತಣ ತಿರುಗಾಡಿದರೂ

"ತೋಡದ ಬಾವಿಯಿಲ್ಲ
ಮರೆತುಟ್ಟದ ಪರ್ಗೆರೆಯಿಲ್ಲ
ನೀರಕಟ್ಟದ ನದಿಯಿಲ್ಲ"

ಎಂಬ ಹಚ್ಚ ಹಸುರಿನ, ಅಚ್ಚಳಿಯದ ಚಿತ್ರಣ ಮಾಡಿ ಸ್ವರ್ಗಾತೀತವಾದ, ಸುಖ ಸಂತಸ, ಸೌಂದರ್ಯಗಳನ್ನು ಕನ್ನಡನಾಡಿಗೆ ಧಾರೆ ಎರೆದರು. ಹೀಗಾಗಿ ನಮ್ಮ ನಾಡ ತಾಯಿಯೂ ಕೂಡ

ಜನನಿ ಜನ್ಮಭೂಮಿಶ್ಚ
ಸ್ವರ್ಗಾದಪಿ ಗರಿಯಸೀ.

('ಆಕಾಶವಾಣಿ' ಕೃಪೆಯಿಂದ) ೭-೬ 1979.



ವರ್ಜಿನಿಯೋ ತಸ್ಸಾಡೋರಿ ಉತ್ತರ ಇಟಲಿಯ ಪಾವಿಯಾ ಪಟ್ಟಣದ ನಿವಾಸಿ. ಈಗಾತನಿಗೆ ೬೪ ವರ್ಷ ವಯಸ್ಸು. ಕಲ್ಲು-ಇಟ್ಟಿಗೆಗಳನ್ನು ಅಗಿದು ಪುಡಿಮಾಡಬಲ್ಲ ಗಟ್ಟಿಗ ಆತ. ಈ ರೀತಿ ಕಲ್ಲು-ಇಟ್ಟಿಗೆ ಅಗಿದು ಉಗಿದು ಆತ ಸಾಕಷ್ಟು ಸಂಪಾದಿಸಿದ್ದಾನೆ. ಈ ಹವ್ಯಾಸ ಆತನಿಗರೆತಿದ್ದು ಆತನ ಇಪ್ಪತ್ತನೆಯ ವಯಸ್ಸಿನಲ್ಲಿ.

ಇಪ್ಪತ್ತರ ತರುಣದಲ್ಲಿ ಆತನಿಗೆ ವಿಪರೀತ ಹಲ್ಲುನೋವು. ಅದರ ಬಾಧೆ ತಪ್ಪಿಸಿಕೊಳ್ಳಲು ಆತ ಧೂಮಪಾನ-ಮಧ್ಯಪಾನಗಳನ್ನಾರಂಭಿಸಿ, ನಸ್ಯ ತಿಕ್ಕಿ, ಯಾರಾರೋ ಹೇಳಿದ ಮಾತ್ರೆಗಳನ್ನು ನುಂಗಿದನಾದರೂ ಹಲ್ಲುನೋವು ಕಡಿಮೆಯಾಗಲಿಲ್ಲ. ಹೀಗಾಗಿ ಕಲ್ಲು-ಇಟ್ಟಿಗೆಗಳನ್ನು ಅಗಿಯಲಾರಂಭಿಸಿದ. "ಈಗ ನನ್ನ ಹಲ್ಲುಗಳು ಉಕ್ಕಿನಂತಾಗಿವೆ" ಎಂದಾತ ಹೆಮ್ಮೆಯಿಂದ ಹೇಳಿಕೊಳ್ಳುತ್ತಾನೆ.

ವಾದವೈಖರಿ

ಖಾಸಗಿ ವಿದ್ಯಾಸಂಸ್ಥೆಯೊಂದರಲ್ಲಿ ಪ್ರವೇಶ ದೊರಕಿಸಿಕೊಂಡು ಲಾ ಶಿಕ್ಷಣ ಪಡೆಯುವುದೆಂದು ಯುವಕನೊಬ್ಬ ನಿಶ್ಚಯಿಸಿದ. ಆದರೆ ಹಣದ ಕೊರತೆ ಇದ್ದುದ-ರಿಂದ ಶಿಕ್ಷಣ ಶುಲ್ಕವನ್ನೆಲ್ಲಾ ಏಕಗಂಟಿನಲ್ಲಿ ಪಾವತಿ ಮಾಡಲು ಆತ ಅಸಮರ್ಥನಾಗಿದ್ದ. ಅದಕ್ಕಾಗಿ ಕಾಲೇಜಿನ ಪ್ರಾಚಾರ್ಯರೊಂದಿಗೆ ಒಂದು ಒಪ್ಪಂದಕ್ಕೆ ಬಂದ. ಶಿಕ್ಷಣ ಶುಲ್ಕವಾಗಿ ತಾನು ಸಂಸ್ಥೆಗೆ ತೆರಬೇಕಾಗಿದ್ದ ಒಟ್ಟು ಮೊತ್ತದ ಅರ್ಧಾಂಶವನ್ನು ದಾಖಲಾತಿಯ ಸಮಯದಲ್ಲಿ ಸಲ್ಲಿಸುವುದು. ಲಾ ಪರೀಕ್ಷೆಯಲ್ಲಿ ಉತ್ತೀರ್ಣನಾಗಿ ಕೋರ್ಟಿನಲ್ಲಿ ಪ್ರಾಕ್ಟೀಸು ಆರಂಭಿಸಿ ಕೇಸೊಂದರಲ್ಲಿ ಜಯಗಳಿಸಿದಾಗ ಉಳಿದರ್ಧವನ್ನು ಸಲ್ಲಿಸುವುದು, ಎಂದಾಗಿತ್ತು ಆ ಕರಾರು.

ಪರೀಕ್ಷೆ ಕಳೆದು ಫಲಿತಾಂಶ ಪ್ರಕಟವಾಯಿತು. ಸುದೈವವಶಾತ್ ಆತ ಪಾಸಾಗಿಯೂ ಇದ್ದ, ಇದರೆ ವರ್ಷಗಳೆರಡು ಸಂದು ಹೋದರೂ ಯುವಕ ನಾಪತ್ತೆ. ಕ್ರುದ್ಧರಾದ ಪ್ರಾಚಾರ್ಯರು ಆತನ ವಿರುದ್ಧ ನ್ಯಾಯಾಲಯದಲ್ಲಿ ದಾವೆ ಹೂಡಿದರು. ಅವರ ತರ್ಕಸರಣಿ ಈ ರೀತಿಯಾಗಿತ್ತು– "ಈ ಕೇಸಿನಲ್ಲಿ ನಾನು ಜಯಗಳಿಸಿದನೆಂದಾದರೆ ಕೋರ್ಟಿನ ಆಜ್ಞೆಯನ್ನು ಮನ್ನಿಸಿ ಎದುರಾಳಿಯು ಬಾಕಿ ಹಣವನ್ನು ತಪ್ಪದೆ ಸಲ್ಲಿಸತಕ್ಕದ್ದು. ಒಂದು ವೇಳೆ ಎದುರಾಳಿಯೇ ಜಯಿಸಿದನೆಂದಾದರೂ ನಮ್ಮೊಳಗಿನ ಕರಾರು ಪ್ರಕಾರ ಬಾಕಿಯಾದ ಹಣವನ್ನು ಹೇಗಿದ್ದರೂ ಆತ ತೆರಬೇಕಾಗುತ್ತದೆ. ಆದ್ದರಿಂದ ಒಟ್ಟಿನಲ್ಲಿ ಯಾವ ವಿಧದಲ್ಲಾದರೂ ಪ್ರತಿವಾದಿಯು ಶುಲ್ಕದಲ್ಲಿ ಬಾಕಿಯಾಗಿರುವ ಹಣವನ್ನು ನನಗೆ ಪಾವತಿ ಮಾಡಲು ಬಾಧ್ಯಸ್ಥನಾಗಿರುತ್ತಾನೆ."

ಈಗ ಪ್ರತಿವಾದಿಯ ಸರದಿ. ಆತನ ವಾದ ವೈಖರಿ ಹೀಗಿತ್ತು– "ಈ ಕೇಸಿನಲ್ಲಿ ನಾನು ಜಯಶಾಲಿಯಾದೆನೆಂದರೆ ನ್ಯಾಯಾಲಯದ ಆಜ್ಞೆಯನ್ನು ಶಿರಸಾವಹಿಸುತ್ತೇನೆ. ಎಂದರೆ ಶಿಕ್ಷಣ ಶುಲ್ಕದಲ್ಲಿ ಬಾಕಿಯಾಗಿರುವ ಅರ್ಧಾಂಶವನ್ನು ನಾನು ಎಷ್ಟು ಮಾತ್ರಕ್ಕೂ ತೆರಬೇಕಾಗಿಲ್ಲ. ಅಥವಾ ಒಂದು ವೇಳೆ ಸೋತೆನೆಂದಾದರೆ ಈ ಮೊದಲೇ ನಮ್ಮೊಳಗಾದ ಕರಾರು ಪ್ರಕಾರ ವಾದಿಗೆ ಬಾಕಿ ಹಣವನ್ನು ಹೇಗಿದ್ದರೂ ನಾನು ಕೊಡುವ ಪ್ರಶ್ನೆಯೇ ಉದ್ಭವಿಸುವದಿಲ್ಲ. ಆದ್ದರಿಂದ ಯಾವುದೇ ವಿಧದಲ್ಲಿ ವಾದಿಸಿ-ದರೂ ವಾದಿಗೆ ಶಿಕ್ಷಣ ಶುಲ್ಕದಲ್ಲಿ ಬಾಕಿಯಾಗಿರುವ ಹಣವನ್ನು ಪಾವತಿ ಮಾಡಲು ನಾನು ಸರ್ವಥಾ ಬಾಧ್ಯನಾಗಿರುವುದಿಲ್ಲ."

ಸಂಗ್ರಹ – **ಸಿ. ಯಚ್. ಗೋಪಾಲಕೃಷ್ಣ ಭಟ್ಟ**

ಇದ್ದುದು ಹೀಗೆ

ಮೂಲ: ಸೌ. ನೀಲಾ ಶಿತೋಳೆ

ಕನ್ನಡಕ್ಕೆ: ಎಸ್. ಪಿ. ಪಾಟೀಲ

ಈ ಕಥೆ ಕೇವಲ ನನ್ನದು, ನನ್ನ ಹಾಗೂ ಮಾಲವಿಕಾಳದು. ಪೂರ್ತಿ ನಮ್ಮದೇ. ಹಾಗಾದರೆ ಮಾಲವಿಕಾ ಯಾರು? ಮಾಲವಿಕಾ ಅಂದರೆ ಮಾಲವಿಕಾಳೇ. ಅವಳು ನನಗೇನಾಗಬೇಕು? ಅದಕ್ಕೆ ಉತ್ತರವೆಂದರೆ ಅವಳು ನನಗೆ ಯಾರೂ ಅಲ್ಲ; ನಿಜವಾಗಿ ಏನೂ ಅಲ್ಲ. ಆದರೂ ಸಹ ಅವಳು ನನ್ನವಳೇ. ನಾನು ಅದೆಷ್ಟೋ ಸಲ ಅವಳನ್ನು ಕೇಳಿದ್ದೇನೆ: "ಮಾಲವಿಕಾ, ಇದೇ ರೀತಿ ಎಷ್ಟು ದಿನ ನಡೆಯುವುದು? ನಾನು ನೀನು ಭೇಟಿಯಾಗುವುದು, ಒಂದುಗೂಡುವುದು, ಸೇರುವುದು. ಇದು ವ್ಯರ್ಥ ಜೀವ ಹಿಂಡುವ ಜೀವನವಲ್ಲವೆ?" ಅದಕ್ಕೆ ಅವಳ ಉತ್ತರವೆಂದರೆ, "ಮುಗಿಯುವ ವರೆಗೆ" ಮತ್ತೆ ನನ್ನ ಪ್ರಶ್ನೆ: "ಏನು?" "ನಮ್ಮಲ್ಲಿಯ ಒಬ್ಬರು" ಒಂದೊಂದು ಸಲ ಉತ್ತರ ಬದಲಾಗುತ್ತದೆ: "ನಮ್ಮಲ್ಲಿಯ ಒಬ್ಬರು ಸಾಯುವವರೆಗೆ."

ಹೇಳುತ್ತೇನೆ, ಎಲ್ಲವನ್ನೂ ಹೇಳುತ್ತೇನೆ. ಅವಸರ ಬೇಡ. ವಿಷಯ ತುಂಬ ಆಕರ್ಷಕವಾಗಿದೆ. ನನ್ನ ಆಸಕ್ತಿ ಅಂದರೆ ಮಾಲವಿಕಾ. ಆದ್ದರಿಂದ ನಾನು ತುಂಬ ನಿಧಾನವಾಗಿ ಮಾತನಾಡುವೆ. ಮೊಟ್ಟಮೊದಲಿನಿಂದಲೇ ಪ್ರಾರಂಭಿಸೋಣ. ನನ್ನ ಅವಳ ಭೇಟಿ ಹೇಗಾಯಿತು, ಎಲ್ಲಿ ಆಯಿತು, ಎಲ್ಲವನ್ನೂ ಹೇಳಬೇಕು. ಹಾಗೆ ನೋಡಿದರೆ ಅವಳೇನೂ ನನ್ನ ಜೀವನದಲ್ಲಿಯ ಮೊಟ್ಟಲ ಹೆಣ್ಣಲ್ಲ. ಆದರೆ ಈ ಸಂಗ ತುಸು ದೀರ್ಘವಾಗಿ ಹಿಗ್ಗಿತು, ಈಗಲಾದರೋ ಅದು ಪೂರ್ತಿ ಮನದಾಳದಲ್ಲಿ ಸಿಕ್ಕಿಹಾಕಿಕೊಂಡಿದೆ. ಯಾಕೆ? ಮಾಲವಿಕಾ ನನಗೆ ಅಂಥದೇನನ್ನು ಕೊಟ್ಟಳು? ಹೌದು, ಆಕೆ ನನಗೆ ಸಾಕಷ್ಟು ಕೊಟ್ಟಳು; ನಾನು ತುಂಬಿಕೊಂಡು ತೃಪ್ತನಾದೆ. ಮಾಲವಿಕಾ ನನಗೆ ಕೊಟ್ಟುದು ಕೇವಲ ಶರೀರ ಸುಖವನ್ನಲ್ಲ, ಅಪರಾಜಿಯೂ ಅವಳು ಮುಂದುವರಿದಳು, ನನ್ನ ಅಂತರ್ಯವನ್ನು ಸ್ಪರ್ಶಿಸಿದಳು. ಸಾಕು! ಇವಳ ಸಂಗದಲ್ಲಿಯೇ ಇನ್ನು ಮುಂದಿನ ದಿನಗಳನ್ನು ಕಳೆಯಬೇಕೆಂದೂ ನನಗನಿಸಿಬಿಟ್ಟಿತು. ಅದೂ ಸಾಧ್ಯವಿರಲಿಲ್ಲ, ಅದನ್ನೂ ಆಕೆಯೇ ತೋರಿದಳು.

ನಾವು ಭೇಟಿಯಾದ ಸಮಯದಲ್ಲೆಲ್ಲ ಉತ್ಕಟತೆಯ ಹೊರತಾಗಿ, ಮೃದುಲತೆಯ ಹೊರತಾಗಿ ಅವಳು ಬೇರೇನನ್ನೂ ಕೊಡಲಿಲ್ಲ. ಸಾಮಾನ್ಯ

ಭಾವವೇ ವೈವಿಕ್ತ್ಯ ನಿಂತ ಹೆಣ್ಣು ಅದೆಷ್ಟು ಆಕ್ರಮಕಳಾಗಿರಬಹುದೆಂಬುದನ್ನು ನನಗೆ ತೋರಿದವಳು ಆಕೆಯೇ. ತುಂಬ ಉತ್ಕಟವಾಗಿರುವಾಗಲೂ ಮಾತನಾಡಲು ನನಗವಳು ಎಂದೂ ಅವಕಾಶವೀಯಲಿಲ್ಲ. ಆಗೆಲ್ಲ ನನಗೆ ಹೇಳುತ್ತಿದ್ದುದು ಇಷ್ಟೇ; "I know, but you understand."

ಯಾವುದೇ ಶಬ್ದರೂಪವನ್ನು ಧರಿಸದೆ ಕೊಡಬಹುದಾದಂತಹ ಪಡೆಯಬಹುದಾದಂತಹ, ಸುಖವು ಇಬ್ಬರನ್ನು ಸಮೀಪ ತರಬಲ್ಲದು. ಮಾಲವಿಕಾ ಮಾತ್ರ ಹೇಳುತ್ತಿದ್ದಳು: "We are tuned to teach each other!" ಅವಳು ಹೇಳುವುದೇ ಸರಿಯಾಗಿದೆ. ನಾವು ಪೂರ್ಣ ಏಕರೂಪವಾಗಬಹುದಾದಂತಹ ಕೇವಲ ಒಬ್ಬಳೇ ಒಬ್ಬ ಸ್ತ್ರೀ ಇರುವ ಸಾಧ್ಯತೆಯಿದೆ. ನನ್ನ ಲೆಕ್ಕದಲ್ಲಿ ಅದು ಮಾಲವಿಕಾ, ಮಾಲವಿಕಾ, ಮಾತ್ರವೆಂದು ನಾನು ಭಾವಪರವಶತೆಗೆ ಎಲ್ಲೂ ಎಡೆಗೊಡದೆ ಹೇಳಬಲ್ಲೆ. ಅಂದು ಸಾಯಂಕಾಲ ನನಗೆ ಶ್ರೀನಿವಾಸನ ಪಾರ್ಟಿಗೆ ಆಮಂತ್ರಣವಿತ್ತು. ಶ್ರೀನಿವಾಸನೆಂದರೆ ನನ್ನ ಗೆಳೆಯ. ಹಾಗೆ ನೋಡಿದರೆ ನಾವಿಬ್ಬರೂ ಲಂಗೋಟಿ ಗೆಳೆಯರು! ಪಾರ್ಟಿಗಳೆಂದರೆ ನನಗೆ ತುಂಬ ಇಷ್ಟ. ಅಲ್ಲಿ ನಾವು ಏಕಾಕಿತನವನ್ನು ಮರೆತು ಇತರರ ಅಲಿಪ್ತತೆಯನ್ನು ನಿರೀಕ್ಷಿಸಲು ಸಾಧ್ಯ. ಆದುದರಿಂದ ಪಾರ್ಟಿಯನ್ನು ತಪ್ಪಿಸ-ಕೂಡದೆಂದು ನಾನು ನಿರ್ಧರಿಸಿದೆ.

ಹಾಸ್ಪಿಟಲ್ಲಿನ ರೌಂಡ್ ಮುಗಿಸಿ, ಜ್ಯೂನಿಯರ್ ಡಾಕ್ಟರಿಗೆ ಹೇಳಿ ನಾನು ಹೊರಟೆ. ನಾನು ಡಾಕ್ಟರನೆಂಬುದು ನಿಮಗೆ ಆಗಲೇ ತಿಳಿದಿರಬೇಕು. ಹೀಗಾಗಿ ಹೊರಟೆ. ಆದರೆ ಇನ್ನೊಂದು ಮಹತ್ವದ ವಿಷಯವೆಂದರೆ ನಾನು ಬ್ಯಾಚಲರ್, ಅಗರ್ಭ ಶ್ರೀಮಂತ; ಆಕರ್ಷಕವೆಂದು ಹೇಳಬಹುದಾದ ಪರ್ಸನ್ಯಾಲಿಟಿಯೂ ಇದೆ. ಮದುವೆಯಾಗಬಹುದಿತ್ತು. ಆದರೆ ಆಗೋಣ, ಅದಕ್ಕೇಕೆ ಅವಸರವೆಂದು ಮುಂದೂಡುತ್ತ ಬಂದೆ...ಈಗ ಮಾಲವಿಕಾ ಭೇಟಿಯಾಗಿದ್ದಾಳೆ. ಆದುದರಿಂದ-ಮದುವೆ ಮಾಡಿಕೊಳ್ಳುವುದೇ ಇಲ್ಲ.

ನಾನು ಶ್ರೀಯ ಫ್ಲ್ಯಾಟ್ ತಲುಪುವಷ್ಟರಲ್ಲಿ ಪಾರ್ಟಿ ಉತ್ಸಾಹಸಾಗರದಲ್ಲಿ ತೇಲುತ್ತಿತ್ತು. ಅಲ್ಲಿ ಸೇರಿದವರೆಲ್ಲ ಉಚ್ಚ ಸೊಸಾಯಿಟಿಗೆ ಸೇರಿದವರು. ಮಂದಪ್ರಕಾಶ. ಮಧುರ ಸಂಗೀತ, ಪಿಸುಮಾತುಗಳ ವಿನಿಮಯ, ಚಿತ್ರದಲ್ಲಿ ಕೊರೆದಂತೆ ಕಾಣುವ ಜನ. ಮೋಜೆನಿಸುವುದು, ಅನಿಸಲಿ. ಅದಕ್ಕಾಗಿಯೇ ನಾನು ಬಂದದ್ದಾಗಿದೆ. ನನ್ನನ್ನು ನೋಡಿದವನೆ ಶ್ರೀನಿವಾಸ ಮುಂದೆ ಬಂದ; ಕೈಹಿಡಿದು ತೇಲುತ್ತ ಬಳುಕುತ್ತ ಬರುವ ಒಂದು ಹೆಣ್ಣು ಅವನ ಜೊತೆಯಲ್ಲಿತ್ತು. ನಾನೂ ಅವಳೆಡೆ ನೋಡಿದೆ. ಯಾವುದೋ ಅಗ್ನಿಶಿಖೆಯೆಡೆಗೆ ನೋಡುತ್ತಿದ್ದೆನೆಂದು ಭಾಸವಾಯಿತು. ಅವಳ ಇಡೀ ವ್ಯಕ್ತಿತ್ವದ ಮೇಲೆ ಅಗ್ನಿಜ್ವಾಲೆಯ ಕೈ ಸವರಿರಬಹುದು.

"ನಿಮ್ಮ ಹೆಸರು?"

"ಮಾಲವಿಕಾ ಅಗ್ನಿಹೋತ್ರಿ–"

"ಹಿಂದಿನ ಒಂದು ಸಂಸ್ಕೃತ ನಾಟಕ..."

"ಆದರೆ ಅದು ಮಾಲವಿಕಾಗ್ನಿಮಿತ್ರಂ. ನನಗೂ ಅದಕ್ಕೂ ಹೆಸರಿನ ಹೊರತು ಬೇರಾವ ಸಾಮ್ಯವಿಲ್ಲ."

ಮಾಲವಿಕಾ ಚುರುಕಾಗಿದ್ದಳು; ಮಾತುಗಾರಿಕೆಯಲ್ಲಿ ಪ್ರವೀಣಳಾಗಿದ್ದಳು. ಸಾಕಷ್ಟು ಓದಿದ್ದಳು. ಅದರಂತೆ ಜ್ಞಾನಪಿಪಾಸುವೂ ಆಗಿದ್ದಳು. ನನ್ನ ಕಾರ್ಯಕ್ಷೇತ್ರಕ್ಕೆ ಸಂಬಂಧಿಸಿದ ವಿಷಯವನ್ನೂ ಆಕೆ ಸಾಕಷ್ಟು ಓದಿಕೊಂಡಿದ್ದಳು. ಒಟ್ಟನಲ್ಲಿ ಆಕೆ ಚತುರೆ, ಆಕರ್ಷಕ ವ್ಯಕ್ತಿತ್ವವುಳ್ಳ ರಸಿಕಳೆಂಬುದು ಮುಖದ ಮೇಲೆ ಒಡೆದು ಕಾಣುತ್ತಿತ್ತು. ಸುಶಿಕ್ಷಿತ ಮೇಲ್ವರ್ಗದ ಸ್ತ್ರೀಯರಲ್ಲಿ ಒಂದು ಪ್ರಕಾರದ ಆತ್ಮೀಯತೆಯ ಧೈರ್ಯವಿರುವುದು. ಅಂಥ ಸಂಪನ್ನ ವ್ಯಕ್ತಿತ್ವ ಅವಳದಾಗಿತ್ತು.

ಮುಂದ ಸಂಗೀತದೊಂದಿಗೆ ನರ್ತಿಸುವಾಗ ನಾನು ಕೇಳಿದೆ: "ಮಿ. ಅಗ್ನಿಹೋತ್ರಿ ಏನು ಮಾಡುತ್ತಾರೆ?"

"ಇಂಟರನ್ಯಾಶನಲ್ ಪೈಲಟ್ ಆಗಿದ್ದಾರೆ."

"ಹಾಗಾದರೆ ಅವರು ಸದ್ಯ ಇಲ್ಲಿ ಇಲ್ಲವೆಂದು ತೋರುತ್ತದೆ?"

ನರ್ತಿಸುತ್ತಲೇ ನನ್ನೆಡೆ ನೆಟ್ಟ ದೃಷ್ಟಿಯಿಂದ ನೋಡುತ್ತ ಅವಳು ಹೇಳಿದಳು: "ಇಲ್ಲಿ ನೋಡಿ ಡಾಕ್ಟರ್! ಸದ್ಯ ಅವರು ಲಂಡನ್ನಿನಲ್ಲಿ ಅಧಿಕಾರದಲ್ಲಿದ್ದಾರೆ. ಅಲ್ಲದೆ, for your future reference, ಅವರ ವಿಷಯ ಹೆಚ್ಚು ಕೇಳುವುದು



ನನಗೆ ಸೇರುವುದಿಲ್ಲ. He is a rascal."

"Sorry. ನನಗೆ ಗೊತ್ತಿರಲಿಲ್ಲ."

"ಈಗ ತಿಳಿಯಿತಲ್ಲ!"

ತರುವಾಯ ನೃತ್ಯದ ಆವರ್ತದಲ್ಲಿ ನಾವು ಪೂರ್ತಿ ಮುಳುಗಿಹೋದೆವು.

ಪಾರ್ಟಿ ಮುಗಿಯಿತು. ಎಲ್ಲರೂ ತಮ್ಮ ತಮ್ಮ ಮನೆಗಳತ್ತ ಹೊರಟರು. ಅಷ್ಟರಲ್ಲಿ ಶ್ರೀ ಬಂದವನು ಹೆಗಲ ಮೇಲೆ ಕೈಯಿಟ್ಟು ಹೇಳಿದ: "ಡಾಕ್ಟರ್, ನೀನೊಂದು ಕೆಲಸ ಮಾಡಬೇಕಪ್ಪ, ಮಾಲವಿಕಾಳಿಗೆ ಡ್ರಾಪ್ ಕೊಡು, ಸಾಂತಾಕ್ರೂಜಿಗೆ. ಅವಳ ಕಾರ್ ಇದೆ. ಆದರೆ ನೀನು ಎಸ್ಕಾರ್ಟ್ ಎಂದು ಹೋಗು. ಮಾಲವಿಕಾಗೆ ನಾನು ಹಾಗೆ ಹೇಳುತ್ತೇನೆ".

ಆ ರಾತ್ರಿ ನಾವಿಬ್ಬರೂ ಹೊರಟಾಗ ವಾತಾವರಣದಲ್ಲಿ ಮೌನ ನೀರವತೆಯೊಂದಿಗೆ ತಂಪೂ ಬೆರೆತಂತಿತ್ತು. ಆಕೆಯೇ ಡ್ರೈವಿಂಗ್ ಮಾಡುತ್ತಿದ್ದಳು. ಒಂದು ಸುಂದರ ಕಟ್ಟಡದ ಹತ್ತಿರ ಕಾರು ನಿಂತಿತು. ಇಂಜಿನ್ [illegible] ಮಾಲವಿಕಾ ಕೆಳಗಿಳಿದಳು. ನಾನೂ ಇಳಿಯುವ ಸಿದ್ಧತೆಯಲ್ಲಿದ್ದೆ.

"ತಾವೂ ಮೇಲೆ ಬರಬೇಕೆಂದು ನಾನೇ ಕರೆಯಬಹುದಾಗಿತ್ತು. ಆದರೆ ನನ್ನ ಮಗಳು ಮೇಲೆ ಇದ್ದಾಳೆ. ಬಹುಶಃ ಅವಳು ಎಚ್ಚರವಾಗಿರಬಹುದು. ಆದುದರಿಂದ ಆಮಂತ್ರಿಸಲು ಅಸಮರ್ಥಳಾಗಿದ್ದೇನೆ. ನನ್ನ ಕಾರನ್ನು ನೀವೇ ತೆಗೆದುಕೊಂಡು ಹೋಗಿರಿ. ನಾಳೆ ನಿಮ್ಮ ಹಾಸ್ಪಿಟಲಿನಿಂದ ನಾನೇ ತಿರುಗಿ ತರುವೆ" ಆಕೆ ಸಮಾಧಾನ ಚಿತ್ತದಿಂದಲೇ ಹೇಳಿದಳು.

ಹೆಚ್ಚಿಗೆ ಏನನ್ನೂ ಮಾತನಾಡದೆ ಕೀಲಿಕೈ ಗೊಂಚಲನ್ನು ಸೀಟಿನ ಮೇಲೆಸೆದು ಆಕೆ ಮನೆಯೊಳಕ್ಕೆ ಹೊರಟವಳು ಪುನಃ ಹಿಂದಿರುಗಿ ಹೇಳಿದಳು: "ಶ್ರೀನಿವಾಸನನ್ನು ಮಾತ್ರ ನಾನು ಮೇಲೆ ಕರೆದೊಯ್ಯಬಹುದಾಗಿತ್ತು. ಅವನು ನನಗೆ ದೂರದ ಸಂಬಂಧಿ."

ಆ ರಾತ್ರಿಯಿಡಿ ನಾನು ಅಸ್ವಸ್ಥನಾಗಿಯೇ ಕಳೆದೆ. ಇಷ್ಟೊಂದು ಸಮೀಪ ಬಂದಂತೆನಿಸಿದ ಮಾಲವಿಕಾ ಅದೆಷ್ಟು ಸುಲಭವಾಗಿ ಸರಿದು ಹೋಗಿದ್ದಳು! ಆಕೆಯನ್ನು ಇನ್ನೂ ಸರಿಯಾಗಿ ಅರ್ಥಮಾಡಿಕೊಳ್ಳಬೇಕೆಂದು ಅನಿಸತೊಡಗಿತು. ಏನೇನೋ ವಿರೋಧಾಭಾಸಗಳ ಕಂತೆಯಾಗಿ ತೋರುವ ಆಕೆಯನ್ನು ಆಳವಾಗಿ, ಇನ್ನೂ ಆಳವಾಗಿ ಅರಿಯಬೇಕೆಂಬ ಹಂಬಲ ನನ್ನಲ್ಲೇಕೆ ಉಂಟಾಗಬೇಕು? ನನ್ನ ಮನಸ್ಸು ಮತ್ತು ಮತ್ತು ಅವಳ ಜೀವಂತ ಚಿತ್ರ–

ವನ್ನೇ ಕಣ್ಣೆದುರು ತಂದುಕೊಳ್ಳುತ್ತಿತ್ತು...ಹೌದು, ಬಿಡಿಸಲಾಗದಂಥ, ಗಹನವಾದ ಒಗಟನ್ನು ಹೇಳಿ ಮರುಕ್ಷಣ ತಾನೇ ಅದನ್ನು ಸರಸರನೆ ಬಿಡಿಸಬಲ್ಲ ವಳಾಕೆ...ಈ ಕ್ಷಣಕ್ಕೆ ಸ್ಪಷ್ಟೋಕ್ತಿಯಲ್ಲಿ ಎತ್ತಿದ ಕೈಯೆಂಬಂತೆ ಮಾತಾಡುತ್ತಿರುವಾಕೆ ಕ್ಷಣಾರ್ಧ ದಲ್ಲಿ ಮುಚ್ಚಿದಂತೆ ಮೌನ ಕವಚವನ್ನು ಧರಿಸಿ ಬಿಡುತ್ತಿದ್ದಳು... ಆದರೆ ಆಕೆಯ ಕಂಗಳಲ್ಲಿ ವ್ಯಥೆಯ ಸಾಗರವೇ ಅಡಗಿದೆಯೇನೋ ಎಂಬ ಅನುಭವ ಮಾತ್ರ ಸಂವೇದನಶೀಲನಿಗೆ ತಟ್ಟನೆ ಹೊಳೆಯಲೇ ಬೇಕು.

ಅವಳು ಮರುದಿನವೇ ಬಂದಳು. ಅಂದಿನಿಂದ ಆಗೊಮ್ಮೆ ಈಗೊಮ್ಮೆ ಬರತೊಡಗಿದಾಗ ಒಮ್ಮೊಮ್ಮೆ ಡಿನರಿಗೆ ಇಲ್ಲವೆ ನರ್ತನಕ್ಕೆ ಅಥವಾ ಯಾವುದೋ ಒಂದು ಸುಂದರ ನಾಟಕ ನೋಡುವು ದಕ್ಕೆ...ನನ್ನ ಕಣ್ಣಲ್ಲಿಯ ಆಸಕ್ತಿಯನ್ನು ಬಯಕೆ ಯನ್ನು ಗುರುತಿಸಿದರೂ ಅವಳಿಂದೂ ಪ್ರೋತ್ಸಾಹವೀ ಯಲಿಲ್ಲ, ಮುಂದಾಗಲೂ ಇಲ್ಲ; ನನಗೂ ಮುಂದು ವರಿಯುವ ಧೈರ್ಯವಾಗಲಿಲ್ಲ. ಆದರೆ ಒಬ್ಬರಿ ನ್ನೊಬ್ಬರಲ್ಲಿ ಅನುರಕ್ತರಾಗಿದ್ದವೆಂಬುದರ ಅರಿವು ಮಾತ್ರ ಇಬ್ಬರಿಗೂ ಇತ್ತು. ಪರಸ್ಪರ ಮಾನಸಿಕ ಸಾಮೀಪ್ಯದ ಅರಿವು ಇಬ್ಬರಿಗೂ ಏಕಕಾಲಕ್ಕೇ ಆಯಿತು. ವ್ಯಮರೆತು ತೂಕ ತಪ್ಪದಂತೆ ನಾವು ಎಚ್ಚರವಹಿಸಹತ್ತಿದೆವು. ಕೈ ಮೀರುವುದನ್ನು ಹಿಡಿತದಲ್ಲಿ ಇಟ್ಟುಕೊಳ್ಳತೊಡಗಿದೆವು. ಆದರೆ ಬಹುದು ತಪ್ಪದಂತೆ. ಆ ಕಲ್ಪನೆಯೂ ನಮ್ಮಿಬ್ಬ ರಲ್ಲೂ ಸಾಕಷ್ಟು ಸ್ಪಷ್ಟವಾಗಿಯೇ ಇತ್ತು. ಆಗ ಮಾತ್ರ ನಾವಿಬ್ಬರೂ ಮೋಹಕ್ಕೆ ಶರಣಾಗತರಾಗ ಬೇಕಾಯಿತು. ಅಂಥ ಹೊತ್ತಿನಲ್ಲೂ ಅವಳು ಹೇಳಿದಳು; "ತಡೆಯಿರಿ, ಡಾಕ್ಟರ್, ನನಗೆ ನೀವು ಬೇಕು. ಆದರೆ ಅದಕ್ಕೂ ಮುಂಚೆ ನಾನು ಬಂಟಿಯ ಒಪ್ಪಿಗೆ ಪಡೆಯುವೆ. ಬಂಟಿ ನನ್ನ ಮಗಳು. ಆದರೆ ನಮ್ಮಿಬ್ಬರಲ್ಲಿ ಎರಡೆಂಬುದಿಲ್ಲ. ನಾನು ಅವಳಿಗೆ ಇದೆಲ್ಲವನ್ನೂ ಹೇಳಲವಕಾಶ ಕೊಡಿ. ಯಾರು ಏನೇ ಅಂದರೂ ನಾನು ಸಹಿಸಬಲ್ಲೆ, ಆದರೆ ಆಕೆಯ ಮಾತು ಬೇರೆ. ನಾನದಕ್ಕೆ ಅಷ್ಟೊಂದು ಮಹತ್ವ ಕೊಡುತ್ತೇನೆ."

"ಎಲ್ಲಿದ್ದಾಳೆ ಬಂಟಿ?"

"ಲಂಡನ್ನಿನಲ್ಲಿ–"

"ಅಲ್ಲೇನು ಮಾಡುತ್ತಾಳೆ?"

"ನೌಕರಿ–"

"ಎಲ್ಲಿ?"

"ಬ್ರಿಟಿಶ್ ಏರ್‌ವೇಜಿನಲ್ಲಿ."

"ಏನೆಂದು?"

"ರಿಸೆಪ್ಶನಿಸ್ಟ್. ಅವಳು ಮತ್ತೆ ಈ ಕಡೆಗೆ ಬರು ವುದಿಲ್ಲ. ಅವಳನ್ನು ಮದುವೆಯಾಗಲಿರುವವನೂ ಅಲ್ಲೇ ಇದ್ದಾನೆ–ಡಾ. ಪ್ರದೀಪ ಸಿನ್ಹಾ. ಕ್ಯಾನ್ಸರ್ ಬಗೆಗೆ ರಿಸರ್ಚ ಮಾಡುತ್ತಿದ್ದಾನೆ. ಇಬ್ಬರೂ ಅಲ್ಲಿಯೇ ಸೆಟ್ಲ್ ಆಗುವವರಿದ್ದಾರೆ. Anyway, ನೀವು ನನಗೆ ನಾಳೆ ಭೇಟಿಯಾಗಿರಿ; ಅಥವಾ ನಾಳೆ ಬೇಡ, ನಾಡದು ಆಗಲಿ."

ಎರಡು ದಿನಗಳ ತರುವಾಯ ಮಾಲವಿಕಾ ಭೇಟಿಯಾದಾಗ ಅವಳಲ್ಲಿಯ ಕಠೋರತೆ ಮಾಯ ವಾಗಿತ್ತು. ಕೇವಲ ಕುಸುಮ–ಕೋಮಲತೆ ಮಾತ್ರ ಉಳಿದಿತ್ತು.

ಅದೇನು? ಪ್ರೇಮವೆ? ಅಥವಾ ಎರಡು ಜೀವ ಗಳು ಕೇವಲ ಶರೀರದಿಂದ ಒಂದೆಡೆ ಬಂಧಿತವಾ– ದುವೆ? ಅಥವಾ ಎರಡು ಏಕಾಕಿ ಮನಗಳ ಮನೋ ರಂಜನೆ ನಡೆದಿತ್ತೆ? ಅದೇನೆಂಬುದರ ಬಗ್ಗೆ ವ್ಯರ್ಥ ಚರ್ಚೆ ಏಕೆ? ಹೌದು, ಆದದ್ದೆಲ್ಲಾ ಅಕ್ಷರಶಃ ಸರಿಯಾಗಿಯೇ ಆಯಿತು–ಎನಿತೂ ಸದ್ದು ಗದ್ದಲ ವಿಲ್ಲದೆ. ತುಸು ನಿರ್ಲಿಪ್ತ ಭಾವದಿಂದ ದೂರ ನಿಂತು ನೋಡುವವರಿಗೆ ಅಲ್ಲೇನು ಕಾಣಸಬಹು ದಿತ್ತು? ಪರಸ್ಪರರಲ್ಲಿ ಸುಖ ಮಾತ್ರವನ್ನೇ ಶೋಧಿಸುತ್ತಿದ್ದ ಇಬ್ಬರು...ಎಂಥ ಕವಿ ಚಕ್ರವ– ರ್ತಿಗೂ ಶಬ್ದರೂಪ ಕೊಡಲು ಅಸಾಧ್ಯವಾದಂಥದು ಅಲ್ಲಿ ನಡೆದಿತ್ತು.

ಮಾಲವಿಕಾ ಹೇಳುತ್ತಿದ್ದಳು: "ಕಳೆದ ಎಷ್ಟೋ ವರ್ಷಗಳಿಂದ ನಾನು ಪ್ರತಸ್ಥಳಾಗಿದ್ದೇನೆ. ಡಾಕ್ಟರ್ ಹೆಣ್ಣು ಜನ್ಮತಃ ಒಬ್ಬನ ವಸ್ತು. ಹಾಗೆ ನಾನು ನಿಮ್ಮವಳಾಗಿದ್ದೇನೆ. ಮದುವೆಯ ಹಂದರದಲ್ಲಿ ನನ್ನ ಕೈಹಿಡಿದ ಆ ಮನುಷ್ಯ ಇಲ್ಲಿ ಬಂದಾಗೆಂದೂ ಶುದ್ಧಿಯಲ್ಲಿರುವುದೇ ಇಲ್ಲ. ಇಷ್ಟು ವರ್ಷಗಳ ಅನು ಭವದಲ್ಲಿ ನನ್ನಿಂದ ಆತನಿಗೆ ದೊರೆಯುವುದು ಶೀತಲ ಪ್ರತಿಕ್ರಿಯೆ, ಕರ್ತವ್ಯದ ಎಚ್ಚರ, ಬಂಟಿ ಯೂ ಅವನನ್ನು ತಿರಸ್ಕಾರದಿಂದಲೇ ನೋಡು ತ್ತಾಳೆ."

ಯಾವುದೇ ಪುರುಷನಿಗೆ ರುಚಿಸಬಹುದಾದಂತೆ ಮಾಲವಿಕಾ ಇದ್ದಳು. ಉತ್ಕಟತೆಯನ್ನು ಹೇಗೆ ಉಂಟುಮಾಡಬೇಕೆಂಬುದು ಅವಳಿಗೆ ಗೊತ್ತು. ಮಧ್ಯವಯಸ್ಸಿನ ಸ್ತ್ರೀಯು ಉತ್ಕಟತೆಗೆ ಉಂಟಾಗುವ ಒಂದು ಪ್ರಕಾರದ ಅಂತರ್ಯದ ಸ್ಥೈರ್ಯ ಅವಳಲ್ಲಿ ನೆಲೆಸಿತ್ತು. ಮಾತನಾಡದೆ ಸ್ಪರ್ಶದಿಂದಲೇ ಅವಳು ಎಲ್ಲವನ್ನು ನನಗೆ ಹೇಳುತ್ತಿದ್ದಳು.

"ನನಗೆ ಈ ತತ್ತ್ವಜ್ಞಾನವೇ ಅರ್ಥವಾಗುವದಿಲ್ಲ. ಮನಸ್ಸು ಮಹತ್ವದ್ದೋ? ಶರೀರಕ್ಕೆ ಆ ಮಹತ್ವವಿಲ್ಲವೆ ? ಶರೀರವೂ ಅಷ್ಟೇ ಮಹತ್ವದ್ದಲ್ಲವೇನು ? ಈ ಶರೀರದ ಸೇತುವೆಯ ಮೇಲಿಂದಲೇ ನಿಮ್ಮನ್ನು ಭೇಟಿಯಾಗಲು ಬರುತ್ತಿರುವೆನಲ್ಲ? ನನ್ನ ಹಾಗೂ ನಿಮ್ಮ ಶರೀರದ ತೂಗುಯ್ಯಾಲೆಯಿಂದಲೇ ಒಬ್ಬರಿನೊಬ್ಬರನ್ನು ತಲುಪುತ್ತಿದ್ದೇವಲ್ಲ!"

ಇಂಥ ಈ ಮಾಲವಿಕಾ. ದುಂಡುಮೊಗದವಳು. ನೇರ ಮೂಗಿನವಳು, ಆಕರ್ಷಕ ಮೈಕಟ್ಟುಳ್ಳವಳು ಖಂಡಿತ ಅವಳು ನನಗೆ ಬೇಕು–ಸಾಧ್ಯವಿರುವವರೆಗೆ. ಅವಳಿಗೂ ನಾನು ಬೇಕು. "ನನ್ನ ಮಗಳ ಸಂಸಾರದಲ್ಲಿ ಖಂಡಿತವಾಗಿಯೂ ನನಗೊಂದು ಚಿಕ್ಕ ಸ್ಥಳವಿದೆ. ನಾನು ಅಲ್ಲಿ ಹೋಗಬಹುದು. ನೀವು ಸಹ ಹೀಗೆಯೇ ಉಳಿಯಬೇಕಾಗಬಹುದು. ತೃಪ್ತರಾಗಿ," ಅನ್ನುತ್ತಿರುತ್ತಾಳೆ ಮಾಲವಿಕಾ.

ಇದು ನಿಜವೋ? ಸುಳ್ಳೊ? ಸಂಭವನೀಯವೊ? ಅಸಂಭವನೀಯವೊ? ಯಾವುದೂ ನನಗೆ ಗೊತ್ತಿಲ್ಲ. ಇದು ಹೀಗೆಯೇ ನಡೆಯುವುದು ಯಾರಾದರೊಬ್ಬರು ನಿಲ್ಲುವವರೆಗೆ ಅಥವಾ ಯಾರಾದರೂ ಒಬ್ಬರು ಸಾಯುವವರೆಗೆ.

ಇಂದು ಆಕೆ ಬರಲಿದ್ದಾಳೆ. ಹೌದು, ಇಂದು ಮಾಲವಿಕಾ ಬರುವವಳಿದ್ದಾಳೆ...... ✡

ಕೆರೆಯ ನೀರನು....

ನಮ್ಮ ಪಕ್ಕದ ಮನೆಯವರ ಬಿಂದಿಗೆ ಕವೀನದಲ್ಲಿದ್ದ ಬಾವಿಗೆ ಬಿದ್ದು ೧೫ ದಿವಸಗಳ ಮೇಲಾಗಿತ್ತು. ಒಂದು ಭಾನುವಾರ, "ಬಾವಿಯಲ್ಲಿ ಸಾಮಾನು ಬಿದ್ದಿದೆಯೇನಮ್ಮಾ" ಎನ್ನುತ್ತಾ ಒಬ್ಬ ಉದ್ದವಾದ ಒಂದು ಕೊಕ್ಕೆಯನ್ನು ಹಿಡಿದುಕೊಂಡು ಬರುತ್ತಿದ್ದ. ನಮ್ಮ ಪಕ್ಕದ ಮನೆಯವರು ಅವನನ್ನು ಕರೆದು ಬಾವಿಯಲ್ಲಿ ಬಿಂದಿಗೆ ಬಿದ್ದ ವಿಷಯ ಹೇಳಿದರು. ನಾವೆಲ್ಲಾ ಬಾವಿಯ ಹತ್ತಿರ 'ಗುಂಪುಗೂಡಿಕೊಂಡು ಅವನು ಬಾವಿಗೆ ಇಳಿಯುವ ದೃಶ್ಯ ನೋಡಲು ನೆರೆದೆವು. ೫–೬ ನಿಮಿಷದೊಳಗೆ ಬಿಂದಿಗೆ ಕೈಯಲ್ಲಿ ಹಿಡಿದು ಅವನು ಮೇಲೆ ಹತ್ತಿ ಬಂದ. "ನೋಡೀಮ್ಮ, ಈ ಚಳಿಯಲ್ಲಿ ಬಿಂದಿಗೆ ತೆಗೆದಿದ್ದೀನಿ. ಒಂದು ನಾಲ್ಕಾಣೆ ಜಾಸ್ತಿ ಕೊಟ್ಟುಬಿಡಿ ತಾಯಿ. ಒಂದೂವರೆ ರೂಪಾಯಿ ಕೊಟ್ಟುಬಿಡೀಮ್ಮ" ಎಂದ. ಆ ಗರಾಣಿ ಹೆಂಗಸು, "ಯಾಕಯ್ಯಾ ಒಂದೂವರೆ ರೂಪಾಯಿ ಕೊಡಬೇಕು? ದುಡ್ಡು ಜಾಸ್ತಿ ಇದೆಯಾ ? ಬೇಕಾದರೆ ೫೦ ಪೈಸೆ ಕೊಡುತ್ತೀನಿ..." ಅವರ ಮಾತು ಇನ್ನೂ ಪೂರ್ತಿಯಾಗಿರಲಿಲ್ಲ. ಆತ ಬಿಂದಿಗೆಯನ್ನು ಪುನಃ ಬಾವಿಗೆ ಹಾಕಿ ಏನೂ ನಡೆಯದವನಂತೆ "ಬಾವಿಯಲ್ಲಿ ಸಾಮಾನು ಬಿದ್ದಿದೆಯೇನಮ್ಮಾ" ಎಂದು ಕೂಗುತ್ತಾ ಹೊರಟೇ ಹೋದ.

–ಬಿ. ಜಿ. ರಾಮಚಂದ್ರ

ಸಾವಿನ ದವಡೆಯಲ್ಲಿ ಮುಕ್ಕಾಲು ಗಂಟೆ

ಗೋವಾ

ಕೆವಿ ಗಡಚಿಕ್ಕಿಸುವ ಸದ್ದಿನೊಂದಿಗೆ ಕಲ್ಲುಪದರುಗಳನ್ನು ಕೊರೆಯುತ್ತಿದ್ದ ಗರಗಸಗಳು ರಭಸದಿಂದ ತಿರುಗುತ್ತಿದ್ದವು, ಗ್ರೇಟ್ ಬ್ರಿಟನ್ನಿನ ಕುಂಬ್ರಿಯಾ ಜಿಲ್ಲೆಯ ಎಲ್ಟರ್‌ವಾಟರ್ ಕಲ್ಲುಗಣಿಗಳಲ್ಲಿ. ಸುತ್ತಲಿನ ಪರ್ವತಮಾಲೆಗಳಲ್ಲಿ ಅದರ ಸದ್ದು ನೂರ್ಮಡಿಯಾಗಿ ಪ್ರತಿಧ್ವನಿಸಿ 'ಸದ್ದಿನ ಸಾಮ್ರಾಜ್ಯ'ವನ್ನೇ ಅಲ್ಲಿ ಸೃಷ್ಟಿಸಿತ್ತು.

ಪಾಪ, ಈ ಸದ್ದಿನಲ್ಲಿ ಶಾರ್ಟಿ ವಾಕರ್, "ಸಾಯುತ್ತಿದ್ದೇನೆ, ಬದುಕಿಸಿ" ಎಂದು ಕೂಗಿಕೊಂಡರೆ ಯಾರಿಗೆ ತಾನೇ ಕೇಳಿಸಬೇಕು? ನಿಮಿಷ ನಿಮಿಷಕ್ಕೆ ಸಾವು ಆತನನ್ನು ಸೆಳೆಯುತ್ತಲಿತ್ತು, ಆ ನೀರಿನ ತೊಟ್ಟಿಯಲ್ಲಿ. ಆತನ ಪಾಲಿಗದು ಸಾವಿನ ಸಾಗರವಾಗಿ ಪರಿಣಮಿಸಿ ಬಿಟ್ಟಿತ್ತು. ಅದರಿಂದ ಹೊರಬರಲು ಪ್ರಯತ್ನಿಸಿದಷ್ಟೂ ಶಾರ್ಟಿ ಹೆಚ್ಚೆಚ್ಚು ಮುಳುಗುತ್ತಿದ್ದ.

ನಿವೃತ್ತನಾಗಿ ವಿಶ್ರಾಂತ ಜೀವನ ಸಾಗಿಸಬೇಕಿದ್ದ ೬೬ ವರ್ಷದ ವೃದ್ಧ ಶಾರ್ಟಿಯನ್ನು 'ಪ್ರಾಮಾಣಿಕ' 'ಕಾರ್ಯತತ್ಪರ' ಎಂದು ಹೊಗಳಿ ಕೆಲಸದಲ್ಲಿ ಮುಂದುವರೆಸಿದ್ದರು ಗಣಿಗಳ ಮಾಲಿಕರು. ಗರಗಸಗಳ ಕೋಣೆಯ ಹೊರಗೆ ಗರಗಸದಿಂದ ಹರಿದು ಬಂದ ಕೊಳೆಯಾದ ರಾಡಿ ನೀರನ್ನು ಸಂಗ್ರಹಿಸುವ ತೊಟ್ಟಿಗಳಿರುತ್ತವೆ. ಶಾರ್ಟಿಯ ಕೆಲಸ ಆ ತೊಟ್ಟಿಗಳನ್ನು ಸ್ವಚ್ಛಗೊಳಿಸುವುದು. ಕಲ್ಲು ಚಪ್ಪಡಿಗಳನ್ನು ಗರಗಸಗಳು ಸುಗಮವಾಗಿ ಕೊರೆದು ಪದರುಗೊಳಿಸಲು ಅನುಕೂಲವಾಗುವಂತೆ ನೀರನ್ನು ಹರಿಸಲಾಗುತ್ತದೆ. ಈ ನೀರಿನೊಂದಿಗೆ ಕಲ್ಲಿನ ಪುಡಿ ಬೆರೆತು ರಾಡಿಯಾಗಿ ಕೊಳವೆಯ ಮೂಲಕ ಹೊರಗೆ ಇರುವ ತೊಟ್ಟಿಗಳಿಗೆ ಹರಿಯುತ್ತದೆ. ಮತ್ತು ಸೋಸಲ್ಪಟ್ಟು ತೊಟ್ಟಿಯಲ್ಲಿ ಸಂಗ್ರಹವಾಗುತ್ತದೆ. ಹೀಗೆ ಸಂಗ್ರಹವಾದ ಆ ರಾಡಿ ರಬ್ಬರಿನ ಹಾಗೆ ಜಿಗುಟಾಗಿರುತ್ತದೆ. ಕೊಳವೆಯಿಂದ ಸೋಸಲ್ಪಡಲು ಹಾಕಿರುವ ಜಾಳಿಗೆಯನ್ನು ಆಗಾಗ ಸ್ವಚ್ಛಮಾಡಬೇಕಾದ್ದು ಶಾರ್ಟಿಯ ಕೆಲಸವಾಗಿತ್ತು.

೧೯೭೩ರ ನವೆಂಬರ್ ೨೩ರ ಮುಂಜಾನೆಯ ಹನ್ನೊಂದರ ಹೊತ್ತಿಗೆ ಶಾರ್ಟಿ ಎಂದಿನಂತೆ ಜಾಳಿಗೆ ಸ್ವಚ್ಛಮಾಡುತ್ತಿದ್ದ. ಕಾಲುಚೀಲ ಧರಿ



ಸಿದ್ದ ಆತ ಕೊಳವೆಯನ್ನು ಅಲುಗಾಡಿಸಲು ಎರಡು ತೊಟ್ಟಿಗಳ ನಡುವೆ ಇದ್ದ ಕಟ್ಟಿಗೆಯ ತುಂಡೊಂದರ ಮೇಲೆ ನಿಂತುಕೊಂಡಿದ್ದ. ಈ ನಲವತ್ತು ವರ್ಷ ಆತ ಮಾಡಿಕೊಂಡು ಬಂದಿದ್ದ ಕೆಲಸವೇ ಅದು. ಎಷ್ಟು ಅಲುಗಾಡಿಸಿದರೂ ಜಾಳಿಗೆಯಲ್ಲಿನ ಕೊಳೆ ಸರಿಯಲಿಲ್ಲ. ಬಾಗಿ ಕೈಯಿಂದ ಸ್ವಚ್ಛ ಮಾಡಬೇಕೆಂದುಕೊಂಡಿದ್ದಂತೆಯೇ ಆಯ ತಪ್ಪಿತು. ಶಾರ್ಟಿ ದೊಪ್ಪನೇ ಎಂಟಡಿ ಎತ್ತರದಿಂದ ರಾಡಿಯಲ್ಲಿ ಬಿದ್ದುಬಿಟ್ಟ. ಬೀಳುವಾಗ ಬಲ ಭುಜ ತೊಟ್ಟಿಯ ಅಂಚಿಗೆ ಬಲವಾಗಿ ಬಡಿದುದರ ಪರಿಣಾಮವಾಗಿ ಭುಜದ ಮೂಳೆ ಮುರಿಯಿತು.

ಮೈಯೆಲ್ಲಾ ಜೋಮು ಹಿಡಿದಂತೆ ನೋವು. ಮೇಲೆ ರಾಡಿ ಬೇರೆ. ಎದ್ದೇಳಲು ಶಕ್ತಿಯೇ ಸಾಲದು. ದೇಹವೆಲ್ಲ ಮೂರಡಿ ರಾಡಿಯಲ್ಲಿ ಹೂತುಕೊಂಡಿದೆ ಕೈಯನ್ನು ಗೋಡೆಗೆ ಆನಿಸಿಕೊಂಡು ಏಳ ಬೇಕೆಂದರೆ ಜಾರುತ್ತಿದೆ. ಎಡಗೈಯಿಂದ ತೊಟ್ಟಿಯ ಅಂಚನ್ನು ಹಿಡಿಯಲು ಪ್ರಯತ್ನಿಸಿದ. ಆದರೆ ಬಲಗೈಯ ಮುರಿದ ಮೂಳೆಯ ನೋವು ಅದಕ್ಕೆ ಅಸ್ಪದವೀಯಲಿಲ್ಲ.

[illegible] ಶಾರ್ಟಿಗೆ ಗೊತ್ತಿತ್ತು. [illegible] ಅದು ಗೊತ್ತಿಲ್ಲ.

ಧ್ವನಿ ಬಿದ್ದು ಹೋಗುವವರೆಗೂ ಕೂಗಿ ಕೊಂಡ. ಆದರೆ ಧ್ವನಿ ಎಷ್ಟೇ ಜೋರಾಗಿದ್ದರೂ [illegible] ಮುಂದೆ ಅದರ ಆಟ ಹೇಗೆ ನಡೆದೀತು? ಸುತ್ತಲಿನ ಸದ್ದಿನ ಸಾಮ್ರಾಜ್ಯದಲ್ಲಿ ಶಾರ್ಟಿಯ ಸದ್ದಿನ ಸುದ್ದಿಗೆ ಯಾರು ಬರಬೇಕು?

ಸುತ್ತಲೂ ಅಸಹಾಯನಾಗಿ ನೋಡಿದ. ಕಬ್ಬಿಣದ ನಲ್ಲಿಯಂಥದೊಂದು ವಸ್ತು ಕಂಡಿತು. ಅದನ್ನು ಹಿಡಿದು ಮೇಲೇಳಬೇಕೆಂದು ನೋಡಿದರೆ ಅದು ಶಾರ್ಟಿಯ ಭಾರಕ್ಕೆ ಕಿತ್ತು ಬಂತು. ಶಾರ್ಟಿ ಮತ್ತೆ ಬಿದ್ದ.

ಎತ್ತಿ ಹಿಡಿದ ಎಡಗೈ ಜೋಮು ಹಿಡಿದಿದ್ದರೂ ಶಾರ್ಟಿ ಪ್ರಯತ್ನ ಬಿಡಲಿಲ್ಲ. ರಾಡಿ ಆತನನ್ನು ಏಳಗೊಡಲಿಲ್ಲ.

ಮತ್ತೊಮ್ಮೆ ಕೂಗಿಕೊಂಡ. ಕೂಗಿಗೆ ಗರಗಸದ ಸದ್ದು ಉತ್ತರವಾಯಿತೇ ಹೊರತು ಯಾರೂ ಬರಲಿಲ್ಲ.

ಆಯಿತು, ಸಾವೇ ಗತಿ ಎಂದುಕೊಂಡ ಶಾರ್ಟಿ.

ಒಮ್ಮೆಂದೊಮ್ಮೆಲೇ ಗರಗಸಗಳು ಕೊರೆ ಯುವುದನ್ನು [illegible]. ಸುತ್ತಲಿನ ಸದ್ದು [illegible]. ತನ್ನ [illegible] ಎಂದು ಶಾರ್ಟಿ ಅಂದುಕೊಳ್ಳುತ್ತಿದ್ದಂತೆಯೇ ಬೂಟು ಗಳ ಟಕ–ಟಕ ಸದ್ದು, ಈತನನ್ನೇ ಸಮೀಪಿಸುತ್ತ ಯಾರೋ [illegible] ಹಾಕುತ್ತಿದ್ದಾರೆ ರಭಸದಿಂದ.

ಗಿಡ್ಡ ವ್ಯಕ್ತಿ ಲೆ ಥಾಮ್ಸನ್–ಆ ಕಾರಖಾನೆಯ ಇಲೆಕ್ಟ್ರಿಶಿಯನ್. ಆಕಸ್ಮಿಕವಾಗಿ ಶಾರ್ಟಿ ಕೆಲಸ ಮಾಡುತ್ತಿದ್ದ ತೊಟ್ಟಿಗಳೆಡೆ ನಾಲ್ಕೈದು ಬಾರಿ ದೃಷ್ಟಿ ಹರಿಸಿದ ಆತನಿಗೇನೋ ಸಂಶಯ ಬಂದಿತ್ತು. [illegible] ನಲ್ಲಿ ಕಿತ್ತು [illegible] ದೂರದಿಂದ ಕಂಡಿತ್ತು. ಬೇಗಾಗಿ ಎಚ್ಚರಿಕೆಯ ಸೈರನ್ [illegible]. [illegible] ಕೊರೆಯುವ ಗರಗಸಗಳು ಸ್ತಬ್ಧವಾದುವು.

ಥಾಮ್ಸನ್ ಏಣಿಯನ್ನು ತೊಟ್ಟಿಯೊಳಕ್ಕೆ ಇಳಿಸಿದ. ಇಬ್ಬರು ಇಳಿದರು. ಶಾರ್ಟಿಯನ್ನು ಗಟ್ಟಿಯಾಗಿ ಹಿಡಿದುಕೊಂಡವರೇ ಮೇಲೇರಿ ಬಂದರು.

ಕೂಡಲೇ ಆತನನ್ನು ಬ್ಲ್ಯಾಂಕೆಟ್‌ಗಳಲ್ಲಿ ಸುತ್ತಿ ಪ್ರಥಮೋಪಚಾರ ನೀಡಿದರು.


ನಲವತ್ತೈದು ನಿಮಿಷಗಳ ಕಾಲ ಸಾವಿನ ದವಡೆಯಲ್ಲಿ ಸಿಕ್ಕಿಕೊಂಡು ಒದ್ದಾಡಿದ್ದ ಶಾರ್ಟಿ.

ಹತ್ತು ವಾರಗಳ ನಂತರ ಆತನ ಮುರಿದ ಬಲಭುಜದ ಮೂಳೆಯನ್ನು ಸರಿಪಡಿಸಲಾಗಿತ್ತು. ಮತ್ತೆ ಕೆಲಸಕ್ಕೆ ಹೊರಟ ಶಾರ್ಟಿ.

ಆಗ ಆತನಿಗೆ ನೀಡಲಾದ ಮೊದಲ ಕೆಲಸ ಎಂದರೆ ಆ ತೊಟ್ಟಿಗಳಿಗೆ ಮುಚ್ಚಳಗಳನ್ನು ಮಾಡುವುದು, ಆತನಂತೆ ಇತರರು ಬಿದ್ದು ಸಾವಿನೊಂದಿಗೆ ಒದ್ದಾಡಬಾರದೆಂಬ ಉದ್ದೇಶದಿಂದ.

✡


('ವೀಕ್ ಎಂಡ್' ನಿಂದ)



ಡಾ. ಎಂ. ದಯಾಕರ

ಇಂದ್ರಿಯ ಮತ್ತು ಬುದ್ಧಿಶಕ್ತಿಗಳಿಗೆ ಸ್ಥಾನವಾದ ತಲೆಗೆ ಉತ್ತಮಾಂಗವೆನ್ನಲಾಗಿದೆ. "ಸರ್ವೇಂದ್ರಿಯಾಣಾಂ ನಯನಂ ಪ್ರಧಾನಂ" ಎನ್ನುವುದೂ ಇದೆ. ಕೋಪ, ಆನಂದ, ನಿರಾಶೆ ಇತ್ಯಾದಿ ಭಾವನೆಗಳು ಕಣ್ಣುಗಳಲ್ಲಿ ಹೆಚ್ಚು ವ್ಯಕ್ತವಾಗುತ್ತವೆ. ಕಣ್ಣುಗಳಿಂದ ನಾವು ನೋಡುತ್ತೇವೆ. ಸ್ವಯಂ ಪ್ರಕಾಶ ಅಥವಾ ಪ್ರಕಾಶ ಪ್ರತಿಬಿಂಬಿಸುವ ವಸ್ತುಗಳಿಂದ ಹೊರಡುವ ಕಿರಣಗಳು ಕಣ್ಣನ್ನು ಹೊಕ್ಕಾಗ ನೋಡುವುದಾಗುತ್ತದೆ. ಕತ್ತಲಲ್ಲಿ ದೃಷ್ಟಿ ತಾಕಲಾರದು. ಕೋಟಿ ಕೋಟಿ ಮೈಲು ದೂರವಿರುವ ನಕ್ಷತ್ರಗಳು ಕಾಣುವದರಿಂದಾಗುವ ದೂರ ಜ್ಞಾನ ಇತರ ಯಾವ ಇಂದ್ರಿಯದಿಂದಲೂ ಆಗುವುದಿಲ್ಲ. ಆಕಾಶದ ಶೂನ್ಯದಲ್ಲಿ ಬರುವ ಕಿರಣಗಳಿಂದ ನಮಗೆ ವಿಶ್ವದರ್ಶನವಾಗುತ್ತದೆ. ದೂರವೇ ಅಲ್ಲದ ವಸ್ತುಗಳ ಆಕಾರ, ಆಳ, ವೇಗ ಇತ್ಯಾದಿಗಳೂ ನಮಗೆ ಕಣ್ಣಿಂದ ತಿಳಿಯುತ್ತವೆ.

ಕಣ್ಣಿನ 'ಗ್ರಾಸ' ಬೆಳಕಾದ್ದರಿಂದ ಬೆಳಕಿನ ಕೆಲವು ಭೌತಿಕ ವಿಚಾರಗಳನ್ನು ತಿಳಿಯೋಣ. ಪದಾರ್ಥಗಳಲ್ಲಿ ಋಣ ವಿದ್ಯುದಣುಗಳು (ಎಲೆಕ್ಟ್ರಾನ್ಸ್) ಅತಿ ವೇಗದಲ್ಲಿ ಕಂಪಿಸುವದರಿಂದ ಇಂದ್ರಿಯಾತೀತ ಶೂನ್ಯದಲ್ಲಿ ವಿದ್ಯುದ್ಕಾಂತ (ಎಲೆಕ್ಟ್ರೋಮೆಗ್ನೆಟಿಕ್) ಅಲೆಗಳಿಂದಾಗಿ ನಮಗೆ ಶೂನ್ಯವೆಂಬುದಿರುವುದು ಗೋಚರವಾಗುತ್ತದೆ. ಸೆಕೆಂಡಿಗೆ ಸುಮಾರು ನೂರು ಸಾವಿರ ಕಂಪನಗಳಾದರೆ ರೇಡಿಯೊ ಅಲೆಗಳಾಗುತ್ತವೆ. ಸೆಕೆಂಡಿಗೆ ಸುಮಾರು ೪೦೦,೦೦೦,೦೦೦,೦೦೦,೦೦೦ ಅಲೆಗಳುಂಟಾದರೆ ಕೆಂಪು ಕಿರಣಗಳಾಗುತ್ತವೆ. ಆವರ್ತನಗಳ ಸಂಖ್ಯೆ ಹೆಚ್ಚಿದಷ್ಟೂ ಅಲೆಗಳ ಉದ್ದ ಕಮ್ಮಿ. ೩೭೦ ರಿಂದ ೭೬೦ ಮಿಲಿ ಮೈಕ್ರಾನ್ ಅಲೆಗಳ (೧ ಮಿ. ಮೈ. – ೦.೦೦೦೦೦೧ ಮಿಲಿ ಮೀಟರ್) ಕಿರಣಗಳು ಮಾತ್ರ ಕಣ್ಣಿಗೆ ಗೋಚರವಾಗಿ ದೃಷ್ಟಿಯುಂಟುಮಾಡಬಲ್ಲವು. ವಿದ್ಯುದ್ಕಾಂತ ಅಲೆಗಳ ವೇಗ ಸೆಕೆಂಡಿಗೆ ೧,೮೬೦೦೦ ಮೈಲುಗಳು. ಶೂನ್ಯದಿಂದ ಬರುವ ಕಿರಣಗಳು ವಾಯುಮಂಡಲವನ್ನು ಹೊಕ್ಕಾಗ ವೇಗ ಕೊಂಚ ತಗ್ಗುತ್ತದೆ ಮತ್ತು ಅವು ಸ್ವಲ್ಪ ಬಾಗುತ್ತವೆ. ವಾಯುವಿಗಿಂತ ಹೆಚ್ಚು ಸಾಂದ್ರವಾದ ನೀರಲ್ಲಿ ಕಿರಣಗಳು ಇನ್ನೂ ಬಾಗಿ ಅವುಗಳ




ಚಿತ್ರ: ೧

...ದಿಗ ಬಣ್ಣವನ್ನು ಕಾಣುತ್ತದೆ. ಕಣ್ಣಲ್ಲಿ ... ಇರುವುದರಿಂದ ... ಗಳು ಒಳಗೇ ಮುಟ್ಟಿ ಬೆಳಕಾಗುವುದರಿಂದ ... ನೋಡಲಾರದ ಸ್ಥಿತಿ ಉಂಟಾಗ ... ಮಿ. ಮೈಕ್ರಾನ್‌ಗಳಿಗಿಂತ ... ಅಲೆಗಳ ... ಸೂಕ್ಷ್ಮವಾಗಿಲ್ಲವೆಂದು ... ಹೇಳಿದ್ದಾನೆ. ಬೇರೆ ಬೇರೆ ಉದ್ದಗಳಿರುವ ಅಲೆಗಳಿಂದ ಬಣ್ಣಗಳ ಅರಿವಾಗುತ್ತದೆ. ಕೆಂಪು = ೭೫೦–೬೨೦ ಮಿ. ಮೈ. ಕಿತ್ತಳೆ = ೬೨೦–... ಮಿ. ಮೈ. ಹಳದಿ = ೫೯೦–೫೬೦ ಮಿ. ಮೈ. ಹಸಿರು-ಹಳದಿ = ೫೬೦–೫೩೦ ಮಿ. ಮೈ. ಹಸಿರು = ೫೩೦–೫೦೦ ಮಿ. ಮೈ. ತಿಳಿನೀಲಿ = ೫೦೦–೪೭೦ ಮಿ. ಮೈ. ಇಂಡಿಗೋ ನೀಲಿ = ೪೭೦–೪೫೦ ಮಿ. ಮೈ. ನೇರಳೆ(ಧೂಮ್ರ) = ೪೫೦–೩೯೦ ಮಿ. ಮೈ.ಗಳು

ಬೇರೆ ಬೇರೆ ಸಾಂದ್ರತೆಗಳ ಮಾಧ್ಯಮಗಳಲ್ಲಿ ಬೆಳಕು ತೂರುವಾಗ ಪ್ರತಿಯೊಂದ ಅಲೆ ... ಬಾಗುತ್ತದೆ. ... ಭಾಗ ಬಾಗಿದ್ದಂತಿರುತ್ತದೆ. ಅಲೆ ಉದ್ದ ಕಮ್ಮಿಯಾದಷ್ಟು ಬಾಗುವುದು ಹೆಚ್ಚು. ... ಗಳಲ್ಲಿ ಧೂಮ್ರ ಕಿರಣಗಳು ಹೆಚ್ಚಾಗಿಯೂ ಕೆಂಪು ಕಿರಣಗಳು ಕಮ್ಮಿಯಾಗಿಯೂ ಬಾಗುವುದರಿಂದ ಬಣ್ಣಗಳು ಬೇರ್ಪಡುತ್ತವೆ. ಬಿಳಿ ಕಿರಣಗಳು ಓರೆಯಾಗಿ ತೂರಿದಷ್ಟೂ ಬಣ್ಣಗಳು ಬೇರ್ಪಡುವುದು ಹೆಚ್ಚು. ಅರುಣೋದಯ ಅರುಣಾಸ್ತಗಳಲ್ಲಿ ಭೂಮಿಗೆ ಕೆಂಪು ಕಿರಣಗಳು ಮಾತ್ರ ಸೇರುತ್ತವೆ. ಸೂರ್ಯೋದಯ ಸೂರ್ಯಾಸ್ತಗಳಲ್ಲಿ ಸೂರ್ಯ ಕ್ಷಿತಿಜದಲ್ಲಿಲ್ಲದಿದ್ದರೂ ಬಾಗಿದ ಕಿರಣಗಳಿಂದ ಅವನು ಮೇಲೇರುವಂತೆ ಮಾಯೆಯಾಗುತ್ತದೆ. ಅಶ್ರಗದಲ್ಲಿ (ಪ್ರಿಸಂ) ತೂರಿದ ಬಿಳಿ (ಅವರ್ಣ) ಕಿರಣಗಳು ಸಪ್ತವರ್ಣ ಕಿರಣಗಳಾಗಿ ಬೇರ್ಪಡುತ್ತವೆ. ಬೆಳಗ್ಗೆ ಪಶ್ಚಿಮದಲ್ಲೂ, ಮಧ್ಯಾಹ್ನ ಪೂರ್ವದಲ್ಲೂ ತುಂತುರು ಮೋಡಗಳಲ್ಲಿ ಸೂರ್ಯ ಕಿರಣ ಒಡೆದು ನಮಗೆ ಕಾಮನ ಬಿಲ್ಲು (ಇಂದ್ರಧನುಸ್ಸು) ಕಾಣುತ್ತದೆ. ಸೂರ್ಯ ಕಿರಣಗಳಿಗೂ ಕಾಮನ ಬಿಲ್ಲು ಕಿರಣಗಳಿಗೂ ಇರುವ ಕೋನವನ್ನು ರೋಜರ್ ಬೇಕನ್ ಅಳೆದು (ಕ್ರಿ. ಶ. ೧೨೬೬) ಅದು ೪೨° ಉಳ್ಳದ್ದು ಎಂದು ಕಂಡುಹಿಡಿದನು. ಮಿಕ್ಕ ಕೋನಗಳಲ್ಲಿರುವ ಕಿರಣಗಳು ನಮ್ಮ ಕಣ್ಣಿಗೆ ಸೇರದೆ ನಾವು ಹಿಂದು ಮುಂದೆ ವೇಗವಾಗಿ ಸರಿದಂತೆ ಬಿಲ್ಲೂ ಸರಿಯುತ್ತದೆ.

ಪೀನಮಸೂರದಲ್ಲಿ ತೂರಿದ ಕಿರಣಗಳು ಅದರ ಮಧ್ಯ ರೇಖೆ ಕಡೆ ಬಾಗಿ ಒಂದು ಬಿಂದುವಿನಲ್ಲಿ ಕೂಡುತ್ತವೆ. ಸಮಾಂತರ ಕಿರಣಗಳು ಪರಿಚ್ಛಿನ್ನವಾಗಿ ನಾಭಿ(ಫೋಕಸ್)ಯಲ್ಲಿ ಕೂಡುತ್ತವೆ. ಮಸೂರವನ್ನು ಹಿಂದು ಮುಂದೆ ಆಡಿಸಿದಾಗ ಒಂದು ಸ್ಥಾನದಲ್ಲಿ ಆಚೆ ಗಿಡಮರಗಳ ಚಿತ್ರ ಗೋಡೆ ಮೇಲೆ ಮೂಡುತ್ತದೆ. ೨೦ ಅಡಿ ದೂರದಿಂದ ಬರುವ ಕಿರಣಗಳು ಹೆಚ್ಚು ಕಮ್ಮಿ ಸಮಾಂತರವಾದವು. ಮಸೂರಕ್ಕೂ ಅದರ ನಾಭಿಗೂ ಇರುವ ದೂರ ೧ ಮೀಟರ್ ಇದ್ದರೆ ಅದರ ಶಕ್ತಿ ೧ ಡಯಾಪ್ಟರ್; ೧/೨ ಮೀಟರಿದ್ದರೆ ೨ ಡಯಾಪ್ಟರ್, ನಾಭಿ ದೂರ ಕಮ್ಮಿಯಾದಷ್ಟೂ ಶಕ್ತಿ ಹೆಚ್ಚುತ್ತದೆ. ಮಸೂರದ ಅಂಚು ಭಾಗದಲ್ಲಿ ತೂರುವ ಕಿರಣಗಳ ವಕ್ರೀಭವನ ಹೆಚ್ಚಿರುವುದರಿಂದ ನಾಭಿ ಒಂದೇ ಬಿಂದುವಾಗದೆ ಅಸ್ಪಷ್ಟ ಚಿತ್ರ ಹಾಗೂ ವರ್ಣವೃತ್ತಗಳು ಮೂಡುತ್ತವೆ. ಅದರಿಂದ ಕೆಮರಾದಲ್ಲಿ ಐರಿಸ್ ಪರೆಯಿಂದ ಮಸೂರದ ಮಧ್ಯಭಾಗವನ್ನು ಮಾತ್ರ ಉಪಯೋಗಿಸುವುದು. ಕಣ್ಣಲ್ಲಿ ಪಾಪೆಯು ಮಸೂರದ ಮಧ್ಯ ಭಾಗದಲ್ಲಿದ್ದು ಪರಿಧಿ ಕಿರಣಗಳು ಬಳಸೋಗಲಾರವು.

ಚಿತ್ರ: ೨



ಎಡಗುಡ್ಡೆಯ ಸಮಮಟ್ಟ ಕೊಯ್ತ

ಮನುಷ್ಯ ಕಣ್ಣು ಗುಡ್ಡೆ: ಇದು ಗೋಳವಾಗಿ ಕೆಮರಾದ ವ್ಯವಸ್ಥೆಯಂತಿದ್ದು, ಅದರ ಮುಂದಿನ ವಸ್ತುಗಳ ಚಿತ್ರ ಅದರ ಹಿಂದಿನ ಭಿತ್ತಿ ಮೇಲೆ ಮೂಡುತ್ತದೆ. ಗುಡ್ಡೆ ವ್ಯಾಸ ೨೪ ಮಿ.ಮೀ. ಒಳಗೆ ೧೫–೧೮ ಮಿ. ಮೀ. ಅಂತರದ ಮಸ್ತದ ನಲ್ಲಿರುವ ಪಾರದರ್ಶಕವಾದ ಮತ್ತು ಅರೆ ದ್ರವವಾದ ವಸ್ತುಗಳು ಜಿಗಿಯಾದ ಸಿಪ್ಪೆಯೊಳಗಿವೆ. ಸಿಪ್ಪೆಯಲ್ಲಿ ಮೂರು ಪದರುಗಳಿವೆ. ಆಚೆಯದು ಸ್ಕ್ಲೀರ ಎಂಬ ಜಿಗಿಯಾದ ಕಾಂತಪಟಲ (ಬಿಳಿಗುಡ್ಡೆ). ಮಧ್ಯದ್ದು ಕೊರಾಯ್ಡ್ ಎಂಬ ರಕ್ತನಾಳ ಜಾಲಪಟಲ. ಒಳಗಿನದು ರೆಟಿನ ಎಂಬ ಮಿದುಳಿನ ವಿಸ್ತೃತ ಭಾಗವಾದ ದೃಷ್ಟಿಪಟಲದಲ್ಲಿ ದೃಷ್ಟಿಯ ಅಂತ್ಯಾಂಗಗಳೂ ನರಕಣಗಳೂ ತಂತುಗಳೂ ಇರುವ ನರಜಾಲ.

ಸ್ಕ್ಲೀರ: ಇದು ಸರಾಸರಿ ೧ ಮಿ.ಮೀ. ದಪ್ಪವಿರುವ ನಾರು ಸಿಪ್ಪೆ. ಇದರಲ್ಲಿ ಬಹು ಕಮ್ಮಿ ರಕ್ತನಾಳಗಳಿರುವುದರಿಂದ ಬೆಳ್ಳಗಿದೆ. ಕರಿ ಗುಡ್ಡೆಯಲ್ಲಿ ಪಾರದರ್ಶಕವಾಗಿ ಗುಂಡು ಉಬ್ಬಿ ಮುಂದಿರುವ ಕಾರ್ನಿಯ ಎಂಬ ಸ್ಕ್ಲೀರದ ಮುಂದಿನ ಭಾಗವು ಬಿಳಿ ಬಿತ್ತದ ತಲೆಯಲ್ಲಿ ಬೆಳೆದಿದೆ. ಕಾರ್ನಿಯದ ವ್ಯಾಸ ೮ ಮಿ.ಮೀ. ಅದು ೧ ಮಿ. ಮೀ. ತ್ರಿಜ್ಯ ಗೋಳದ ಭಾಗ. ಕಿರಣಗಳ ಮುಖ್ಯ ವಕ್ರೀಭವನ ಇದರಲ್ಲಿ ಉಂಟಾಗುತ್ತದೆ.

ಕೊರಾಯ್ಡ್: ಇದು ಬಹು ರಕ್ತನಾಳಗಳೂ ದೃಷ್ಟಿಯನಾಳದ ನರಗಳೂ ಇರುವ ತೆಳು ಪಟಲ. ಗುಡ್ಡೆಯ ಒಳಗೆ ಕಿರಣಗಳು ಪ್ರತಿಫಲಿತವಾಗದೆ ಹೀರಲ್ಪಡುತ್ತಿರಲು ಇದು ಕಪ್ಪಗಿದೆ. ಕರಿ ಗುಡ್ಡೆ ಅಂಚಲ್ಲಿರುವ ದಪ್ಪ ಭಾಗದಲ್ಲಿ ವೃತ್ತ ಪೇಶಿಯಿದೆ. ಇದು ಅನೈಚ್ಛಿಕ ವೃತ್ತ. ಪೇಶಿಯಿಂದ ಲೆನ್ಸಿನ ವೃತ್ತ ಸ್ನಾಯು ಸಡಿಲಗೊಂಡು ಲೆನ್ಸ್ ದಪ್ಪ ಹೆಚ್ಚಿ ಹತ್ತಿರ ವಸ್ತುಗಳನ್ನು ನೋಡಲು ಹೊಂದಿಕೆಯಾಗುತ್ತದೆ.

ಪಾಪೆಪೊರೆ (ಐರಿಸ್): ಕೇಂದ್ರ ರಂಧ್ರ (ಪಾಪೆ) ಇರುವ ಕೋರಾಯ್ಡಿನ ಮುಂದಿನ ಭಾಗ.

ಪಾಪೆ ಅಂಚಿನಲ್ಲಿರುವ ವೃತ್ತ ಪೇಶಿ ಸಂಕುಚಿತವಾದರೆ ಪಾಪೆ ಚಿಕ್ಕದಾಗಿ, ಪೊರೆಯಲ್ಲಿರುವ ತ್ರಿಜ್ಯ ಪೇಶಿ ಸಂಕುಚಿಸಿದಾಗ ಪಾಪೆ ಅರಳುತ್ತದೆ. ಜ್ಞಾನ ತಪ್ಪಿದಾಗ ಅರಳಿದ ಪಾಪೆ ಟಾರ್ಚ್ ಬೆಳಕಿಗೆ ಸಂಕುಚಿಸದಿದ್ದರೆ ಅಪಾಯ ಸೂಚಕ. ಮರಣ ಸ್ಥಿತಿಯಲ್ಲಿ ಅರಳಿದ ಪಾಪೆ ಕುಗ್ಗುವುದಿಲ್ಲ. ಪಾಪೆಪೊರೆ ಬಣ್ಣ ಕಪ್ಪು, ಕಂದು, ನೀಲಿ, ಹಸುರು ಇರುವುದು. ಅದರಿಂದ ಅದಕ್ಕೆ ಕಾಮನ ಬಿಲ್ಲಿನ ಗ್ರೀಕ್ ದೇವತೆ ಐರಿಸ್‌ನ ಹೆಸರು. ಕಪ್ಪು ಐರಿಸಿನಲ್ಲಿ ವರ್ಣವಸ್ತು ಹೆಚ್ಚು. ನೀಲಿ ಐರಿಸ್‌ನಲ್ಲಿರುವ ವರ್ಣವಸ್ತು ಕಡಿಮೆ. ಬಹು ಬಿಳಿಯಾದವರ ಚರ್ಮದಲ್ಲಿ ವರ್ಣವಸ್ತುವಿಲ್ಲ; ಅವರ ಐರಿಸ್‌ನಲ್ಲೂ ವರ್ಣವಸ್ತುವಿಲ್ಲದೆ ಅವರು ಪ್ರಕಾಶದಲ್ಲಿ ಕಣ್ಣು ಬಿಡಲಾಗುವುದಿಲ್ಲ.

ರೆಟಿನ: ಮುಂದಿನ ಅರ್ಧಭಾಗ ಕುರುಡು ಭಾಗ. ಹಿಂದಿನ ಅರ್ಧಭಾಗದ ಸರಾಸರಿ ದಪ್ಪ೦.೦೧ ಮಿ. ಮೀ. ಇದರ ಹೊರಕಣಪೊರೆ ಕಿರಣಗಳನ್ನು ಹೀರಿಕೊಂಡು ಒಳಗೆ ಕತ್ತಲಾಗಲು ಕರ್ರಗೆ. ಇದರ ನೆರೆಯ ಒಳಪೊರೆಯೇ ದೃಷ್ಟಿಯ ಅಂತ್ಯಾಂಗಗಳಾದ ಶಲಾಕೆ ಮತ್ತು ಶಂಕುಗಳಂತಿರುವ ದ್ಯುತಿಗ್ರಾಹಕ ಕಣಗಳ ಪೊರೆ, ಶಂಕುಗಳ ಸಂಖ್ಯೆ ಸುಮಾರು ೭,೦೦೦,೦೦೦. ಶಲಾಕೆಗಳ ಸಂಖ್ಯೆ ಹಲವು ಹತ್ತು ಕೋಟಿಗಳು. ಶಲಾಕೆಯದು ೦.೦೭ ಮಿ. ಮೀ. ಶಂಕುವಿನದು ೦.೦೫ ಮಿ. ಮೀ. ಶಲಾಕೆ ಶಂಕುಗಳ ಹೊರ ಭಾಗಗಳಲ್ಲಿ ವಿಟಮಿನ್‌ನಿಂದಾದ ರೊಡಾಪ್ಸಿನ್ ಎಂಬ ದ್ಯುತಿ ಸೂಕ್ಷ್ಮವಸ್ತು ಬೆಳಕಿನಿಂದ ಬಿಳಿಚಿಕೊಳ್ಳುತ್ತದೆ. ಕತ್ತಲಲ್ಲಿ ಅಕ್ಷಿವೀಕ್ಷಕ(ಆಫ್ತಾಲ್ಮೊಸ್ಕೋಪ್)ದ ಮೂಲಕ ಪಾಪೆಯಲ್ಲಿ ಕಾಣುವ ಒಳ ವೃತ್ತ ಕೆಂಪಗಿದ್ದು ಹಿಂದಿನ ಧ್ರುವದಲ್ಲಿ ೨ರಿಂದ ೨.೫ ಮಿ.ಮೀ. ವ್ಯಾಸದ ದೀರ್ಘ ವೃತ್ತದಂತಿರುವ ಹಳದಿ ಬೊಟ್ಟು ಕಾಣುತ್ತದೆ. ಇದರ ಕೇಂದ್ರಗುಳಿಯಲ್ಲಿ ಬರೀ ಶಂಕುಗಳಿವೆ. ಹಳದಿ ಬೊಟ್ಟಿನಿಂದ ೩ ಮಿ.ಮೀ. ಮೂಗು ಕಡೆ ಬೆಳ್ಳಗೆ ೧.೮ ಮಿ.ಮೀ. ಇರುವ ಕಣ್ಣು ನರ ಗುಚ್ಛೆಯನ್ನು ಬಿಡುವ ಸ್ಥಳವಿದೆ. ಇದು ದ್ಯುತಿಗ್ರಾಹಕ ನರಕಣಗಳಿಲ್ಲದ **ಕುರುಡು ಬೊಟ್ಟು.**


ರೆಟಿನದ ಸೂಕ್ಷ್ಮದರ್ಶದ



ಚಿತ್ರ: ೩

೧ ಹೊರಕಣಪೊರೆ
೨ ಶಲಾಕೆ ಕಣ
೩ ಶಂಕು ಕಣ
೪ ಕಣ ಬೀಜ
೫ ಮೊದಲ ತಂಡದ ನರ ಕಣಗಳು
೬ ಎರಡನೇ ತಂಡದ ನರ ಕಣಗಳು
೭ ಅಕ್ಷಕ ತಂತುಗಳು.


ಇದರ ಮಧ್ಯೆ ರೆಟಿನ ಧಮನಿ ಪ್ರವೇಶಿಸಿ ಮೇಲು ಕೆಳಕ್ಕೆ ಕವಲೊಡೆಯುತ್ತದೆ. ಉಳಿದ ರೆಟಿನದಲ್ಲಿ ಶಲಾಕೆ ಕಣಗಳಿವೆ. ಇವು ಮಸಕು ಬೆಳಕಿಗೆ ಮಾತ್ರ ಚುರುಕು. ಕೋಳಿ ಮುಂತಾದ ಹಗಲು ಪ್ರಾಣಿಗಳಲ್ಲಿ ಬರೀ ಶಂಕುಗಳಿವೆ. ಗೂಬೆ, ಬಾವಲಿ ಇರುಳು ಪ್ರಾಣಿಗಳಲ್ಲಿ ಶಲಾಕೆಗಳು ಮಾತ್ರ ಇವೆ. ಶಂಕು ಶಲಾಕೆಗಳ ಪದರದ ಒಳಗೆ ನರಕಣಗಳ ೨ ಪದರುಗಳಿವೆ. ಒಳ ಸ್ತರದ ೧೦ ಲಕ್ಷ ಕಣಗಳ ಅಕ್ಷಕ ತಂತುಗಳು ಕೂಡಿ ದೃಷ್ಟಿ ನರಗಳಾಗುತ್ತದೆ.



ಗುಡ್ಡೆಮುಂಡ ದೃಶ್ಯ
ಚಿತ್ರ: ೪

ಕಣ್ಣಿನ ವಕ್ರೀಭವನ ಮಾಧ್ಯಮಗಳು:
ಇವು ನೀರಂತೆ ಬಣ್ಣವಿಲ್ಲದ ಪಾರದರ್ಶಕ ವಸ್ತುಗಳು. ಇವುಗಳ ಒಟ್ಟು ಶಕ್ತಿ ೬೦ ಡಯಾಪ್ಟರ್‌ಗಳು. ಇವು ಮುಂದಿನಿಂದ ಹಿಂದಕ್ಕೆ ಕಾರ್ನಿಯ, ಕರಿಗುಡ್ಡೆ ದ್ರವ, ಮತ್ತು ಕಾಚೀದ್ರವ, ಕಳೀ ದ್ರಾಕ್ಷಿ ಹಿಚುಕಿದರೆ ಹೊರಬರುವ ಮಧ್ಯ ಭಾಗದಂತೆ ಸತ್ತ ಪ್ರಾಣಿಯ ಕಣ್ಣನ್ನು ಹಿಚುಕಿದಾಗಲೂ ಹೊರ ಬರುವ ಗಟ್ಟಿ ಅಂಟು ಕಾಚೀದ್ರವ (ಗಾಜಂಟು). ಇದು ಗುಡ್ಡೆಯೊಳಗೆ ಗಾಜು ಕೋಳಿದಂತಿದೆ. ರೆಟಿನ ಕೋರಾಯಿಡ್‌ಗಳು ದ್ರಾಕ್ಷಿಸಿಪ್ಪೆಯಂತೆ ಕಣ್ಣಿಗೆ ಕಾಣುತ್ತವೆ. ವಾಯುವಿಗಿಂತ ಕಾರ್ನಿಯ ಸಾಂದ್ರತೆ ಹೆಚ್ಚಿರುವುದರಿಂದ ಮತ್ತು ಅದು ಮುಂದಕ್ಕುಬ್ಬಿರುವುದರಿಂದ ಕಿರಣಗಳು ಹೆಚ್ಚು ಬಾಗಿ ಪರಿಚ್ಛಿನ್ನವಾಗುತ್ತವೆ. ಇದರ ವಕ್ರೀಭವನ ಸೂಚಕ ೧.೩೭ (ನೀರಿಗಿಂತ ೦.೩೭ ಹೆಚ್ಚು) ಮಸೂರದ ವಕ್ರೀಭವನ ಸೂಚಕ ೧.೪೨ ಇರುವುದರಿಂದ ಇದರಲ್ಲಿ ಕಿರಣಗಳು ಇನ್ನೂ ಪರಿಚ್ಛಿನ್ನವಾಗುತ್ತವೆ. ಕಾರ್ನಿಯ ಶಕ್ತಿ ೪೮ ಡಯಪ್ಟರ್‌ಗಳು. ಮಸೂರದ ಶಕ್ತಿ ೧೫ ಡಯಪ್ಟರ್ಸ್‌ಗಳು; ವಾಯುವಿನಲ್ಲಿ ೧೫೦ ಡಯಪ್ಟರ್‌ಗಳು. ಗುಡ್ಡೆಯೊಳಗೆ ಹತ್ತಿದ ದೃಷ್ಟಿಗೆ ದಪ್ಪವಾದಾಗ ಮಸೂರ ಶಕ್ತಿ ೧೫+೯ ಡಯಪ್ಟರಗಳು.

ದೃಷ್ಟಿದೋಷಗಳು:
ಒಳ್ಳೆ ದೃಷ್ಟಿಯುಳ್ಳವರಲ್ಲಿ ಆಚೆ ದೃಶ್ಯದ ಚಿತ್ರ ರೆಟಿನದ ಮೇಲೆ ಮೂಡುತ್ತದೆ. ದೂರದೃಷ್ಟಿ ಚೆನ್ನಾಗಿರುವವರಲ್ಲಿ ಚಿತ್ರ ರೆಟಿನದ ಹಿಂದೆ ಮೂಡುವಂತಿರುತ್ತದೆ. ಹತ್ತಿರ ದೃಷ್ಟಿಯುವರಲ್ಲಿ ಚಿತ್ರ ರೆಟಿನದ ಮುಂದೆ ಮೂಡುತ್ತದೆ; ಇವರ ಹಿಂದು ಮುಂದಿನ ಗುಡ್ಡೆ ವ್ಯಾಸ ಹೆಚ್ಚು. ದೂರ ದೃಷ್ಟಿಯುವರು ಮೋಟು ಗುಡ್ಡೆಯುವರು; ಇವರಿಗೆ ತಕ್ಕ ಪೀನ ಮಸೂರ ಕನ್ನಡಕದಿಂದ ದೋಷ ಪರಿಹಾರವಾಗುತ್ತದೆ. ಹತ್ತಿರ ದೃಷ್ಟಿಯುವರಿಗೆ ತಕ್ಕ ನಿಮ್ನ ಮಸೂರಗಳಿಂದ ದೂರದೃಷ್ಟಿ ಸುಮಾರಾಗುತ್ತದೆ; ಇವರ ದೂರದೃಷ್ಟಿಯನ್ನು ಪೂರ್ತಿ ಸರಿ ಮಾಡಿದರೆ ವೃತ್ತಪೇಶಿ ನಶಿಸುತ್ತ ದೋಷ ಹೆಚ್ಚುತ್ತಿರುತ್ತದೆ. ಮೋಟು ಗುಡ್ಡೆಯುಯುವರಲ್ಲಿ ಒಳ ಒತ್ತಡ ಹೆಚ್ಚಿ ಗ್ಲಾಕೋಮ ಎಂಬ ರೋಗಗಳು ಬರುವ ಸಾಭವವಿದೆ. ಹೊಂದಿಕೆ (ಅಕಮೊಡೇಷನ್) ಹತ್ತಿರ ದೃಷ್ಟಿ ಹೊಂದಿಕೆಯಲ್ಲಿ ಪಾಪೆ ಚಿಕ್ಕದಾಗಿ ಮಸೂರ ದಪ್ಪ ಹೆಚ್ಚಿ ಎರಡು ಗುಡ್ಡೆಗಳೂ ಮೂಗಿನ ಕಡೆ ತುಸು ತಿರುಗುತ್ತವೆ. ಮೂಗಿನ ತುದಿ ನೋಡಿಕೊಂಡಾಗ ಒಳಮೆಳ್ಳಿಗಣ್ಣಾಗುತ್ತದೆ. ಕತ್ತಲಲ್ಲಿ ವ್ಯಕ್ತಿಯ ಕಣ್ಣಿನ ಪಕ್ಕದಲ್ಲಿ ಉರಿಯುವ ಮೋಂಬತ್ತಿಯಿಟ್ಟು ನೋಡಿದರೆ ಕರಿ ಗುಡ್ಡೆಯಲ್ಲಿ ೩ ಬಿಂಬಗಳು ಕಾಣುತ್ತವೆ. (೧) ಪ್ರಕಾಶ



ಚಿತ್ರ: ೫

ವಯಸ್ಸು (ವರ್ಷ)	ಹೊಂದಿಕೆ (ಡಯಾಪ್ಟರ್ಸ್)	ವಯಸ್ಸು (ವರ್ಷ)	ಹೊಂದಿಕೆ (ಡಯಾಪ್ಟರ್ಸ್)	ವಯಸ್ಸು (ವರ್ಷ)	ಹೊಂದಿಕೆ (ಡಯಾಪ್ಟರ್ಸ್)
೧೦	೧೪	೪೦	೪.೫	೭೦	೦.೨೫
೧೫	೧೫	೫೦	೨.೫	೭೫	೦.೦
೨೦	೧೦	೫೫	೧.೭೫		
೩೦	೭	೬೦	೧		
೩೫	೫.೫	೬೫	೦.೭೫		


ವಾದ ನೆಟ್ಟಗಿರುವ ಬಿಂಬ ಕಾರ್ನಿಯಾದಿಂದ ಪ್ರತಿಬಿಂಬಿತ (೨) ಪೀನವಾದ ದೊಡ್ಡ ನೆಟ್ಟ ಬಿಂಬ ಮಸೂರದ ಮುಂದಿನ ತಲದಿಂದ ಪ್ರತಿಬಿಂಬಿತ, (೩) ಚಿಕ್ಕ ತಲೆಕೆಳಗು ಚಿತ್ರ ಮಸೂರದ ಹಿಂದಿನ ತಲದಿಂದ ಪ್ರತಿಬಿಂಬಿತ. ಹತ್ತಿರ ದೃಷ್ಟಿ ಹೊಂದಿಕೆಯಾದಾಗ ಮಸೂರ ದಪ್ಪಗಾಗುವುದರಿಂದ (೨) ಮತ್ತು (೩) ಬಿಂಬಗಳು ಚಿಕ್ಕವಾಗುತ್ತವೆ. ಜರಡಿ ಮೂಲಕ ಅಕ್ಷರಗಳನ್ನು ನೋಡುವಾಗ ಜರಡಿ ತಂತಿಗಳು ಸ್ಪಷ್ಟವಾಗುವುದಿಲ್ಲ; ಜರಡಿ ತಂತಿಗಳನ್ನು ನೋಡುವಾಗ ಅಕ್ಷರಗಳು ಅಸ್ಪಷ್ಟವಾಗುತ್ತವೆ. ಹೀಗಾಗುವುದು ನೋಡು ವಸ್ತುವಿಗೆ ಕಣ್ಣಲ್ಲಾಗುವ ಹೊಂದಿಕೆಯಿಂದ.

ಪಾಪೆ:

ಮನುಷ್ಯನಲ್ಲಿ ಗುಂಡಗಿದೆ. ಅಂಚುಗಳು, ವ್ಯಾಸ. ಹಗಲು ಬೆಳಕಲ್ಲಿ ೧.೫ರಿಂದ ೨ ಮಿ.ಮೀ. ಕತ್ತಲಲ್ಲಿ ೭ ಮಿ.ಮೀ. ಇರುವುದರಿಂದ ಕಾರ್ನಿಯದಲ್ಲಿ ತೂರುವ ಎಲ್ಲ ಕಿರಣಗಳೂ ಮಸೂರವನ್ನು ತೂರದೆ ವರ್ಣ ಮತ್ತು ಕಲೀ ವೃತ್ತಗಳಿಲ್ಲದೆ ಸ್ಪಷ್ಟ ಚಿತ್ರ ರೆಟಿನದ ಮೇಲೆ ಬೀಳುತ್ತದೆ. ಬಲ ಗಣ್ಣಿಗೆ ಬೆಳಕು ಬಿದ್ದರೆ ಎಡ ಪಾಪೆ ಕುಗ್ಗುತ್ತದೆ. ಇದರ ತಿರುಗು ಮುರುಗೂ ನಿಜ. ಪ್ರಕಾಶದಿಂದ ಪಾಪೆ ಕುಗ್ಗಿದಷ್ಟೂ ಸ್ಪಷ್ಟ ಚಿತ್ರ ಹಳದಿ ಚುಕ್ಕೆಯ ಮೇಲೆ ಬೀಳುತ್ತದೆ. ಕೆಲವು ಮದ್ದುಗಳು ಪಾಪೆಯನ್ನು ಕಿರಿದು ಮಾಡುತ್ತವೆ, ಮತ್ತೆ ಕೆಲವು ಅರಳಿಸುತ್ತವೆ.

ರೆಟಿನದ ಮೇಲೆ ಬೆಳಕಿನ ಪರಿಣಾಮ:

ಶಲಾಕೆಕಣಗಳ ಹೊರ ಭಾಗಗಳಲ್ಲಿ ನೇರಳೆ ಬಣ್ಣದ ರೋಡಾಪ್ಸಿನ್ ಎಂಬ ವಿಟಮಿನ್ 'ಎ'ಯಿಂದಾದ ರಾಸಾಯನಿಕ ಬೆಳಚಿಕೊಂಡು ಬೆಳಕಿನಿಂದ ಹಳದಿಯಾದ ರೆಟಿನಿನ್ ಮತ್ತು ಬಣ್ಣವಿಲ್ಲದ ಪ್ರೋಟೀನಾಗಿ ಒಡೆಯುತ್ತದೆ. ಕತ್ತಲಲ್ಲಿ ಪುನರ್ಯೋಗದಿಂದ ರೋಡಾಪ್ಸಿನ್ ಆಗುತ್ತದೆ. ಕತ್ತಲ ರೆಟಿನದಲ್ಲಿರುವ ವಿಟಮಿನ್ ಬೆಳಕು, ಬಿದ್ದ ರೆಟಿನದಲ್ಲಿರುವುದಿಲ್ಲ. ಹೆಚ್ಚು ಕಾಲ ಆಹಾರದಲ್ಲಿ ವಿಟಮಿನ್ ಎ ಕೊರತೆಯಿದ್ದರೆ ಇರುಳ್ಗುರುಡಾಗುತ್ತದೆ; ರೋಡಾಪ್ಸಿನ್ನಿನ ಪುನರ್ಯೋಜನೆ ಸರಿಯಾಗಿ ಆಗುವುದಿಲ್ಲ. ಮೀನಿನಲ್ಲಿ ಶಂಕುಕಣಗಳು ಬೆಳಕಿನಿಂದ ಸಂಕುಚಿಸಿ ದಪ್ಪವಾಗಿ ಶಲಾಕೆಕಣಗಳು ಉದ್ದಿಸಿ ಆಚೆ ಕರಿ ಪೊರೆಯನ್ನು ಮುಟ್ಟಿ ಶಲಾಕೆಗಳ ರಂಗು ಹಿಂದೆ ಸರಿಯುತ್ತದೆ. ಕತ್ತಲಲ್ಲಿ ವಿರುದ್ಧ ಘಟನೆಗಳಾಗುವಾಗ ರಂಗಿನ ಲೇಪಗಳು ನಿಧಾನವಾಗಿ ಹೊರ



ಚಿತ್ರ: ೭

ಗಡೆಗೆ ಸರಿಯುತ್ತವೆ. ಪಕ್ಷಿಸ್ತನಿಗಳಲ್ಲೂ ಈ ತೆರನ ಚಲನೆಗಳನ್ನು ನೋಡಲಾಗಿದೆ. ಆದರೆ ಇವುಗಳ ಉದ್ದೇಶ್ಯ ಸ್ಪಷ್ಟವಾಗಿಲ್ಲ.

ರೆಟಿನ ಸೂಕ್ಷ್ಮತೆ:

ಓದುವಾಗ ಎಲ್ಲ ಅಕ್ಷರಗಳೂ ಒಂದೇ ಸಲ ಸ್ಪಷ್ಟ ಕಾಣಿಸದೆ ಒಂದಕ್ಷರ ಅಥವಾ (ಗಾತ್ರದ ಪ್ರಕಾರ) ಅಕ್ಷರದ ಭಾಗ ಕಾಣಿಸುತ್ತದೆ. ನಮಗೆ ಗೋಚರವಿಲ್ಲದೆ ಕಣ್ಣನ್ನು ತುಸು ಬೇಗ ಬೇಗ ಹೊರಳಿಸುವುದರಿಂದ ಎಲ್ಲ ಅಕ್ಷರಗಳನ್ನೂ ಒಂದಾದ ಮೇಲೊಂದು ನೋಡಿ ಓದುವುದಾಗುತ್ತದೆ. ಹೀಗಾಗುವ ರೆಟಿನದ ಅತಿ ಸೂಕ್ಷ್ಮ ಭಾಗ ಅತಿ ಕಿರಿದಾಗುವುದು. ಆ ಭಾಗ ಶಂಕುಗಳೇ ಇರುವ ಕೇಂದ್ರಗುಳಿ. ಬೆಳಕು ಹೆಚ್ಚಿದಷ್ಟೂ ಹಾಡ ಚೊಕ್ಕದಾಗಿ ಸ್ಪಷ್ಟತೆ ಹೆಚ್ಚುತ್ತದೆ. ರೆಟಿನದ ಸೂಕ್ಷ್ಮತೆ ಯಾವ ಮಾನವಕೃತ ಯಂತ್ರದ ಸೂಕ್ಷ್ಮತೆಯನ್ನೂ ಮೀರಿಸುತ್ತದೆ. ೨೦೦ ಕಿ. ಮೀ. ದೂರದಲ್ಲಿರುವ ಉರಿಯುವ ಮೋಂಬತ್ತಿ ಬೆಳಕು ಶುದ್ಧವಾದುದು ಏನ ೪೪೧. ಚ. ಸೆ.ಮೀ. ಸಲಿಯ ಮೇಲೆ ಬಿದ್ದರೆ ಅಷ್ಟರಲ್ಲಿ ಎಷ್ಟು ಶಕ್ತಿಯಿರುತ್ತದೋ ಅಷ್ಟು ದೃಷ್ಟಿಯು ಕೆಳದುಟ್ಟು ಕೇಂದ್ರ ಗುಳಿಯಿಂದ ದೂರ ಹೆಚ್ಚಿದಷ್ಟೂ ರೆಟಿನದ ಸೂಕ್ಷ್ಮತೆ ಕಮ್ಮಿ; ಎರಡು ಕಣ್ಣಿಗೆ ಪ್ರಕಾಶವಾದುದು ಒಂದು ಕಣ್ಣಿಂದ ನೋಡಿದರೆ ಅಷ್ಟು ಪ್ರಕಾಶ ಕಾಣುವುದಿಲ್ಲ. ಕತ್ತಲಿಂದ ಬೆಳಕಿಗೆ ಹೋದಾಗ ಕಣ್ಣು ಕೋರೈಸುವಂತಾಗಿ ಕ್ರಮೇಣ ಒಗ್ಗುವಿಕೆಯಾಗುತ್ತದೆ. ಬೆಳಕಿಂದ ಕತ್ತಲೆಗೆ ಹೋದಾಗ ಮೊದಲು ಏನೂ ಕಾಣದೆ ಕತ್ತಲ ದೃಷ್ಟಿ ಕ್ರಮೇಣ ಹೆಚ್ಚುತ್ತದೆ. ಕಣ್ಣು ಮುಚ್ಚಿ ಮೂಗು ಕಡೆ ಗುಡ್ಡೆ ತಿರುಗಿಸಿ ತುಸು ಒತ್ತಡದಿಂದ ಬೆರಳು ತುದಿಯನ್ನು ಗುಡ್ಡೆ ಮೇಲಾಡಿಸಿದರೆ ಮೂಗಿನ ಕಡೆ ಬೆಳಕಿನ ಉಂಗುರ ಎದುರು ಬದುರು ಸರಿದಾಡುತ್ತದೆ. ಒತ್ತಡದಿಂದಾಗುವ ರೆಟಿನ ಸ್ಫುರಿತದಿಂದ ಹೀಗಾಗುತ್ತದೆ.



"ಭೊಲೊ ಅಕು...."

ಆ ಇಬ್ಬರೂ ಸೋದರಿಯರು ಬಹಳ ವರ್ಷಗಳವರೆಗೆ ಒಂದೇ ಮನೆಯಲ್ಲಿ ಕೂಡಿ ಇದ್ದವರು. ಅಕ್ಕನಿಗೆ ೯೪, ತಂಗಿಗೆ ೯೬ ವರ್ಷ ವಯಸ್ಸು. ಅಕ್ಕ ಒಮ್ಮಿಂದೊಮ್ಮೆಲೇ ಅಸು ನೀಗಿದಳು. ಅವಳನ್ನು ಕೊನೆ ಬಾರಿ ಪರೀಕ್ಷಿಸಲು ಬಂದಿದ್ದ ಡಾಕ್ಟರನಿಗೆ ಈ ವಿಷಯವನ್ನು ಮೃತಳ ಸೋದರಿಗೆ ಹೇಳುವುದು ಹೇಗೆಂಬ ಸಮಸ್ಯೆ. ಒಂದು ವೇಳೆ ಈ ವಿಷಯ ಕೇಳಿದಾಕ್ಷಣ ಆಕೆಯೂ ಹೃದಯಾಘಾತವಾಗಿ ಸತ್ತುಬಿಟ್ಟರೆ? ಆದರೂ ಸುಧಾರಿಸಿಕೊಂಡು ವಿಷಯ ಹೇಳಿದ. ತಂಗಿಯ ಮುಖದಲ್ಲಿ ಒಮ್ಮಿಂದೊಮ್ಮೆಲೇ ಆನಂದದ ಛಾಯೆ. ಕಣ್ಣಲ್ಲಿ ಆನಂದಬಾಷ್ಪ.

"ಭೊಲೋ ಅಕು," ಅಂದಳು, ಆಕೆ.

"ಯಾಕೆ?" ಡಾಕ್ಟರನಿಗೆ ಅಚ್ಚರಿ.

"ಇನ್ನಾದ್ರೂ ನನಗ ಬೇಕಾದ್ದು ನಾನು ಮಾಡಿಕೊಂಡ ತಿನಲಿಕ್ಕೆ ಅವಕಾಶ ಸಿಕ್ತು."

ಶಾಪಗ್ರಸ್ತ ವಜ್ರ

ಅಮೇರಿಕದ ರಾಜಧಾನಿ ವಾಷಿಂಗ್ಟನ್ನಿನಲ್ಲಿ ಜರುಗಿದ ಘಟನೆ- ಯುವತಿಯೊಬ್ಬಳು ಮಿತಿಮೀರಿ, ನಿದ್ದೆ ಗುಳಿಗೆಯನ್ನು ಸೇವಿಸಿ ಅಸು ನೀಗಿದಳು. ಮರುದಿನ ಅಮೇರಿಕದ ಎಲ್ಲ ಪತ್ರಿಕೆಗಳಲ್ಲೂ ಆಕೆಯ ಸಾವಿನ ಸಮಾಚಾರ ದೊಡ್ಡ ಅಕ್ಷರಗಳಲ್ಲಿ ಅಚ್ಚಾಯಿತು. ಇದಕ್ಕೊಂದು ವಿಶೇಷ ಕಾರಣವಿತ್ತು.

ಇಪ್ಪತ್ತೆರಡರ ಆ ಯುವತಿಯ ಹೆಸರು ಈವ್‌ಲಿನ್ ಮೆಕ್ಲೀನ್ ರೆನಾಲ್ಡ್ಸ್. ಆಕೆ ಅಮಂಗಳ ಪ್ರಭಾವಕ್ಕೆ ಹೆಸರಾದ 'ಹೋಪ್, ಎಂಬ ವಜ್ರದ ಉತ್ತರಾಧಿಕಾರಿಣಿಯಾಗಿದ್ದಳು.

ಸುಮಾರು ಇನ್ನೂರು ವರ್ಷಗಳ ಹಿಂದೆ ಇಂಗ್ಲೆಂಡಿನ ಬ್ಯಾಟಿಸ್ಟ್ ಟವರ್ನಿಯರ್ ಎಂಬೊಬ್ಬ ವ್ಯಾಪಾರಿ ಈ ವಜ್ರವನ್ನು ಬ್ರಹ್ಮದೇಶದ ದೇವಾಲಯದ ಬುದ್ಧಮೂರ್ತಿಯ ಕಣ್ಣಿನಿಂದ ಕದ್ದು ತಂದಿದ್ದ. ಮುಂದೆ ಒಂದೇ ವರ್ಷದಲ್ಲಿ ಕ್ಯಾನ್ಸರಿನಿಂದ ಆ ವ್ಯಾಪಾರಿ ಸತ್ತುಹೋದ. ಅಂದಿನಿಂದ ಈ ವಜ್ರ ಯಾರ ಕೈ ಸೇರುತ್ತಿತ್ತೊ ಅವರಿಗೆ ವಿಪತ್ತು ಒದಗಲಾರಂಭಿಸಿತು.

ಫ್ರಾನ್ಸಿನ ಮೇರಿ ಅಂಟಾಯನೆಟ್ ಹಾಗೂ ಪ್ರಿನ್ಸೆಸ್ ಡಿ. ಎಮ್. ಲಂಬಲ್ ಈ ವಜ್ರವನ್ನು ತಮ್ಮ ಕಿರೀಟದಲ್ಲಿಸಿದರು. ಮುಂದೆ ಇಬ್ಬರ ತಲೆಗಳನ್ನೂ ಕತ್ತರಿಸಲಾಯಿತು.

ವಿಲಿಯಂ ಫರ್ಸೆಲ್ ಎಂಬ ರತ್ನ ವ್ಯಾಪಾರಿ ಅದನ್ನು ಕೊಂಡುಕೊಂಡ ಮೂರೇ ತಿಂಗಳಲ್ಲಿ ಆತ ಆತ್ಮಹತ್ಯೆ ಮಾಡಿಕೊಂಡ.

ಪ್ಯಾರಿಸ್ಸಿನ ನರ್ತಕಿಯೊಬ್ಬಳು ರಂಗಭೂಮಿಯಲ್ಲಿ ಇದನ್ನು ಧರಿಸಿದಳು. ಆಕೆಯನ್ನು ಗುಂಡಿಕ್ಕಿ ಕೊಲ್ಲಲಾಯಿತು.

ಆ ಬಳಿಕ ಈ ವಜ್ರ ಲಾರ್ಡ್ ಫ್ರಾನ್ಸಿನ ಬಳಿಗೆ ಬಂತು. ಅವನು ಶೇರು ಪೇಟೆಯಲ್ಲಿ ನಷ್ಟಹೊಂದುತ್ತ ಕೊನೆಗೆ ದಿವಾಳಿಯಾದ.

ಇದರ ಕೊನೆಯ ಯಜಮಾನಿ ಶ್ರೀಮತಿ ವಾಲ್ಕ್ ಬ್ರಿಸ್ಟರ್ಡ್ ಮಗನನ್ನು ಕಳೆದುಕೊಂಡಳು. ಆತ ಸತ್ತ ರಾತ್ರಿ ದಿವ್ಯ ಮೂರ್ತಿಯೊಂದು ಆಕೆಯ ಕನಸಿನಲ್ಲಿ ಕಾಣಿಸಿಕೊಂಡು, "ನೀನು ಈ ವಜ್ರವನ್ನು ಬ್ರಹ್ಮದೇಶದ ಬುದ್ಧಮಂದಿರಕ್ಕೆ ಒಪ್ಪಿಸಿಬಿಡು. ಇಲ್ಲದಿದ್ದರೆ ಬಹಳಷ್ಟು ವಿಪತ್ತುಗಳು ಬಂದೊದಗುವವು" ಎಂದಂತಾಯಿತು.

ಶ್ರೀಮತಿ ವಾಲ್ಕ್ ವಜ್ರವನ್ನು ಬ್ರಹ್ಮದೇಶದ ಬೌದ್ಧ ಮೂರ್ತಿಯ ಬಳಿಗೆ ಕಳುಹಿಸಿದಳು. ಈಗ ಅವಳು ಸುಖವಾಗಿದ್ದಾಳೆ.

— ಸಿ. ಎಸ್. ಎ.

ಹಿತ್ತಲ ಗಿಡ ಮದ್ದಲ್ಲ

ಬಡವನೊಬ್ಬನ ಹೆಂಡತಿಗೆ ಕಠಿಣ ಕಾಯಿಲೆ. ಆತ ಔಷಧಿಗಾಗಿ ಡಾಕ್ಟರರ ಬಳಿಗೆ ಬಂದ. ಅವರು, "ನಿನ್ನ ಹೆಂಡತಿಯ ರೋಗಕ್ಕೆ 'ಪೆಲ್ಯಾಸ್ ಪೆಂಗೋಮ ಲ್ಯಾಬ್ರ' ಎಂಬ ಮದ್ದು ಬೇಕು. ಒಂದು ಬಾಟಲಿಗೆ ಹನ್ನೊಂದು ರೂಪಾಯಿಗಳಾಗಬಹುದು. ಅದು ಸಿಕ್ಕುವುದು ಕಷ್ಟ. ಸಿಕ್ಕಿದರೆ ತಾ" ಎಂದರು. ಬಡವ ತಲೆ ತುರಿಸುತ್ತ ಅಂಗಡಿಗಳನ್ನೆಲ್ಲ ಎಡತಾಕಿದ. ಔಷಧಿ ಸಿಗಲಿಲ್ಲ.

ಕೊನೆಗೆ ಅವನು ವೈದ್ಯಭಾನು ದ. ಕೃ. ಭಾರದ್ವಾಜರಲ್ಲಿಗೆ ಬಂದು, ನಡೆದುದನ್ನು ಹೇಳಿ, "ನಿಮ್ಮಲ್ಲಿ ಆ ಮದ್ದು ಇದೆಯೇ?" ಎಂದು ಕೇಳಿದ. ಅವರು ನಸುನಕ್ಕು, "ನೀನು ಒಂದಾಣೆಯ ಹೊಂಗೇಬೀಜ ತಾ. ನಾನೆಲ್ಲ ಮತ್ತೆ ಹೇಳುತ್ತೇನೆ" ಎಂದರು. ಬಡವ ಧಾರಾಳವಾಗಿ ಸಿಗುತ್ತಿದ್ದ ಹೊಂಗೆ ಬೀಜ ತಂದುಕೊಟ್ಟ.

ಹೊಂಗೇಬೀಜದೊಂದಿಗೆ ಒಳಗೆ ಹೋದ ಭಾರದ್ವಾಜರು ಒಂದು ಗಂಟೆಯ ತರುವಾಯ ಹೊರಬಂದು ಬಾಟಲಿ ತುಂಬಾ ಮದ್ದು ತಂದುಕೊಟ್ಟರು. ಅವನು, "ಹಣ..." ಎಂದಾಗ, "ಇರಲಿ ಹೋಗಯ್ಯ. ಮೊದಲು ಹೆಂಡತಿಗೆ ಔಷಧಿ ಮಾಡಿಸು" ಎಂದರು.

ಬಡವ ಔಷಧಿಯನ್ನು ಡಾಕ್ಟರಿಗೆ ತಂದು ಕೊಟ್ಟಾಗ ಅವರದನ್ನು ಪರೀಕ್ಷಿಸಿ ಗುಣವನ್ನು ಖಚಿತ ಪಡಿಸಿಕೊಂಡು, "ನನಗೂ ಒಂದು ಬಾಟಲಿ ತಂದುಕೊಡು" ಎಂದು ಹಣ ತೆಗೆದುಕೊಟ್ಟರು. ಬಡವ ಮತ್ತೆ ಹೊಂಗೇಬೀಜದೊಂದಿಗೆ ಭಾರದ್ವಾಜರ ಬಳಿಗೆ ಬಂದು, ಡಾಕ್ಟರರ ಬೇಡಿಕೆಯನ್ನು ತಿಳಿಸಿ ಹಣವನ್ನೂ ಕೊಟ್ಟ.

ವೈದ್ಯಭಾನು ಭಾರದ್ವಾಜರಿಗೆ ನಗು ಬಂತು. ಅವರು, "ಮಹಾರಾಯಾ, ಆ ಔಷಧಿ ಅಂದರೇನು ಗೊತ್ತೆ? ಕೇವಲ ಹೊಂಗೇಬೀಜ. ಅದನ್ನು ಪುಡಿ ಮಾಡಿ, ಜರಡಿ ಹಿಡಿದು ಬಾಟ್ಲಿಯಲ್ಲಿ ತುಂಬಿ ಕೊಟ್ಟೆ. ಅದಕ್ಕೆ ಹನ್ನೊಂದು ರೂಪಾಯಿ ಬಂತು. ನಮ್ಮ ಅಮೂಲ್ಯವಾದ ಆಯುರ್ವೇದವನ್ನೂ ಗಿಡಮೂಲಿಕೆಗಳನ್ನೂ ನಾವು ಮರೆತು, ನಮ್ಮಲ್ಲಿ ಕಾಸು ಬೆಲೆ ಬಾಳುವ ವಸ್ತುವಿಗೆ ನೂರಾರು ರೂಪಾಯಿ ಕೊಟ್ಟು ವಿದೇಶೀಯರಿಂದ ಪಡೆಯುತ್ತಿದ್ದೇವಲ್ಲ! ಪೆಲ್ಯಾಸ್ ಪೆಂಗೋಮ ಲ್ಯಾಬ್ರ ಎಂದರೆ ಹೊಂಗೇಬೀಜ" ಎಂದರು.

–ಪ. ರಾಮಕೃಷ್ಣ ಶಾಸ್ತ್ರಿ

ಲಾಹೋರದ ಸಿಖ್ ಮ್ಯೂಸಿಯಂ

*ಮಸೂದ್ ಉಲ್ ಹಲನ್ ಕೋಖರ್



ವಿಂಟರ್ ಹಾಲ್ಟರ್ ಬರೆದ ರಾಜಕುಮಾರ ದಲಿಪಸಿಂಗನ ವರ್ಣಚಿತ್ರ.

ಲಾಹೋರದ ಹಳೆಯ ಕೋಟೆಯಲ್ಲಿ ಇತ್ತೀಚೆಗೆ ಸ್ಥಾಪಿಸಲ್ಪಟ್ಟಿರುವ ಸಿಖ್ ವಸ್ತುಸಂಗ್ರಾಲಯ (Sikh Museum) ಐತಿಹಾಸಿಕ ಮಹತ್ವದ್ದು. ಕ್ರಿ. ಶ. ೧೭೯೯–೧೮೪೯ರ ಅವಧಿಯಲ್ಲಿ ಸಿಖ್ ಸೈನ್ಯ ಬಳಸುತ್ತಿದ್ದ ಆಯುಧಗಳನ್ನು ಅಂದವಾಗಿ ಸಂಗ್ರಹಿಸಿಡಲಾಗಿದೆ. ಮಹಾರಾಜಾ ರಣಜಿತ್‌ಸಿಂಗನ ಮೊಮ್ಮಗಳಾದ ಸದರ್‌ಲ್ಯಾಂಡಿನ ರಾಜಕುಮಾರಿ ಬಂಬಾಳ ಸಂಗ್ರಹ ಕೂಡ ಈ ಮ್ಯೂಸಿಯಮ್ಮಿನಲ್ಲಿದೆ.

ಮಹಾರಾಜಾ ರಾಣಿ ಜಿಂದಾನರ ಒಡೆತನದಲ್ಲಿದ್ದ ದುಮ್ಮಜಲಿನ ಕಟ್ಟಡದಲ್ಲಿ ಈ ವಸ್ತುಸಂಗ್ರಹಾಲಯವಿದ್ದು ಇದರ ಮೊದಲಂತಸ್ತು ಸಮ್ರಾಟ ಜಹಾಂಗೀರ (೧೬೧೭–೧೮) ಕಟ್ಟಿಸಿದ್ದು. ಎರಡನೆಯ ಅಂತಸ್ತು ರಾಣಿ ಜಿಂದಾನರ ವಾಸಸ್ಥಳವೆಂದು ಸಿಖ್ಖರು ಕಟ್ಟಿಸಿದ್ದಾಗಿದೆ.

ಮೊದಲಂತಸ್ತಿನಲ್ಲಿಡಲಾದ ವಸ್ತುಗಳಲ್ಲಿ ಸಿಖ್ ರಾಜಕುವರರು, ಗಣ್ಯರುಗಳ ಫೋಟೋಗಳಲ್ಲದೇ ಕಾದುವ ಕೊಡಲಿ, ಮುಖವಾಡ, ಬಂದೂಕು, ಪಿಸ್ತೂಲುಗಳು, ಶಿರಸ್ತ್ರಾಣಗಳು, ರಕ್ಷಾಕವಚಗಳಂಥ ಆಯುಧಗಳೂ ಇವೆ. ಸಿಖ್ ಮತ್ತು ಬ್ರಿಟಿಶ್ ಸೈನ್ಯಗಳಲ್ಲಿ ಆದ ಕಾದಾಟದ ದೃಶ್ಯಾವಳಿಗಳನ್ನೂ ನಾವು ನೋಡಬಹುದು. ಇಲ್ಲಿ ಎಲ್ಲಕ್ಕಿಂತ ಆಕರ್ಷಕವಾದುದೆಂದರೆ ಮಹಾರಾಜಾ ರಣಜಿತಸಿಂಗರ ಅಶ್ವಕ್ಕೆ ಹೊದಿಸಲಾಗುತ್ತಿದ್ದ ಬಂಗಾರದ ವಸ್ತ್ರಾಭರಣಗಳನ್ನು ಒಂದು ಕುದುರೆಯೆತ್ತರದ ಕಟ್ಟಿಗೆಯ ಮಾಡೆಲ್ ಮೇಲೆ ಹೊದಿಸಲಾಗಿದೆ.


* ಲೇಖಕರು ಲಾಹೋರದ ಸಿಖ್ ಮ್ಯೂಜಿಯಮ್ಮಿನ ಕ್ಯುರೇಟರ್ ಆಗಿದ್ದಾರೆ.

ಮೇಲಂತಸ್ತಿನಲ್ಲಿ ಮಹಾರಾಜಾ ರಣಜಿತ ಸಿಂಗ್ ಮತ್ತು ಆತನ ಕುಟುಂಬದ ಸದಸ್ಯರ ವರ್ಣ ಚಿತ್ರಗಳಿವೆ. ಇದರಲ್ಲಿ ರಾಜಕುಮಾರ ದಲೀಪಸಿಂಗನ ಚಿತ್ರವಿದೆ. ಈ ವರ್ಣಚಿತ್ರಗಳನ್ನು ಯುರೋಪಿಯನ್ ಕಲಾವಿದರಾದ ಆಗಸ್ಟ ಶೆಫ್ಟ್, ಲೆಸ್ಲೀ ಪೂಲಸ್ಮಿತ್, ಗೋಲ್ಡಿಂಗ್ ಹ್ಯಾಂ, ಬ್ಲಾಕೆನಿ ವಾರ್ಡ್, ಪಿ. ಸಿ. ಫ್ರೆಂಚ್, ಪೈಲೆಟ್ ಮತ್ತು ವಿಂಟರ್ ಹಾಲ್ಟರ್ ಎಂಬುವವರು ರೂಪಿಸಿದ್ದಾರೆ.

ಈ ವಸ್ತುಸಂಗ್ರಾಲಯವನ್ನು ಸ್ವಲ್ಪ ಒಳ ಹೊಕ್ಕು ನೋಡೋಣ. ನೆಲಮಂತಸ್ತಿನ ಮೊದಲ ಕೋಣೆಯಲ್ಲಿ ರಾಜಕುಮಾರ ಬಾಬಾ ಸಂಗ್ರಹಿಸಿಟ್ಟ ಸಿಖ್ ಅಶ್ವಕೇಗಾರರ, ಗ್ಯಾರ ಫೋಟೋಗಳನ್ನು ತೂಗುಹಾಕಲಾಗಿದೆ. ಬನ್ನಿ, ಎಡದಿಂದ ಬಲಕ್ಕೆ ನೋಡುತ್ತ ಹೋಗೋಣ:

೧ ಮಹಾರಾಜಾ ರಣಜಿತ್‌ಸಿಂಗ್.

೨ ರಾಜಾ ದೇವಿಚಂದ್(ರಣಜಿತ್‌ಸಿಂಗರ ಮಾವ)



ಸಿಖ್ ಸೈನ್ಯದಳ (೧೭೯೯-೧೮೪೬) ಬಳಸುತ್ತಿದ್ದ ನಾನಾ ಬಗೆಯ ಖಡ್ಗಗಳು.

೩ ರಾಜಾ ಖಿರಾಕ್‌ಸಿಂಗ್ (ರಣಜಿತ ಸಿಂಗರ ಮಗ)

೪ ಕನ್ವರ ನಾವು ನಿಹಾಲ್‌ಸಿಂಗ್ (ಖಿರಾಕ ಸಿಂಗರ ಮಗ)

೫ ಮಹಾರಾಜಾ ಶೇರ್‌ಸಿಂಗ್ (ರಣಜಿತ ಸಿಂಗರ ಶೂರ ಸಾಹಸಿ ಮಗ)

೬ ಕನ್ವರ ಪರತಾಬಸಿಂಗ (ರಣಜಿತ್‌ಸಿಂಗರ ಮಗ)

೭ ಅನ್ನೆ (ವಿಕ್ಟರ್ ದಲಿಪ್‌ಸಿಂಗರ ಬ್ರಿಟಿಶ್ ಪತ್ನಿ)

೮ ರಾಜಕುವರಿ ಬಂಬಾ (ದಲಿಪ್‌ಸಿಂಗರ ಮಗಳು. ನಿಧನ ೧೯೫೭)

೯ ರಾಜಾ ಗುಲಾಬಸಿಂಗ್ (ಪ್ರಥಮ ಡೋಗ್ರಾ ರಾಜ. ಕಾಶ್ಮೀರವನ್ನು ಬ್ರಿಟಿಶರಿಗೆ ಮಾರಿದಾತ)

೧೦ ರಾಜಾ ಹಿರಾಸಿಂಗ್ (೧೮೪೪ರಲ್ಲಿ ಕೊಲ್ಲಲ್ಪಟ್ಟ–ದೇಹ್ಯಾನ್‌ಸಿಂಗ ರಣಜಿತ ಸಿಂಗನ ಮುಖ್ಯಮಂತ್ರಿಯ ಮಗ)

೧೧ ಆಳುಗಳೊಂದಿಗೆ ದಲಿಪ್‌ಸಿಂಗ್.

೧೨ ವೃದ್ಧಾಪ್ಯದಲ್ಲಿ ದಲಿಪ್‌ಸಿಂಗ್.

೧೩ ರಾಜಾ ಲಾಲಸಿಂಗ್ (ಸಿಖ್ ಸರಕಾರದ ಕೊನೆ ದಿನಗಳಲ್ಲಿ ಸಿಖ್ ಸೈನ್ಯಗಳ ದಂಡ ನಾಯಕನಾಗಿದ್ದ ವ್ಯಕ್ತಿ.)

ರಾಜಾ ಹಿರಾಸಿಂಗ್ ಮತ್ತು ರಾಜಕುವರ ದಲಿಪ್‌ಸಿಂಗರ ಚಿತ್ರಗಳ ನಡುವೆ ಒಂದು ಹಳೆಯ ಆದರೆ ಸುಂದರವಾದ 'ಗುರು ಗ್ರಂಥಸಾಹಿಬ್'ದ ಪ್ರತಿಯನ್ನು ಇಡಲಾಗಿದೆ.

ಈ ಕೋಣೆಯನ್ನು ಪ್ರವೇಶಿಸುತ್ತಿರುವಂತೆಯೇ ಎದುರಿಗೆ ಗೋಡೆಯ ಮೇಲೆ ಸಿಖ್ ಆಳ್ವಿಕೆಯ ಕಾಲದಲ್ಲಿದ್ದ ಸುತ್ತಗೋಡೆಯ ಲಾಹೋರ್ ನಗರದ ಸುಂದರವಾದ ದೊಡ್ಡ ಫೋಟೋ ಕಾಣಿಸುತ್ತದೆ. ಅದರಲ್ಲಿ ಪ್ರತಿಯೊಂದು ಕಟ್ಟಡದ ಹೆಸರನ್ನೂ ಆಯಾ ಕಟ್ಟಡದ ಕೆಳಗೇ ಬರೆಯಲಾಗಿದ್ದು ರಾವಿ ನದಿಯನ್ನು ಉತ್ತರ ಗೋಡೆಯ ಹತ್ತಿರ ಬಾವ್ ಶಾಹಿ ಮಸೀದೆಯ ಹಿಂದೆ ತೋರಿಸಲಾಗಿದೆ.

ಇನ್ನು ಎರಡನೆಯ ಕೋಣೆ. ವಿಶಾಲವಾದ ಕೋಣೆ. ಇಲ್ಲಿ ಆಯುಧಗಳು ಮತ್ತು ಇತರ ವಸ್ತುಗಳನ್ನು ಪ್ರಾತಿನಿಧಿಕವಾಗಿ ಹೊಂದಿಸಿಡಲಾಗಿದೆ. ನಾನಾ ವಿಧದ ಖಡ್ಗಗಳು, ಬಾಗಿದ ಅಫಘಾನ್ ಚೂರಿಗಳು, ಪಿಸ್ತೂಲುಗಳು, ಬಿಲ್ಲು–ಬಾಣಗಳು, ಬಯನೆಟ್‌ಗಳನ್ನು ಗೋಡೆಯ ಮೇಲಿನ ಶೋ–ಕೇಸುಗಳಲ್ಲಿ ಅಂದವಾಗಿ ಜೋಡಿಸಲಾಗಿದೆ. ಪರ್ಶಿಯದ ಚೂರಿಗಳು, ಕೃಪಾಣ–ಬಿಚ್ವಾವಾಗಳಲ್ಲದೇ ಸಿಖ್ ಸೈನ್ಯದ ವಾದ್ಯಮೇಳವನ್ನೂ ಅಲ್ಲಿ ತೋರಿಸಲಾಗಿದೆ. ಕೋಣೆಯ ಮಧ್ಯಕ್ಕೆ ಇಡಲಾಗಿರುವ ಎರಡು ಮೇಜಿನ ಶೋಕೇಸುಗಳಲ್ಲಿ ಗನ್‌ಪೌಡರ್ ಪರೀಕ್ಷಕಗಳನ್ನೂ ಬುಲೆಟ್ ಅಚ್ಚುಗಳನ್ನೂ (ಸಣ್ಣ ದೊಡ್ಡ ಮತ್ತು ದುಂಡನೆಯ ಆಕಾರದವು) ಇಡಲಾಗಿದೆ. ಅಲ್ಲದೇ ಚಿಕ್ಕದೆನಿಸಿದರೂ ಬಹು ಉಪಯುಕ್ತವಾದ ಆಯುಧ ಗೋಪಿಸಿರುವನ್ನೂ ಶೋಕೇಸೊಂದರಲ್ಲಿ ಇಡಲಾಗಿದೆ. ಇದು ಮಧ್ಯ ಯುಗಕ್ಕೆ ಸಂಬಂಧಿಸಿದ ಹರಿತವಾದ ಆಯುಧದ ಆಧುನಿಕ ಮಾದರಿಯ ಅಸ್ತ್ರ. ವೈರಿಗಳ ಅಶ್ವದಳದ ಬಲ ಕುಂದಿಸಲು ಈ ಆಯುಧವನ್ನು ಬಳಸಲಾಗುತ್ತಿತ್ತು.

ಇಲ್ಲಿರುವ ಆಯುಧಗಳಲ್ಲಿ ಪ್ರಾಚೀನ ಕಾಲದ ಬಿಲ್ಲು–ಬಾಣಗಳಿಂದ ಮೊದಲ್ಗೊಂಡು ಇತ್ತೀಚಿನ ಬಯನೆಟ್‌ವರೆಗಿನ ವಿವಿಧ ಪ್ರಕಾರಗಳಿವೆ. ಅಗ್ನ್ಯಸ್ತ್ರಗಳ ಬಳಕೆ ಸಿಖ್ ಸೈನ್ಯದಲ್ಲಿ ರಾಜಾ ರಣಜಿತ್ ಸಿಂಗ್ ನೇಮಿಸಿಕೊಂಡ ಫ್ರೆಂಚ್, ಇಟಾಲಿಯನ್ ಮತ್ತು ಇತರ ಯುರೋಪಿಯನ್ ಅಧಿಕಾರಿಗಳಿಂದ ಪ್ರಾರಂಭವಾಯಿತು. ಕಾರ್ಬೈನ್ ರೈಫಲ್‌ಗಳು, ಫ್ಲಿಂಟ್‌ಲಾಕ್ ಮತ್ತು ಪರ್ಕಶ್ಯನ್ ಲಾಕ್ ಪಿಸ್ತೂಲುಗಳು ಇಲ್ಲಿ ಸಮಕಾಲೀನ ಅಗ್ನ್ಯಸ್ತ್ರಗಳಾಗಿ ಇಡಲ್ಪಟ್ಟಿವೆ. ಬಯೊನೆಟ್‌ಗಳು ಬ್ರಿಟಿಶ್ ಕಾಲದವು. ಬಾಗಿದ ಮತ್ತು ಇಬ್ಬದಿ ಹರಿತವಾದ ಖಡ್ಗಗಳು ಮೊಗಲ್ ಮತ್ತು ಪರ್ಶಿಯನ್ನರ ಆಯುಧಗಳಾಗಿವೆ. ಕಿರ್ಪ್ ಎಂದು ಕರೆಯುವ ಉದ್ದವಾದ ಖಡ್ಗವನ್ನು ಬಳಕೆಗೆ ತಂದವರು ಬ್ರಿಟಿಶರು. ಇಲ್ಲಿರುವ ಕಿರುಗತ್ತಿಗಳು ಬೇರೆ ಬೇರೆ ಆಕಾರದವು. ಅವುಗಳಲ್ಲಿ ಮುಖ್ಯವಾದವುಗಳೆಂದರೆ ಅಫಘಾನಿ 'ಚುರಾ.' ಇದು ಹರಿತ ಅಲಗಿನದು. 'ಪೆಶ್ ಕ್ವಾಬ್ಜ್' ಎಂಬುವಕ್ಕೆ ತುದಿ ಮಾತ್ರ ತೀರ ಹರಿತ

ಮತ್ತು ಸೂಜಿಯಾಕಾರದ್ದು. ಇದು ಪರ್ಶಿಯನ್ ಮೂಲದ್ದು. 'ಬಿಚ್ಛಾವಾ' (ಎಂದರೆ ಚೇಳು) ಎಂಬುದು ಚೇಳಿನಾಕಾರದಲ್ಲಿರುವ ಎರಡು ಅಲಗಿನ ಚೂರಿ. ನೋಡಲು ತುಂಬ ಕುತೂಹಲಕಾರಿಯಾದ ಆಯುಧ ಇದು. 'ಕೃಪಣ' ಎಂಬುದು ಮತ್ತೊಂದು ಕಿರುಗತ್ತಿ. ಇದನ್ನು ಸಿಖ್‌ರು ತಮ್ಮ ಧಾರ್ಮಿಕ ಸಂಕೇತವಾಗಿ ಬಳಸುತ್ತಾರೆ.

ಮೂರನೆಯ ಕೋಣೆಯಲ್ಲಿ ಪಂಜಾಬನ್ನು ಗೆಲ್ಲುವುದಕ್ಕಾಗಿ ಸಿಖ್ ಮತ್ತು ಬ್ರಿಟಿಶ್ ಸೈನ್ಯಗಳ ನಡುವೆ ನಡೆದ ಭೀಕರ ಯುದ್ಧದ ಸನ್ನಿವೇಶಗಳ ವರ್ಣಚಿತ್ರಗಳನ್ನು ತೂಗುಹಾಕಲಾಗಿದೆ. ಈ ಕೆಳಗಿನಂತೆ ಅವುಗಳನ್ನು ವಿವರಿಸಬಹುದು.

೧ ಚಿಲಿಯನ್‌ವಾಲಾದ ಸಿಖ್ ಯುದ್ಧ—೧೮೪೯ ಜನವರಿ ೧೩.

೨ ಫಿರೋಜಶಾಹೂರ್ ಬಳಿಯ ಸಿಖ್‌ಯುದ್ಧ—೧೮೪೫ರ ಡಿಸೆಂಬರ್ ೨೧.

೩ ಮೂಡ್ಕಿಯ ಸಿಖ್ ಯುದ್ಧ—೧೮೪೫ರ ಡಿಸೆಂಬರ್ ೧೮.

೪ ರಾಮನಗರದ ಸಿಖ್ ಯುದ್ಧ—೧೮೪೮ರ ನವೆಂಬರ್ ೨೨.

೫ ಗುಜರಾತದ ಸಿಖ್ ಯುದ್ಧ—೧೮೪೯ರ ಫೆಬ್ರುವರಿ ೨೧.

೬ ಸೋಬ್ರಾನಿನ ಸಿಖ್ ಯುದ್ಧ—೧೮೪೬ರ ಫೆಬ್ರುವರಿ ೧೦.

೭ ಅಲಿವಾಲದ ಸಿಖ್ ಯುದ್ಧ—೧೮೪೬ರ ಜನೆವರಿ ೨೮.

೮ ಮುಲ್ತಾನಿನ ಸಿಖ್ ಯುದ್ಧ—೧೮೪೯ರ ಜನೆವರಿ ೨.

ಕೊನೆಯ ಕೋಣೆಯಲ್ಲಿ ಮಹಾರಾಜಾ ರಣಜಿತ್‌ಸಿಂಗರ ಪಟ್ಟದ ಕುದುರೆಯ ಕಟ್ಟಿಗೆಯ ಪ್ರತಿಕೃತಿಯೊಂದಕ್ಕೆ ಬಂಗಾರದ ವಸ್ತ್ರಾಭರಣಗಳನ್ನು ಹಾಕಿ ನಿಲ್ಲಿಸಲಾಗಿದೆ. ಈ ವಸ್ತ್ರಾಭರಣಗಳು ಮೂರು ಭಾಗಗಳಲ್ಲಿವೆ. ಮೊದಲನೆಯದು ಸರಬಂದ್ (ಶಿರೋಭಾಗ), ಎರಡನೆಯದು ಸೀನಾಬಂದ್ (ಚಿಲತ್ತು), ಹಾಗೂ ಮೂರನೆಯದು ದರ್ಮ್‌ಗಜ್ (ಬಾಲಕ್ಕೆ ಹೊದಿಕೆ). ಪ್ರತಿಭಾಗವನ್ನೂ ಚೊಕ್ಕ ಬಂಗಾರದಲ್ಲಿ ಮಾಡಿದ ಅಷ್ಟದಳದ ಹೂವಿನ ಆಕಾರದಲ್ಲಿ ರೂಪಿಸಲಾಗಿದೆ. ನಡುವೆ ವಜ್ರವೈಡೂರ್ಯಗಳನ್ನು ಖಚಿತಗೊಳಿಸಲಾಗಿದೆ.

ರಾಜಾ ರಣಜಿತ್‌ಸಿಂಗರಿಗೆ ನೆರಳು ನೀಡಲು ಕುದುರೆಗೆ ಹಾಕಲಾಗಿದ್ದ ಛತ್ರಿ(Parasol)ಯನ್ನು ಕೆಂಪು ರೇಶ್ಮೆ ಬಟ್ಟೆಯಿಂದ ಹೊಲಿಯಲಾಗಿದ್ದು ನಡುವಿನ ಆಧಾರ ಸ್ತಂಭಕ್ಕೆ ಬಂಗಾರದ ಲೇಪನವಿದೆ. ಛತ್ರಿಯ ವ್ಯಾಸ ೬ ಅಡಿ ಇದೆ. ಬಂಗಾರ ಲೇಪನದ ಸ್ತಂಭ ೮ ಅಡಿ ೧೧ ಅಂಗುಲ ಎತ್ತರವಿದೆ. ಇದು ಸಿಖ್ ದರ್ಬಾರದ ವೈಭವವನ್ನು ಪ್ರತಿಬಿಂಬಿಸುತ್ತದೆ.

ಮೇಲಿನ ಅಂತಸ್ತು ಒಂದು ಅಗಲವಾದ ಪಡಸಾಲೆಯಂತಿದೆ. ಮೊದಲು ಮಹಾರಾಣಿ ಜಿಂದಾನ ವಾಸಸ್ಥಾನವಾಗಿದ್ದ ಇದು ಈಗ ಪ್ರದರ್ಶನಾಲಯವಾಗಿ ಮಾರ್ಪಟ್ಟಿದೆ. ಇಲ್ಲಿ ಎಲ್ಲ ರೀತಿಯ ವರ್ಣಚಿತ್ರಗಳು ಮತ್ತು ಉಳಿದ ವಸ್ತುಗಳನ್ನು ಪ್ರದರ್ಶಿಸಲಾಗಿದೆ. ಮಹಾರಾಜಾ ರಣಜಿತ್‌ಸಿಂಗನ ಮೆರವಣಿಗೆಯ ಬೆಳ್ಳಿಯ ಮಾಡೆಲ್ ಇಲ್ಲಿಯ ಪ್ರಮುಖ ಆಕರ್ಷಣೆ. ಅಲ್ಲದೆ ಅಂಡಾಕೃತಿಯ ಇಪ್ಪತ್ತೆರಡು ಹಸ್ತಿದಂತದ ಕೆತ್ತನೆಯ ಚಿತ್ರಗಳು (ಇವೆಲ್ಲ ೧೭ನೆಯ ಶತಮಾನದ ಮೊಗಲ್ ಮಾದರಿಯವು) ತುಂಬ ಜಾಣ್ಮೆಯಿಂದ ಕೆತ್ತಲ್ಪಟ್ಟವುಗಳಾಗಿವೆ.

ತೈಲ ಚಿತ್ರಗಳಲ್ಲಿ ಆಗಸ್ಟ ಶೆಫ್ಟ್‌ನ ನಾಲ್ಕು ಕೃತಿಗಳು ಗಮನಾರ್ಹವಾಗಿವೆ. ಮೊದಲನೆಯದು ಅಮೃತಸರದ ಸ್ವರ್ಣಮಂದಿರದ್ದು. ಮಹಾರಾಜಾ ರಣಜಿತ್‌ಸಿಂಗ್ ಮತ್ತು ಶೇರ್‌ಸಿಂಗ್ ಒಂದು ಛತ್ರಿಯ ಕೆಳಗೆ ಅಕ್ಕ-ಪಕ್ಕದಲ್ಲಿ ಕುಳಿತಿದ್ದಾರೆ. ಶೇರ್‌ಸಿಂಗನ ಇಚ್ಛೆಯಂತೆ ಈ ಚಿತ್ರವನ್ನು ಕಲಾವಿದ ರೂಪಿಸಿದನಂತೆ.

ಎರಡನೆಯದು ಶೇರ್‌ಸಿಂಗ್ ತನ್ನ ರಾಜಸಭೆಯಲ್ಲಿ ಕುಳಿತ ಚಿತ್ರ. ಮಹಾರಾಜ ಮತ್ತು ಉಳಿದ ಸಭಾಸದರು ಮೆತ್ತೆಯ ಮೇಲೆ ಅರ್ಧವೃತ್ತದಲ್ಲಿ ಕುಳಿತಿದ್ದಾರೆ.

ಮೂರನೆಯದು ಶೇರ್‌ಸಿಂಗನ ವ್ಯಕ್ತಿಚಿತ್ರ. ಚಿನ್ನದ ಕಟ್ಟನಲ್ಲಿದೆ. ರಾಜ ಇಲ್ಲಿ ಆಭರಣಗಳನ್ನು ಧರಿಸಿ ಕೈಯಲ್ಲಿ ಒಂದು ಖಡ್ಗವನ್ನು ಹಿಡಿದು ರಾಜಶಿಬಿರದಲ್ಲಿ ಕುಳಿತಿದ್ದಾನೆ.

ನಾಲ್ಕನೆಯ ಚಿತ್ರ ಮಹಾರಾಜಾ ರಣಜಿತ ಸಿಂಗನ ದರ್ಬಾರಿನ ಚಿತ್ರ. ೧೬×೧೮ ಅಡಿಯ ಆಕಾರದಲ್ಲಿದೆ. ಆಗಸ್ಟ್ ಶೆಫ್ಟ್‌ನ ಕೃತಿಇದು. ಆತನ ಸಮಕಾಲೀನ ಕಲಾವಿದ ಆರ್ಚರ್ ಹೇಳುವಂತೆ ಶೇರ್‌ಸಿಂಗ್ ಬೇಟೆಯಿಂದ ಮರಳಿದ ಚಿತ್ರ ಇಲ್ಲಿದೆ. ಆದರೆ ಚಿತ್ರ ನೋಡಿದಾಗ ರಣಜಿತ್ ಸಿಂಗ್ ದರ್ಬಾರಿನಲ್ಲಿ ಕುಳಿತಿದ್ದು ಕೆಲವರು ಆತನಿಗೆ ಕಪ್ಪ–ಕಾಣಿಕೆ ಅರ್ಪಿಸುತ್ತಿದ್ದಾರೆ. ಶೇರ್‌ಸಿಂಗ್ ದರ್ಬಾರಿನ ಬಾಗಿಲಲ್ಲಿ ನಿಂತಿದ್ದಾನೆ. ಮಹಾರಾಜರಿಗೆ ಮುಜುರೆ ಸಲ್ಲಿಸುತ್ತ. ಚಿತ್ರದಲ್ಲಿ ಸುಮಾರು ೬೦ ಜನ ಸರದಾರರನ್ನು ಚಿತ್ರಿಸಲಾಗಿದೆ. ಅವರಲ್ಲಿ ರಾಜಕುಮಾರ ಖರಾಕ್‌ಸಿಂಗ್. ಆತನ ಮಗ ನಾವು ನಿಹಾಲ್‌ಸಿಂಗ್. ಹೀರಾಸಿಂಗ್ ಮತ್ತು ಶೇರ್‌ಸಿಂಗ್ ಪ್ರಮುಖರು. ಅಲ್ಲದೆ ಮೂವರು ಡೋಗ್ರಾ ಸೋದರರು–ದೇಹ್ಯಾನ್‌ಸಿಂಗ್. ಗುಲಾಬ್‌ಸಿಂಗ್ ಮತ್ತು ಸೌಚೇತ್‌ಸಿಂಗ್ ಮತ್ತು ಅಜೀಜ್ ಉದ್ ದಿನ್. ಆತ ರಣಜಿತ್‌ಸಿಂಗನ ನಂಬಿಗಸ್ತ ಮುಸ್ಲಿಂ ಸರದಾರ. ರಣಜಿತ್ ಸಿಂಗ್‌ನ ಯುರೋಪಿಯನ್ ಸೇನಾನಿಗಳಾದ ಅಲಾರ್ಡ್. ಅವಿಟೇಬಲ್. ವೆಂಚುರಾ. ಫೌಲ್ಕ್ಸ್. ಸ್ಟೇಯಿನ್ ಬಾಕ್. ವಾನ್ ಕಾರ್ಟ್ ಲ್ಯಾಂಡ್ಟ್. ಮೆಲಾ ರೆಟ್ಟಿಚ್. ಮೆಂಟಾನ್ ಮತ್ತು ಹೋನಿಗ್ ಬರ್ಗರ್ ಮುಂತಾದವರೂ ಈ ವರ್ಣಚಿತ್ರದಲ್ಲಿದ್ದಾರೆ. ಬ್ರಿಟಿಷ್ ಮ್ಯೂಸಿಯಂನಲ್ಲಿ ಇದ್ದ ಈ ಚಿತ್ರ ರಾಜಕುವರಿ ಬಂಬಾಳ ಅಪೇಕ್ಷೆಯ ಮೇರೆಗೆ ೧೯೬೧ರಲ್ಲಿ ಲಾಹೋರಕ್ಕೆ ಮರಳಿ ಬಂತು.

ಉಳಿದ ವ್ಯಕ್ತಿ ಚಿತ್ರಗಳು: ಕೊನೆಯ ಮೊಗಲ್ ದೊರೆ ಬಹಾದೂರ್‌ಶಾಹ ಜಾಫರ್ ಮತ್ತು ಆತನ ಮಕ್ಕಳು. ಇದು ಕಲಾತ್ಮಕ ದೃಷ್ಟಿಯಿಂದ ತುಂಬ ಜಾಣ್ಮೆಯದು. ಶೆಫ್ಟ್ ಚಿತ್ರಿಸಿದ ಫ್ರೆಡರಿಕ್ ದಲೀಪ್‌ಸಿಂಗ್ ಮತ್ತೊಂದು ಚಿತ್ರವಿದೆ. (ದಲೀಪ್‌ಸಿಂಗ್ ಮೂರು ವರ್ಷದವನಿದ್ದಾಗಿನದು) ರಾಜಕುವರ ಬಂಗಾರದ ಸುಳಿವುಗಳ ರೇಶ್ಮೆ ಬಟ್ಟೆ ತೊಟ್ಟು ಸಲೀಂ ಶಾಹಿ ಪಾದರಕ್ಷೆಗಳನ್ನು ಹಾಕಿಕೊಂಡು ಕುಳಿತಿದ್ದಾನೆ. ಹಿಂದೆ ದೂರದಲ್ಲಿ ಪಾದಶಾಹಿ ಮಸೀದೆ ಚಿತ್ರಿಸಲ್ಪಟ್ಟಿದೆ. ೧೯೦೯ರಲ್ಲಿ ಲಿಪ್ಸ್ ಫೂಲಸ್ಮಿತ್ ರೂಪಿಸಿದ ಇದೇ ರಾಜಕುವರನ ಇನ್ನೊಂದು ಚಿತ್ರವನ್ನು ಇಲ್ಲಿ ತೂಗು ಹಾಕಲಾಗಿದೆ.

ರಾಣಿ ಜಿಂದಾನಳ ಅಪೂರ್ಣ ಚಿತ್ರವೊಂದಿದೆ. ಅದರಲ್ಲಿ ರಾಣಿ ದಿಂಬಿಗೊರಗಿ ರಾಜಕಾರಣಿಯ ರೀತಿಯಲ್ಲಿ ಕುಳಿತಿದ್ದಾಳೆ.

ವಿಂಟರ್ ಹಾಲ್ಟರ್ ಜಲವರ್ಣದಲ್ಲಿ ಚಿತ್ರಿಸಿದ ರಾಜಕುವರ ದಲೀಪ್‌ಸಿಂಗನ ಚಿತ್ರವೂ ಅಲ್ಲಿದೆ. ಅದು ವಿಕ್ಟೋರಿಯಾ ಮಹಾರಾಣಿಯ ಅಪೇಕ್ಷೆಯ ಮೇರೆಗೆ ಬಕಿಂಗ್‌ಹ್ಯಾಂ ಅರಮನೆಯಲ್ಲಿ

ರೂಪಿಸಿದ್ದು. ಇದು ರಾಜಕುವರನ ನಿಜವಾದ ಲಕ್ಷಣಗಳನ್ನು ತೋರಿಸುವುದರಿಂದ ಅತಿ ಜೀವಂತವೆನಿಸುತ್ತದೆ.

ನಲವತ್ನಾಲ್ಕು ಅಂಗುಲ ಎತ್ತರದ ಬೆಳ್ಳಿಯ ಮಾಡೆಲ್ ಒಂದಿದೆ. ಮಹಾರಾಜಾ ರಣಜಿತ್ ಸಿಂಗ್ ಆನೆಯ ಮೇಲೆ ಠೀವಿಯಿಂದ ಕುಳಿತಿದ್ದಾರೆ. ಅವರ ಹಿಂದೆ ಛತ್ರಹಿಡಿದ ಸೇವಕನೂ ಕುಳಿತಿದ್ದಾನೆ. ಸುತ್ತಲೂ ಅಲಂಕಾರ. ಜತೆಗೇ ಬಲಕ್ಕೆ ಒಂದು ಜಿಂಕೆಯನ್ನು ಒಬ್ಬ ಬೆನ್ನಟ್ಟಿರುವುದು. ಎಡ ಪಕ್ಕಕ್ಕೆ ಚಿರತೆ. ಹಿಂದೆ ಮತ್ತು ಸಿಂಹವೊಂದು ಕುದುರೆಯ ಮೇಲೆ ನೆಗೆಯುತ್ತಿರುವ ಹಾಗೂ ಕುದುರೆ ಸವಾರ ಖಡ್ಗ-ಗುರಾಣಿ ಹಿಡಿದು ಕುಳಿತು ಹಿಂಸ್ರ ಮೃಗವನ್ನು ಎದುರಿಸುತ್ತಿರುವುದನ್ನು ಕೆತ್ತಲಾಗಿದೆ. ಅಲ್ಲದೇ ಪದಾತಿಗಳು, ಸಿಖ್ ಮತ್ತು ಯುರೋಪಿಯನ್ ದಂಡುಗಳೂ ಚಿತ್ರದಲ್ಲಿವೆ.

ಪಾಕಿಸ್ತಾನದ ಪ್ರಾಚ್ಯವಸ್ತು ಇಲಾಖೆ ಇತ್ತೀಚೆಗೆ ಸಿಖ್ ಆಳ್ವಿಕೆಯ ಕಾಲದ ವಸ್ತುಗಳನ್ನು ರಕ್ಷಿಸಿಡಲೋಸುಗ ಈ ವಸ್ತುಸಂಗ್ರಹಾಲಯವನ್ನು ಪ್ರಾರಂಭಿಸಿದೆ. ಗುರು ನಾನಕರ ಜನ್ಮದಿನದ ಸಂದರ್ಭದಲ್ಲಿ ಸಾವಿರಾರು ಜನ ಸಿಖ್ ಭಕ್ತರು ಈ ವಸ್ತು ಸಂಗ್ರಹಾಲಯಕ್ಕೆ ಭೇಟಿ ನೀಡುತ್ತಾರಲ್ಲದೆ ನಿತ್ಯ ನೋಡಲು ಬರುವವರೂ ಅಸಂಖ್ಯ. ಅಲ್ಲದೇ ಪಾಕಿಸ್ತಾನದ ಸಿಖ್ ಜನ ಆಚರಿಸುವ ವೈಶಾಖಿ ದಿನದಂದೂ ಅಲ್ಲಿ ಸಾಕಷ್ಟು ಸಂಖ್ಯೆಯಲ್ಲಿ ಜನ ಸೇರುತ್ತಾರೆ. ☆

(ಚಿತ್ರ ಮತ್ತು ಲೇಖನ ಕೃಪೆ: ಪಾಕಿಸ್ತಾನದ ರಾಯಭಾರಿ ಕಚೇರಿ, ದಿಲ್ಲಿ)

ಖಾದಿಗಾಗಿ ಪ್ರಾಣ ತೆತ್ತ

ಖಾದಿ ಉದ್ಯಮವು ಶುರುವಾದಾಗ ಅದಕ್ಕಾಗಿ ತನ್ನ ಸರ್ವಸ್ವವನ್ನು ತೆತ್ತು ಕಡೆಗೆ ಪ್ರಾಣವನ್ನೂ ನೀಡಿದವನೊಬ್ಬನಿದ್ದಾನೆ ಎಂಬುದನ್ನು ನೀವು ಬಲ್ಲಿರಾ? ಗಾಂಧೀಜಿಯ ಖಾದಿ ಚಳುವಳಿಗೆ ಮನಸೋತ ಬಬ್ಬನ್ ಸಿಂಹ ಎಂಬವನ ಯುವಕ. ತಾನು ಓದುತ್ತಿದ್ದ ಮೊಖ್ತ್ಯಾರ ಪರೀಕ್ಷೆಯನ್ನು ಬಿಟ್ಟು ದೇಶದ ಚಳುವಳಿಯಲ್ಲಿ ಧುಮುಕಿದ. ತನ್ನ ಹಣದಿಂದಲೇ ಖಾದಿ, ಚರಕಾ ಇತ್ಯಾದಿಗಳ ಪ್ರಚಾರ ಮಾಡತೊಡಗಿದ. ತನ್ನ ಹೊಲ. ಹಾಗೂ ಹೆಂಡತಿಯ ಮೈಮೇಲಿನ ಒಡವೆಗಳನ್ನು ಮಾರಿ ಎಲ್ಲರಿಗೂ ಉಚಿತವಾಗಿ ಚರಕಾ, ನೂಲು ಒದಗಿಸಿದ.

ಭಾವುಕತೆ ಮಿತಿಮೀರಿ ಆತನಿಗೆ ಹುಚ್ಚು ಹಿಡಿಯಿತು. ದುರ್ದೈವವಶಾತ್ ಆತ ಸತ್ತುಹೋದ. ಆತನ ಎಲ್ಲಾ ಕೆಲಸಕ್ಕೆ ಸಂಗಾತಿಯಾಗಿದ್ದ ಆತನ ಮಡದಿ ತನ್ನ ಪತಿ ಕಾಯಿಲೆ ಬಿದ್ದಾಗಲೇ ಅನ್ನ-ನೀರು ತ್ಯಜಿಸಿದ್ದಳು. ಪತಿ ಸತ್ತು ಹೋದ-ಮೇಲೆ ಪತಿಯನ್ನು ಬಹುವಾಗಿ ಪ್ರೀತಿಸುತ್ತಿದ್ದ ಆಕೆ ಸಹಗಮನಕ್ಕೆ ಅನುಮತಿ ಕೇಳಿದಳು. ಆದರೆ ನೆಂಟರಿಷ್ಟರು ಅನುಮತಿ ನೀಡಲಿಲ್ಲ. ರಾಮಸೂರತ್ ಎಂದು ಆಕೆಯ ಹೆಸರು.

ಹತ್ತನೇ ದಿನ ಬೆಳಿಗ್ಗೆ ಆಕೆ ಸತ್ತು ಹೋಗಿದ್ದು ಕಂಡಿತು. ಆಕೆಯ ಮೈಯೆಲ್ಲಾ ಸುಟ್ಟು ಹೋಗಿತ್ತು. ಪತಿ ವಿರಹವನ್ನು ತಾಳಲಾರದೆ ನೂಲಲು ತಂದ ಅರಳೆ ಹಾಗು ಸೀಮೆ ಎಣ್ಣೆ ಉಪಯೋಗಿಸಿ ಇಹಲೋಕ ತ್ಯಜಿಸಿದಳು. ಆ ಸ್ಥಳ ನೋಡಿ ಧನ್ಯನಾದೆನೆಂದು ರಾಜೇಂದ್ರ ಪ್ರಸಾದರು ತಮ್ಮ ಆತ್ಮಚರಿತ್ರೆಯಲ್ಲಿ ಬರೆದಿದ್ದಾರೆ.

- ಹೆಚ್. ಜಿ. ರಾಧಾದೇವಿ



ಈ ಯುಗದ ಅತಿ ವಿಚಿತ್ರ ಹಾಗೂ ಭಯಂಕರ ಟೈಂ ಬಾಂಬ್!

ಸವ್ಯಸಾಚಿ

ಮೊದಲ ಮಹಾಯುದ್ಧದ ವೇಳೆ. ಘೋರ ಕಾಳಗ ಸಾಗಿತ್ತು. ಮಾನವ ಜನಾಂಗ ಭಯಾತಂಕಗಳಿಂದ ತತ್ತರಿಸುತ್ತಿತ್ತು.

ಅರ್ಧರಾತ್ರಿಯ ಹೊತ್ತು. ಬರ್ಲಿನ್ನಿನ ರಸ್ತೆಗಳಲ್ಲಿ ಆಗಾಗ ಸೈನಿಕರ ಪರೇಡ್ ಮಾತ್ರ ಕಾಣಿಸುತ್ತಿತ್ತು. ರಾತ್ರಿಯ ನೀರವತೆಯನ್ನು ಭಂಗಗೊಳಿಸುತ್ತ ಒಂದು ಕಾರು ಯುದ್ಧ ವಿಭಾಗದ ಪ್ರಧಾನ ಕಾರ್ಯಾಲಯದತ್ತ ಸಾಗುತ್ತಿತ್ತು.

ಕಾರ್ಯಾಲಯದೆದುರು ಕಾರು ನಿಂತಿತು. ಅದರೊಳಗಿಂದ ದೇಹವನ್ನು ಉದ್ದನೆಯ ನಿಲುವಂಗಿಯಿಂದ ಮುಚ್ಚಿದ ಮಧ್ಯವಯಸ್ಸಿನ ಸ್ವಸ್ಥ ಮನುಷ್ಯನೊಬ್ಬ ಹೊರಬಿದ್ದ. ಅವನ ಜಾಗರೂಕ ದೃಷ್ಟಿ ಸುತ್ತಲೂ ನಿಟ್ಟಿಸಿತು. ಯಾರೂ ನೋಡುತ್ತಿಲ್ಲವೆಂದು ಮನದಟ್ಟಾಗುತ್ತಲೇ ಆತ ಆ ಕಾರ್ಯಾಲಯದತ್ತ ಸಾಗಿದ.

ಈತ ಜರ್ಮನ್ ಸರಕಾರದ ವಿಶೇಷ ಸಾಂಸ್ಕೃತಿಕ ಅಧಿಕಾರಿ ಕ್ಯಾಪ್ಟನ್ ಫ್ರಾನ್ಸಿಸ್ ರಿಂಟ್ಲೆನ್. ಅವನ ಆಗಮನದ ಬಗ್ಗೆ ಎಲ್ಲ ವಿವರವೂ ಸಂಬಂಧಪಟ್ಟ ಅಧಿಕಾರಿಗಳಿಗೆ ತಿಳಿದಿತ್ತೆಂದು ತೋರುವುದು. ಏಕೆಂದರೆ ಕಾರ್ಯಾಲಯವನ್ನು ಪ್ರವೇಶಿಸಿ ನಿಶ್ಚಿತ ಸ್ಥಾನಕ್ಕೆ ತಲುಪುವ ವರೆಗೆ ಯಾರೂ ಅವನನ್ನು ತಡೆಯಲಿಲ್ಲ.

ಆತ ಒಂದು ನಿಶ್ಚಿತ ಕೋಣೆಗೆ ತಲುಪಿ ಕುಳಿತುಕೊಂಡ.

ಕೆಲ ನಿಮಿಷಗಳಲ್ಲೇ ಜರ್ಮನ್ ಯುದ್ಧ ವಿಭಾಗದ ಪ್ರಧಾನ ಅಧಿಕಾರಿ ಆ ಕೋಣೆಗೆ ಬಂದ. ಕ್ಯಾಪ್ಟನ್ ಅವನಿಗೆ ಆದರ ಸೂಚಿಸಲು ಎದ್ದು ನಿಂತ. ಪ್ರಧಾನಾಧಿಕಾರಿ ಅವನ ಕೈ ಕುಲುಕಿ ಕುಳಿತುಕೊಳ್ಳುವಂತೆ ಸೂಚಿಸಿ ಎದುರಿನ ಕುರ್ಚಿಯ ಮೇಲೆ ಕುಳಿತ.

ಅಧಿಕಾರಿ ತುಂಬ ಸಾಹಸಿಯಾಗಿದ್ದರೂ ಅವನ ಮೋರೆಯ ಮೇಲೆ ಚಿಂತೆಯ ರೇಖೆಗಳು ಮೂಡಿ ಬಂದಿದ್ದವು.

"ಕ್ಯಾಪ್ಟನ್...ನಿನ್ನನ್ನೇಕೆ ಇಲ್ಲಿ ಕರೆಯಲಾಯಿತೆಂದು ಬಲ್ಲೆಯಾ?"—ಒಮ್ಮೆಲೇ ಮೌನ ಮುರಿದು ಕೇಳಿದ ಅಧಿಕಾರಿ.

"ಇಲ್ಲ ಸಾರ್...ನಾನು ಸಾಂಸ್ಕೃತಿಕ ವಿಷಯಗಳ ವಿಶೇಷ ತಜ್ಞ. ಯುದ್ಧವಿಭಾಗದ ಪ್ರಧಾನರು ನನ್ನನ್ನು ಈ ನಟ್ಟಿರುಳ ವೇಳೆ ಅದೇಕೆ ಕರೆದರೋ ನಾನರಿಯೆ"—ನಿಸ್ಸಂಕೋಚವಾಗಿ ನುಡಿದ ಕ್ಯಾಪ್ಟನ್.

"ಈ ಪ್ರಶ್ನೆಗೆ ಉತ್ತರ ಹೇಳಲೆಂದೇ ನಾನು ಕರೆಯಿಸಿದೆ...ನಮಗೆ ನಿನ್ನ ಅಗತ್ಯ ಒದಗಿದೆ."

"ನನ್ನ ಅಗತ್ಯ! ಯುದ್ಧದ ವಿಷಯದಲ್ಲಿ ನಾನೇನು ಮಾಡಬಲ್ಲೆ?"— ಚಕಿತನಾಗಿ ಕೇಳಿದ ಕ್ಯಾಪ್ಟನ್.

"ನಾವೇನೂ ಮೂರ್ಖರಲ್ಲ. ನೀನು ಬಹಳಷ್ಟು ಸಹಾಯ ಮಾಡಬಲ್ಲೆ...ಮೊತ್ತಮೊದಲು ಪರಿಸ್ಥಿತಿಯನ್ನು ಅರಿಯಬೇಕಾದುದು ಮುಖ್ಯ. ಜರ್ಮನ್ ಯುದ್ಧ ವಿಭಾಗದೆದುರು ಬಹು ದೊಡ್ಡ ಸಮಸ್ಯೆಯಿದೆ. ಅಮೇರಿಕ ಜರ್ಮನಿಯ ಮೇಲೆ ಪ್ರಯೋಗಿಸಲು ಮಿತ್ರರಾಷ್ಟ್ರಗಳಿಗೆ ವಿಪುಲ ಪ್ರಮಾಣದಲ್ಲಿ ದಲ್ಲಿ ಶಸ್ತ್ರಾಸ್ತ್ರ ಹಾಗೂ ಇತರ ಯುದ್ಧ ಸಾಮಗ್ರಿಗಳನ್ನು ಕಳುಹುತ್ತಿದೆ. ಪಾರಸ್ಪರಿಕ ಒಪ್ಪಂದಗಳಲ್ಲಿ ಯಾವುದೂ ಅವರ ಈ ಕಾರ್ಯಕ್ರಮದ ರಭಸವನ್ನು ತಗ್ಗಿಸಿಲ್ಲ. ಈಗ ಭೇದನೀತಿಯನ್ನಷ್ಟೇ ಬಳಸಬೇಕಾಗಿದೆ. ಈ ವಿಚಾರದಲ್ಲಿ ನೀನು ಅದರ ಮುಖಂಡತ್ವ ವಹಿಸಿಕೊಳ್ಳಬೇಕು."

"ಎಂತು?"—ಕೇಳಿದ ಕ್ಯಾಪ್ಟನ್. "ನೀನು ಅಮೇರಿಕಕ್ಕೆ ಹೋಗಬೇಕು."

"ಅಮೇರಿಕಕ್ಕೆ?"

"ಹೌದು; ನೀನಲ್ಲಿ ಗೂಢಚಾರನಾಗಿ ಕೆಲಸ ಮಾಡುವಿ ಮತ್ತು ಈ ಕಾರ್ಯಕ್ರಮವನ್ನು ಕೊನೆಗೊಳಿಸಲು ಯತ್ನಿಸುವಿ."

"ಒಪ್ಪಿಗೆ; ನಾನು ದೇಶಕ್ಕಾಗಿ ಪ್ರಾಣ ಕೊಡಲೂ ಸಿದ್ಧ!"— ಎಂದ ಕ್ಯಾಪ್ಟನ್.

*

ಕ್ಯಾಪ್ಟನ್ ಫ್ರಾನ್ಸಿಸ್ ರಿಂಟ್ಲನ್ ಅಮೇರಿಕದತ್ತ ಸಾಗುವ ತಮ್ಮ ಹಡಗಿನಲ್ಲಿ ಕುಳಿತು ಭಾವೀ ಕಾರ್ಯಕ್ರಮದ ರೂಪರೇಷೆ ತಯಾರಿಸುತ್ತಿದ್ದ 'ಏನಾದರೂ ಮಾಡಿ, ಉಚಿತ ಇಲ್ಲವೇ ಅನುಚಿತ ರೀತಿಯಿಂದಲಾದರೂ ಅಮೇರಿಕ ಮಿತ್ರರಾಷ್ಟ್ರಗಳಿಗೆ ಕಳುಹಿಸುವ ಯುದ್ಧಸಾಮಗ್ರಿಗಳು ಯುರೋಪಿಗೆ ತಲುಪದಂತೆ ಮಾಡಬೇಕು'—ಎಂಬ ಪ್ರಧಾನನ ನುಡಿ ಅವನ ಕಿವಿಗಳಲ್ಲಿ ಈಗಲೂ ಮೊಳಗುತ್ತಿತ್ತು.

ಅವನ ಮಿದುಳು ಒಂದೇ ಸಮನೆ ತಿರುಗುತ್ತಿತ್ತು. "ನಾನು ಈ ಪೂರೈಕೆಯನ್ನು ಹೇಗೆ ತಡೆಯಬಲ್ಲೆ? ಯಾವ ಉಪಾಯ ಹುಡುಕಬಲ್ಲೆ?"

ಒಮ್ಮೆಲೇ ಅವನ ಮಿದುಳಿಗೊಂದು ವಿಚಾರ ಹೊಳೆಯಿತು. ಅಮೇರಿಕದ ಕಾರ್ಖಾನೆಗಳು ತಯಾರಿಸುವ ಎಲ್ಲ ಯುದ್ಧ ಸಾಮಗ್ರಿಗಳನ್ನು ಕೊಂಡರೆ ಹೇಗೆ ?—ಎಂದು ಯೋಚಿಸಿದ. ಅವರೆ ಅವನ್ನು ಸುರಕ್ಷಿತವಾಗಿ ಜರ್ಮನಿಗೆ ತಲುಪಿಸಲು ಸಾಧ್ಯವೆ? ಅದು ಅಸಂಭವವೆಂದೇ ಹೇಳಬಹುದು. ಆದರೂ ಪ್ರಯತ್ನಿಸುವುದರಲ್ಲಿ ತಪ್ಪೇನು? ಮಿತ್ರ ರಾಷ್ಟ್ರಗಳ ಕೈಗಂತೂ ಅವು ತಲುಪಲಾರವಷ್ಟೆ!

ಈ ರೀತಿಯ ಊಹಾಪೋಹದಲ್ಲೇ ಮುಳುಗಿ ಏಳುತ್ತ ಕ್ಯಾಪ್ಟನ್ ಫ್ರಾನ್ಸಿಸ್ ತಕ್ಕ ವೇಳೆಗೆ ಅಮೇರಿಕಕ್ಕೆ ತಲುಪಿದ.

*

ಅಮೇರಿಕಕ್ಕೆ ಹೋಗಿ ಎಲ್ಲ ಯುದ್ಧಸಾಮಗ್ರಿಗಳನ್ನೂ ಕೊಂಡುಕೊಂಡ. ಹಡಗುಗಳನ್ನು ಬಾಡಿಗೆಗೆ ಕೊಳ್ಳಲಾಯಿತು. ಅವುಗಳಲ್ಲಿ ಕೆಲಸಕ್ಕಿದ್ದ ಅಮೇರಿಕನ್ನರನ್ನು ತೆಗೆದುಹಾಕಿ ನಿರುದ್ಯೋಗಿ ಜರ್ಮನ್ನರನ್ನು ಸೇರಿಸಿಕೊಳ್ಳಲಾಯಿತು. ಅವರೆಲ್ಲ ಯುದ್ಧಾರಂಭವಾಗುತ್ತಲೇ ಹಡಗುಗಳು ಜಪ್ತಾದುದರಿಂದ ಕೆಲಸ ಕಳೆದುಕೊಂಡವರು.

ಈ ಕೆಲಸದ ಪ್ರಗತಿ ತುಂಬಾ ಮಂದವಾಗಿತ್ತು. ಎಷ್ಟೇ ಎಚ್ಚರ ವಹಿಸಿದ್ದರೂ ಮಿತ್ರ ರಾಷ್ಟ್ರಗಳಿಗೆ ಈ ಮೊದಲೇ ತಯಾರಾಗಿದ್ದ ಶಸ್ತ್ರಾಸ್ತ್ರಗಳ ಪೂರೈಕೆ ಆರಂಭವಾಗಿತ್ತು. ತನ್ನ ಧ್ಯೇಯಸಾಧನೆಗಾಗಿ ಕ್ಯಾಪ್ಟನ್ ಬೇರೊಂದು ಯೋಜನೆ ಹುಡುಕಿದ.

ಕ್ಯಾಪ್ಟನನ ಒಬ್ಬ ಸಹಕಾರಿ ನ್ಯೂಯಾರ್ಕಿನಲ್ಲಿದ್ದ. ಡಾಕ್ಟರ್ ವಾಲ್ಟರ್ ಶೆಲ್ ಎಂಬುದು ಅವನ ಹೆಸರು. ಅಮೇರಿಕ ಸರಕಾರದ ಸಂದೇಹ ದೃಷ್ಟಿಯಿಂದ ಪಾರಾಗಲು ಆತ ಕೆಮಿಸ್ಟ್ ಅಂಗಡಿಯೊಂದನ್ನು ತೆರೆದಿದ್ದ. ಕೆಮಿಸ್ಟ್ ಆದುದರಿಂದ ಎಷ್ಟೋ ಅಪಾಯಕಾರಿ ವಸ್ತುಗಳನ್ನು ಆತ ತನ್ನ ಬಳಿ ಇರಿಸಿಕೊಳ್ಳಬಹುದಿತ್ತು.

ಒಂದು ದಿನ ಕ್ಯಾಪ್ಟನ್ ಫ್ರಾನ್ಸಿಸ್ ಡಾಕ್ಟರ್ ಶೆಲ್‌ನ ಮನೆಯಲ್ಲಿ ಕುಳಿತು ಮಾತನಾಡುತ್ತಿದ್ದ. ಸಾಮಾನ್ಯ ಮಾತುಕತೆಯೇ ಬಾಂಬುಗಳತ್ತ ತಿರುಗಿತು. ಶೆಲ್ ತಕ್ಷಣ ಒಂದು ಸಣ್ಣ ಪೆಟ್ಟಿಗೆ ತಂದು ಕ್ಯಾಪ್ಟನನತ್ತ ಚಾಚುತ್ತ—"ಸಿಗಾರು" ಎಂದ.

"ಇದೆಂತಹ ಸಿಗಾರು?"—ಚಕಿತನಾಗಿ ಕೇಳಿದ ಕ್ಯಾಪ್ಟನ್.

"ಈ ಯುಗದ ಅತಿವಿಚಿತ್ರ ಹಾಗೂ ಭಯಂಕರ ಟೈಮ್‌ಬಾಂಬ್!"

"ಆಂ!"—ಕಣ್ಣರಳಿಸಿ ಉದ್ಗರಿಸಿದ ಕ್ಯಾಪ್ಟನ್.

"ಸಿಗಾರಿನಂತೆ ತೋರುವ ಈ ವಸ್ತುವಿಗೆ ಎರಡು ಭಾಗಗಳಿವೆ. ಮೇಲ್ಭಾಗದಲ್ಲಿ ಪ್ಯಾಕರಿಕ್ ಆ್ಯಸಿಡ್ ಇದೆ. ಕೆಳ ಭಾಗದಲ್ಲಿ ಸಲ್ಫ್ಯೂರಿಕ್ ಆ್ಯಸಿಡ್(ಗಂಧಕಾಮ್ಲ) ಇದೆ. ಎರಡೂ ಆಮ್ಲಗಳ ನಡುವೆ ಹಿತ್ತಾಳೆಯ ಸಣ್ಣದೊಂದು ಬಿಲ್ಲೆಯನ್ನು ಇರಿಸಲಾಗಿದೆ. ಅದರಿಂದಾಗಿಯೇ ಎರಡೂ ಆಮ್ಲಗಳು ಪರಸ್ಪರ ಸೇರುವುದಿಲ್ಲ...."

"ಆದರೆ ಇದರಿಂದೇನು ಲಾಭ?

"ಲಾಭವಿಲ್ಲದೆ ಡಾಕ್ಟರ್ ಶೆಲ್ ಎಂದೂ ಕೆಲಸ ಮಾಡುವುದಿಲ್ಲ. ಒಂದು ನಿಶ್ಚಿತ ಸಮಯದ ಬಳಿಕ–ಅದು ಹಿತ್ತಾಳೆಯ ಬಿಲ್ಲೆಯ ದಪ್ಪವನ್ನವಲಂಬಿಸಿದೆ–ಪ್ಯಾಕರಿಕ್ ಆ್ಯಸಿಡ್ ಹಿತ್ತಾಳೆಯ ಆ ತೆಳು ಬಿಲ್ಲೆಯನ್ನು ಕರಗಿಸಿಬಿಡುವುದು. ಆಗ ಎರಡೂ ಆಮ್ಲಗಳು ಪರಸ್ಪರ ಸೇರಿ ಹೋಗುವವು. ಮರುಕ್ಷಣವೇ ಭಯಂಕರ ವಿಸ್ಫೋಟ ಸಂಭವಿಸಿ ಇಡೀ ಹಡಗೇ ನಷ್ಟವಾಗುವುದು. ಹಡಗಿಗೆ ತುಂಬಿಸ

ಲಾದ ಸಾಮಾನುಗಳೆಲ್ಲವೂ ಉರಿದು ಹೋಗುವವು"—ಅಭಿಮಾನದಿಂದ ಎದೆಯುಬ್ಬಿಸಿ ನುಡಿದ ಡಾಕ್ಟರ್ ಶೆಲ್.

"ನಿಜವೆ!"—ಕುಣಿದಾಡಿದ ಕ್ಯಾಪ್ಟನ್.

"ಡಾಕ್ಟರ್ ಶೆಲ್ ಎಂದೂ ಸುಳ್ಳು ಹೇಳುವುದಿಲ್ಲ ಕ್ಯಾಪ್ಟನ್."

ಆ ಬಾಂಬಿನ ಗುಣದ ಬಗ್ಗೆ ಪೂರ್ತಿ ನಂಬಿಕೆಯೊದಾಗ ಬಹಳಷ್ಟು ಹಣ ನೀಡಿ ಕ್ಯಾಪ್ಟನ್ ಡಾಕ್ಟರನನ್ನು ತಮ್ಮ ಯೋಜನೆಗೆ ಸೇರಿಸಿಕೊಂಡ.

*

ಈ ಬಾಂಬುಗಳನ್ನು ಅಧಿಕ ಪ್ರಮಾಣದಲ್ಲಿ ತಯಾರಿಸುವ ಸಮಸ್ಯೆ ಎದುರಾಯಿತು. ಎಲ್ಲಿ ಇವನ್ನು ನಿರ್ಮಿಸಬೇಕು? ಅಮೇರಿಕದ ಪೋಲೀಸ್ ಪಡೆ ವಿದೇಶಿಯರ ಚಟುವಟಿಕೆಗಳನ್ನು ಜಾಗ್ರತೆಯಿಂದ ನೋಡುತ್ತಿತ್ತು. ಅಮೇರಿಕದ ಅಧಿಕಾರಿಗಳು ಯಾವುದೇ ರಾಷ್ಟ್ರವಿರೋಧಿ ಸಂಚನ್ನು ಬಹಿರಂಗಗೊಳಿಸಲು ಜಾಗೃತರಾಗಿದ್ದರು.

ನ್ಯೂಯಾರ್ಕ್ ಬಂದರಿನಲ್ಲಿ ಆ ವೇಳೆ ಒಂದು ಹಡಗು ಲಂಗರು ಹಾಕಿತ್ತು. ಅದು ಪೂರ್ತಿಯಾಗಿ ನಿರುಪಯೋಗಿಯೆನಿಸಿತ್ತು. ಬಂದರಿನ ಎಲ್ಲ ಅಧಿಕಾರಿಗಳೂ ಕೆಲಸಗಾರರೂ ಅದರತ್ತ ಗಮನ ಕೊಡುತ್ತಿರಲಿಲ್ಲ. ಸ್ಥಾನ ಹುಡುಕುತ್ತಿದ್ದ ಫ್ರಾನ್ಸಿಸ್ ಅದೇ ಸುರಕ್ಷಿತಸ್ಥಾನವೆಂದು ಮನಗಂಡು ಸಿಗಾರ್ ಬಾಂಬುಗಳ ಉತ್ಪಾದನೆಗೆ ಆ ಹಡಗವನ್ನು ಆರಿಸಿಕೊಂಡ.

ತನ್ನ ನಿಜ ಸ್ಥಿತಿಯನ್ನು ಮರೆಮಾಚಲು ಫ್ರಾನ್ಸಿಸ್ ನೂಯಾರ್ಕಿನಲ್ಲಿ ಒಂದು ವ್ಯಾಪಾರವನ್ನು ಆರಂಭಿಸಿದ್ದ. ತಮ್ಮ ಫರ್ಮಿನ ಹೆಸರಿನಲ್ಲಿ ಆತ ಸತುವಿನ ನಳಿಕೆಗಳನ್ನು ಕೊಳ್ಳತೊಡಗಿದ.

ಈ ನಳಿಕೆಗಳನ್ನು ಹಡಗಿಗೆ ತಲುಪಿಸಲಾಗುತ್ತಿತ್ತು. ಇವುಗಳ ನಡುವೆ ಹಿತ್ತಾಳೆಯ ಬಿಲ್ಲೆಗಳನ್ನು ಇರಿಸಲಾಗುತ್ತಿತ್ತು. ಆ ಬಳಿಕ ಇವನ್ನು ಡಾಕ್ಟರ್ ಶೆಲ್‌ನ ಅಂಗಡಿಗೆ ತಲುಪಿಸಲಾಗುತ್ತಿತ್ತು. ಅಲ್ಲೇ ಇವುಗಳಲ್ಲಿ ಪ್ಯಾಕರಿಕ್ ಹಾಗೂ ಸಲ್ಫ್ಯೂರಿಕ್ ಆ್ಯಸಿಡ್ ತುಂಬಿಸಿ ಎರಡೂ ಬದಿಗಳನ್ನು ಮುಚ್ಚಿಬಿಡುತ್ತಿದ್ದರು. ಈ ರೀತಿ ಬಾಂಬ್ ಸಿದ್ಧವಾಗುತ್ತಿತ್ತು.

ಕ್ಯಾಪ್ಟನ್ ಫ್ರಾನ್ಸಿಸ್ ರಿಂಟ್ಲನ್ ನಿಶ್ಚಿತ ವೇಳೆಗೆ ಮಾಸಲು ಬಟ್ಟೆ ತೊಟ್ಟು ಬಂದರಿಗೆ ಹೋಗುತ್ತಿದ್ದ. ಆತ ಕೂಲಿಗಳ ಹಾಗೂ ಹಡಗು ಕಾರ್ಮಿಕರ ನಡುವೆ ತಿರುಗಾಡುತ್ತ ಸಂದರ್ಭ ಸಾಧಿಸಿ ಯುದ್ಧ ಸಾಮಗ್ರಿ ಹೊತ್ತು ಸಾಗುವ ಎಲ್ಲ ಹಡಗುಗಳಲ್ಲೂ ಹೇಗಾದರೂ ಮಾಡಿ ಗುಪ್ತಸ್ಥಾನದಲ್ಲಿ ಈ ಸಿಗಾರನ್ನು ಇರಿಸುತ್ತಿದ್ದ.

ಕೆಲ ದಿನಗಳ ಬಳಿಕ ಅಮೇರಿಕದ ಪತ್ರಿಕೆಗಳು ಭಯಂಕರ ಅಪಘಾತದ ಸುದ್ದಿ ಪ್ರಕಟಿಸಲಾರಂಭಿದವು. ನ್ಯೂಯಾರ್ಕಿನಿಂದ ಹೊರಟ ಹಡಗುಗಳು ಎರಡು ದಿನಗಳ ಬಳಿಕ ಸಮುದ್ರದಲ್ಲೇ ಸ್ಫೋಟಗೊಂಡು ಮುಳುಗಿದ್ದವು.

ಯಾವಾಗಲೂ ಯುದ್ಧಸಾಮಗ್ರಿಗಳನ್ನು ಒಯ್ಯುವ ಹಡಗುಗಳು ಮಾತ್ರ ಇಂಥ ಅಪಘಾತಕ್ಕೆ ಸಿಲುಕುತ್ತಿದ್ದವು. ಕೆಲವು ಹೇಗೆ ಹೇಗೋ ಬಂದರಿಗೆ ತಲುಪಿದರೂ ಯುದ್ಧಸಾಮಗ್ರಿಗಳು ಮಾತ್ರ ಪೂರ್ತಿ ನಾಶಹೊಂದುತ್ತಿದ್ದವು.

ಕ್ಯಾಪ್ಟನ್ ತನ್ನ ಕಾರ್ಯಕ್ರಮವನ್ನು ವಿಸ್ತರಿಸತೊಡಗಿದ. ತಾನು ಸ್ವಿಸ್ ನಿವಾಸಿಯೆಂದೂ ಜರ್ಮನರನ್ನು ಆಂತರಿಕವಾಗಿ ದ್ವೇಷಿಸುವುದಾಗಿಯೂ ಆತ ಹೇಳಿಕೊಂಡ. ಜರ್ಮನಿಯ ಕಡು ವೈರಿಯಾದ ರಶಿಯಕ್ಕೆ ಸಹಾಯ ಮಾಡಬಯಸುವುದಾಗಿ ಘೋಷಿಸಿದ. ಈ ಎಲ್ಲ ಪ್ರಚಾರದ ಪರಿಣಾಮವಾಗಿ ರಶಿಯದ ಸೇನೆಗೆ ಯುದ್ಧಸಾಮಗ್ರಿ ಹಾಗೂ ಸಿಡಿಮದ್ದುಗಳನ್ನು ಸರಬರಾಜು ಮಾಡುವ ಗುತ್ತಿಗೆ ಅವನಿಗೆ ಸಿಕ್ಕಿತು.

ಕ್ಯಾಪ್ಟನ್ ಫ್ರಾನ್ಸಿಸ್ ರಶಿಯಕ್ಕೆ ಕಳುಹಿಸಿದ ಯುದ್ಧಸಾಮಗ್ರಿ ತುಂಬಿದ ೨೧ ಹಡಗುಗಳೂ ರಹಸ್ಯಮಯವಾಗಿ ಸಮುದ್ರ ಮಧ್ಯದಲ್ಲೇ ಅಗ್ನಿಗಾಹುತಿಯಾದವೆಂದು ಕೇಳಿ ಇಡೀ ಪ್ರಪಂಚವೇ ಬೆರಗಾಯಿತು.

*

ಡಾಕ್ಟರ್ ಶೆಲ್ ಈಗ ಕ್ಯಾಪ್ಟನ್ ಫ್ರಾನ್ಸಿಸನ ಅತ್ಯುಪಯುಕ್ತ ಸಹಕಾರಿ. ಈ ಸಂಚಿನ ಎಲ್ಲ ರಹಸ್ಯಗಳೂ ಅವನಿಗೆ ತಿಳಿದಿದ್ದವು. ಇದರಿಂದ ಲಾಭಗಳಿಸಲು ಆತ ಆತುರನಾದ.

ಕ್ಯಾಪ್ಟನ್‌ನಿಗೆ ಬೆದರಿಕೆ ಹಾಕಿ ಅವನಿಂದ ಡಾ. ಶೆಲ್ ಹಣ ವಸೂಲು ಮಾಡುತ್ತಿದ್ದ. ಅವನ ಬೇಡಿಕೆಯನ್ನು ಪೂರೈಸುವುದೇ ಕ್ಯಾಪ್ಟನ್‌ನಿಗೆ ಕಷ

ವಾಗತೊಡಗಿತು.

ಡಾ. ಶೆಲ್‌ನನ್ನು ದಾರಿಗೆ ತರಬೇಕೆಂದು ಕ್ಯಾಪ್ಟನ್ ನಿರ್ಧರಿಸಿದ. ಅದಕ್ಕಾಗಿ ಇಬ್ಬರು ಗೂಂಡಾಗಳನ್ನು ಅವನ ಬಳಿ ಕಳುಹಿಸಿದ. ಅವರಿಗೆ ಹೆದರಿದ ಡಾಕ್ಟರ್ ಶೆಲ್ ಮತ್ತೆ ಮೊದಲಿನಂತೆ ಕ್ಯಾಪ್ಟನ್‌ನಿಗೆ ನೆರವಾಗುವುದಾಗಿ ಭರವಸೆಯಿತ್ತ. ಯೋಜನೆ ಹಾಗೆಯೇ ಮುಂದುವರಿಯಿತು.

ಆದರೆ ಸ್ವಲ್ಪ ಸಮಯದಲ್ಲೇ ಕ್ಯಾಪ್ಟನ್ ಸ್ವತಃ ಪೇಚಿಗೀಡಾಯಿತು. ಆರ್ಕ್‌ರೇಂಜಲ್‌ಗೆ ಹೊರಟ ಒಂದು ಹಡಗಿನಲ್ಲಿ ಕ್ಯಾಪ್ಟನನ ಸಿಗಾರ್ ಬಾಂಬ್ ಇರಿಸಲಾಗಿತ್ತು. ಆದರೆ ಮುಂದೆ ಕಾರ್ಯಕ್ರಮ ಆಕಸ್ಮಿಕ ಬದಲಾವಣೆ ಹೊಂದಿ, ಹಡಗನ್ನು ಮಾರ್ಸೆಲ್ಸ್‌ಗೆ ಕಳುಹಿಸಲಾಯಿತು. ಅಲ್ಲಿಗೆ ತಲುಪಿದಾಗಲೂ ಬಾಂಬ್ ಸಿಡಿಯಲಿಲ್ಲ. ನಿಶ್ಚಿತ ಸಮಯಕ್ಕೆ ಮುನ್ನ ಅದು ಸಿಡಿಯುವಂತೆಯೂ ಇರಲಿಲ್ಲ. ಸಾಮಾನು ಇಳಿಸುವ ವೇಳೆ ಈ ಬಾಂಬ್ ದೊರೆತಾಗ ಹಿಂದಿನ ಎಲ್ಲ ಅಪಘಾತಗಳ ಕಾರಣ ತಿಳಿಯಿತು. ಪರಿಣಾಮವಾಗಿ, ನ್ಯೂಯಾರ್ಕಿನಿಂದ ಹೊರಡುವ ಮುನ್ನ ಎಲ್ಲ ಹಡಗುಗಳನ್ನು ಎಚ್ಚರಿಕೆಯಿಂದ ಪರೀಕ್ಷಿಸತೊಡಗಿದರು.

ಫ್ರಾನ್ಸಿಸ್ ಜಾಗರೂಕನಾದ. ಆತ ಕಾರ್ಯದ ದಿಕ್ಕು ಬದಲಾಯಿಸಿದ. ಹೊಸ ಯೋಜನೆಯ ಪ್ರಕಾರ ಆತ ಮೆಕ್ಸಿಕೋ ಹಾಗೂ ಐರ್‌ಲಂಡಿನ ಕ್ರಾಂತಿಕಾರಿಗಳನ್ನು ಸೇರಿಸಿಕೊಂಡು ಯುದ್ಧ ಸಾಮಗ್ರಿ ಉತ್ಪಾದಿಸುವ ಕಾರ್ಖಾನೆಗಳಲ್ಲೇ ಗೊಂದಲ ಉಂಟಾಗುವಂತೆ ಮಾಡಿದ.

ಫ್ರಾನ್ಸಿಸ್ ರಿಂಟ್ಲನ್ ಅಮೇರಿಕ್ಕೆ ಬಂದು ಇನ್ನೂ ೩–೪ ತಿಂಗಳು ಕಳೆದಿತ್ತಷ್ಟೇ. ಆಗಲೇ ಜರ್ಮನ್ ರಾಯಭಾರಿ ಕಚೇರಿಯ ನೌಕಾಪಡೆಯ ಅಧಿಕಾರಿ ಅವನನ್ನು ತನ್ನಲ್ಲಿಗೆ ಕರೆಯಿಸಿದ. ಫೋನಿನಿಂದ ಸೂಚನೆ ಪಡೆದು ಕ್ಯಾಪ್ಟನ್ ಅವನನ್ನು ಕಾಣಲು ಅಲ್ಲಿಗೆ ಹೋದಾಗ ಜರ್ಮನ್ ಸರಕಾರದ ಅಪ್ಪಣೆಯ ಮೇರೆಗೆ ಆತ ಬಹುಬೇಗನೆ ಬರ್ಲಿನ್ನಿಗೆ ತಲುಪಬೇಕೆಂದು ತಿಳಿಸಲಾಗಿತ್ತು. ಕಾರಣ ಕೇಳಿದಾಗ “[illegible]”—ಎಂದನಾತ.

ನೋರ್ಡಾಮ್ ಹಡಗನ್ನೇರಿ ಕ್ಯಾಪ್ಟನ್ ಸ್ವದೇ



ಪದತ್ತ ಸಾಗಿದ. ಅವನ ಬಳಿ ರೀಮೀ ಗಾಚೇ ಎಂಬ ಸ್ವಿಸ್ ನಾಗರಿಕನ ಖೊಟ್ಟಿ ಪಾಸ್‌ಪೋರ್ಟ್ ಇತ್ತು. ನ್ಯೂಯಾರ್ಕಿನಲ್ಲಿನ ಬ್ರಿಟಿಶ್ ಕಾನ್ಸಲ್ ಜನರಲ್ ಮುದ್ರೆಯೂ ಅದಕ್ಕಿತ್ತು. ದಾರಿಯಲ್ಲಿ ಅವನಿಗೇನೂ ತೊಂದರೆಯೆನಿಸಲಿಲ್ಲ.

ಆದರೆ ಡೋಡಾ ಕೊಲ್ಲಿಗೆ ತಲುಪುತ್ತಲೇ ಅವನನ್ನು ತಡೆಯಲಾಯಿತು. ಸ್ನಾನ ಮಾಡುತ್ತಿದ್ದಾಗ ಹಡಗಿನ ಸ್ಟ್ವರ್ಡ್ ಕೆಲ ಅಧಿಕಾರಿಗಳೊಂದಿಗೆ ಅವನಲ್ಲಿಗೆ ಬಂದ. ಸ್ನಾನದುಡುಗೆಯಲ್ಲೇ ಅವನು ಕ್ಯಾಬಿನ್‌ನಿಂದ ಹೊರಬಿದ್ದ. ಹೊರಗೆ ಇಬ್ಬರು ಅಧಿಕಾರಿಗಳೂ ೧೦ ಜನ ನಾವಿಕರೂ ಅವನನ್ನು ಬಂಧಿಸಲು ಸಿದ್ಧರಾಗಿದ್ದರು.

ಕ್ಯಾಪ್ಟನ್ ಫ್ರಾನ್ಸಿಸ್ ಯುದ್ಧಬಂದಿಯ ರೂಪದಲ್ಲಿ ಸ್ವತಃ ಆತ್ಮಸಮರ್ಪಣೆಮಾಡಿಕೊಂಡ. ಅವನನ್ನು ಗೃಹಬಂಧನಕ್ಕೊಳಪಡಿಸಲಾಯಿತು.

ಯುದ್ಧ ಮುಗಿಯುವವರೆಗೆ ಬಂದಿಯಾಗಿದ್ದು ಆತ ಬಿಡುಗಡೆ ಹೊಂದುತ್ತಿದ್ದನೋ ಏನೋ. ಆದರೆ ಅಮೇರಿಕದಲ್ಲಿ ಅವನ ಸಹಕಾರಿಯೊಬ್ಬ ಸಿಕ್ಕಿಬಿದ್ದುದರಿಂದ ಎಲ್ಲ ಗುಟ್ಟೂ ರಟ್ಟಾಯಿತು. ಅವನ ಇತರ ಸಹಕಾರಿಗಳೂ ಸೆರೆಸಿಕ್ಕರು. ಡಾ. ಶೀಲ್ ಮೊದಲೇ ಸುಳಿವು ಪಡೆದು ಮೆಕ್ಸಿಕೋಕ್ಕೆ ಓಡಿಹೋಗಿದ್ದ.

ಕ್ಯಾಪ್ಟನ್ ಫ್ರಾನ್ಸಿಸ್‌ನನ್ನು ಮರಳಿ ಅಮೇರಿಕ್ಕೆ ಕರೆತರಲಾಯಿತು. ಅವನ ಸಂಗಾತಿಗಳೆಲ್ಲ ಅವನನ್ನು ತೊರೆದು ಹೊರಟು ಹೋದರು. ಜರ್ಮನ್ ಸರಕಾರವೂ ಅವನಿಗೆ ನೆರವು ನೀಡಲಿಲ್ಲ. ನ್ಯಾಯಾಲಯು ಅವನಿಗೆ ೪ ವರ್ಷಗಳ ಕಾರಾವಾಸವಿಧಿಸಿತು.

ಬಿಡುಗಡೆಯಾದ ಬಳಿಕ ಕ್ಯಾಪ್ಟನ್ ಜರ್ಮನ್ ನಾಗರಿಕತೆ ತ್ಯಜಿಸಿ ಇಂಗ್ಲಂಡಿನಲ್ಲಿ ವಾಸಿಸಲು ನಿರ್ಧರಿಸಿದ. ಆತ ಶಾಂತಿಪ್ರಿಯ ಬ್ರಿಟಿಶ್ ನಾಗರಿಕನೆನಿಸಿದ.

ಕ್ಯಾಪ್ಟನ್‌ನನ್ನು ಹಡಗಿನಲ್ಲಿ ಬಂಧಿಸಿ ಸ್ಕಾಟ್‌ಲಂಡ್ ಯಾರ್ಡ್‌ಗೆ ತಂದಿದ್ದ ಎಡ್ಮಿರಲ್ ರೀಜನಲ್ಡ್ ಹಾಲ್ ಅವನನ್ನು ತನ್ನ ರಾಷ್ಟ್ರದ ಅತಿ ಭಯಂಕರ ವೈರಿಯೆಂದು ಭಾವಿಸಿದ್ದ. ಅವನೇ ಕ್ಯಾಪ್ಟನ್ ಇಂಗ್ಲಂಡಿನಲ್ಲಿ ವಾಸಿಸುತ್ತಿದ್ದಾಗ ಅವನ ಅತಿ ಘನಿಷ್ಠ ಮಿತ್ರನಾದ. ೧೯೩೪ರಲ್ಲಿ ಎಡ್ಮಿರಲ್‌ನ ಮಗಳ ಮದುವೆಯ ವೇಳೆ ಕ್ಯಾಪ್ಟನ್ ಸನ್ಮಾನ ಅತಿಥಿಯಾಗಿ ಭಾಗವಹಿಸಿದ್ದ. ಫ್ರಾನ್ಸಿಸ್ನನ ಮಗಳು ಆಕೆಯ ಗೆಳತಿಯಾಗಿದ್ದಳು.

ಕ್ಯಾಪ್ಟನ್ ಫ್ರಾನ್ಸಿಸ್ ಲಂಡನ್ನಿನ ಒಂದು ಭೂಗತ ರೇಲ್ವೇ ನಿಲ್ದಾಣದಲ್ಲಿ ೧೯೪೯ರಲ್ಲಿ ಮೃತನಾದ.

ವಿಶ್ವಯುದ್ಧದ ಮೇಲೆ ಈ ಸಿಗಾರ್ ಬಾಂಬುಗಳು ವಿಶೇಷ ಪ್ರಭಾವ ಬೀರದೆ ಹೋದರೂ ಫ್ರಾನ್ಸಿಸ್‌ನ ಯೋಜನೆ ಮಾತ್ರ ತುಂಬ ಪ್ರಭಾವಶಾಲಿಯಾಗಿತ್ತು. ಅವನ ಕರ್ತೃತ್ವಶಕ್ತಿಯೂ ಅಸಾಧಾರಣವಾಗಿತ್ತು !

(ಹಿಂದಿಯಿಂದ)

ವೃಕ್ಷ ವಿಚಿತ್ರ

ಜಗತ್ತಿನಲ್ಲಿಯೇ ಅತ್ಯಂತ ದೊಡ್ಡದಾದ ಮಾವಿನಗಿಡವು ಪೂರ್ವ ಪಂಜಾಬದಲ್ಲಿದೆ. ಗಿಡವು ೨೪ ಫೂಟು ಪಸರಿಸಿದ್ದು ಹಂಗಾಮಿನಲ್ಲಿ ಅದರಿಂದ ಪ್ರತಿದಿನ ೪೦೦ ಮಣ ಮಾವಿನ ಕಾಯಿಗಳು ದೊರೆಯುತ್ತವೆ.

ಮಲೇಶಿಯದ 'ರಿಪಲೇಶಿಯಾ - ಅರ್ನಾಲಡಿ' ಎಂಬ ಹೆಸರಿನ ದೈತ್ಯಾಕಾರ ವೃಕ್ಷದ ವ್ಯಾಸ ೩೫ ಇಂಚುಗಳಷ್ಟಿದ್ದು ಅದು ವರ್ಷಕ್ಕೊಂದು ಸಲ ಮಾತ್ರ ಹೂಗಳನ್ನು ಬಿಡುತ್ತದೆ.

ಜಪಾನದ 'ಅನಾ' ಎಂಬ ಊರಿನಲ್ಲಿ ಒಂದು ಗಿಡವಿದೆ. ಸೂರ್ಯಾಸ್ತವಾಗುತ್ತಲೇ ಅದರೊಳಗಿನಿಂದ ಹೊಗೆಯು ನೋಡಗಳೇಳುತ್ತವೆ. -ಪ್ರಕಾಶ ವರಗುಂದೆ

ಕೃ. ನಾರಾಯಣರಾವ್



ನೀಲಗಿರಿ ಹಾನಿಕರವೇ ?

ನೀಲಗಿರಿ ಗಿಡಗಳು ಮೂಲತಃ ಭಾರತದ ಸ್ವಾಭಾವಿಕ ವೃಕ್ಷಗಳ ಪಂಕ್ತಿಯಲ್ಲಿ ಇಲ್ಲ. ಅದು ಆಸ್ಟ್ರೇಲಿಯಾಕ್ಕೆ ಸೇರಿದ ಸಸ್ಯವರ್ಗ. ಸುಮಾರು ನೂರೈವತ್ತಾರು ವರ್ಷಗಳ ಹಿಂದೆ ಭಾರತಕ್ಕೆ ತರಲಾಯಿತೆನ್ನಬಹುದು.

ಈ ಗಿಡಗಳನ್ನು ಹೆಚ್ಚಾಗಿ ಸೌದೆಗೆಂದೇ ಬೆಳೆಸಲಾಗುತ್ತಿದೆ. ಇದಕ್ಕೆ ಕಾರಣ, ಬುಡವನ್ನು ಕತ್ತರಿಸಿದಂತೆಲ್ಲಾ ಮತ್ತೆ ಮತ್ತೆ ಚಿಗುರಿ ಕೆಲವೇ ವರ್ಷಗಳಲ್ಲಿ ದೊಡ್ಡ ಗಿಡವಾಗುವ ಇದರ ಪ್ರವೃತ್ತಿ. ಆದ್ದರಿಂದಲೇ ಮನೆಯ ಹಿತ್ತಲಿನಲ್ಲಿ, ಹೊಲ-ಗದ್ದೆಗಳ ಬದಿಗಳಲ್ಲಿ ಇದನ್ನು ಸಾಮಾನ್ಯವಾಗಿ ಬೆಳೆಯುತ್ತಾರೆ.

ಇವುಗಳನ್ನು ಬೆಳೆವುಸುದಕ್ಕಾಗಿ ಸಾಕಷ್ಟು ಜಾಗವನ್ನು ಭಾರತದಲ್ಲಿ ಬಳಸಲಾಗುತ್ತಿದೆ. ಹಿಮವತ್ ಪರ್ವತ ಪ್ರದೇಶ. ಹಿಮಾಚಲ ಪ್ರದೇಶ. ವುತ್ತರ ಪ್ರದೇಶ, ಉದಕಮಂಡಲ ಮುಂತಾದೆಡೆಗಳಲ್ಲಿ ಈ ಗಿಡಗಳ ಬೆಳವಣಿಗೆ ವಿಪರೀತ. ಸಾವಿರಾರು ಹೆಕ್ಟೇರುಗಳಷ್ಟು ಜಾಗದಲ್ಲಿ ಈ ಗಿಡಗಳ ಬೆಳ- ವಣಿಗೆ ಇಂದಿಗೂ ಕಂಡುಬರುತ್ತಿದೆ.

ಇತ್ತೀಚಿನ ಸಂಶೋಧನೆಗಳು ಈ ಗಿಡಗಳು ವಿಷ್ಟೊಂದು ಹಾನಿಕರ ಎಂಬುದನ್ನು ವಿವರಿಸುತ್ತಿವೆ.

ಅತಿವೃಷ್ಟಿ ಪ್ರದೇಶಗಳಲ್ಲೂ ಈಗ ಮಳೆ ಕಡಿಮೆಯಾಗುತ್ತಿರುವುದು ಕಂಡುಬರುತ್ತಿದೆ. ಕರ್ನಾಟಕದ ಅತಿವೃಷ್ಟಿ ಪ್ರದೇಶಗಳಲ್ಲಿ ಕೂಡ ಈಗ ಮಳೆಯ ಪ್ರಮಾಣ ಕಡಿಮೆ- ಯಾಗಿದೆ. ಇದಕ್ಕೆ ಅಲ್ಲಿದ್ದ ಸುಂದರವಾದ ಮರಗಳನ್ನು ಕತ್ತರಿಸಿ, ಆ ಜಾಗದಲ್ಲಿ ನೀಲಗಿರಿ ಗಿಡಗಳನ್ನು ಬೆಳೆಸಿರುವುದೇ ಕಾರಣವೆಂದು ಸಸ್ಯಶಾಸ್ತ್ರಜ್ಞರ ಅಭಿಪ್ರಾಯ.

ನೈನಿತಾಲ್ ಬಳಿಯ ತಪ್ಪಲು ಪ್ರದೇಶಗಳಲ್ಲಿ ಈಗೀಗ ಹ್ಯಾಂಡ್ ಪಂಪುಗಳಿಂದಲೂ ನೀರೆತ್ತುವುದು ಕಷ್ಟವಾಗಿದೆ. ಏಕೆಂದರೆ ನೀಲಗಿರಿ ಗಿಡಗಳನ್ನು ಅತಿ ಹೆಚ್ಚಾಗಿ ಬೆಳೆಸುತ್ತಿರುವುದರಿಂದ ಅಲ್ಲಿ ತೇವಾಂಶವು ಭೂಮಿಯಲ್ಲಿ ತೀರ ಕಡಿಮೆಯಾ ಗುತ್ತಿದೆ. ಸಾಕಷ್ಟು ಕೃಷಿ ವಿಶ್ವವಿದ್ಯಾಲಯಗಳೂ ನೀಲಗಿರಿಯ ಗಿಡಗಳು ಹೆಚ್ಚು ನೀರನ್ನು ಹೀರಿ- ಕೊಳ್ಳುವುದರಿಂದ ಭೂಮಿಯ ತೇವಾಂಶವು ಕಡಿಮೆಯಾಗಿ ಭೂಮಿಯು ಅತಿ ಬೇಗ ಒಣಗಿ ಹೋಗುವುದೆಂದೂ ಆ ಪ್ರದೇಶದಲ್ಲಿ ಯಾವ ಹುಲ್ಲು-ಗಿಡಗಳನ್ನೂ ಬೆಳೆಯಲು ಸಾಧ್ಯವಿಲ್ಲವೆಂದೂ ತಿಳಿಸುತ್ತಿವೆ.

ನೀಲಗಿರಿ ಗಿಡಗಳು ಬೆಳೆಯಲು ಭೂಮಿಯಲ್ಲಿ ನೀರಿನ ಅಂಶ ಹೆಚ್ಚಿರಬೇಕು. ನೀರು ಹೆಚ್ಚಾಗಿರುವೆಡೆಯ ಭಾಗವನ್ನು ಜಲರಹಿತವನ್ನಾಗಿ ಮಾಡುವ ಉದ್ದೇಶದಿಂದಲೇ ಈ ಗಿಡಗಳನ್ನು ಬೆಳೆಸುತ್ತಿದ್ದಾರೆ.

ಗಾಂಧೀಜಿಯವರ ಶಿಷ್ಯರಾಗಿದ್ದ ಕುಮಾರಿ ಮಾರ್ಜರಿಕ್ ಸಾಯಿಕ್ಸ್ ಎಂಬವರು "ಪ್ರಪಂಚದಲ್ಲಿ ಅತಿ ಹೆಚ್ಚು ನೀರನ್ನು ಹೀರುವ ಈ ಗಿಡಗಳನ್ನು ಆಸ್ಟ್ರೇಲಿಯಾದಲ್ಲಿ ಈಗ ಜಲಾಭಾವದ ಕಾರಣ ಕಡಿದು ಹಾಕಲಾಗುತ್ತಿದೆ"ಯೆಂದು ಹೇಳಿದ್ದಾರೆ. ಈ ಮರವು ದಿನವಹಿ ಸುಮಾರು ೬೦–೭೫ ಗ್ಯಾಲನ್‌ಗಳನ್ನು ನೀರು ಹೀರುವುದು. ಇದರಿಂದ ಕೇವಲ ಜಲಾಭಾವವಷ್ಟೇ ಅಲ್ಲ, ಈ ಗಿಡಗ- ಳಿರುವ ಭೂಮಿ ಕೂಡ ಬೇಗ ಸತ್ವಹೀನವಾಗುತ್ತಿರುವುದು ಕಂಡುಬರುತ್ತಿದೆ. ನೈನಿತಾಲ್, ಡಾರ್ಜಿಲಿಂಗ್‌ಗಳಂತಹ ಆರೋಗ್ಯಧಾಮಗಳಲ್ಲಿ ಈ ಗಿಡಗಳು ಹೆಚ್ಚಾದುದರಿಂದ ತಂಪಾದ ಹವಾಮಾನ ಈಗ ತಾಪದಾಯಕವೆನಿಸುತ್ತಿದೆ.

'ಫಾರೆಸ್ಟ್–ಫಾರ್ಮಿಂಗ್' ಎಂಬ ತಮ್ಮ ಗ್ರಂಥದಲ್ಲಿ ಡಗಲಸ್ ಮತ್ತು ಹಾರ್ಟ್ ಎಂಬುವವರು ಗ್ಯಾಲನ್ನುಗಟ್ಟಲೆ ನೀರನ್ನು ಹೀರುವ ನೀಲಗಿರಿ ಗಿಡಗಳ ಬಗ್ಗೆ ವಿವರಿಸಿದ್ದಾರೆ.

ಭೂಮಿಯು ಬರಡಾಗುವುದರ ಜೊತೆಗೆ ಪ್ರಾಣಿ ಪಕ್ಷಿಗಳ ಸಂಪತ್ತು ಈ ಮರಗಳ ಬೆಳವಣಿಗೆಯಿಂದ ಕಡಿಮೆಯಾಗುತ್ತಿದೆಯೆಂದು ನುರಿತ ವಿಜ್ಞಾನಿಗಳು ಅಭಿಪ್ರಾಯಪಡುತ್ತಾರೆ. ವಿಶ್ವವಿಖ್ಯಾತ ಸಸ್ಯ ವಿಜ್ಞಾನಿ ಡಾ. ರಿಚರ್ಡ್‌ಸೆಂಟ್ ಬಾರ್ಬೆಂಕರ್ ಎಂಬುವವರು ಈ ಮರದ ಎಲೆಗಳು ಅಗಲವಾಗಿದ್ದರೂ ಹಗುರವಾಗಿರುವುದರಿಂದ ಗೂಡುಗಳನ್ನು ಕಟ್ಟಿಕೊಳ್ಳಲು ಸಹ ಪಕ್ಷಿಗಳಿಗೆ ಅನುಕೂಲವಾಗಿಲ್ಲವೆಂದು ಹಿಮಾಲಯ ಪ್ರದೇಶದಲ್ಲಿಯೇ ಎಷ್ಟೋ ಉದ್ದನೆಯ ಹಾಗೂ ಇಂತಹ ಅಗಲವಾದ ಎಲೆಗಳುಳ್ಳ ಗಿಡಗಳು ಇದ್ದರೂ ನೀಲಗಿರಿಯಂತಹ ಗಿಡಗಳನ್ನು ಏಕೆ ಬೆಳೆಸುತ್ತಿದ್ದಾರೆಂಬುದೇ ತಮಗೆ ಸೋಜಿಗದ ಸಂಗತಿ ಎನಿಸಿದೆಯೆಂದು ಹೇಳಿದ್ದಾರೆ. ಕೆಸರು ಹಾಗೂ ಜೌಗು ಪ್ರದೇಶದಲ್ಲಿ ಬೆಳೆಯುವಂತಹ ಈ ಮರಗಳನ್ನು ಭಾರತದಲ್ಲಿ ಬೆಳೆಸುವುದು ಅರ್ಥಹೀನವೆಂಬುದು ಅವರ ಅಂಬೋಣ. ✡

ನನ್ನ ಭಾಗ್ಯವೆಲ್ಲಿ?

ಡಾ. ಕೆ. ಶ್ರೀಕಂಠಯ್ಯ

ಸ್ವಾತಿ ತಿರುನಾಳ್ ಮಹಾರಾಜರು ಅಂದು ಯಾವುದೋ ಗಹನ ವಿಚಾರದಲ್ಲಿ ಮಗ್ನರಾಗಿದ್ದಾಗ, ಆಸ್ಥಾನ ವಿದ್ವಾನ್ ವಡಿವೇಲು ಪ್ರವೇಶಿಸಿ ಮಹಾರಾಜರಿಗೆ ಪ್ರಣಾಮವನ್ನು ಅರ್ಪಿಸಿದರು. ಮಹಾರಾಜರು ವಡಿವೇಲುವನ್ನು ಕಾಣುತ್ತಲೇ "ಬನ್ನಿ ವಡಿವೇಲು ಮಹಾಶಯರೇ! ನಿಮ್ಮನ್ನೇ ಕುರಿತು ಯೋಚಿಸುತ್ತಿದ್ದೆ! ಅಷ್ಟು ಹೊತ್ತಿಗೆ ನೀವೇ ಬಂದಿರಿ. ಬನ್ನಿ. ಕುಳಿತುಕೊಳ್ಳಿ! ಅಂ... ನಾನು ಹೇಳಿದ ವಿಚಾರವನ್ನು ಏನಾದರೂ ಯೋಚನೆ ಮಾಡಿದಿರಾ?"

"ಸದಾ ಅದೇ ವಿಚಾರವನ್ನೆ ಯೋಚನೆ ಮಾಡುತ್ತಿದ್ದೇನೆ ಪ್ರಭು, ಆದರೆ ಏಕೋ ಇನ್ನೂ ಕಾಲ ಕೂಡಿ ಬಂದಿಲ್ಲವೆಂದು ತೋರುತ್ತದೆ. ಎರಡು ಮೂರು ಬಾರಿ ತಿರುವಯ್ಯೂರಿಗೆ ಹೋಗಿ ಬಂದೆ. ಆ ಕುಪ್ಪಯ್ಯನೂ ಈಚೆಗೆ ಸಿಕ್ಕಿಲ್ಲ!"

"ಯಾವ ಕುಪ್ಪಯ್ಯ?"

"ಅದೇ ವೀಣೆ ಕುಪ್ಪಯ್ಯ!"

"ಹಾಂ...ನೀವು ಹೇಳುತ್ತಿರುವುದು ನಾರಾಯಣ ಗೌಳದ ಕುಪ್ಪಯ್ಯನನ್ನೆ?"

"ಹೌದು ಪ್ರಭು, ನೀವು ಅವನ ಅನ್ವರ್ಥನಾಮವನ್ನು ನೆನಪಿಸಿ ನನಗೆ ಮಹದುಪಕಾರ ಮಾಡಿದಿರಿ."

"ಏಕೆ ಹಾಗೆ ಹೇಳುತ್ತೀರಿ?"

"ಹೌದು, ಕುಪ್ಪಯ್ಯ ನಾರಾಯಣಗೌಳ ರಾಣದಲ್ಲಿ ಸಾಧನೆ ಮಾಡಿ, ಪ್ರೀತಿ ಪಡೆದು ಗುರುಗಳ ಅನುಗ್ರಹಕ್ಕೆ ಪಾತ್ರವಾದದ್ದು ನಿಜಕ್ಕೂ ಒಂದು ರೋಮಾಂಚಕಾರಿ ಪ್ರಸಂಗ. ಪ್ರಭುಗಳೇ, ನನಗಂತು ಅವರ ನೆನಪು ಒಂದು ಪುಣ್ಯ ಸ್ಮರಣೆಯೆ!"

"ಹಾಗೆಯೋ! ವಡಿವೇಲರೆ? ನಿಮ್ಮ ಪುಣ್ಯ ಸ್ಮರಣೆಯನ್ನು ನಮ್ಮೊಂದಿಗೆ ಏಕೆ ಹಂಚಿಕೊಳ್ಳಬಾರದು!"

"ಅಗತ್ಯವಾಗಿ ಆಗಬಹುದು. ಶಿಷ್ಯನ ಸಾಧನೆಯನ್ನು ಕಂಡು ಮನಸಾರೆ ಮೆಚ್ಚಿ, ತುಂಬು ಹೃದಯದಿಂದ ಗುರುಗಳ ಹರಕೆ ಆಶೀರ್ವಾದಗಳನ್ನು ಪಡೆದ ಪುಣ್ಯ ಎಷ್ಟು ಜನ ಶಿಷ್ಯರಿಗೆ ದೊರಕೀತು ಮಹಾಭಾಗರೆ? ಆ ಪುಣ್ಯ ಪಡೆಯಲು ಶಿಷ್ಯ ಅದೆಷ್ಟು ಸಾಧನೆ ಮಾಡಿರಬೇಕು ಹೇಳಿ? ನನ್ನಂಥವನಿಗೆ ಆ ಪುಣ್ಯ ದೊರ

ಸುಪ್ರಸಿದ್ಧ ಕೀರ್ತನಕಾರರೂ, ತಿರುವಾಂಕೂರಿನ ದೊರೆಗಳೂ ಆಗಿದ್ದ ಸ್ವಾತಿ ತಿರುನಾಳ್ ಮಹಾರಾಜರು ತ್ಯಾಗರಾಜರನ್ನು ತಮ್ಮ ಆಸ್ಥಾನಕ್ಕೆ ಬರಮಾಡಿಕೊಳ್ಳಲು ಬಯಸಿ ಆಸ್ಥಾನ ವಿದ್ವಾಂಸರೊಬ್ಬರಿಗೆ ದೌತ್ಯವನ್ನು ವಹಿಸಿದರು. ತ್ಯಾಗರಾಜರು ಜೀವನ್ಮುಕ್ತರಾಗುವುದಕ್ಕೆ ಹನ್ನೆರಡು ವರ್ಷಗಳ ಹಿಂದೆ ನಡೆದ ಘಟನೆಯೊಂದರಿಂದ ರೂಪುಗೊಂಡ ಕಥೆ ಇದು.



ಕೀತೆ? ಕೇವಲ ಪರಿತಪಿಸುವುದರಿಂದ ಕರುಬುವುದರಿಂದ ಅದನ್ನು ಪಡೆಯಲು ಸಾಧ್ಯವೇ?"

"ಹಾಗೇಕೆ ಆತ್ಮವಂಚನೆ ಮಾಡಿಕೊಳ್ಳುತ್ತೀರಿ ವಡಿವೇಲರೆ? ನಿಮ್ಮ ಸಾಧನೆಯೇನು ಕಡಿಮೆಯೆ? ನೀವು ಘನ ವಿದ್ವಾಂಸರಿದ್ದೀರಿ. ಪಿಟೀಲು ನುಡಿಸುವುದರಲ್ಲಿ ನಿಷ್ಣಾತರು. ನಿಮ್ಮ ವಿದ್ವತ್ತನ್ನು ಗಮನಿಸಿಯೇ ಅಲ್ಲವೆ ಸಂಸ್ಥಾನ ವಿದ್ವಾಂಸರೆಂದು ನಿಮ್ಮನ್ನು ಗೌರವಿಸಿದ್ದು. ಮೊನ್ನೆ ನವರಾತ್ರಿ ಸಂದರ್ಭದಲ್ಲಿ ನಡೆದ ವಿದ್ವತ್ ಗೋಷ್ಠಿಯಲ್ಲಿ ಪಿಟೀಲುವಾದನದಲ್ಲಿ ನಿಮ್ಮ ಪ್ರಭುತ್ವವನ್ನು ಗಮನಿಸಿಯೇ ಅಲ್ಲವೇ ನಿಮಗೆ ದಂತದ ಪಿಟೀಲನ್ನು ಪಾರಿತೋಷಕವಾಗಿ ನೀಡಿ ಗೌರವಿಸಿದ್ದು! ರಾಜಾಸ್ಥಾನದಿಂದ ಬಂದ ಇವುಗಳೆಲ್ಲ ಏನು ಸಾಮಾನ್ಯ ಗೌರವಗಳೇ ವಡೀವೇಲರೆ? ಇವು ನಿಜಕ್ಕೂ ನಿಮ್ಮ ಘನತೆ, ಗೌರವ, ವಿದ್ವತ್ತು, ಪ್ರತಿಷ್ಠೆಗಳನ್ನು ಹೆಚ್ಚಿಸುವುದಿಲ್ಲವೆ? ಸ್ವಲ್ಪ ಯೋಚಿಸಿ ನೋಡಿ!"

ಸ್ವಾತಿತಿರುನಾಳರ ಮಾತುಗಳನ್ನು ಕೇಳಿ ವಡಿವೇಲು ಸ್ವಲ್ಪವೂ ವಿಚಲಿತರಾಗಲಿಲ್ಲ, ಕೊಂಚ ನಿಧಾನಿಸುತ್ತಲೇ ಗಂಭೀರ ಧ್ವನಿಯಲ್ಲಿ ಹೇಳಿದರು: "ನಿಜ! ಪ್ರಭುಗಳು ವ್ಯಾವಹಾರಿಕ ದೃಷ್ಟಿಯಿಂದ ನೋಡಿದರೆ ನಾನು ನಿಜಕ್ಕೂ ಆಸ್ಥಾನ ವಿದ್ವಾಂಸ! ಬಿರುದು ಬಾವಲಿಗಳನ್ನು ಗಳಿಸಿರುವ ವ್ಯಕ್ತಿ. ಆದರೆ ಈ ಗೌರವಗಳ ಮೌಲ್ಯವೇ ಬೇರೆ! ಸಂಗೀತ ಸಾಮ್ರಾಜ್ಯದಲ್ಲಿ ಸಿದ್ಧಿಯ ಗದ್ದುಗೆಯನ್ನೇರಿ ವಿರಾಜಿಸಿ, ನಾದಬ್ರಹ್ಮರೆಂದು ವಿಜೃಂಭಿಸುತ್ತಿರುವ ಗುರುಗಳಿಂದ ಪಡೆದ ಮೆಚ್ಚುಗೆಯೇ ಬೇರೆ! ಅಲ್ಲಿ ದೊರೆಯುವ ರಸಾನಂದ, ಬ್ರಹ್ಮಾನಂದ ಇದರಲ್ಲಿ ದೊರೆತೀತೆ? ಪ್ರಭುಗಳು ಕ್ಷಮಿಸಬೇಕು, ಈ ಎರಡು ಉದ್ಧಟ ನುಡಿಗಳಿಗಾಗಿ" ತೊದಲುತ್ತ ನುಡಿದರು ವಡಿವೇಲು.

"ಚಿಂತೆ ಇಲ್ಲ ವಡಿವೇಲರೆ! ಅದು ನಿಮ್ಮ ಅಭಿಪ್ರಾಯದ ಮಾತೆಂದು ನಾವು ಭಾವಿಸುತ್ತೇವೆ. ಅದಿರಲಿ. ಕುಪ್ಪಯ್ಯನ ನಾರಾಯಣ ಗೌಳ ರಾಗದ ವಿಷಯದಲ್ಲಿ ಅದೇನೋ ಹೇಳಬೇಕೆಂದಿದ್ದಿರಲ್ಲಾ..." ಮರೆತದ್ದನ್ನು ನೆನಪಿಸುವಂತೆ ಕೇಳಿದರು. "ಹಾಂ... ಹೌದು... ಮರೆತಿದ್ದೆ. ವೀಣೆ ಕುಪ್ಪಯ್ಯ ಒಳ್ಳೆ ವೈಣಿಕ, ವಿದ್ವಾಂಸ, ನಾರಾಯಣ ಗೌಳ ರಾಗದ ಮೇಲೆ ಸಾಧನೆ ಮಾಡಿ ಅದರ ಮೇಲೆ ಅವನು ಗಳಿಸಿದ ಪ್ರಭುತ್ವ ಅವಿಸ್ಮರಣೀಯ! ಕುಪ್ಪಯ್ಯನ ಈ ಅದ್ಭುತ ರಾಗ ವಿನ್ಯಾಸವನ್ನು ಕಂಡು ಜನ ಅವನನ್ನು 'ನಾರಾಯಣ ಗೌಳದ ಕುಪ್ಪಯ್ಯ' ಎಂದೇ ಕರೆಯಲು ಪ್ರಾರಂಭಿಸಿದರು."

"ಕುಪ್ಪಯ್ಯನ ವಂಶೀಕರಲ್ಲಿ ಯಾರಾದರೂ ಸಂಗೀತಗಾರರಾಗಿದ್ದರೆ?" ಮಧ್ಯೆ ತಡೆದು ಕೇಳಿದರು ಸ್ವಾತಿ ತಿರುನಾಳ್ ಮಹಾರಾಜರು.

"ಹೌದು, ಕುಪ್ಪಯ್ಯನ ತಂದೆ ಸಾಂಬಮೂರ್ತಿ ಶಾಸ್ತ್ರಿಗಳು ಘನ ಸಂಗೀತ ವಿದ್ವಾಂಸರು. ವೈಣಿಕರು ಕೂಡ. 'ಸಾಂಬಮೂರ್ತಿ ಶಾಸ್ತ್ರೀ ವೀಣೆ ನುಡಿಸಬೇಕು ಶಂಬುಡು (ಶಿವ) ಅದನ್ನು ಕೇಳಬೇಕು ಎಂಬ ಮಾತು ಅವರ ವಿಚಾರದಲ್ಲಿ ಜನಜನಿತವಾಗಿತ್ತು." ವಡಿವೇಲು ಉತ್ಸಾಹದಿಂದ ಕುಪ್ಪಯ್ಯನ ಕಥೆಯನ್ನು ಮುಂದುವರಿಸಿದರು.

"ಕುಪ್ಪಯ್ಯ ತ್ಯಾಗರಾಜರ ಪರಮ ಭಕ್ತ. ಗುರುಗಳ ಬಳಿ ದೀರ್ಘ ಕಾಲವಿದ್ದು ವಿಶಿಷ್ಟ ರೀತಿಯಲ್ಲಿ ಕೀರ್ತನೆಗಳನ್ನು ಮಾಡುವುದನ್ನು ಕಲಿತ. ತ್ಯಾಗರಾಜರ ಮನೆಯ ಪೂಜಾ ಮಂದಿರದಲ್ಲಿ ಒಂದು ವೀಣೆ ಇತ್ತು. ತ್ಯಾಗರಾಜರು ಆಗಾಗ ಅದನ್ನು ನುಡಿಸುತ್ತಿದ್ದರಂತೆ. ಕುಪ್ಪಯ್ಯನಿಗೆ ಗುರುಗಳ ಬಳಿ ಇದ್ದ ಆ ವೀಣೆಯನ್ನು ನುಡಿಸಬೇಕೆಂಬ ಆಸೆ ಬಹಳ ದಿನದಿಂದ ಇತ್ತು. ಆ ಸಮಯಕ್ಕಾಗಿ ಕಾಯುತ್ತಿದ್ದನು. ಒಂದು ದಿನ ತ್ಯಾಗರಾಜರು ಯಾವುದೋ ಕೆಲಸದ ನಿಮಿತ್ತ ಹೊರಗೆ ಹೋಗಿದ್ದರು. ಕುಪ್ಪಯ್ಯ ಮೆಲ್ಲಮೆಲ್ಲನೆ ದೇವರ ಮನೆ ಪ್ರವೇಶಿಸಿ ತ್ಯಾಗರಾಜರ ವೀಣೆಯನ್ನು ಎತ್ತಿ ಕಣ್ಣಿಗೊತ್ತಿಕೊಂಡು ನುಡಿಸಲು ಪ್ರಾರಂಭಿಸಿದ! ಮುಂದೆ ತ್ಯಾಗರಾಜರ ಇಷ್ಟದೈವ ಕೋದಂಡ ರಾಮನ ಭವ್ಯ ಚಿತ್ರ! ತ್ಯಾಗರಾಜರ ಮಗಳ ಮದುವೆಯ ಸಂದರ್ಭದಲ್ಲಿ, ಶಿಷ್ಯ ವೆಂಕಟರಮಣ ಭಾಗವತರು ಬಳುವಳಿಯಾಗಿ ನೀಡಿದ್ದ ಕೋದಂಡ ರಾಮನ ಸುಂದರ ತೈಲಚಿತ್ರ! ಅದನ್ನು ಕಂಡೇ ಅಲ್ಲವೇ ತ್ಯಾಗರಾಜರು 'ಹೇ ಸ್ವಾಮಿ! ನಿನ್ನ ಭಕ್ತನನ್ನು ಕಾಣಲೆಂದೇ ಅಷ್ಟು ದೂರ

ದಿಂದ ಬಂದೆಯಾ" ಎಂಬ ಅರ್ಥ ಸ್ಫುರಿಸುವ ಮೋಹನರಾಗದ ಕೃತಿ 'ನನ್ನು ಪಾಲಿಪ' ಎಂಬ ಕೀರ್ತನೆಯನ್ನು ರಚಿಸಿದ್ದು! ಕುಪ್ಪಯ್ಯನಿಗೆ ಇದೆಲ್ಲ ತಿಳಿದಿತ್ತು! ಆ ಕೋದಂಡ ರಾಮನ ದಿವ್ಯ ರೂಪ ಕುಪ್ಪಯ್ಯನನ್ನು ಭಾವ ಪರವಶನನ್ನಾಗಿಸಿತು! ಕಣ್ಣು ಮುಚ್ಚಿದ! ನಾದಬ್ರಹ್ಮ ತಾನೇ ತಾನಾಗಿ ಅವನ ಬೆರಳ ಸಂಚಲನೆಯಲ್ಲಿ ವೀಣೆಯ ಮೇಲೆ ವಿಹರಿಸಲಾರಂಭಿಸಿದ! ತನ್ನ ಪ್ರೀತಿಯ ನಾರಾಯಣ ಗೌಳ ರಾಗ ಕುಪ್ಪಯ್ಯನಿಂದ ತಾನೇ ತಾನಾಗಿ ವಿಜೃಂಭಿಸಿತು! ಕುಪಯ್ಯನಿಗೆ ಬಾಹ್ಯ ಪರಿವೆಯೇ ಇಲ್ಲ! ತ್ಯಾಗರಾಜರ ಹೆಂಡತಿ ಅಡಿಗೆ ಕೆಲಸದಲ್ಲಿದ್ದವರು ಬಂದು ನೋಡುತ್ತಾರೆ; ಕುಪ್ಪಯ್ಯ! ಮೂಕವಿಸ್ಮಿತರಾಗಿ ನಿಂತರು! ಸ್ವಲ್ಪ ಹೊತ್ತಿನಲ್ಲೇ ತ್ಯಾಗರಾಜರು ಮನೆಗೆ ಬಂದರು. ತಮ್ಮ ಮನೆಯಿಂದ ಕೇಳಿ ಬರುತ್ತಿದ್ದ ವೀಣಾವಾದನವನ್ನು ದೂರದಿಂದ ಕೇಳಿ ಚಕಿತರಾಗಿದ್ದರು. ಮನೆಯ ಜಗುಲಿಯ ಮೇಲೆ ನಿಂತು ತದೇಕ ಚಿತ್ತದಿಂದ ಆಲಿಸಿದರು. ಅವರಿಗೆ ಆ ರಾಗಾಲಾಪನೆಯನ್ನು ಕೇಳಿ ರೋಮಾಂಚನವಾಯಿತು. ಒಳಗೆ ಬಂದು ನೋಡಿದರೆ ಕುಪ್ಪಯ್ಯ! ತ್ಯಾಗರಾಜರನ್ನು ಎದುರಿಗೆ ಕಂಡೊಡನೆಯೇ ಕುಪ್ಪಯ್ಯ ವೀಣೆಯನ್ನು ಕೆಳಗಿಳಿಸಿ ನಡುಗುತ್ತ ತ್ಯಾಗರಾಜರ ಬಳಿಗೆ ಬಂದು ನಮಸ್ಕರಿಸುತ್ತ 'ಗುರುಗಳೇ ಕ್ಷಮಿಸಬೇಕು. ತಮಗೆ ತಿಳಿಸದೆ ಈ ವೀಣೆಯನ್ನು ನುಡಿಸಿದ ನನ್ನ ಉದ್ಧಟತನವನ್ನು ಮರೆತು ಕ್ಷಮಿಸಬೇಕು' ಎಂದು ದೈನ್ಯದಿಂದ ವಿನಂತಿಸಿಕೊಂಡ. ತ್ಯಾಗರಾಜರಿಗೆ ಏನು ಹೇಳುವುದಕ್ಕೂ ತೋಚುವಂತಿರಲಿಲ್ಲ. ಅವರು ಕುಪ್ಪಯ್ಯನ ವೀಣಾವಾದನದ ಮಧುರಗಾನದಲ್ಲಿ ಇನ್ನೂ ತನ್ಮಯರಾಗಿದ್ದರು. ಆದರೂ ಕುಪ್ಪಯ್ಯನನ್ನು ಎಬ್ಬಿಸಿ ನಗುತ್ತ 'ಏಳು ಮಗು! ನಿನಗೆ ಇಷ್ಟು ಅದ್ಭುತವಾಗಿ ವೀಣೆ ನುಡಿಸಲು ಬರುತ್ತದೆಂದು ನನಗೆ ಮೊದಲೇ ಏಕೆ ಹೇಳಲಿಲ್ಲ? ಎಷ್ಟು ಸೊಗಸಾಗಿ ನುಡಿಸಿದೆಯಪ್ಪಾ!' ಎಂದು ಅವನನ್ನು ಮೆಚ್ಚಿ, ತಬ್ಬಿಕೊಂಡರು. ಕುಪ್ಪಯ್ಯನಿಗೆ ನಾದಬ್ರಹ್ಮರ ಆ ಆಲಿಂಗನ ಬ್ರಹ್ಮಾನಂದವಾಗಿತ್ತು! 'ನಾನು ನಾರಾಯಣ ಗೌಳದಲ್ಲಿ ಸಾಧನೆಮಾಡಿದ್ದು ನಿಜಕ್ಕೂ ಸಾರ್ಥಕವಾಯಿತು. ಎಂದುಕೊಂಡು ಮೈ ಮರೆತು, 'ನಿಮ್ಮ ಹರಕೆಯಿಂದ ನಾನು ಧನ್ಯನಾದೆ! ನಾನು ಕಲಿತ ವಿದ್ಯೆ ಸಾರ್ಥಕವಾಯಿತು,' ಎಂದು ಮತ್ತೊಮ್ಮೆ ಗುರುಗಳ ಪಾದದಲ್ಲಿ ತಲೆಯಿಟ್ಟು ಸಾಷ್ಟಾಂಗ ಪ್ರಣಾಮ ಮಾಡಿದ. ಎಂಥಹ ರೋಮಾಂಚಕ ಸನ್ನಿವೇಶ ಮಹಾರಾಜರೆ! ಕುಪ್ಪಯ್ಯನದು ಅದೆಂಥ ಸೌಭಾಗ್ಯ ಹೇಳಿ!" ಎಂದು ವಡಿವೇಲು ಕುಪ್ಪಯ್ಯನ ಕಥೆಯನ್ನು ನಿರೂಪಿಸುತ್ತ ಮೈಮರೆತಿದ್ದರು.

"ನಿಮಗೆ ಕುಪ್ಪಯ್ಯನವರು ಚೆನ್ನಾಗಿ ಪರಿಚಯುವಲ್ಲವೇ? ವಡಿವೇಲರೆ?" ಮತ್ತೆ ಯಾವುದಕ್ಕೋ ಪೀಠಿಕೆ ಹಾಕುವಂತೆ ಸ್ವಾತಿ ತಿರುನಾಳರು ಪ್ರಶ್ನಿಸಿದರು.

"ಚೆನ್ನಾಗಿ ಪರಿಚಯ ಉಂಟು ಸ್ವಾಮಿ."

"ತ್ಯಾಗರಾಜರಿಗೂ ಕುಪ್ಪಯ್ಯನಿಗೂ ಅಪ್ಪೊಂದು ಆತ್ಮೀಯತೆ ಎಂದು ಹೇಳುತ್ತಿದ್ದೀರಿ."

"ಹೌದು, ಅದೂ ನಿಜ. ಕುಪ್ಪಯ್ಯನ ಪ್ರಾರ್ಥನೆಯನ್ನು ಮನ್ನಿಸಿಯೇ ಅಲ್ಲವೆ ತ್ಯಾಗರಾಜರು ತಿರುವಟ್ಟಿಯೂರಿಗೆ ಭೇಟಿ ಇತ್ತದ್ದು."

"ಹಾಂ! ಈಗ ನೆನಪಿಗೆ ಬಂತು. ತ್ಯಾಗರಾಜರು ಆಗಲೆ ಅಲ್ಲವೆ ಅಲ್ಲಿನ ದೇವತೆ ತ್ರಿಪುರಸುಂದರಿಯನ್ನು ಕಂಡು ಭಾವಪರವಶರಾಗಿ 'ಸುಂದರಿ ನೀ ದಿವ್ಯ ರೂಪಮು; ಸುಂದರಿ ನನ್ನಿಂದರಿಲೋ', 'ಧರಣಿ ತೆಲುಸಿ ಕೊಂಟಿ' 'ಸುಂದರಿ ನಿನು ವರ್ಣಿಂಪ' 'ಕನ್ನತಲ್ಲೀ'–ಎಂಬ ತಿರುವಟ್ಟಿಯೂರ್ ಪಂಚರತ್ನ ಕೀರ್ತನೆಗಳನ್ನು ರಚಿಸಿದ್ದು."

"ಹೌದು, ಮುಂದೆ ಕೋವೂರ್ ಸುಂದರ ಮೊದಲಿಯಾರರ ಆಹ್ವಾನದ ಮೇರೆಗೆ ತ್ಯಾಗರಾಜರು ಕೋವೂರಿಗೂ ಹೋದರು. ವೀಣೆ ಕುಪ್ಪಯ್ಯನವರು ಸುಂದರ ಮೊದಲಿಯಾರರ ಆಸ್ಥಾನ ವಿದ್ವಾಂಸರು ಎಂಬುದು ಸ್ವಾಮಿಯವರಿಗೆ ತಿಳಿದಿರಬೇಕಲ್ಲವೆ?"

"ಕೇಳಿದ್ದೇನೆ. ತಿರುವಟ್ಟಿಯೂರ್ ಪಂಚರತ್ನಗಳನ್ನು ರಚಿಸಿದಂತೆ. ಕೋವೂರ್ ಕ್ಷೇತ್ರದ ಅಧಿದೇವತೆ ಸುಂದರೇಶ್ವರನ ಮೇಲೂ ಕೋವೂರ್

ಪಂಚರತ್ನಗಳನ್ನು ತ್ಯಾಗರಾಜರು ರಚಿಸಿದ್ದಾರೆಂದು ಕೇಳಿದ್ದೇನೆ. ಆ ಕೀರ್ತನೆಗಳು ತಮಗೆ ನೆನಪಿದೆಯೋ?"

ವಡಿವೇಲು ಉತ್ಸಾಹದಿಂದ, "ಅಚ್ಚಳಿಯದೆ ನೆನಪಿನಲ್ಲಿವೆ. ಅವುಗಳಲ್ಲಿ ಕೆಲವನ್ನು ನಾನು ಹಾಡಿಯೂ ಇದ್ದೇನೆ! 'ಶಂಭೊ ಮಹಾದೇವ, ಈವಸುಧಾವಂಟಿ, ಕೋರಿ ಸೇವಿಂಪರಾರೆ, ನಮ್ಮಿ ವಾಸಿನ, ಸುಂದರೇಶ್ವರುನೀ'–ಇವೇ ಕೋವೂರು ಪಂಚರತ್ನಗಳು."

"ಹಾಂ... ಹೌದು, ಮೊನ್ನೆ ನವರಾತ್ರಿ ಸಭೆಯಲ್ಲಿ ತಾವು ಪಂತುವರಾಳಿಯಲ್ಲಿ ಹಾಡಿದ ಶಂಭೋಮಹಾದೇವ ಎಂಬ ಕೀರ್ತನೆ ಅದ್ಭುತವಾಗಿತ್ತು. ಆದರೆ ಅದು ಕೋವೂರ್ ಪಂಚರತ್ನವೆಂಬುದನ್ನು ನಾವು ಗಮನಿಸಿರಲಿಲ್ಲ."

ಸ್ವಾತಿ ತಿರುನಾಳರು ಆ ವಿಷಯವನ್ನು ಅಲ್ಲಿಗೆ ಮುಗಿಸಿದರೂ, ಅದರ ಕೊಂಡಿಯಿಂದ ಮತ್ತೆ ಯಾವುದೋ ಮುಖ್ಯ ವಿಷಯಕ್ಕೆ ಪೀಠಿಕೆ ಹಾಕುತ್ತಾ ಹೇಳಿದರು. "ಇದೆಲ್ಲಾ ಸರಿ ವಡಿವೇಲು ಅವರೆ. ಈಗ ಮುಖ್ಯ ವಿಷಯಕ್ಕೆ ಬರೋಣ. ತ್ಯಾಗರಾಜರು ಹೊರಗಿನಿಂದ ಬಂದ ರಾಜರ, ವಿದ್ವಾಂಸರ ಕರೆಯನ್ನು ಮನ್ನಿಸಿ ಅಲ್ಲಿಗೆ ಭೇಟಿ ಕೊಡುತ್ತಿದ್ದರು. ಎಂದು ನೀವೇ ಹೇಳಿದ್ದೀರಿ. ನಮ್ಮ ಆಹ್ವಾನವನ್ನು ಏಕೆ ತ್ಯಾಗರಾಜರು ಮನ್ನಿಸಬಾರದು ವಡಿವೇಲು ಮಹಾಶಯರೆ? ತ್ಯಾಗರಾಜರನ್ನು ನಮ್ಮ ಆಸ್ಥಾನಕ್ಕೆ ಬರಮಾಡಿಕೊಳ್ಳಲಾರದಷ್ಟು ನಾವು ಕಳಪೆಯೆ? ತಿರುವಾಂಕೂರಿನ ದೊರೆ ಸ್ವಾತಿ ತಿರುನಾಳರು ಕೀರ್ತನಕಾರರು! ಪದವಿ, ಗೌರವ, ವಿದ್ವತ್ತು–ಹೀಗೆ ಯಾವುದರಲ್ಲಿ ಕಡಿಮೆ ಇದೆ ಹೇಳಿ? ನಾವು ಸಾಕಷ್ಟು ಘನ ಸಂಗೀತ ವಿದ್ವಾಂಸರನ್ನು ಕರೆಸಿ ಗೌರವಿಸಿಲ್ಲವೆ? ತಂಜಾವೂರು ಸಂಸ್ಥಾನದ ಅನೇಕ ವಿದ್ವಾಂಸರನ್ನು ನಾವು ಗೌರವಿಸಿಲ್ಲವೆ? ಹೀಗಿರುವಾಗ ತ್ಯಾಗರಾಜರನ್ನೂ ಕರೆಸಿ ನಾವೇಕೆ ಗೌರವಿಸಬಾರದು? ಅಂಥ ಮಹಾ ಸಂಗೀತ ವಿದ್ವಾಂಸರನ್ನು ನಮ್ಮ ಆಸ್ಥಾನಕ್ಕೆ ಕರೆಸಿ ಗೌರವಿಸುವುದರಿಂದ ನಮ್ಮ ಘನತೆ ಗೌರವಗಳು ಹೆಚ್ಚುವುದಿಲ್ಲವೆ? ಯೋಚನೆ ಮಾಡಿ!" ಸ್ವಾತಿ ತಿರುನಾಳರು ಮತ್ತಷ್ಟು ನಿರ್ಧಾರದ ಧ್ವನಿಯಲ್ಲಿ "ವಡಿವೇಲರೇ! ನೀವು ನಮ್ಮ ಆಸ್ಥಾನದ ಘನ ವಿದ್ವಾಂಸರು! ವಯಸ್ಸಿನಿಂದ ಕೂಡ ನೀವು ನಮಗಿಂತ ಕೆಲವು ವರ್ಷ ಹಿರಿಯರು. ನಮ್ಮ ಅಭೀಪ್ಸೆಯನ್ನು ತಿಳಿಸಿ ಆಹ್ವಾನವನ್ನು ಮನ್ನಿಸಬೇಕೆಂದು ನೀವೇ ನಮ್ಮ ಪರವಾಗಿ ತ್ಯಾಗರಾಜರನ್ನು ಏಕೆ ಕೇಳಿಕೊಳ್ಳಬಾರದು? ಈ ದೌತ್ಯವನ್ನು ವಹಿಸುವುದಕ್ಕೆ ನೀವೇ ಅತ್ಯಂತ ಸಮರ್ಥರೆಂದು ನಿರ್ಧರಿಸಿ ನಾವು ನಿಮಗೆ ಈ ಮಹತ್ ಕಾರ್ಯವನ್ನು ವಹಿಸುತ್ತಿದ್ದೇವೆ. ತ್ಯಾಗರಾಜರ ಕೀರ್ತಿಯನ್ನು ಅವರ ಶಿಷ್ಯ ಕನ್ನೈಯ ಭಾಗವತರಿಂದ ಬಹಳವಾಗಿ ಕೇಳುತ್ತಿದ್ದೇವೆ. ಅವರನ್ನು ನಮ್ಮ ಆಸ್ಥಾನಕ್ಕೆ ಬರಮಾಡಿಕೊಳ್ಳಬೇಕೆಂಬುದು ನಮ್ಮ ಮಹದಾಸೆಯಾಗಿದೆ.



ಒಂದು ಆಟವೂ ಬರೋಲ್ಲಾಂತ ಮೂದಲಿಸ್ತಿದ್ದೆಲ್ಲಾ ನಂಗೆ, ರಾತ್ರಿಯೆಲ್ಲಾ ಇಸ್ಪೀಟ್ ಆಟ ಆಡಿ ಬಂದೆ ನೋಡು

ನೀವು ಅವನ್ನು ನಡೆಸಿಕೊಡಲೇಬೇಕು." ವಡಿವೇಲು ಅವರ ಮುಖವನ್ನು ದಿಟ್ಟಿಸುತ್ತಾ ಹೇಳಿದರು.

ಸ್ವಾತಿ ತಿರುನಾಳರು ಆಡಿದ ಮಾತಿನಿಂದ ವಡಿವೇಲರಿಗೆ ಸ್ವಲ್ಪ ಕಸಿವಿಸಿಯಾಯಿತು. ದೊರೆಯ ಉಪ್ಪಿನ ಋಣದ ಹೊರೆ ಹೊತ್ತಿದ್ದ ಅವರಿಗೆ ಎಷ್ಟೋ ಆತ್ಮಾಭಿಮಾನವಿದ್ದರೂ ಎದುರು ಮಾತನಾಡುವ ಧೈರ್ಯ ಬರಲಿಲ್ಲ. ಆದರೆ ತ್ಯಾಗರಾಜರ ವಿಷಯದಲ್ಲಿ ಅವರಿಗೆ ತಮ್ಮದೇ ಆದ ನಂಬಿಕೆಗಳಿದ್ದವು. ಅವುಗಳ ಹಿನ್ನೆಲೆಯಲ್ಲಿ ಯೋಚಿಸಿ, ತಮ್ಮ ದೌತ್ಯದ ಸಫಲತೆಯ ಬಗೆಗೆ ನಾಲ್ಕು ಗಟ್ಟಿ ಮಾತುಗಳನ್ನು ಆಡಿಯೇ ಬಿಟ್ಟರು. ನಿಧಾನವಾಗಿ ಮಾತು ಪ್ರಾರಂಭಿಸಿದರು. "ಈ ವಿಷಯದಲ್ಲಿ ಮಾತ್ರ ಪ್ರಭುಗಳಿಗೆ ನಾನು ಮೊದಲಿಗೇ ಯಾವ ಆಶ್ವಾಸನೆಯನ್ನೂ ಕೊಡಲಾರೆ ಎಂದು ಅತ್ಯಂತ ವಿನಮ್ರನಾಗಿ ನಿವೇದಿಸಿಕೊಳ್ಳುತ್ತಿದ್ದೇನೆ. 'ನಮ್ಮ ಆಸ್ಥಾನಕ್ಕೆ ತ್ಯಾಗರಾಜರು ಏಕೆ ಬರಬಾರದು? ನಾವೇನು ಅವರನ್ನು ಬರಮಾಡಿಕೊಳ್ಳಲಾರದಷ್ಟು ಕಳತೆಯೆ?' ಇವೆಲ್ಲ ತಾವು ಹಿಂದೆಯೇ ಒಂದು ಸಂದರ್ಭದಲ್ಲಿ ಹೇಳಿದಂತೆ ಅಭಿಪ್ರಾಯದ ಮಾತುಗಳು. ತ್ಯಾಗರಾಜರು ಎಂತಹ ಸ್ವಭಾವದವರು ಎಂಬುದನ್ನು ನಾನು ಚೆನ್ನಾಗಿ ಬಲ್ಲೆ. ಶರಭೋಜಿ ಮಹಾರಾಜರ ಆಮಂತ್ರಣವನ್ನು ನಿರಾಕರಿಸಿ 'ಹೇ ಮನಸ್ಸೇ ಹೇಳು ಯಾವುದು ಶಾಶ್ವತ? ಶಾಶ್ವತ ಸುಖವನ್ನು ನೀಡಬಲ್ಲ ರಾಮನಾಮ ಸ್ಮರಣೆಯೆ ಇಲ್ಲವೆ ಸ್ವಾರ್ಥದ ಕಂತೆಯಾದ ಮಾನವನ ಹೊಗಳಿಕೆಯೆ?' ಎಂದು 'ನಿಧಿ ಚಾಲ ಸುಖಮಾ' ಎಂಬ ಕೀರ್ತನೆಯ ಮೂಲಕ ಕೊಟ್ಟ ಉತ್ತರ ಇಂದಿಗೂ ನನ್ನ ಮನಸ್ಸಿನಲ್ಲಿ ಅಚ್ಚಳಿಯದೆ ಇದೆ. ಮೊನ್ನೆ ಉತ್ತರ ದೇಶದ ಒಬ್ಬ ಗಾಯಕ ತ್ಯಾಗರಾಜರ ಸನ್ನಿಧಿಗೆ ಬಂದು ತನ್ನ ಕೆಲವು ಕೀರ್ತನೆಗಳನ್ನು ಹಾಡಿ ನಂತರ ತ್ಯಾಗರಾಜರಿಂದಲೂ ಕೆಲವು ಕೀರ್ತನೆಗಳನ್ನು ಕೇಳಿ, 'ನಿಮ್ಮ ಸಾಧನೆ ದೊಡ್ಡದು. ನಿಮ್ಮ ಸಾಧನೆಯ ಮುಂದೆ ನನ್ನದು ಎಷ್ಟರದು! ನಿಮ್ಮದೀಗ ನಿಜವಾದ ಸಂಗೀತ!' ಎಂದು ಅವರಿಗೆ

ಗಳನ್ನೆಲ್ಲಾ ಅರ್ಪಿಸಿದ. ಆದರೆ ತ್ಯಾಗರಾಜರು ಅವುಗಳೊಂದನ್ನೂ ಸ್ವೀಕರಿಸದೆ ಕಳುಹಿಸಿಬಿಟ್ಟರು. ತ್ಯಾಗರಾಜರಿಗೆ ಪದವಿ ಗೌರವ, ಖಿಲ್ಲತ್ತು, ಇವುಗಳಾವುದೊಂದರ ಗೊಡವೆಯೂ ಇಲ್ಲ ಎಂಬುದಕ್ಕೆ ಇದಕ್ಕಿಂತ ಹೆಚ್ಚಿನ ನಿದರ್ಶನ ಬೇಕೆ? ಅವರು ಕೈಗೊಂಡಿರುವ ಉಂಛವೃತ್ತಿಯು ಇದನ್ನು ಸಾರುವುದಿಲ್ಲವೆ?" ವಡಿವೇಲು ಕಾವೇರಿದ ತನ್ನ ಮಾತನ್ನು ಮುಗಿಸುತ್ತ, "ಆದರೂ... ಸ್ವಾಮಿಯವರ ಉಪ್ಪು ತಿಂದ ನಾನು, ಮಾಡುವ ಪ್ರಯತ್ನ ಮಾಡುತ್ತೇನೆ. ಆದರೆ..." ಮುಂದೇನನ್ನೋ ಹೇಳುವುದಕ್ಕೆ ತೋಚದೆ ದೀರ್ಘ ನಿಟ್ಟುಸಿರಿನಿಂದ ನಿರ್ಗಮಿಸಿದರು.

ತಿರುವಯ್ಯಾರಿನ ತಿರುಮಂಜರವೀಥಿಯಲ್ಲೇ ತ್ಯಾಗರಾಜರ ಮನೆ, ಆ ಮಾರ್ಗವಾಗಿಯೇ ಪ್ರತಿದಿನ ಬೆಳಗ್ಗೆ ಸಂಜೆ ತ್ಯಾಗರಾಜರು ಸ್ನಾನ ಸಂಧ್ಯಾವಂದನಾದಿಗಳಿಗೆ ಕಾವೇರಿ ನದಿಗೆ ಹೋಗಿ ಬರುತ್ತಿದ್ದುದು. ಒಂದು ಸಂಜೆ ಗೋಧೂಳೀ ಸಮಯ. ತ್ಯಾಗರಾಜರು ಆಗ ತಾನೆ ಸಂಧ್ಯಾವಂದನೆಯನ್ನು ಮುಗಿಸಿ ಮನೆಗೆ ಹಿಂದಿರುಗುತ್ತಿದ್ದರು. ದಾರಿಯಲ್ಲಿ ತಮ್ಮ ಮನೆಯ ಎದುರುಸಾಲಿನ ಮನೆಯೊಂದರಿಂದ ಕೇಳಿಬರುತ್ತಿದ್ದ ಸುಶ್ರಾವ್ಯಗಾನ ಅವರನ್ನು ಚಕಿತಗೊಳಿಸಿತು. ಸ್ವಲ್ಪ ಹೊತ್ತು ನಿಂತು ಮುಂದುವರಿದರು. ಮಾರನೆಯ ದಿನವೂ ಅದೇ ಅನುಭವವಾಗಿ ಇನ್ನೂ ಸ್ವಲ್ಪ ಹೆಚ್ಚು ಹೊತ್ತು ನಿಂತು ಆಲಿಸಿ ಮನೆಗೆ ತೆರಳಿದರು. ಎದುರು ಬೀದಿಯ ಮನೆಯಲ್ಲಿ ಹಾಡುತ್ತಿರುರುವ ಗಾಯಕ ಯಾರು ಎಂದು ಶಿಷ್ಯರನ್ನು ವಿಚಾರಿಸಿದರು. ಯಾರಿಂದಲೂ ಸಮಂಜಸವಾದ ಉತ್ತರ ದೊರೆಯಲಿಲ್ಲ. ಮಾರನೆಯ ದಿನ ಸಂಜೆ ನದಿಯಿಂದ ಹಿಂದಿರುಗಿ ಬರುವಾಗ ಮತ್ತೆ ಅದೇ ಗಾನ ಸುಧೆ ಕೇಳಿಬಂದು ಅವರನ್ನು ಹಿಡಿದು ನಿಲ್ಲಿಸಿತು. ಸ್ವಲ್ಪ ಹೊತ್ತು ನಿಂತರು. ಮೈಮರೆತರು! ಅವರಿಗೆ ತಮ್ಮ ಸಂತೋಷವನ್ನು ತಡೆದುಕೊಳ್ಳಲಾಗಲಿಲ್ಲ. ಬಾಗಿಲು ತೆರೆದಿತ್ತು. ಅಂತಹ ಸೊಗಸಾದ ಸಂಗೀತವನ್ನು ನೀಡಿ ಕರ್ಣಾನಂದ ಮಾಡುತ್ತಿರುವವನು ಯಾರು, ಅವನನ್ನು ಅಭಿ

ಗಾನ ಸುಧಾರಸ ಪಾನಮಾಡಿಸುತ್ತಿದ್ದ ವಡಿವೇಲು, ತ್ಯಾಗರಾಜರನ್ನು ಕಂಡೊಡನೆಯೇ ಧಡಕ್ಕನೆ ಎದ್ದು ತ್ಯಾಗರಾಜರಿಗೆ ಸಾಷ್ಟಾಂಗವೆರಗಿ ಸ್ವಾಗತಿಸುತ್ತಾ, "ಓ! ಮಹಾಭಾಗರೇ! ಈ ದಿನ ನಿಜಕ್ಕೂ ನನಗೆ ಸುದಿನ! ನೀವು ಅಷ್ಟು ಇಷ್ಟಪಟ್ಟಿದ್ದರೆ ನಾನೇ ನಿಮ್ಮ ಮನೆಗೆ ಬಂದು ಹಾಡುತ್ತಿದ್ದೆ. ನೀವೇ ನಮ್ಮ ಮನೆಗೆ ಬಂದು ನನ್ನನ್ನು ಕೃತಾರ್ಥನನ್ನಾಗಿ ಮಾಡಿದಿರಿ" ಎಂದು ತೊದಲಿದ.

ಸ್ವಾತಿ ತಿರುನಾಳರ ಬಯಕೆಯನ್ನು ಈಡೇರಿಸಲು ವಡಿವೇಲು ತನ್ನದೇ ಆದ ರೀತಿಯಲ್ಲಿ ಹಂಚಿಕೆ ನಡೆಸಿ ತಿರುಮಂಜನ ವೀಧಿಯಲ್ಲಿ ಬಂದು ಮನೆ ಮಾಡಿ ಅಲ್ಲಿ ತನ್ನ ಸಂಗೀತದ ಮೂಲಕ ತ್ಯಾಗರಾಜರ ಗಮನ ಸೆಳೆದು ತನ್ನ ಕಾರ್ಯಸಾಧನೆ ಮಾಡಿಕೊಳ್ಳಬೇಕೆಂದು ಈ ರೀತಿ ಉಪಾಯ ಹೂಡಿದ.

ತ್ಯಾಗರಾಜರು ವಡಿವೇಲುವಿನ ಸಂಗೀತ ಸಾಧನೆಯನ್ನು ಮೆಚ್ಚಿ, ಶ್ಲಾಘಿಸಿ ಮಾರನೆಯ ದಿನ ತಮ್ಮ ಮನೆಗೆ ಬಂದು ಹಾಡುವಂತೆ ಆಹ್ವಾನಿಸಿದರು. ಅಂತಹ ಆಹ್ವಾನವನ್ನು ವಡಿವೇಲು ಬಿಡಲು ಸಾಧ್ಯವೆ?

ಮಾರನೆಯ ದಿನ ವಡಿವೇಲರು ಸ್ವಾತಿ ತಿರುನಾಳರ ಅನೇಕ ಕೃತಿಗಳನ್ನು ತ್ಯಾಗರಾಜರ ಮುಂದೆ ಹಾಡಿ ಅವರ ಮನಸ್ಸನ್ನು ತಣಿಸಿದರು. ಅದರ ಮಾರನೆಯ ದಿನ ತ್ಯಾಗರಾಜರ ಕೆಲವು ಕೀರ್ತನೆಗಳನ್ನು ಹಾಡಿ ಅವರ ಮನಸ್ಸನ್ನು ಸೂರೆಗೊಂಡರು. ಆನಂದಭರಿತರಾದ ತ್ಯಾಗರಾಜರು "ನಿಮ್ಮ ಸಾಧನೆಯನ್ನು ಮೆಚ್ಚಿದೆ, ನಿಮಗೆ ನನ್ನಿಂದ ಏನಾದರೂ ಆಗಬೇಕಾಗಿದ್ದರೆ ಹೇಳಿ" ಎಂದರು. ಈ ಅಮೃತಗಳಿಗಾಗಿಯೇ ಕಾಯುತ್ತಿದ್ದ ವಡಿವೇಲು ಮೆಲ್ಲಗೆ ವಿನಮ್ರವಾಗಿ, "ತಿರುವಾಂಕೂರಿನ ಮಹಾರಾಜರು ತಮ್ಮನ್ನು ನೋಡಬೇಕೆಂದು ಬಹಳ ಆಸೆ ಪಡುತ್ತಿದ್ದಾರೆ. ದಯಮಾಡಿ ತಾವು ಬಂದು…". ತನ್ನ ಮಾತನ್ನು ಪೂರೈಸುವುದಕ್ಕೆ ಮುಂಚೆಯೇ, ತ್ಯಾಗರಾಜರು ಚಕಿತರಾದುದನ್ನು ಕಂಡು ವಡಿವೇಲು ಅಧೈರ್ಯದಿಂದ ಮಾತನ್ನು ಅಷ್ಟಕ್ಕೇ ನಿಲ್ಲಿಸಿದರು. ತ್ಯಾಗರಾಜರು ಸ್ವಲ್ಪ ತಡೆದು ಹೇಳಿದರು: "ನಾನು ಅವರನ್ನು ಖಂಡಿತವಾಗಿಯೂ ಭೇಟಿಯಾಗುತ್ತೇನೆ. ನೀವು ಕೊಟ್ಟ ವಚನವೂ ಈಡೇರುತ್ತದೆ. ಆದರೆ ನನ್ನ ಅವರ ಭೇಟಿ ಈ ಲೋಕದಲ್ಲಲ್ಲ. ಅದು ಬೇರೆ ಲೋಕದಲ್ಲಿ! ನಮ್ಮ, ಅವರ ಉಪಾಸನಾ ಮೂರ್ತಿ ಪದ್ಮನಾಭ ಮತ್ತು ರಾಮ ಒಂದೇ ಅಲ್ಲವೆ ?"

ವಡಿವೇಲರು ಧರೆಗಿಳಿದುಹೋದರು ! ಕಡೆಗೂ ತಾನು ಅಂದುಕೊಂಡಂತೆಯೇ ಆಯಿತಲ್ಲ ಎಂದು ವಿಷಾದ ಪಟ್ಟರೂ, ನಾದಬ್ರಹ್ಮಗುರು ತ್ಯಾಗರಾಜರನ್ನು ತನ್ನ ಗಾನ ಸುಧೆಯ ಮೂಲಕ ತಣಿಸಿ ತೃಪ್ತಿ ಹೊಂದುವ ಭಾಗ್ಯವಾದರೂ ಈ ದೌತ್ಯದ ನೆಪದಲ್ಲಿ ದೊರೆಯಿತಲ್ಲ ಎಂದು ಸಮಾಧಾನ ಪಟ್ಟುಕೊಂಡು, ಬಿಜ್ಜೆ ಹಾಕಿದರು.

ಸ್ವಾತಿ ತಿರುನಾಳ್ ಮಹಾರಾಜರು ತಾವೇ ಮನಸ್ಸುಮಾಡಿದ್ದರೆ ತ್ಯಾಗರಾಜರನ್ನು ನೋಡಬಹುದಿತ್ತು. ಆದರೆ ರಾಜಕೀಯ ಬಿಕ್ಕಟ್ಟೋ ಬಿಗುಮಾನವೋ… ಏನೋ ಅಂತೂ ಕಡೆಗೂ ಅವರಿಬ್ಬರ ಭೇಟಿಯಾಗಲಿಲ್ಲ. ಕುತೂಹಲದ ಅಂಶವೆಂದರೆ ಅವರಿಬ್ಬರೂ ನಿಧನರಾದ ಕಾಲದ ಅಂತರ ಸ್ವಾತಿ ತಿರುನಾಳ್ ಮಹಾರಾಜರು ೨೫–೧೨–೧೮೪೬ರಂದು ತೀರಿಕೊಂಡರೆ, ತ್ಯಾಗರಾಜರು ೬–೧–೧೮೪೭ ರಂದು ಜೀವನ್ಮುಕ್ತರಾದರು. ಈ ಅಂತರ ಕೇವಲ ಕೆಲವು ದಿನಗಳ ಅಂತರವಾದರೂ ಅವರ ಇವರ ಭೇಟಿ ಧ್ರುವಗಳ ಅಂತರದಲ್ಲಿ ನಿಂತಿತ್ತು!!

✲

ಸಂಜೆಯ ವಾಕ್‌ಗೆ ತಯಾರಾಗಿ ನಿಂತ ತಂದೆ ಅಸಹನೆಯಿಂದ ತನ್ನ ಮಕ್ಕಳಿಗೆ ಹೇಳಿದ: "ಬೇರೆಯವರ ಮಕ್ಕಳು ತಾಯಿಗೆ ಹ್ಯಾಗಾದ್ರೂ ಇವ್ರಿಂದ ಒಂದ್ಸ್ವಲ್ಪ ಹೊತ್ತು ದೂರಿದ್ದರೆ ಸಾಕು ಅನ್ನೋ ಹಾಗೆ ಮಾಡ್ತಿರ್ತವೆ. ನೀವೂ ಇದ್ದೀರಿ…"


ಯಾತನಾ ಶಿಬಿರ

ಯಾತನಾ ಶಿಬಿರ

ಶ್ರೀ ಚಂದ್ರಕಾಂತ ಕುಸನೂರರ 'ಯಾತನಾ ಶಿಬಿರ' ಕಾದಂಬರಿಗೆ ೧೯೭೫ರ ರಾಜ್ಯ ಸಾಹಿತ್ಯ ಅಕಾದೆಮಿಯ ಪ್ರಶಸ್ತಿ ಲಭಿಸಿದೆ. ಹಿಂದಿ, ಕನ್ನಡ ಭಾಷೆಗಳೆರಡರಲ್ಲೂ ಬರಹಗಾರರಾದ ಕುಸನೂರರು ಕಾದಂಬರಿ, ನಾಟಕ, ಕವನ ಮುಂತಾದ ಸಾಹಿತ್ಯ ಪ್ರಕಾರಗಳಲ್ಲಿ ಪ್ರಗತಿಪರ ಕೃಷಿ ಕೈಗೊಂಡು ಹಲವಾರು ಪ್ರಶಸ್ತಿಗಳನ್ನು ಪಡೆದಿದ್ದಾರೆ. ಹದವರಿತ ಭಾಷೆ, ಶೈಲಿ, ತಂತ್ರ, ವಸ್ತುವೈವಿಧ್ಯ, ಅನುಭವ, ವಿಚಾರಸ್ಪಷ್ಟತೆ, ಆಳವಾದ ಅಧ್ಯಯನ, ಸೂಕ್ಷ್ಮ ಸಂವೇದನೆ ಅವರ ಯಶಸ್ಸಿಗೆ ತಳಪಾಯವೆನಿಸಿವೆ. 'ಯಾತನಾ ಶಿಬಿರ'ಕ್ಕೆ ಹಿನ್ನೆಲೆ : ೧೯೪೮ರ ಸುಮಾರಿಗೆ ಹೈದ್ರಾಬಾದ ಕರ್ನಾಟಕ ಪ್ರದೇಶದಲ್ಲಿ ತಲೆದೋರಿದ ಭಯಂಕರ ಕ್ಷಾಮ. ಆಗ ಕೇವಲ "ಬದುಕಬೇಕು" ಎಂಬ ಅದಮ್ಯ ಆಕಾಂಕ್ಷೆಯಿಂದ ನಡೆಸಿದ ಮನುಷ್ಯ ಪ್ರಯತ್ನ ಅಸ್ಪೃಶ ಮತ್ತು ರೋಮಾಂಚಕಾರಿವಾಗಿತ್ತು.

ಕಲಬುರ್ಗಿಯಿಂದ ಚಂದನಕೇರಿಗೆ ಕೇವಲ ಇಪ್ಪತ್ತು ಕಿಲೋಮೀಟರ್ ದೂರ. ಈ ಪ್ರವಾಸ ಮುಗಿಸಬೇಕಾದರೆ ಖಾನಸಾಹೇಬರ ಸರ್ವಿಸ್‌ಗೆ ಎರಡು ತಾಸು ಬೇಕಾಯಿತು.

ನಲವತ್ತು ಜನರು ಕೂಡುವ ಸರ್ವಿಸಿನಲ್ಲಿ ನೂರು ಜನ ನುಗ್ಗಿದ್ದಕ್ಕಾಗಿ ಕೆಳಗಿಳಿಯುವುದೂ ಒಂದು ಸಾಹಸದ ಕೆಲಸವೆನಿಸಿ ಮೈ ನಡುಗಿತು.

ಜನರು "ಚಂದನಕೇರಿ–ಚಂದನಕೇರಿ" ಎಂದು ಕೂಗಿದಾಗ, ಇದೇ ನನ್ನ ಕೆಲಸದ ಊರಿರಬೇಕೆಂದು ಅರ್ಥ ಮಾಡಿಕೊಂಡೆ. ಸೂಟಕೇಸ್ ಹಿಡಿದು, ಪ್ರಾಣಾಪಾಯದ ಭೀತಿಯನ್ನು ಬಿಟ್ಟು, ಅದಮ್ಯ ಸಾಹಸದಿಂದ ಹೊರಜಿಗಿದೆ.

ಮರುನಿಮಿಷ ರಸ್ತೆಯ ಮೇಲೆ ಮುಗ್ಗರಿಸಿ ಬಿದ್ದಿದ್ದೆ. ಸೂಟ್‌ಕೇಸ್, ಹವಾಯಿ ಚಪ್ಪಲಿಗಳು ದಿಕ್ಕಾಪಾಲಾಗಿ ಬಿದ್ದಿದ್ದವು. ಅಷ್ಟರಲ್ಲಿ ಯಾವನೋ ಪುಣ್ಯಾತ್ಮ ಬಂದು ಕೈ ಹಿಡಿದು ಎಬ್ಬಿಸಿದ.

"ನೀವು ಹೊಸಬರ‍್ರು ಅಂತ ಕಾಣುತ್ತದೆ; ನಮ್ಮ ಕಾಲೇಜಿನಲ್ಲಿ ಕೆಲಸ ಸಿಕ್ಕಿರಬೇಕು, ಅಲ್ಲ? ಹೂಂ, ಏನ್ ವಿಷಯ ಓದಿಸ್ತೀರಿ? ಭಾಳ ಮಂದಿ ಇಂಗ್ರೇಜಿ ಇರಬೋದು..." ಸಹಾನುಭೂತಿಯಿಂದ ಅವನು ಮಾತಾಡುತ್ತಲೇ ಇದ್ದ. ಅವನ ಮಾತಿನ ಕಡೆಗೆ ನನ್ನ ಲಕ್ಷ್ಯ ಇರಲಿಲ್ಲ.

ಇಲ್ಲಿಂದ "ಕಾಲೇಜು ಎಷ್ಟು ದೂರ?" ಎಂದು ಕೇಳಿದೆ. ಒಂದು ಮೈಲು ಇರಬಹುದೆಂದ. ಹೋಗಿ ಕೆಲಸಕ್ಕೆ ಹಾಜರಾದೆ. ಚಂದನಕೇರಿ ನನ್ನೂರಾಯಿತು.

೨

ಚಂದನಕೇರಿ ಅತ್ಯಂತ ರಮ್ಯವಾದ ಗ್ರಾಮ. ಮಾರಿಕಾಂಬಾ ಗ್ರಾಮದೇವತೆ. ಊರಪ್ರಮುಖರ ಪ್ರಭಾವದಿಂದಾಗಿ "ಮಾರಿಕಾಂಬಾ ಕಾಲೇಜ್" ಸ್ಥಾಪಿತವಾಗಿತ್ತು.

ಊರಿಗೆ ನೀರು ಪೂರೈಸುವುದು ಊರ ಮುಂದಿನ ಚಿಕ್ಕ ಹಳ್ಳ 'ಜಲಶಕ್ತಿ'ಯ ಜವಾಬ್ದಾರಿಯಾಗಿತ್ತು. ಹಳ್ಳ ದಾಟಿಕೊಂಡು ಮುಂದೆ ಬಂದರೆ ಬಸ್‌ನಿಲ್ದಾಣ, ಟೀಕ್ಲಬ್, ಅದರ ತಲೆಯ ಮೇಲೊಂದು ಆಲದ ಮರ, ಅದರ ಮೇಲೆ ಮಂಗ-

ಗಳ ಹಾರಾಟ. ಮುಂದೆ ಸಂತೆ, ಗೌಡರ ಮನೆ, ರಾಮಾದೀಕ್ಷಿತರ ಮನೆ–ಹೀಗೆ ಮೂರು ಕಡೆಗೆ ಮೂರು ದಾರಿಗಳು.

ಹಳೆಯ ಮನೆಗಳು, ಕುಸಿದುಬಿದ್ದಿರುವ ಗೋಡೆಗಳು, ಬರೀ ತಲೆಬಾಗಿಲಷ್ಟೇ ಚೆನ್ನಾಗಿದ್ದ ಒಳಗಿನ ಹಾಳು ಮನೆಗಳು, ಮನೆಯ ಹೆಣ್ಣುಮಕ್ಕಳು, ಗಂಡಸರು, ದನಕರುಗಳು ಎಲ್ಲವೂ ಒಟ್ಟಾಗಿ ಚಂದನಕೇರಿಯ ಸಂಪತ್ತಾಗಿ ಉಳಿದುಕೊಂಡಿದ್ದವು.

ಊರಿನ ದಕ್ಷಿಣ ಭಾಗದಲ್ಲಿ ಹರಿಜನರ ಗುಡಿಸಲುಗಳು ಇದ್ದವು. ಅವರಿಗಾಗಿಯೇ ಪ್ರತ್ಯೇಕ ಬಾವಿಯಿತ್ತು. ನೀರಿನ ಅಭಾವ 'ಜಲಜಾಕ್ಷಿ' ಯಿಂದ ದೂರವಾಗಿದ್ದರೂ ಸರಕಾರಿ ನಿಯಮದಂತೆ ಒಂದು ಬಾವಿ ತೋಡಿಸಲಾಗಿತ್ತು. ನೀರು ಸವುಳಿದ್ದುದರಿಂದ ಜನರು ಅದರ ಗೊಡವೆಗೇ ಹೋಗಿರಲಿಲ್ಲ.

ಬಸವಂತಗೌಡರು ತುಂಬ ದೊಡ್ಡ ಮನುಷ್ಯರು. ಊರ ಪಂಚಾಯತಿಯ ಪ್ರಮುಖರೂ ಅವರೇ. ಅಷ್ಟಿಷ್ಟು ಓದಿಕೊಂಡಿದ್ದರು. ಊರಿಗಷ್ಟೇ ಅಲ್ಲ, ಊರಿನ ಯಾವ ವ್ಯಕ್ತಿಗೂ ಸಂಬಂಧಪಟ್ಟ ವಿಷಯ ಗೌಡರ ಅವಗಾಹನೆಗೆ ಬರಲೇಬೇಕು.

ದೊಡ್ಡ ಮುಂಡಾಸ, ಬಂದ್ ಕಾಲರಿನ ಕೋಟು, ನೀಲಿ ಅಂಚಿನ ಧೋತರ, ಪಂಪ್‌ಶೂ ಮತ್ತು ಕೈಯಲ್ಲಿ ಬಡಿಗೆ ಶೀನಾಚಾರಿ ಮಾಡಿಕೊಟ್ಟ ಬಡಿಗೆ ಹಿಡಿದುಕೊಂಡು ಗೌಡರು ಊರೆಲ್ಲ ಸುತ್ತಾಡುತ್ತ ಎಲ್ಲರ ಕ್ಷೇಮ ಸಮಾಚಾರವನ್ನು ಕೇಳುತ್ತಿದ್ದರು.

ಇವರ ದರ್ಪಕ್ಕೆ ಎಲ್ಲರೂ ಅಂಜುತ್ತಿದ್ದರು. ಅಂಜಲಾರದವಳೆಂದರೆ ಹರಸೂರಿನ ಶಾರಿ. ಬಹಳ ವರ್ಷಗಳ ಹಿಂದೆ ಆಕೆ ಗಂಡನ ಜೊತೆಗೆ ಬಂದು ಗೌಡರ ಮನೆಯಲ್ಲಿ ಒಂದೆರಡು ವರ್ಷ ದುಡಿತಕ್ಕೆ ಇದ್ದಳು. ಒಂದು ದಿನ ಗಂಡ ಲಿಂಗಬಸ್ಯಾ ಆಕೆಯನ್ನು ಬಿಟ್ಟು ಓಡಿಹೋದ. ಪರದೇಶಿ ಶಾರಿಗೆ ಗೌಡರು ಆಶ್ರಯವಿತ್ತರು. ಮುಂದೆ ಒಂದೆರಡು ವರ್ಷದಲ್ಲಿ ಶಾರಿಗಾಗಿ ಪ್ರತ್ಯೇಕ ಮನೆ ಕಟ್ಟಿಸಿಕೊಟ್ಟರು.

ಚಂದನಕೇರಿಯಲ್ಲಿ ಒಂದೆರಡು ಮನೆಗಳು ಗೌಡರ ವಿರೋಧಿಗಳಾಗಿದ್ದವು. ಮೇಲ್ನೋಟಕ್ಕೆ ಯಾವ ತಿಕ್ಕಾಟವೂ ಕಾಣಿಸದಿದ್ದರೂ ಆಂತರಿಕವಾಗಿ ಹೊಗೆ ಸುತ್ತಾಡುತ್ತಿತ್ತು. ರಾಜಕೀಯ ವಲಯಗಳಲ್ಲಿಯೂ ಗೌಡರ ಪ್ರಭಾವ ಜಾಸ್ತಿ ಇದ್ದಿದ್ದರಿಂದ ಅವರ ವಿರೋಧಿಗಳು ಬಾಯಿ ಮುಚ್ಚಿಕೊಂಡು ಬಿದ್ದಿರಬೇಕಾಗಿತ್ತು.

ಸಾಹುಕಾರ ರಾಮರಾಯನಿಗೆ ಎರಡು ಅಂಗಡಿಗಳಿದ್ದವು. ಕಿರಾಣಿ ಅಂಗಡಿಯಲ್ಲಿ ತಮ್ಮ ಸಂಗಣ್ಣ ಕೂಡುತ್ತಿದ್ದ. ಬಟ್ಟೆಯ ಅಂಗಡಿಯಲ್ಲಿ ರಾಮಣ್ಣ ತಾನೇ ಕೂಡುತ್ತಿದ್ದ. ಮಧ್ಯಾಹ್ನ ಅವನಲ್ಲಿಗೆ ಚಿಲ್ಲರ ಶರಣ, ಕರಿಹೊಲದ ಸಾಬ್ಯಾ, ಸೋನಾರ ನಿಂಗ್ಯಾ. ದೀಕ್ಷಿತರ ರಾಮು, ಕುಲಕರ್ಣಿ ಭೀಮ್ಯಾ. ಸಾವಿದ ಮಸ್ತಾನ ಬರುತ್ತಿದ್ದರು. ಎಲ್ಲರೂ ಕೂಡಿಕೊಂಡು 'ಇಸ್ಪೀಟಿನ'ಆಟ ಸುರು ಮಾಡುತ್ತಿದ್ದರು.

ಒಂದು ದಿನ ಹೀಗೆ 'ಎಲೀ ಆಟ'ದ ರಂಗೇರಿತ್ತು. ಅದೇ ಹೊತ್ತಿಗೆ ಶಾರಿ ಆ ಕಡೆಯಿಂದ ಹೊರಟಿದ್ದಳು. ಎಲ್ಲರ ದೃಷ್ಟಿ ಆ ಕಡೆ ಹರಿಯಿತು. ಕುಲಕರ್ಣಿ ಭೀಮ್ಯಾನಿಗೆ ಇಲ್ಲದ ಗಂಡಸುತನ ಉಕ್ಕೇರಿ, "ಮಟಾ ಮಟಾ ಮಧ್ಯಾಣದಾಗ ತಿಕ್ಕಗೋಳಾಕ ಹೊಂಟು ದೇನಲೇ ನಿಂಗ್ಯಾ" ಅಂದ. ಶಾರಿಗೆ ಬಾಗ್ಲಂತ ಬೆಂಕಿಯಲ್ಲಿ ಕಾಲಿಟ್ಟಂತಾಯಿತು. "ರಂಡೆಮಗನ. ನಿನ್ನ ಹೊಲದಾಗ ಕುರುಬರ ಸಾಂತ ದಿನಾ ಬಿಚ್ಚಿ ಹೋಯ್ತಾನ. ಮಾತಿಲ್ಲ ಕಥಿಗೇನಿ..." ಎಂದೆಂದು ಬಿರ್ರನೆ ಹೋದಳು. ಭೀಮ್ಯಾಗೆ ಸಾಕಾದಷ್ಟು ಮುಖಭಂಗವಾಯಿತು. ಅಲ್ಲಿನ ವಾತಾವರಣ ಗಂಭೀರವಾಗಿ ಎಲ್ಲರೂ ಮನೆಗೆ ಹೋದರು.

ರಾಮಾದೀಕ್ಷಿತರ ಹಿರಿಯ ತಮ್ಮ ಕೃಷ್ಣಾದೀಕ್ಷಿತ ಚಂದನಕೇರಿಯ ಶಾಲೆಯಲ್ಲಿಯೇ ಮೆಟ್ರಿಕ್ ತನಕ ಓದಿ, ಒಂದೆರಡು ಸಲ ನಪಾಸಾಗಿ ಒಕ್ಕಲುತನಕ್ಕೆ ತನ್ನ ಜೀವನ ಮೀಸಲಾಗಿಟ್ಟಿದ್ದ. ಮನೆಯಲ್ಲಿ ಎರಡೆತ್ತಿನ ಒಕ್ಕಲುತನವಿತ್ತು. ಮನೆಯ ತುಂಬ ಅಪ್ಪ, ಅಕ್ಕ, ಅಕ್ಕನ ಮಕ್ಕಳು ಹೀಗೆ ತುಂಬಿಕೊಂಡಿತ್ತು.

ನಾರಾಯಣಶಾಸ್ತ್ರಿಗಳು ಕೃಷ್ಣಾದೀಕ್ಷಿತನ ವಿದ್ಯಾಗುರುಗಳು. ಅವರ ಮಗಳು ಅನಸೂಯಾ ಸತ್ಯವಂತಹ ಹುಡುಗಿ. ಸ್ವಲ್ಪ [illegible], ಹೆಚ್ಚು ಮಾತನಾಡುವ ಹುಡುಗಿ. [illegible] ಗಂಟಿಯೂ ಕೂಡ. [illegible] ಸಂಬಂಧಿಸಿದ ಅನೇಕ ದಂತಕಥೆಗಳು ಹುಟ್ಟ ಹತ್ತಿದವು. ನಾರಾಯಣಶಾಸ್ತ್ರಿಗಳಿಗೆ ಒಂದು ಚಿಂತೆಯಾಯಿತು. ಅವರು ತಮ್ಮ ಶಿಷ್ಯನಾದ ಕೃಷ್ಣಾದೀಕ್ಷಿತನನ್ನೇ ಕರೆಯಿಸಿ, ಮಗಳೊಂದಿಗೆ ಮದುವೆ ಮಾಡಿದರು.


ದೀಕ್ಷಿತರ ರಾಮುಭಟ್ಟ, ಕೃಷ್ಣಾದೀಕ್ಷಿತನ [illegible]



"ಒರಟಾದ, ಗಟ್ಟಿ ಕಣಗಳಿರುವ
ಟೂಥ್‌ಪೌಡರ್‌ಗಳು ನಿಮ್ಮ
ಒಸಡು ಮತ್ತು ಹಲ್ಲುಗಳಿಗೆ
ಹಾನಿಯುನ್ನುಂಟುಮಾಡಬಹುದು..."

ಕೋಲ್ಗೇಟ್ ಟೂಥ್ ಪೌಡರ್ ಬಳಸಿ ನಿಮ್ಮ ಹಲ್ಲುಗಳನ್ನೂ ಒಸಡುಗಳನ್ನೂ ರಕ್ಷಿಸಿರಿ – ಮತ್ತು ಉಸಿರಿನ ದುರ್ವಾಸನೆಯನ್ನೂ ನಿವಾರಿಸಿರಿ!





ಕೋಲ್ಗೇಟ್ ಟೂಥ್‌ಪೌಡರ್ ಅತಿ ಸೂಕ್ಷ್ಮ ಹಾಗೂ ಬಿಳುಪಾಗಿದೆ. ಅದು ನಿಮ್ಮ ಒಸಡುಗಳನ್ನು ಮೃದುವಾಗಿ ಉಜ್ಜುತ್ತಿರುವಾಗಲೇ ಅದರ ಪಾಲಿಶ್ ಮಾಡುವ ಸೌಮ್ಯ ಸತ್ವ ನಿಮ್ಮ ಹಲ್ಲುಗಳ ಮೇಲಿನ ಕೊಳೆಯ ಪದರವನ್ನು ತೆಗೆದು ಅವುಗಳನ್ನು ಅಧಿಕ ಸ್ವಚ್ಛ ಹಾಗೂ ಬಿಳಿ ಮಾಡುತ್ತದೆ. ಕೋಲ್ಗೇಟ್‌ನ ಹೇರಳ ನೊರೆ ನಿಮ್ಮ ಹಲ್ಲುಗಳ ಎಡೆಗಳನ್ನು ಪ್ರವೇಶಿಸಿ, ದುರ್ಗಂಧವನ್ನೂ ದಂತಕ್ಷಯವನ್ನೂ ಉಂಟುಮಾಡುವ ಕೀಟಾಣುಗಳನ್ನು ನಿವಾರಿಸುತ್ತದೆ; ಮತ್ತು ಶ್ವಾಸದ ದುರ್ಗಂಧವನ್ನು ದೂರಗೊಳಿಸುತ್ತದೆ.

ನಿಮ್ಮ ಕುಟುಂಬದವರಿಗೆ ಕೋಲ್ಗೇಟ್ ಟೂಥ್‌ಪೌಡರ್‌ನ ಮೂಲಕ ಆಧುನಿಕ ದಂತರಕ್ಷಣೆಯನ್ನು ನೀಡಿರಿ. ಅವರಿಗೆ ಅದರ ಶೀತಲವಾದ ಹಾಗೂ ಪೆಪ್ಪರ್‌ಮಿಂಟ್‌ನಂತಹ ಪರಿಮಳ ಇಷ್ಟವಾಗುವುದು.

TP.0.30 KN

ಅಣ್ಣ. ಇವನೂ ಒಂದು ರೀತಿಯ ಬೀಜವಾಪ್ಪಾರಿಯ ಜೀವ–ಮದುವೆ ಮಾಡಿಕೊಂಡಿರಲಿಲ್ಲ. ವಯಸ್ಸು ಸುಮಾರು ನಲವತ್ತು. ಕಪ್ಪು ಮೈ. ಬೋಳಿಸಿದ ತಲೆಯ ಮೇಲೆ ದಪ್ಪ ಜುಟ್ಟು. ಮೈಯಲ್ಲಿ ದಪ್ಪ ಹಗ್ಗದಂತೆ ಕಾಣುವ ಕೊಳಕು ಜನಿವಾರ. ಎದೆಕಿವಿಯ ಮೇಲ್ಭಾಗದಲ್ಲಿ ತಾಮ್ರದ ತಂತಿ. ಹೊರಗೆ ಬಿದ್ದರೆ ಟೊಂಕಕ್ಕೆ ಲಂಡಪಂಚೆ ಮತ್ತು ಮೈಯಲ್ಲೊಂದು ಗುಂಡಿಗಳಿಲ್ಲದ ಫುಲ್‌ಶರ್ಟು. ಈತ ಸಾಹುಕಾರ ಶಾಮಣ್ಣನ ಅಂತರಂಗದ ಗೆಳೆಯನಾಗಿದ್ದ. ಚೂರುಚಾರು ವೈದಿಕ ವಿದ್ಯೆಯನ್ನು ಕಲಿತಿದ್ದ. ಲಗ್ನ ಮುಹೂರ್ತ, ದಿವಸ ವಾರ ಮಾಡಿಸುವಲ್ಲಿ ಅವನ ಹಾಜರಿ ಇರಲೇಬೇಕು. ರಾಮಾಭಟ್ಟರ ಮದುವೆ ಏಕಾಗಲಿಲ್ಲ ಎಂಬುದಕ್ಕೊಂದೆರಡು ಕಥೆಗಳು ಊರಿನ ಗಾಳಿಯಲ್ಲಿ ತೇಲಾಡುತ್ತಿದ್ದವು.

ಒಂದು ದಿನ ಕುಲಕರ್ಣಿ ಭೀಮನ ಮನೆಯ ಮುಂದೆ ಯಾರೋ ಸಾರಿಸಿ, ಕುಂಕುಮ, ಹಳದಿ, ರಂಗೋಲಿ ಹಾಕಿ, ಎರಡು ಬಾಳೆಹಣ್ಣು, ಒಂದು ತೆಂಗಿನಕಾಯಿ, ನಾಲ್ಕು ಸೂಜಿ, ಮೂರು ಕೇರುಬೀಜ ಇಟ್ಟಿದ್ದರು. ಅದರ ತೀರ ಹತ್ತಿರದಲ್ಲಿ ಮುತ್ತಲೆಲೆಯಲ್ಲಿ ಹೊಲಸಿಟ್ಟಿದ್ದರು.

ಭೀಮ ನೋಡುತ್ತಲೆ ಚಟ್ಟನೆ ಚೀರಿ ಗಡಗಡ ನಡುಗಲಾರಂಭಿಸಿದ. ಮಗನ ಅವಸ್ಥೆ ನೋಡಿ ಅವರವ್ವ ರತ್ನಾಬಾಯಿ ಗಾಬರಿಯಾದಳು. ಅಷ್ಟರಲ್ಲಿ ಅಲ್ಲಿಗೆ ಬಂದ ಕೆಲಸ ಮಾಡುವ ಚನ್ನಿ, "ಏನಾಯ್ತು? ಯಾಕ ಹಿಂಗ ಹೆದ್ರಿ ನಡ್ಗತೀರಿ… ಯಾವದೋ ಕಸಬಾರ್‍ಗಿ ಕುತಂತ್ರ ಮಾಡ್ಯಾಳ್ತು. ಈಗ ನಾ ರಜಗಿಲದಿಂದ ಬಳದು ಸಾಫ ಮಾಡ್ತೀನಿ. ನಡೀರಿ ಮನಿವಳಗ, ನೋಡ್ದವ್ರೇನಂದಾರು? ಫಕ್ಕ ಹಾರೋರಂತ ಕಿಸಿಕಿಸಿ ನಕ್ಕಾರು" ಎಂದು ಬಾರಿಗೆಯಿಂದ ಆ ಮಾಡಿಸಿಟ್ಟದ್ದನ್ನೆಲ್ಲ ಆಚೆ ದಬ್ಬಿಬಿಟ್ಟಳು. ಭೀಮ ನೇರ ಅಲ್ಲಿಂದ ಬಚ್ಚಲು ಮನೆಗೆ ಹೋದ.

ಮಧ್ಯಾಹ್ನ ಸಾಹುಕಾರ ಶಾಮಣ್ಣನ ಅಂಗಡಿಯಲ್ಲಿ ಇಸ್ಪೇಟ್ ಆಡುವಾಗ ಭೀಮ್ಯಾನ ಪ್ರಸಂಗ ಬಂತು. ಇದು ಶಾರಿಯ ಕುತಂತ್ರವೇ ಇರಬೇಕೆಂದು ಎಲ್ಲರೂ ನಿರ್ಧರಿಸಿ, ಇನ್ನುಮುಂದೆ ಹೀಗೆ ಮಾಡದಂತೆ ಆಕೆಗೆ ಬುದ್ಧಿವಾದ ಹೇಳಲು ರಾಮಾದೀಕ್ಷಿತನನ್ನು ಕಳುಹಿಸಬೇಕೆಂದು ಒಮ್ಮತದಿಂದ ನಿರ್ಧರಿಸಿದರು. ಅದೇ ಸಮಯಕ್ಕೆ ಚಹಾ ಕಾಸಿ ತಂದ ಬಸಮ್ಮ (ಸಾಹುಕಾರ ಶಾಮಣ್ಣನ ಪತ್ನಿ) ಆ ಕೆಲಸಕ್ಕೆ ರಾಮಾದೀಕ್ಷಿತನನ್ನು ಆರಿಸಿದ್ದಕ್ಕಾಗಿ ನಗು ತಡೆಯದೆ ಕಿಸಕ್ಕನೆ ನಕ್ಕಳು. ಅವಳು ನಕ್ಕಿದ್ದು ಎಲ್ಲರ ಗಮನಕ್ಕೂ ಬಂತು.

೭

ಬೇಸಿಗೆಯ ದಿನಗಳು. ಮದುವೆಯ ಮೋಸಮ್. ಅಂಗಡಿಯಲ್ಲಿ ಹೊಸ ಸ್ಟಾಕ್ ಇಡುವುದು ಅವಶ್ಯಕ. ಖರೀದಿಗೆಂದು ಶಾಮಣ್ಣ ಮುಂಬಯಿಗೆ ಹೋಗಿ ಸುಮಾರು ದಿನಗಳಾಗಿದ್ದವು. ಅವನಿಂದ ಪತ್ರ ಬಂದ ಕೂಡಲೆ ಬಸಮ್ಮ ಮನೆಗೆಲಸದ ನಾಗಮ್ಮನನ್ನು ಕಳಿಸಿ ರಾಮಾದೀಕ್ಷಿತರನ್ನು ಕರೆಯಿಸಿದಳು. ಅತ್ತ ಕಷ್ಟ ಮುಗಿಸಿ, ಜಳಕ ಮಾಡಿಕೊಂಡು ಕೂಡಲೇ ಹೊರಟು ಬಂದ. ಬಸಮ್ಮ ಕೊಟ್ಟ ಪತ್ರ ಓದಿ ಹೇಳಿದ. ಇನ್ನೂ ಕೆಲವು ದಿನ ಬರುವುದು ಸಾಧ್ಯವಿಲ್ಲೆಂದು ಶಾಮಣ್ಣ ಬರೆದಿದ್ದ.

ಮನೆಯಲ್ಲಿ ಮತ್ತಾರೂ ಇರಲಿಲ್ಲ. ಬಸಮ್ಮ ಅಬ್ಬರಿಸಿ ಬಂದು ದೀಕ್ಷಿತನ ಮೈಮೇಲೆ ಬಿದ್ದಳು. ಹಾವಿನಂತೆ ಬುಸುಗುಟ್ಟುತ್ತ ಅವನ ಮೈಯಿಗೆ ಸೇರುತ್ತಿದ್ದಳು. ದೀಕ್ಷಿತ ಮಂಕನಾದ. ಮೈ ಬೆವರಿತು. ಸರ್ರನೆ ಅವಳ ಹಿಡಿತದಿಂದ ಪಾರಾಗಿ ದೂರ ನಿಂತ, "ಬಿಡ್ರಿ…ಬಿಡ್ರಿ…ಯಾರಿಗೂ ಗೊತ್ತಾಗಂಗಿಲ್ಲ. ಬಿಡ್ರಿ…ನಿಮ್ಗ ಪುಣ್ಯ ಬರ್ತದ… ಹಸಿದ್ಯಾಗೇದ ಬಿಡ್ರಿ…" ಎಂದು ಅವನ ಕೈ ಹಿಡಿದು ಜಗ್ಗಿದಳು ಬಸಮ್ಮ. ದೀಕ್ಷಿತ ಗಾಬರಿಯಿಂದ ನಡುಗುತ್ತ, "ಬ್ಯಾಡ ಇವೊತ್ತು ರಾಮನವಮಿ" ಎಂದು ಥಟ್ಟನೇ ಹೊರಟುಬಿಟ್ಟ.

೮

ಬಸಮ್ಮ ಯಾಕೆ ನಕ್ಕಿರಬೇಕು. ಎನ್ನುವ ರಹಸ್ಯ ಯಾರಿಗೂ ತಿಳಿಯಲಿಲ್ಲ. ಎಲ್ಲರೂ ಅವಳು ತಂದಿಟ್ಟ ಚಹ ಕುಡಿದರು. ಬಸಮ್ಮ ಕೊಟ್ಟ ಕೆನೆ ಹಾಕಿದ ಚಹ ಕುಡಿಯುತ್ತ, ನೇಕಾರ ಸಿಂಗಣ್ಣ ಜಗತ್ತನ್ನೇ ಮರೆತಿದ್ದ.

ರಾಮಾದೀಕ್ಷಿತ ಬಂದ ಕೂಡಲೇ ಸಿಂಗಣ್ಣ,

"ನೀವು ಈಗಿಂದೀಗ ಹೋಗಿ, ಇನ್ನು ಮುಂದೆ ಕುಲಕರ್ಣಿ ಭೀಮ್ಯಾಗೆ ತ್ರಾಸಾಗಬಾರದೂ ಹಾಂಗ ಮಾಡುಂತ ಶಾರಿಗೆ ಖಡಾಖಂಡಿತ ತಿಳಿಸಬೇಕು," ಎಂದ. ರಾಮಾದೀಕ್ಷಿತ ಶಾಮಣ್ಣನ ಬಾಯಿಂದ ಎಲ್ಲ ವೃತ್ತಾಂತ ಕೇಳಿ, ಶಾರಿ ಮನೆಗೆ ಹೋಗಲು [illegible]. ಎಲ್ಲರೂ ಹೊರಟುಹೋದ ಮೇಲೆ [illegible] "ನಿಮ್ಮ ಅನುಮಾನದ ಮ್ಯಾಲ [illegible] ನಾಳೆ ಮುಂದೆನಂದಾರು? ಶಾಮ್ಯಾ, ಹೋಗಿ ಬಂದ, ಶಾರಿ ತನ್ನ ತಪ್ಪೊಪ್ಪಿಕೊಂಡಳು ಅಂತ ಹೇಳಿ ಬಿಟ್ರ ಆಯ್ತು," ಎಂದ. ರಾಮಾದೀಕ್ಷಿತ ಒಪ್ಪಿದ.

೫

ಗೌಡರ ಜಾಗೀರ ಹೊಲದಲ್ಲಿ ಜೋಳದ ಹಂತಿ ನಡೆದ್ದವು. ದೊಡ್ಡ ಹೊಲ. ನೂರಾರು ಚೀಲ



"ಬಡ್ಡೀ ಮಕ್ಕಳಿಗೆ ನನ್ನ ತಲೆಯಲ್ಲಿ ರಾರಾಜಿಸುವ ಟೋಪ್ಪಿಗೆ ಕಾಣಿಸುತ್ತಲೇ ಇಲ್ಲ; 'ಏನಿದೆ ಅವನ ತಲೆಯಲ್ಲಿ? ಬರೀ ಮಣ್ಣು!' ಅಂತ ನಗ್ತಾರೆ."

ಜೋಳ ಆಗುವ ಸಂಭವವಿತ್ತು. ಹಂತಿಗೆಂದು ಗೌಡರು ಚಂದನಕೇರಿಯ ಪ್ರತಿಯೊಂದು ಮನೆಗೂ ಹೇಳಿ ಕಳಿಸುತ್ತಿದ್ದರು. ಸಾಹುಕಾರ ಶಾಮಣ್ಣ, ಕುಲಕರ್ಣಿ ಭೀಮ, ರಾಮಾದೀಕ್ಷಿತರ ಹೊರತಾಗಿ ಯಾರೂ ಹಂತಿಗೆ ತಪ್ಪಿಸುತ್ತಿರಲಿಲ್ಲ.

ಬಂದ ಮಂದಿಗಾಗಿ ಗೌಡರು ಸಜ್ಜೆ ರೊಟ್ಟಿ, ಎಣ್ಣೆ ಬದನೆಕಾಯಿ, ಶೇಂಗಾದ ಹಿಂಡಿ, ಕೆನೆಮೊಸರು, ಎಣ್ಣೆ ಹೋಳಿಗೆ, ಅನ್ನ, ಸಾಂಬಾರು, ಉಳ್ಳಾಗಡ್ಡಿ ಖಾರ–ಚಟ್ನಿ; ಒಗ್ಗರಣೆ ಹಾಕಿದ ಮಜ್ಜಿಗೆ ಮಾಡಿಸಿದ್ದರು. ದೀಪ ಮುಟ್ಟಿಸುವ ಹೊತ್ತಿಗೆ ಗೌಡರ ಹೊಲದಲ್ಲಿ ತುಂಬ ಜನ ಬಂದು ಸೇರಿದರು. ಗೌಡರ ಹೆಂಡತಿ ಕಾಶೀಬಾಯಿ, ಅವರ ತಂಗಿ ನೀಲಮ್ಮ, ತಮ್ಮನ ಹೆಂಡತಿ ಗಂಗಾಬಾಯಿ ಮತ್ತು ಶಾರಿ ಹೀಗೆ ಕೆಲವರು ಬಡಿಸುವ ಕೆಲಸ ಶುರು ಮಾಡಿದರು. ಭರ್ಜರಿ ಊಟ ನಡೆಯಿತು. ಗೌಡರು ಮಾತ್ರ ವೈದ್ಯರ ಸಲಹೆ ಪ್ರಕಾರ ಕೇವಲ ಹಾಲು ಹಣ್ಣು ತಿಂದರು. ಊಟ ಮುಗಿದ ಮೇಲೆ ಎಂಟರ ತ್ತಿನ ಹಂತಿ ಹೂಡಲಾಯಿತು. ಹಲಗೆ, ಡಪ್ಪು ಬಾರಿಸುವುದು ನಡೆಯಿತು. ಆಳುಮಕ್ಕಳು ಕೇಕೆ ಹಾಕಿ, ಹಾಡಿ ಕುಣಿಯುತ್ತಿದ್ದರು.

ಹಂತಿ ತಪ್ಪಿಸುವ ಉದ್ದೇಶದಿಂದ ಸಾಹುಕಾರ ಶಾಮಣ್ಣ ಮತ್ತು ಕುಲಕರ್ಣಿ ಭೀಮ್ಯಾ ಇಬ್ಬರೂ ಅಂದು ಬೆಳಿಗ್ಗೆ ಕೆಲಸದ ನೆಪ ಮಾಡಿ ಸರ್ವೀಸಿನಿಂದ ಕಲಬುರ್ಗಿಗೆ ಬರುತ್ತಿದ್ದರು. ತಿಂಡಿ, ಚಹಾ–ಎಲ್ಲ ಮುಗಿಸಿ ಬಾಜಾರಿನಲ್ಲಿ ಸುತ್ತಾಡಿ ಅನಂತರ ಸಿನೆಮಾ ನೋಡುತ್ತಿದ್ದರು. ಅನಂತರ ಊಟ ಮುಗಿಸಿ ಪಾನ-ಸುಪಾರಿಯಿಂದ ಬಾಯಿ ಕೆಂಪು ಮಾಡಿಕೊಂಡು ಅಚ್ಚಾಸಾನಿ, ರಂಗಸಾನಿ ಇಲ್ಲವೆ ಅಂಬವ್ವಾ, ನೂರುನ್ನಿಸಾ ಅಥವಾ ಫಕೀರವ್ವ, ವೆಂಕಟಮ್ಮಾರ ಮನೆ ಬಾಗಿಲಿಗೆ ನಿಂತು ಧಾರಣೆ ಹೊಂದಿಸಿ, ಜಮಾಯಿಸಿದಲ್ಲಿ ಹೊಕ್ಕು ಹೊರಬರುವಾಗ ರಾತ್ರಿ ಹನ್ನೆರಡು–ಒಂದಾಗುತ್ತಿತ್ತು. ತರುವಾಯ ಹತ್ತಿರದ ಲಾಜಿಂಗ್‌ನಲ್ಲಿ ಕಾಟ್ ಹಿಡಿದು ಮಲಗಿ ಮರುದಿನ ಚಂದನಕೇರಿಗೆ ಬರುತ್ತಿದ್ದರು. ಪ್ರತಿ ವರ್ಷ ಹಂತಿ ದಿನ ಹೀಗೆ ಮಾಡುತ್ತಿದ್ದರು.

ಹಟಮಾರಿ ಕರಿಹೊಲದ ಬಸ್ಯಾ ಆ ದಿನ ಗೌಡರ ಹಂತೀ ಹೊಲದಲ್ಲಿ ಕಂಡದ್ದು ಎಲ್ಲರಿಗೂ ಆಶ್ಚರ್ಯವನ್ನುಂಟುಮಾಡಿತು. ಸಾಬ್ಯಾ ತನ್ನ ಮಟ್ಟಿಗೆ

ಒಂದು ಹೊಲ ಮತ್ತು ಒಂದು ಗುಡಿಸಲು ನಮೂನೆಯ ಮನೆಯಿಂದ ಸಂತೃಪ್ತನಾಗಿದ್ದ. ಇವನು ತಾಯಿಯ ಕಡೆಯಿಂದ ಕೊರವ. ತಂದೆಯ ಕಡೆಯಿಂದ ಲಿಂಗಾಯತ ಜಾತಿಯವನಾಗಿದ್ದ. ಇವನ ತಂದೆ ಗುರುಲಿಂಗನು ಹಿಂದೆ ರಜಾಕಾರರ ಹಾವಳಿಯಲ್ಲಿ ತೋರಿಸಿದ್ದ ಸಾಹಸವನ್ನು ಎಲ್ಲರೂ ಕೊಂಡಾಡುತ್ತಿದ್ದರು. ರಜಾಕಾರರು ದಾಳಿ ಮಾಡಿದಾಗ ತನ್ನ ಸಹಾಯಕ್ಕೆ ಬಾರದೇ ಸಾಹುಕಾರನ ಸಹಾಯಕ್ಕೆ ಹೋಗಿದ್ದರು ಎಂಬ ಭಾವನೆಯಿಂದ ಗೌಡರಿಗೆ ಗುರುಲಿಂಗ ಮತ್ತು ಸಾಬ್ಯಾನ ಮೇಲೆ ಸಿಟ್ಟಿತ್ತು. ನಿಜವಾಗಿ ಅವರ ತಪ್ಪೇನಿರಲಿಲ್ಲ.

ಪೋಲೀಸ್ ಆಕ್ಷ್ಯನ್ ಆದಮೇಲೆ ಸಾಬ್ಯಾ ಚಂದನಕೇರಿಗೆ ಮರಳಿ ಬಂದಿದ್ದ. ಈ ನಡುವೆ ಗುರುಲಿಂಗ ಸತ್ತುಹೋಗಿದ್ದ. ಗೌಡರ ಉಪೇಕ್ಷೆಯಿಂದ ಸಾಬ್ಯಾ ದೂರೇ ಇದ್ದ. ಹೀಗಾಗಿ ಸ್ವಾಭಾವಿಕವಾಗಿ ಗೌಡರ ಪ್ರತಿಸ್ಪರ್ಧಿಗಳಾದ ಸಾಹುಕಾರ ಶಾಮಣ್ಣ, ಇನ್ನಿತರ ಜನರ ಗುಂಪಿಗೆ ಸೇರಿಕೊಂಡ.

ಹೊಲಕ್ಕೆ ಬಂದ ಸಾಬ್ಯಾನನ್ನು ಗೌಡರು ಕರೆದು, "ಯಾಕ ಸಾಬಣ್ಣಾ, ಈ ಕಡೀ ದಾರಿ ತಪ್ಪಿ ಬಂದ್ಹಾಂಗದ?" ಎಂದು ಕೇಳಿದರು. ಸಾಬ್ಯಾ, "ಏನಿಲ್ಲ, ಗೌಡ್ರ, ಈ ಸಲ ನನ್ನ ಹೊಲ್ದಾಗ ಒಂದು ಭಾಂವಿ ತೋಡ್ಸಬೇಕಂತ ಮಾಡೀನಿ, ತಹಸೀಲ ಕಚೇರ್ಯಾಗ ದರಖಾಸ್ತನೂ ಕೊಟ್ಟೇನಿ, ತಕಾವಿ ಸಾಲಕ್ಕಂತ. ನೀವು ಒಂದೀಟು ಪ್ರಯತ್ನ ಮಾಡಿದ್ರ ಬಡವ್ಗ ಉಪಕಾರ ಮಾಡಿದ್ಹಂಗಾಗ್ತದ" ಎಂದ. ಗೌಡರು, "ಅದರೊಳಗೇನದ ಸಾಬಣ್ಣಾ, ಒಂದೆರಡದಿನ ತಡೀ; ಇದೀಟು ರಾಶಿ ಮುಗೀಲಿ. ಮುಗೀತಂದ್ರ ನಾ ಖುದ್ದಾಗಿ ನಿನ್ನ ಜೆತೀಗಿ ಬಂದು ನಿನ್ನ ಕೆಲ್ಸಾ ಮಾಡ್ಸತೀನಂತ," ಎಂದರು.

ಸಾಬ್ಯಾ ಗೌಡರ ಕಡೆಗೆ ಸೇರಿದ್ದು ಸಾಹುಕಾರ ಶಾಮಣ್ಣನಿಗೆ ಬೆಂಕಿ ಇಟ್ಟಂತಾಯಿತು. "ಕೆಳಜಾತೀವು; ನಂಬೂದೇ ಕಷ್ಟ" ಎಂದು ತನ್ನ ಗೆಳೆಯರ ಮುಂದೆ ಆಡಿಕೊಂಡ. ಸಾಬ್ಯಾ ನಾಲ್ಕಾರು ದಿನ ಸಾಹುಕಾರನ ಮನೆಯ ಕಡೆಗೆ ಹಾಯ್ದೇ ಇರಲಿಲ್ಲ. ಒಂದು ದಿನ ಶಾಮಣ್ಣನೇ ಸಾಬ್ಯಾನ ಮನೆಗೆ ಬಂದ. "ಈಗೇನೋ ಗೌಡ್ರ ಜೆತಿ ಕಟ್ಟೇದಂತ ಕೇಳೀನಿ; ನೀ ಯಾರ ಕಡೀಂದ ಸಹಾಯ ತಗೊಂಡ್ರು ನನ್ಗ ಸಂತೋಷನೇ. ಖರೇವಂದ್ರ ನನ್ನ ದುಃಖವಾಗಿದ್ದು ಸಾಬಣ್ಣ ಒಂದು ಮಾತು ನನ್ನ ಕಿವಿಮ್ಯಾಲ್ಹಾಕಿದ ಲಿಲ್ಲಾಂತ. ನಾ ನಿನ್ನ ದುಷ್ಮನಿದ್ನ," ಎಂದು ಬೇಜಾರುಮಾಡ್ಕೊಂಡ. ಸಾಬ್ಯಾನಿಗೆ ತಾನು ಮಾಡಿದ್ದು ತಪ್ಪೆನಿಸಿ ಮೌನ ವಹಿಸಿದ. ಸಾಬ್ಯಾನ ಹೆಂಡತಿ ರುಕ್ಕವ್ವ ಕಿವಿಮುರಿದ ಕಪ್ಪಿನಲ್ಲಿ ಚಹ ತಂದಿತ್ತಳು. ಆಕರ್ಷಕ ಅಂಗಾಂಗದ ಅವಳು ಶಾಮಣ್ಣನ ಕಣ್ಣಿಗೆ ತುಂಬಿದ ಹೊಲದಂತೆ ಕಂಡಳು. ಚಹ ಮುಗಿಸಿ ಹೊರಡುತ್ತ, "ಸಂಜೆಗಿ ದುಕಾನ ಕಡೀಗ ಬಾ ಸಾಬಣ್ಣ, ಮಾತಾಡೋಣಂತ" ಎಂದ ಶಾಮಣ್ಣ.

೬

ಸಾಬ್ಯಾ ಬಂದಾಗ ಶಾಮಣ್ಣನ ಎಲ್ಲಾ ದೋಸ್ತ್ ಗೆಳೆಯರೂ ಬಂದಿದ್ದರು. ಆಟ ಮಾತ್ರ ನಡೆದಿದ್ದಿಲ್ಲ. ಕುಲಕರ್ಣಿ ಭೀಮು, ಹಿಂದಿನ ರಾತ್ರಿ ಅನುಭವಿಸಿದ್ದ ಹೀಡೆಯನ್ನು ಹೇಳುತ್ತಿದ್ದ–"ಸಂದ ನಿದ್ದೀ ಹತ್ತಿರ ಬೇಕು. ಖೋಲ್ಯಾಗ ಜೇಂ ಅಂತ ಏನೋ ಶಬ್ದ ಕೇಳಿಸ್ತು. ನೋಡ್ದ ಕಣ್ತೆರೆದು. ಎರಡು ಗೊಂಬೆಗೋಳು ನನ್ನೆದಿಮ್ಯಾಲ ತೂಗಾಡಲಿಕತ್ತಿದ್ವು. ಅವುಗಳ ಕೈಯಾಗ ಸೂಜಿ, ದಬ್ಣ, ಇದ್ದೂ ಕೊಳ್ಳೊಳಗ ಕ್ಯಾರಕಾಯಿ ಸರವಿತ್ತು. ಗೊಂಬಿಗಳ ಕಣ್ಣಾಗ, ಮೂಗನ್ಯಾಗ, ಬಾಯಾಗ ಸೂಜೀ ಚುಚ್ಚಿದವು. ಮೈಯ್ಯಾಗ ಬೆಂಕಿ ಇಟ್ಟಂತಾಯ್ತು. ಚೀರಬೇಕು ಅಂದ್ರ ಬಾಯಿಲಿಂದ ದನೀನೇ ಏಳಲ್ಲ. ದನ ಒದ್ಯಾಡಿದ್ಹಾಂಗ ಕೈ ಕಾಲ ಬಡಿದು ಒದ್ಯಾಡ್ಲಿಕತ್ತಿದ್ದೆ... ಈ ಸಂಕಟ ದುಶ್ಮನರಿಗೂ ಬರಬಾರ್ದ್ರಪ್ಪಾ" ಎಂದು ಕಣ್ಣೀರು ಸುರಿಸತೊಡಗಿದ. ಎಲ್ಲರೂ ಅಸಹಾಯಕರಾಗಿದ್ದರು. ಬಸಮ್ಮ ತಡಮಾಡದೆ ದೇವರ ಪಟದ ಮುಂದೆ ದೀಪ ಹಚ್ಚಿ, ಊದಿನಕಡ್ಡಿಯಿಂದ ಬೆಳಗಿ, ಮನಸ್ಸಿನಲ್ಲಿಯೇ ಏನೇನೋ ಬೇಡಿಕೊಂಡಳು.

ಎಲ್ಲರೂ ಕುಲಕರ್ಣಿ ಭೀಮುನ ಕಡೆ ನೋಡುತ್ತಿದ್ದಂತೆ ಅವನ ಮುಖ ವಿಕೃತವಾಗತೊಡಗಿತು. ನೋಡನೋಡುತ್ತಲೆ, "ಬಂತು......ಬಂತು...... ಉಳಿಸ್ರಿ...ಸತ್ತೆ ಅಪ್ಪಾss ಬಂತೂ"ss ಎಂದು ಚಿಟ್ಟನೆ ಚೀರಿ ನೆಲದ ಮೇಲೆ ಉರುಳಿದ. ಪ್ರಜ್ಞೆ ತಪ್ಪಿತು. ಇದೇ ಸಮಯಕ್ಕೆ ಸಾಬ್ಯಾ, "ಧಾರಾಮತಿ ಭಾಳ ಖೋಡ್ಯಾಟ. ನಮ್ಮ ಮಠದ ಸ್ವಾಮೇರು

ಉದ್ಯೋಗ ಭರವಸೆ

ಕರ್ನಾಟಕ ಸರಕಾರ ೧೯೭೯ ರ ಮಾರ್ಚ್ ೧ನೇ ತಾರೀಖಿನಿಂದ ಉದ್ಯೋಗ ಭರವಸೆ ಯೋಜನೆಯನ್ನು ಜಾರಿಗೆ ತಂದಿದೆ.

ಸುಗ್ಗಿಯ ನಂತರ ಕೃಷಿ ಕಾರ್ಯಗಳಿಲ್ಲದ ಕಾಲದಲ್ಲಿ ಕುಶಲ ಕರ್ಮಿಗಳಲ್ಲದ, ಕೃಷಿ ಕಾರ್ಮಿಕರಿಗೆ ಈ ಯೋಜನೆಯು ಮೇರೆಗೆ ವರ್ಷದಲ್ಲಿ ಕನಿಷ್ಟ ೧೦೦ ದಿನಗಳ ಕೆಲಸವನ್ನು ಸರ್ಕಾರ ಒದಗಿಸುವುದು. ೪೫ ಅಭಿವೃದ್ಧಿ ಕ್ಷೇತ್ರಗಳಲ್ಲಿ ಈ ಯೋಜನೆಯನ್ನು ಪ್ರಾರಂಭಿಸಲಾಗಿದೆ. ೧೯೭೯-೮೦ ರಲ್ಲಿ ಇನ್ನೂ ೪೫ ಬ್ಲಾಕುಗಳಿಗೆ ಈ ಯೋಜನೆಯನ್ನು ವಿಸ್ತರಿಸಲಾಗುವುದು. ೧೯೮೩ ರ ವೇಳೆಗೆ ರಾಜ್ಯದ ಎಲ್ಲಾ ತಾಲ್ಲೂಕುಗಳಿಗೂ ಈ ಯೋಜನೆ ಅನ್ವಯವಾಗಲಿದೆ.

ಈ ಯೋಜನೆಯನ್ವಯ ಕೆಲಸ ಮಾಡುವ ಕಾರ್ಮಿಕರಿಗೆ ವೇತನದಲ್ಲಿ ಮೂರನೆಯ ಎರಡು ಭಾಗವನ್ನು ಧಾನ್ಯದ ರೂಪದಲ್ಲಿ ಕೊಡಲಾಗುವುದು.

ಸಣ್ಣ ನೀರಾವರಿ, ಕೆರೆಯ ಹೂಳೆತ್ತುವುದು, ಮೀನುಗಾರಿಕೆ ಅಭಿವೃದ್ಧಿ, ಮಧ್ಯಮ ಹಾಗೂ ದೊಡ್ಡ ನೀರಾವರಿ ಯೋಜನೆಗಳ ಕಾಲುವೆ ರಚನೆ, ಭೂ ಅಭಿವೃದ್ಧಿ, ಅರಣ್ಯಾಭಿವೃದ್ಧಿ ಮತ್ತು ಕೃಷಿ ಎಸ್ಟೇಟುಗಳು ಮುಂತಾದ ನೇರ ಉತ್ಪಾದಕ ಕಾಮಗಾರಿಗಳಲ್ಲಿ ಕೆಲಸ ಕೊಡಲಾಗುವುದು.

ಕರ್ನಾಟಕ ಸರಕಾರದ ವಾರ್ತಾ ಮತ್ತು ಪ್ರಚಾರ ಇಲಾಖೆಯ ಪ್ರಕಟಣೆ.

ಸಾಕ್ಷಾತ್ ದೇವ್ರಂತವ್ರು. ಮಂತ್ರಾ ಮಾಟಾ, ದೆವ್ವ ಭೂತ ಅವರಿಗಂಜಿ ಥರಾಥರಾ ನಡ್ಗತಾವು. ಅದಕ ಅಂತೀನಿ ಅಪಗೋಳ ನಜರೀಗ್ಹಾಕಿದ್ರು"– ಅನ್ನುವಾಗ ದೂರದಿಂದ ಅಪ್ಪಗೋಳು ತಮ್ಮ ಕಾರ್ಯಕ್ರಮವನ್ನು ಮುಗಿಸಿಕೊಂಡು ಬರುತ್ತಿದ್ದುದು ಕಾಣಿಸಿತು. ಸಾಬ್ಯಾ ಉತ್ಸಾಹದಿಂದ, "ಅಗಾ, ಅಪ್ಪಗೋಳು ಈ ಕಡೀನೆ ಹೊಂಟಾರ. ಅವ್ರ ಪಾದ ತೊಳ್ದ ನೀರು ಭೀಮರಾಯನ ಬಾಯಾಗ ಹಾಕಿದ್ರ, ಕಣ್ಮುಚ್ಚಿ ಕಣ್ತೆರೆದರಾಗ ಎದ್ದು ಕೂಡಲಿಲ್ಲಾಂದ್ರ ಕೇಳಂತ," ಎಂದ. ಭೂಸುರನ ಬಾಯಿಯಲ್ಲಿ ಯಾವನೋ ಸ್ವಾಮಿಯ ಪಾದೋಕವೆ? ದೀಕ್ಷಿತನಿಗೆ ಭಯಂಕರ ಕಸಿವಿಸಿಯಾಯಿತು. ಹೇಗಾದರೂ ಭೀಮ ಬದುಕಿದರೆ ಸಾಕೆಂದು ಶಾಮಣ್ಣ ಅಪಗೋಳ್ನ ಕರಕೊಂಡು ಬರಲಿಕ್ಕೆ ಒಬ್ಬ ಹುಡುಗನನ್ನು ಕಳಿಸಿದ. ವಿಷಯ ತಿಳಿದ ಅವರು ಹತ್ತಿರದ ಇನ್ನೊಂದು ಓಣಿಯಲ್ಲಿ ಸೇರಿ ಮಾಯವಾದರು. ಎಲ್ಲರೂ ನಿರಾಶರಾದರು. "ಕುಲಕರ್ಣಿ ಭೀಮ ಹಾರುವ; ಅದ್ಕ ಅಪ್ಪಗೋಳ ಬರ್ಲಿಲ್ಲ" ಎಂದು ಸಾಬ್ಯಾ ಭೀಮ್ಯಾನ ಸತ್ಯಭಾಮಾ ಮನೆಗೆ ಕರೆದುಕೊಂಡು ಹೋದಳು. ಒಬ್ಬೊಬ್ಬರೂ ಎದ್ದು ಹೊರಟರು.

೭

ಹಳ್ಳಿಹಳ್ಳಿಗೆ ವಿದ್ಯುತ್ ಕೊಡುವ ಮಹಾನ್ ಸರಕಾರಿ ಯೋಜನೆಯಲ್ಲಿ ರಸ್ತೆ ಓಣಿಗಳಲ್ಲಿ ವಿದ್ಯುತ್ ಇಲಾಖೆಯ ಕಂಬಗಳು ನಿಂತಿದ್ದವು. ಮೇಲೆ ತಂತಿಗಳೂ ಜಗಿದಿದ್ದವು. ಆದರೆ ಪಂಚಾಯತಿಯವರು ಟ್ಯಾಕ್ಸ್ ಕೊಡಲು ಸಾಧ್ಯವಿಲ್ಲೆಂದು ತಿಳಿಸಿದ್ದಕ್ಕಾಗಿ ಹಿಂದಿನ ಮೂರು ವರ್ಷಗಳಿಂದ ಬೆಳಕು ಕಾಣದ ಚಂದನಕೇರಿಯ ಗಲ್ಲಿ ರಸ್ತೆಗಳು ಅನಾಥವಾಗಿದ್ದವು.

ಬಹಳ ಹಿಂದೆ ಬಹಮನಿ ಸುಲ್ತಾನರು ರಾಜ್ಯ ಆಳುವಾಗ ಚಂದನಕೇರಿ ಒಂದು ಪ್ರಮುಖ ಪಟ್ಟಣವಾಗಿತ್ತಂತೆ. ಇಲ್ಲಿ ಮೀರಮುಸ್ತಾಕ್ ಅಲೀಖಾನ್ ಬಹಾದೂರ್ ಎಂಬ ದೀವಾನ್ ರಾಜ್ಯವಾಳುತ್ತಿದ್ದನಂತೆ. "ಅಬೆಗುಲಹೌಜ" ಈಜುಗೊಳ ಇತ್ತಂತೆ. ಇದರಲ್ಲಿ ಸುಗಂಧ ದ್ರವ್ಯಗಳನ್ನು ಹಾಕಿ ಮುಸ್ತಾಕ್ ಅಲೀಖಾನ ಸ್ನಾನ ಮಾಡುವಾಗ ಸುಂದರಿಯರು ದಂಡೆಯ ಮೇಲೆ ಕುಳಿತು ಹಾಡುತ್ತಿದ್ದರಂತೆ. ಕೆಲವರು ಕೊಳದಲ್ಲಿಳಿದು ದಿವಾನರ ಮೈ ತಿಕ್ಕುತ್ತಿದ್ದರಂತೆ. ತಿಂಗಳಿಗೊಂದು ಸಲ ಈ ಈಜುಗೊಳದಲ್ಲಿ 'ಶಾಹೀ ಹಮಾಮ'ನ ಕಾರ್ಯಕ್ರಮ ನಡೆಯುತ್ತಿತ್ತಂತೆ. ಬಹಮನಿ ಅರಸ ಏಕಾಕಿಯಾಗಿ ಇಲ್ಲಿ ಬಂದು ಸ್ನಾನ ಮಾಡುವ ದಿನಕ್ಕೆ "ರೋಜ ಯೇ ಶಾಹೀ ಹಮಾಮ" ಎಂದು ಕರೆಯುತ್ತಿದ್ದರಂತೆ. ಆ ದಿನ ಸಾಮಾನ್ಯ ಜನರಿಗೆ 'ರುಖ್ಸತೆ ಹಮಾಮ' ಎಂದು ಸೂಟಿ ಕೊಡುತ್ತಿದ್ದರಂತೆ. ಇಂತಹ ವೈಭವದಿಂದ ಮೆರೆದ ದೀವಾನನ ಮನೆಯೇ ಇಂದಿನ 'ದೀವಾನರ ಗಡಿ'. ಆ ಈಜುಗೋಳ ಇನ್ನೂ ಅಲ್ಲಿದೆಯಂತೆ. ಆದರೆ ಭಯಂಕರ ಐತಿಹಾಸಿಕ ಪ್ರಜ್ಞೆಯುಳ್ಳವನೂ ಇಲ್ಲಿಗೆ ಹೋಗಿ ನೋಡಿಕೊಂಡು ಬರುವ ಸಾಹಸ ಮಾಡುತ್ತಿರಲಿಲ್ಲವಂತೆ.

ಇನ್ನೊಂದು ಮಾತು. ದೀವಾನರು ಮತ್ತು ಅವರ ಪ್ರೇಯಸಿ ಅನಾರಕಲಿಯ ಆತ್ಮಗಳು ಅಮರವಾಗಿ ಉಳಿದುಕೊಂಡಿವೆಯಂತೆ. ಅಂತೆಯೇ ಚಂದನಕೇರಿಯ ಹೆಂಗಸರು ಹುಣ್ಣಿಮೆ – ಅಮಾವಾಸ್ಯೆ ದಿನ ಆ ಕಡೆಗೆ ಹೋಗುವುದಿಲ್ಲವಂತೆ.

ಗುಡಿಯ ಹೊರಭಾಗದ ಗೋಡೆಯ ಮೇಲೆ ಯಾವುದೋ ಎರಡು ಆಕೃತಿಗಳು ಮೂಡಿಕೊಂಡಂತಿವೆ. ಇವನ್ನು ಹಿಂದೂಗಳು ಶಿವ–ಪಾರ್ವತಿಯರ ಮೂರ್ತಿಗಳೆಂದು ತಿಳಿದರೆ ಮುಸಲ್ಮಾನರು ಮುಸ್ತಾಕ್–ಅನಾರಕಲಿಯರ ವಿಗ್ರಹವೆಂದು ನಂಬಿದ್ದಾರೆ. ಸಣ್ಣ–ಪುಟ್ಟ ರುಜಿನುಗಳನ್ನು ಈ ವಿಗ್ರಹವೇ ವಾಸಿ ಮಾಡುತ್ತದೆಂದು ಜನರ ನಂಬಿಕೆ.

೮

ಬಸಮ್ಮ ಗಂಡ ಶಾಮಣ್ಣನಿಗೆ ಊಟ ಬಡಿಸುತ್ತ, "ಇನ್ನಮ್ಯಾಲ ಕುಲಕರ್ಣಿ ಸಂಗ್ತಿ ಬಿಡ್ರಿ. ಸುಡಗಾಡ ಹೋತಿದ್ನ ಕಟಗೊಂಡ್ರ ನಮ್ಗ ಹೀಡಾ ಸುತಗೊಂಡೀತು. ಸನ್ಯಾಸಿಗಟ್ಟಿಗೊಂಡು ಮೈಯಲ್ಲಾ ಬೂದಿಯಂತ" ಎಂದಳು.

"ಅಲ್ಲ, ಪಾಪ ಅವ್ನಿಗಿ ಯಾರ ಮಾಡ್ಸಿರಬೇಕಂತೀನಿ? ಬಾಯಿ ಸತ, ಬಾ.ಹ.ಣ. ಹೆರಾಕಿ

ಬಿತ್ತು" ಎಂದ ಶಾಮಣ್ಣ.

"ಅಷ್ಟಷ್ಟೆ ಮಲತಾಯೀರೀ: ಮೆಕಬಾಯಂತ ಇದ್ದಿದ್ದಿಲ್ಲ? ಏಡೀ ನಿಂತಲ್ಲಿಂದ ಉಟ್ಟ ಬಟ್ಟೆ ಮ್ಯಾಲ ಆ ಪಾಪ ಗಂಡ ಸತ್ತ ಹೆಣ್ಣಗಿ ಜಿಂದುಬಿಡ್ದ ಹೊರಗ ಹಾಕ್ದ. [illegible] ಪಾಪ, [illegible] ಕಡಿ ಮಂದಿದೂ ಹತ್ರ ಕರಕೋತ್ತಿತ್ತು. ನಿಮ್ಮಿದ್ನ ಸಹನಾಗಲಿಲ್ಲ, [illegible] ಹಾಕ್ದ. ಈಗ ಅದರ ಪಾಪ ಭೋಗ್ಸಲೀಕತ್ತೇದ. ಪಾಪ, ಕರಳು ಸುಟ್ಟು ಮಾಡ್ಸಿರಬೇಕು" ಎಂದಳು ಬಸಮ್ಮ.

ಬಸಮ್ಮನ ಮಾತೇ ನಿಜ. ನಾವೆಲ್ಲರೂ ಶಾರಿಯ ಮೇಲೆ ಅನುಮಾನ ಮಾಡಿದ್ದು ತಪ್ಪೆಂದು ಶಾಮಣ್ಣನಿಗೆ ಮನವರಿಕೆಯಾಯಿತು.

ಶಾಮಣ್ಣ ಊಟ ಮುಗಿಸಿ ಹೊರಗಿನ ಕಟ್ಟೆಯ ಮೇಲೆ ಕುಳಿತುಕೊಂಡ. ಕತ್ತಲೆಯ ದಿನಗಳು. ಮನುಷ್ಯಾಕೃತಿಗಳು ತೀವ್ರ ಕತ್ತಲೆಯಲ್ಲಿ ಸೇರಿ ದೆವ್ವಗಳಾಗುತ್ತಿದ್ದವು. ದೆವ್ವದ ವಿಚಾರ ಮಾಡುತ್ತಲೆ ಅವನ ಮೈಯಲ್ಲಿ 'ಜುಮ್' ಎಂದಂತಾಯಿತು. ಅಕಸ್ಮಾತ್ ಯಾರೋ ಒಬ್ಬ ಭೂತಾಕೃತಿಯ ವ್ಯಕ್ತಿ ಮುಂದೆ ಬಂದು ನಿಂತಂತಾಯಿತು. ಒಮ್ಮಿಂದೊಮ್ಮೆಲೇ ಅದು ಕಾಣೆಸವಂತಾಯಿತು. ಶಾಮಣ್ಣ ಮನೆಯೊಳಗೆ ಹೋಗಿ ಕುಸಿದುಬಿದ್ದ.

೯

ಚೆಂದನಕೇರಿಯ ದಕ್ಷಿಣದಲ್ಲಿ ದ್ಯಾಮವ್ವನ ಗುಡ್ಡ. ಗುಡ್ಡದ ಒಂದು ತುದಿಗೆ ದ್ಯಾಮವ್ವನ ಗುಡಿ. ಇನ್ನೊಂದು ತುದಿಗೆ ಜೀರಾದೇವರ ಗುಡಿ. ದ್ಯಾಮವ್ವ ಚೆಂದನಕೇರಿಯ ಹರಿಜನರ ದೇವತೆ. ಹೊಲೆಯರು ಯಾವ ಮಂಗಲ ಕಾರ್ಯಕ್ಕೂ ದ್ಯಾಮವ್ವನಿಗೇ [illegible] ಮಾಡುತ್ತಿದ್ದರು. ತಮ್ಮ ಕೆಲಸ ಕಾರ್ಯಗಳನ್ನೆಲ್ಲ ಮುಗಿಸಿಕೊಂಡು ಪ್ರತಿದಿನ ಜೋಪಡಿ ನಿವಾಸಿಗಳು ದ್ಯಾಮವ್ವನ ಅಂಗಳಕ್ಕೆ ಬಂದು ಬಹಳ ರಾತ್ರಿಯ ವರೆಗೆ ಭಜನೆ ಮಾಡುತ್ತಿದ್ದರು.

ಗುಡ್ಡದ ಇಳಿಜಾರಿನಲ್ಲಿ ಹೊಲೆಯರ ಮೂವತ್ತು ನಲವತ್ತು ಗುಡಿಸಲುಗಳಿದ್ದವು. ಈ ಗುಡಿಸಲುಗಳಲ್ಲಿ ಸುಮಾರು ಮುನ್ನೂರಾಐವತ್ತು ಜೀವಗಳು [illegible] ಕುರಿ, ನಾಲ್ಕಾರು ಕೋಳಿಗಳನ್ನು ಸಾಕಿಕೊಂಡವರು ತುಸು ಸುಖಜೀವಿಗಳೆಂದು ನಂಬಲಾಗುತ್ತಿತ್ತು. ತಲೆಮಾರುಗಳಿಂದ ಈ ಹೊಲೆಯರಿಗೆ ಬಂದ ಆಸ್ತಿಯೆಂದರೆ ಆ ಹುಲ್ಲು ಮಣ್ಣಿನ ಜೀರ್ಣ ಗುಡಿಸಲು ಮತ್ತು ಅದರ ಕೆಳಗಡೆ ಬಿದ್ದ ನಾಲ್ಕಾರು ಅಡಿ ನೆಲ ಮಾತ್ರ. ಎಲ್ಲರೂ ದುಡಿಯಬೇಕು. ಸಂಜೆಯ ತನಕ ದುಡಿದು ಬಂದು ಹಸಿಬಿಸಿ ಸಿಕ್ಕದ್ದನ್ನು ಕುದಿಸಿ ತಿನ್ನುವುದು ಮತ್ತು ದ್ಯಾಮವ್ವನ ಹೆಸರು ನೆನಸಿ ಮಲಗಿಕೊಳ್ಳುವುದು ಪರಿಪಾಠ. ಬದುಕುವ ಅನಿವಾರ್ಯತೆಯಿಂದ ಬದುಕುವ ಜನ ಅವರು.

ಇವರಲ್ಲಿ ರಂಗಪ್ಪನ ಸ್ಥಿತಿ ಸ್ವಲ್ಪ ಚೆನ್ನಾಗಿತ್ತು. ಅವನು ಅವರ ಮುಖಂಡನಂತಿದ್ದ. ನಲವತ್ತರ ಗಡಿಯಲ್ಲಿದ್ದ ಈತ ಮೆಟ್ರಿಕ್ ತನಕ ಓದಿದ್ದ. ಹಿಂದೆ ಹತ್ತಾರು ವರ್ಷ ಮುಂಬಯಿಯಲ್ಲಿದ್ದ. ಅಲ್ಲಿ ಭಾಷೆಯ ಗಲಾಟೆ ನಡೆದಾಗ ಕನ್ನಡದವನಾದ ರಂಗಪ್ಪ ತನ್ನೂರಿಗೆ ಮರಳಿದ್ದ. ಮುಂಬಯಿಯಲ್ಲಿ ಕೂಲಿಕಾರರ ಜೊತೆಗೆ ತಿರುಗಿ, ಅನೇಕ ಮೋರ್ಚಾಗಳಲ್ಲಿ ಭಾಗವಹಿಸಿ, ಜನರನ್ನು ಸಂಘಟಿಸುವ ಕಾರ್ಯದಲ್ಲಿ ಚೆನ್ನಾಗಿ ಅನುಭವ ಪಡೆದಿದ್ದ. ಅವನು ತನ್ನ ಗುಡಿಸಲಿನಲ್ಲಿಯೇ ಒಂದು ಅಂಗಡಿ ತೆಗೆದು ವ್ಯಾಪಾರ ನಡೆಸಿದ್ದ. ತೀರ ಬಡವರಿಗೆ 'ಉದ್ರಿ–ಸದ್ರಿ' ಕೊಟ್ಟು ಅವರ ಅನುಕೂಲದಂತೆ ದುಡ್ಡು ವಸೂಲ ಮಾಡುತ್ತಿದ್ದು ಬೇಗಾಗಿ ಜನಪ್ರಿಯನಾಗಿದ್ದ.

ರಂಗಪ್ಪನ ಪ್ರಯತ್ನದಿಂದಲೇ "ಶ್ರೀ ದ್ಯಾಮವ್ವದೇವಿ ಮಂಗಲ ಕಾರ್ಯಾಲಯವು" ಒಂದು ದೊಡ್ಡ ಹಾಲು, ಆರು ಖೋಲಿಗಳು, ಪ್ರತ್ಯೇಕ ಬಾವಿ ಮುಂತಾದ ಸೌಕರ್ಯ ಹೊಂದಿ ಸಿದ್ಧವಾಯಿತು. ಇದರ ಉದ್ಘಾಟನೆಗಾಗಿ ಪಟ್ಟಣದಿಂದ ಹರಿಜನರ ಸುಪ್ರಸಿದ್ಧ ನಾಯಕ ತಿಮ್ಮಪ್ಪನನ್ನು ಮುಖ್ಯ-ಅತಿಥಿಯೆಂದು ಆಹ್ವಾನಿಸಲಾಯಿತು. ಕಾರ್ಯಕ್ರಮದ ಅಧ್ಯಕ್ಷತೆ ಊರ ಗೌಡರೇ ವಹಿಸಿದರೆ ಸರಿ ಎಂದು ರಂಗಪ್ಪ ಬಸವಂತಗೌಡರನ್ನು ಕಂಡು, "ತಾವು ಬರದಟೇ ಅಲ್ಲ, ಅಧ್ಯಕ್ಷರಾಗಬೇಕು" ಎಂದೂ ಕೇಳಿಕೊಂಡ.

"ಹ್ಯಾ! ಅದೆಲ್ಲ ಬ್ಯಾಡಪ. ನಾವೆಲ್ಲ ಹಳ್ಳಿಗಿಡದ ಮಂದಿ. ನಮಗೇನ ಬರಾಣೆಲ್ಲ ಮತ್ತು ಒಕ್ಕಲಗೇರು ರಂಟೀ–ಕುಂಟೀ ಮಾತ ಬಿಟ್ಟು ಮತ್ತೇನು ಬರಾಣೆಲ್ಲ. ಸಭಾಕ್ಕ ಸುಮ್ನ ಶೋಭಾ ಅಂತ

ಕುಂದ್ರುವನಿಂದ ಏನ್ ಬರತಾಯ್ತು? ನಾಕಮಾತಾಡುವ ಇವ್ರು ಬರೋಬರಿ ಅಪ. ಆ ದೀಕ್ಷಿತರ ಕೃಷ್ಣಾ, ಅಂವ ಇಲ್ದ್ರ ಅವರಣ್ಣಾ ರಾಮಾ ದೀಕ್ಷಿತ, ಅವರಿಬ್ರೂ ಇಲ್ಲಾಂದ್ರ ಸಾಹುಕಾರ ಶಾಮಣ್ಣ ಇವರನ್ನು ಕೇಳಿ ನೋಡು. ಹಾಂ... ಇಂಥ ಕೆಲಸಕ್ಕೆ ನಮ್ಮ ಕುಲಕರ್ಣಿ ಭೀಮ ಬರೋಬರಿ ಇದ್ದ. ಅದ್ರ ಪಾಪ ದೈವ ಕಾಡಾಕತ್ಯಾಯ್ತು" ಎಂದು ಹೇಳಿ ಇನ್ಯಾರು ಸಿಗಲಿಲ್ಲವೆಂದರೆ ತಾವು ಕೊನೆಗೆ ಸಿದ್ಧ ಎಂದು ರಂಗಪ್ಪನಿಗೆ ಗೌಡರು ಆಶ್ವಾಸನೆ ಕೊಟ್ಟರು.

ಮನೆಗೆ ಬಂದ ರಂಗಪ್ಪನನ್ನು ಕೃಷ್ಣಾ ದೀಕ್ಷಿತ ಕೈ ಹಿಡಿದು ತಾನು ಕೂಡ್ರುವ ಖೋಲಿಯಲ್ಲಿ ಕರೆದೊಯ್ದು ಕೂಡಿಸಿದ. ಹೆಂಡತಿಗೆ ಅವನನ್ನು ಪರಿಚಯಿಸಿ, ಎರಡು ಕಪ್ಪು ಚಹಾ ಮಾಡುವದಕ್ಕೆ ಹೇಳಿದ. ಕಾರ್ಯಕ್ರಮದ ಅಧ್ಯಕ್ಷತೆ ವಿಚಾರ ಬಂದಾಗ ಇಂಥಾ ಪ್ರಸಂಗ ತಪ್ಪಿಸಿಕೊಳ್ಳಬಾರದೆಂದು ದೀಕ್ಷಿತರ ಕೃಷ್ಣಾ ಒಪ್ಪಿಕೊಂಡ.

ಮರುದಿನ ದ್ಯಾಮವ್ವನೋಣಿಯ [illegible] ಉತ್ಸಾಹವೇ ಉತ್ಸಾಹ. ದ್ಯಾಮವ್ವನ ಗುಡ್ಡದ ಮೇಲೆ ಫರಾರಿ, ತೋರಣ, ತೆಂಗಿನ ಪೂರಕೆ ಕಟ್ಟಲಾಗಿತು. ಹೊಲೆಯರ ಹುಡುಗರೆಲ್ಲ ಚೆಂದನ ಕೇರಿಯ ಮನೆಮನೆಗೆ ಹೋಗಿ ಛಾಪಿಸಿದ ಆಮಂತ್ರಣ ಪತ್ರಿಕೆಗಳನ್ನು ಕೊಟ್ಟು ಬಹಳ ಗೌರವದಿಂದ ಬರಬೇಕೆಂದು ವಿನಂತಿಸಿಕೊಂಡರು.

ಸಂಜೆ ಸುಮಾರು ಗಂಟೆಗೆ ತಿಮ್ಮಪ್ಪನವರು ಜೀಪಿನಿಂದ ಬಂದರು. ವಾಜಾ ಬಜಂತ್ರಿಯ ಜೊತೆಗೆ ಮೆರವಣಿಗೆಯಲ್ಲಿ ಎಲ್ಲರೂ ದ್ಯಾಮವ್ವನ ಗುಡ್ಡದ ಕಡೆಗೆ ಹೊರಟರು. ಗುಡ್ಡ ಹತ್ತುವಾಗ ಊರಿನ ಜನರು ಕೆಳಗಡೆ ನಿಂತುಬಿಟ್ಟರು. ದ್ಯಾಮವ್ವನ ಓಣಿಯವರು, ತಿಮ್ಮಪ್ಪ, ಗೌಡರು ಮತ್ತು ಕೃಷ್ಣಾ ದೀಕ್ಷಿತ ಇಷ್ಟು ಜನರು ಮಾತ್ರ ಮೇಲೆ ಏರಿದರು.

ದೇವಿಯ ದರ್ಶನ, ಪೂಜೆ, ಆರತಿ ನಂತರ ಕಾರ್ಯಕ್ರಮ ಪ್ರಾರಂಭವಾಯಿತು. ದೇವರ ನಾಮ, ಅತಿಥಿಗಳ ಪರಿಚಯದ ನಂತರ ತಿಮ್ಮಪ್ಪನ ಭಾಷಣವಾಯಿತು. ತಿಮ್ಮಪ್ಪ, ತನ್ನ ಜನರು ಒಂದಾಗಬೇಕು; ಅನ್ಯಾಯ ಸಹಿಸಬಾರದು; ಜಾತಿ ಪದ್ಧತಿ ಪಾಲಿಸುವವರನ್ನು ಸರ್ವನಾಶಮಾಡಬೇಕು; ಸರಕಾರ ತಮಗೆ ಅನೇಕ ಸವಲತ್ತುಗಳನ್ನು ಕೊಡಬೇಕು, ಕೊಡದಿದ್ದರೆ ಪಡೆಯಲು ಯಾವ ತ್ಯಾಗಕ್ಕಾದರೂ ಸಿದ್ಧರಾಗಬೇಕು ಹೀಗೆ ಅನೇಕ ವಿಷಯಗಳ ಮೇಲೆ ಮಾತಾಡಿದರು. ಅವರ ಮಾತಿನ ಸಂಪೂರ್ಣ ಅರ್ಥ ಆಗದಿದ್ದರೂ ಎಲ್ಲರೂ ಉತ್ಸಾಹದಿಂದ ಚಪ್ಪಾಳೆ ತಟ್ಟುತ್ತಿದ್ದರು.

ಕಾರ್ಯಕ್ರಮ ಮುಗಿದ ನಂತರ ಉಪಾಹಾರ, ಟೀ ಇಟ್ಟುಕೊಂಡಿದ್ದರು. ಗೌಡರು ಹಾಗೂ ಕೃಷ್ಣಾ ದೀಕ್ಷಿತನಿಗೆ ಧರ್ಮ ಸಂಕಟ ಬಂತು. ಕೊನೆಗೆ ಆಪದ್ಧರ್ಮವೆಂದು ಉಪ್ಪಿಟ್ಟು ಶಿರಾ ತಿಂದು, ಚಹ ಕುಡಿದರು.

ಗುಡ್ಡದಿಂದ ಮನೆಗೆ ಮರಳುವಾಗ ಗೌಡರು, "ದೀಕ್ಷಿತರೆ, ಜ್ಯಾತಿ ಗೀತಿ ಪಾಲಿಸೊ ಮನುಷ್ಯ ನಾನಲ್ಲ. ಆದ್ರೆ ಮುಂದಿಗೆ ಅಂಜಬೇಕು ನೋಡ್ರಿ. ಗುಡ್ಡದಮ್ಯಾಗಿನ ಚಹಾಪಾಹಾನ ಮಾತ ಮಾತ್ರ ನಮ್ಮ ಹೊಟ್ಯಾಗ ಇರಬೇಕು ನೋಡ್ರಿ" ಎಂದು ಹೇಳಿದರು.

ಈ ಘಟನೆಯನ್ನೇ ಬಂಡವಾಳ ಮಾಡಿಕೊಂಡು ಮುಂಬರುವ ಪ್ರಸಂಗಗಳಲ್ಲಿನ ಲಾಭ ತನ್ನ ಗಾಡಿಯಲ್ಲಿ ಹಾಕಿಕೊಳ್ಳುವ ಧೂರ್ತ ವಿಚಾರದಿಂದ ದೀಕ್ಷಿತ, "ಗೌಡ್ರ, ಹರಿಜನರೂ ನಮ್ಮಂಥ ಮನುಷ್ಯರೆ. ಈಗ ಅವರು ಜಾಗ್ರತಗೊಂಡಿದ್ದಾರೆ. ನಾವೂ ಜಾಗ್ರತರಾಗಬೇಕು..." ಎಂದು ಚಿಕ್ಕ ಭಾಷಣವನ್ನೇ ಬಿಗಿದ. ಹಳೆಯ ವಿಚಾರದ ಗೌಡರಿಗೆ ಇದು ಪಚನವಾಗಲಿಲ್ಲ.

ದೀಕ್ಷಿತ ಮನೆ ಸೇರಿದಾಗ ಅವನಲ್ಲಿ ನಿಜವಾಗಿಯೂ ಬದಲಾವಣೆಯಾದಂತಿತ್ತು. ಇಷ್ಟು ದಿನ ಕುಸುಮಾನ ಹತ್ತಿರ ಮಲಗುವದಕ್ಕೆ ತಿಥಿ, ಮುಹೂರ್ತ ನೋಡುತ್ತಿದ್ದವನು ಇಂದು ಉದ್ವೇಗದಿಂದ ಬಂದು ಕುಸುಮಾನ ಮಗ್ಗಲದಲ್ಲಿ ಬಿದ್ದು ಅವಳ ಎದೆಯ ಮೇಲೆ ಕೈಯಿಂದ ತಿಕ್ಕಲಾರಂಭಿಸಿದ. "ಪಂಚಾಗರ ನೋಡೀರೇನು ? ಇವತ್ತ ವೈಧೃತಿ-ಸರಿರೀ..." ಎಂದು ಕುಸುಮಾ ಗಂಡನನ್ನು ದಬ್ಬಿದಳು. ದೀಕ್ಷಿತನಿಗೆ ತಾಳ್ಮೆಯಿರಲಿಲ್ಲ. 'ಸುಮ್ಮ ಬೀಳು' ಎಂದಂದು ಬೆಡ್‌ಲ್ಯಾಂಪ್ ಆರಿಸಿದ.

ಅಣ್ಣ ಮೂಕಾಂಬಾ ದೇವಾಲಯದಿಂದ ಬರುವುದಕ್ಕಿಂತ ಮುಂಚೆ ಎದ್ದು ಸ್ನಾನ ಸಂಧ್ಯಾವಂದನಾದಿಗಳನ್ನು ಮುಗಿಸಿ ಹಿಂದಿನ ದಿನದ ಸಮಾಚಾರ ಪತ್ರ

ಓದುತ್ತ ಕೂತಿರುತ್ತಿದ್ದ ಕೃಷ್ಣಾ ದೀಕ್ಷಿತ ಮರುದಿನ ಮಲಗೇ ಇದ್ದ. ಅನಂತರ ಎದ್ದು ರಂಗೋಲಿ ಹಾಕುತ್ತಿದ್ದ ಕುಸುಮಾನ ಹಿಂದೆ ಹೋಗಿ ತುರುಬು ಹಿಡಿದು ಜಗ್ಗಿದ. ರಂಗೋಲಿ ಬಟ್ಟಲು ಬಿತ್ತು; ತುರುಬು ಬಿಚ್ಚಿತು.

ಜೈಲಿನಿಂದ ಬಿಡುಗಡೆಯಾದ ಕೈದಿಯಂತೆ ಕೃಷ್ಣನ ಮನಃಸ್ಥಿತಿ ಇತ್ತು. ಇಡೀ ಚಂದನಕೇರಿಯಷ್ಟೇ ಅಲ್ಲ, ಸಂಪೂರ್ಣ ಬ್ರಹ್ಮಾಂಡವೇ ಅವನ ದೃಷ್ಟಿಗೆ ಹೊಸ ಚೈತನ್ಯದಿಂದ ಕೂಡಿದಂತೆ ಕಂಡಿತು.

ಕೃಷ್ಣಾ ದೀಕ್ಷಿತ ಪೂಜಾ, ಸಂಧ್ಯಾ ಎಲ್ಲವನ್ನೂ ಬಿಟ್ಟ. ಜನಿವಾರವನ್ನೂ ಕಿತ್ತೆಸೆದ. ಇದನ್ನು ಕಂಡ ಆತನ ಮಡದಿ, "ಹೊರಗಿಂದೆಲ್ಲಾ ಬಿಟ್ರೂ ಏನಾಗ್ತದ ? ಒಳಗಿಂದ ಸಂಸ್ಕಾರನ, ಬ್ರಾಹ್ಮಣ್ಯನ ನೀವು ಎಂದೆಂದಿಗೂ ಬಿಡಲಾರಿರಿ" ಎಂದು ಹೇಳಿದಳು. "ನಾನು ಸ್ವಲ್ಪ ಸ್ವತಂತ್ರನಾಗಬೇಕಂತ ಮಾಡೀನಿ; ಅದಕ್ಕೆ ಈ ಪ್ರಯತ್ನ" ಎಂದ ದೀಕ್ಷಿತ. ಇದು ವ್ಯರ್ಥ ಪ್ರಯತ್ನವೆಂದು ಕುಸುಮಾಗೆ ತಿಳಿದಿತ್ತು.

೧೦

ಕೃಷ್ಣಾದೀಕ್ಷಿತ ದ್ಯಾಮವ್ವನ ಬೆಟ್ಟದ ಕಡೆಗೆ ಹೊರಟ. ದಾರಿಯಲ್ಲಿ ಪ್ರಕೃತಿಯನ್ನು ಗಮನಿಸಿದ. ಅದು ಅದ್ಭುತ ರಮ್ಯವಾಗಿ ಕಂಡಿತು. ಈ ವಿಸ್ತೃತ ಚೈತನ್ಯದ ನಡುವೆ ನಾನಾರು? ಆತ ಯೋಚಿಸಿದ—"ಅಹಂ ಬ್ರಹ್ಮಾಸ್ಮಿ" ಎಂದುಕೊಂಡ. ಅಪ್ಪ, ಅಣ್ಣ ಹೇಳುತ್ತಿದ್ದುದು ಜ್ಞಾಪಕಕ್ಕೆ ಬಂತು— "ಏಕೋಽಹಂ ಬಹುಸ್ಯಾಂ"— ಭಿಕ್ಷೆಗಾಗಿ ಹೊಲೆಯರ ನಾಕಾರು ವರ್ಷದ ಹುಡುಗ ದೀಕ್ಷಿತನ ಅಂಗಿಯನ್ನು ಜಗ್ಗಿದಾಗ ಅವನ ಧ್ಯಾನ ಭಂಗವಾಯಿತು. ಜೇಬಿನಲ್ಲಿ ಕಾಸಿರಲಿಲ್ಲ. ಆತ ಮಗುವನ್ನೆತ್ತಿಕೊಂಡು ಮುದ್ದಿಸತೊಡಗಿದ. ಅದು ಕೊರಳಿಗೆ ಗಟ್ಟಿಯಾಗಿ ಅಪ್ಪಿಕೊಂಡಿತು.

ಮನೆಗೆ ಬಂದ ದೀಕ್ಷಿತ ಊಟ ಮಾಡುತ್ತಾ ಹೆಂಡತಿಗೆ ಹೇಳಿದ —"ನನ್ನ ಹುಟ್ಟು, ನನ್ನ ಜಾತಿ, ನನ್ನಂತೆ ಇರುವ ಆ ಹೊಲೆಯರ ಜೊತೆಗೆ ಇರಲು ಬಿಡಲಿಲ್ಲ. ಅಂದಮೇಲೆ ಯಾಕ ಬೇಕು ಈ ಜಾತಿ, ಈ ಬಂಡೆದ್ದೆ. ನನ್ನ ಸಂಸ್ಕಾರದ ವಿರುದ್ಧ ನಾನು ಬಂಡೆದ್ದೆ. ನಿತ್ಯದ ಕರ್ಮಕಾಂಡ ಬಿಟ್ಟೆ. ಬಿಟ್ಟು ಸ್ವತಂತ್ರನಾಗಬೇಕೆಂದು ವಿಚಾರ ಮಾಡಿದೆ. ನಾನು ನಿನ್ನ ಮನಸ್ಸು ನೋಯಿಸಿ ದ್ಯಾಮವ್ವನ ಗುಡ್ಡಕ್ಕೆ ಹೋದೆ. ಅಲ್ಲಿ ನಾನು ಕಂಡದ್ದು, ಅಲ್ಲಿ ಅನುಭವಿಸಿದ್ದು, ಸಾಕ್ಷಾತ್ಕಾರ ಮಾಡಿಕೊಂಡಿದ್ದು ಪೂರಾ ಬೇರೆನೆ. ಮನುಷ್ಯ ಸಹಜ ಆಗಬೇಕು ಅವನು ಸಹಜತ್ವದಿಂದ ವಿರಾಟನಾಗಬೇಕೆಂದು ತಿಳಿದುಕೊಂಡೆ."

ಅಷ್ಟರಲ್ಲಿ ಬಂದ ಆಳು, "ಗೌಡ್ರು ನಿಮ್ನ ಕರಕೊಂಡ ಬಾ ಅಂತ ಹೇಳ್ಯಾರಿ" ಅಂದಂದು ಹೋದ.

೧೧

"ಗೌಡ್ರು ಮತ್ತು ದೀಕ್ಷಿತರಿಬ್ರೂ ತಮ್ಮ ಜಾತೀ ಕುಲ್ಲ [illegible] ಹೊಲೆಯರ ಹತ್ತಿರ



"ತೆಂಗಿನ ಮರವನ್ನೇ ಹಿಡಿದು ಬಗ್ಗಿಸಬಲ್ಲಷ್ಟು ಬಲಶಾಲಿ ನಾನು; ಆದರೂ ಆಡಳಿತ ನಡೆಸಲು ನನ್ನ ಬಲ ಪರೀಕ್ಷೆ ಆಗಬೇಕು ಅಂತಾರಲ್ರೀ ಈ

ಹೋಗಿ ತಿಂದು ಬಂದಾರಂತ ಮಂದಿ ಆಡಕೋಳಿ ಕತ್ಯಾರ, ನೀ ಈ ಮಾತು ಹೇಳಬಾರದಿತ್ತು" ಎಂದರು ಗೌಡರು.

ದೀಕ್ಷಿತ, "ನಾನು ಹೇಳಿಲ್ಲ ಗೌಡ್ರೆ" ಎಂದರು. ಅವರೂ ಅವನ ಮೇಲೆ ಅನುಮಾನಪಟ್ಟ ಗೌಡರು, "ನೀನು ಇವೊತ್ತು ಸಂಜೆಗೆ ನನ್ನ ಮನೀಗ ಬರ ಬೇಕು. ನೀನು ಬರೋದಕ್ಕಿಂತ ಮುಂಚೇನೆ ನನ್ನ ಕೆಲವು ಮಂದಿ ಬಂದಿರತಾರ. ನಾನು ಅವರ ಮುಂದ ನಿನ್ನಿನ ಕಾರ್ಯಕ್ರಮದ ಬಗ್ಗೆ ಹೇಳತಿರತೇನಿ, ಆಗ ನೀ ಬಂದು ಅದೇ ವಿಷಯ ಮಾತಾಡಬೇಕು. ಮಾತಾಡ್ತಾ ಪ್ರಸಂಗ ತೆಗೆದು ನಾವೇನೂ ಅಲ್ಲಿ ತಿನ್ನಿಲ್ಲಾಂತ ಅಷ್ಟೆ ಹೇಳಬೇಕು" ಎಂದು ನುಡಿದರು.

"ನಾನು ತಿಂದದ್ದು ಖರೆ ಇದ್ದ ಮ್ಯಾಲ, ಇಲ್ಲಾಂತ ಹೇಳಿದ್ರ ಇದ್ಯಾಕಾ ಜನ್ಮದ್" ದೀಕ್ಷಿತ ನುಡಿದ.

"ಹುಚ್ಚುತರ್ಕ ಮಾಡಬ್ಯಾಡ. ನೀ ಬೇಕಾದ್ರ; ಸುಡುಗಾಡು ತಿಂದೀನಂತ ಹೇಳು. ಆದ್ರೆ ಈ ವಯಸ್ಸಿನ್ಯಾಗ ನಾನು.....ನಾನು.....ಇಲ್ಲಾ. ಇಲ್ಲಾಂತ ಹೇಳು."

"ನೋಡ್ತೇನಿ, ಸಾಧ್ಯವಾದ್ರ ಬರ್ತೇನಿ" ಎಂದು ದೀಕ್ಷಿತ ಹೊರಟ.

ಸಂಜೆ ಹೇಳಿ ಕಳಿಸಿದರೂ ಗೌಡರ ಮನೆಗೆ ದೀಕ್ಷಿತ ಬರಲಿಲ್ಲ.

ಬೆಳಗಾಯಿತು. ಕೃಷ್ಣಾದೀಕ್ಷಿತ ತಾನು ಒಗೆದ ಜನಿವಾರವನ್ನು ಸ್ನಾನಮಾಡಿ ಹಾಕಿಕೊಂಡ. ದೇವರ ಪೂಜೆ, ಸಂಧ್ಯಾವಂದನೆ ಎಲ್ಲ ನಿತ್ಯ ಕರ್ಮ ಮುಗಿಸಿ, ಗೌಡರ ಮನೆಗೆ ಬಂದ–"ಗೌಡ್ರೆ, ನನ್ನ ಮ್ಯಾಲ ವಿಶ್ವಾಸವಿಡ್ರಿ. ನಾನು ಯಾರಿಗೂ ಏನನ್ನೂ ಹೇಳಿಲ್ಲ. ನೀವು ತಪ್ಪು ಭಾವಿಸಿಕೊಂಡ್ರಿ, ಅಷ್ಟೆ" ಎಂದು ನುಡಿದ.

"ನೀನು ಹೋದ ಮ್ಯಾಲ ನನ್ಗ ಹಾಂಗನ್ನಿಸ್ತು. ಸಂಸ್ಕಾರ ಹಗುರಾಗಿ ಬಿಡಕ್ಕಾಂಗಲ್ಲ; ಕೃಷ್ಣಾ ನಾ ಅಂಜಿದ್ನಪ್ಪ, ಈ ಇಳಿ ವಯಸ್ಸಿನ್ಯಾಗ ನಾನು ಬದಲಾಗದು ಹ್ಯಾಂಗ ಸಾಧ್ಯ ? ನಮ್ಮ ನ್ಯಾಯ-ಕಾಲ ತಾನೇ ಮಾಡ್ತದ; ಅಲ್ಲಿ ತನಕ ನೀನಾಗಲಿ ರಂಗಪ್ಪನಾಗಲಿ ಅಥವಾ ದ್ಯಾಮವ್ವನ ಒಕ್ಕಲ ದವರು ಯಾರೇ ಆಗಲಿ ನನ್ನ–ನನ್ನಂಥವರನ್ನ ಕ್ಷಮಿಸಬೇಕಪ್ಪಾ" ಎಂದರು ಗೌಡರು.

ಓಡುತ್ತ ಬಂದು, "ನಿಂಗಣ್ಣನ ಹೆಣ ಸಾಹುಕಾರ ಶಾಮಣ್ಣನ ಮನೆ ಆಚೆ ಜಾಲಿಗಿಡ ಆಯ್ತಲ್ಲ; ಅದ್ರ ಕೆಳಗೆ ಕಿಸ್ದ ಬಿದ್ದಾಯ್ತಿ" ಎಂದು ಹೇಳಿದ.

ರಾಮಾದೀಕ್ಷಿತ ತಟ್ಟನೆದ್ದು ಶಿವಣ್ಣನೊಡನೆ ಘಟನೆಯ ಸ್ಥಳಕ್ಕೆ ಬಂದು ಗಮನಿಸಿದ.

ಪೋಲೀಸರು, ಹೆಣ, ಶಾಮಣ್ಣ, ಡಾಕ್ಟರ್ ಸಾಯೇಬ್ರು, ಇನ್ಸ್‌ಪೆಕ್ಟರ್, ಸಾಬ್ಯಾ ಎಲ್ಲರಿದ್ದ ಪೋಲೀಸ್ ವ್ಯಾನ್ ಹೊರಟಿತು.

ಸಂಜೆಗೆ ಸರ್ಕಿನಿಂದ ಸಾಹುಕಾರ ಶಾಮ-ಣ್ಣನೊಬ್ಬನೇ ಬಂದ ಅವನ ಜೊತೆಗೆ ಹೋದ ಸಾಬ್ಯಾ ಬರಲಿಲ್ಲ.

ಶಾಮಣ್ಣನ ಕಾಲಿಗೆ ಬಿದ್ದ ಸಾಬ್ಯಾನ ಹೆಂಡತಿ, "ಪೋಲೀಸ್ರು ಅವ್ನ ಯಾಕ ಹಿಡಕೊಂಡು ಹೋದ್ರು ?" ಎಂದು ಗಟ್ಯಾಗಿ ಕೇಳಿದಳು.

"ಯಾಕಂತ ನಾ ಹ್ಯಾಂಗ ಹೇಳಬೇಕು ? ಆದ್ರ ನೀ ಮನಿಗಿ ಹೋಗು. ನಾ ಅದೀನಿ ನೋಡ ಕೊಂತೀನಿ" ಎಂದು ಧೈರ್ಯ ಕೊಟ್ಟು ಕಳಿಸಿದ ಶಾಮಣ್ಣ.

ಬಸಮ್ಮ ಮೂಲೆಯಲ್ಲಿ ಮುಖ ಕೆಳಗೆ ಹಾಕಿ ಕೊಂಡು ಕುಳಿತಿದ್ದಳು. ಅಸಹ್ಯ ದೃಶ್ಯವನ್ನು ನೋಡಿದಂತೆ ಶಾಮಣ್ಣ ಮುಖ ಕಿವುಚಿಗೊಂಡ. ತಡೆಯಲಾರದಷ್ಟು ಸಂತಾಪವಾಗಿ ಆಕೆಯನ್ನು ಒದೆಯಲಾರಂಭಿಸಿದ. ಬಸಮ್ಮ ನಿರ್ಜೀವ ವಸ್ತುವಿನಂತೆ ಬಿದ್ದಿದ್ದಳು.

ಶಾಮಣ್ಣ ತೋಲಕ್ಕೆ ಬಂದಾಗ ದೂರದಲ್ಲಿ ಕೃಷ್ಣಾದೀಕ್ಷಿತ ದಾಸರಪದ ಹಾಡುತ್ತ ಹೊರ ಟಿದ್ದು ಕಂಡಿತು–

'ಆರು ಬದುಕಿದರೇನು ಆರು ಬಾಳಿದರೇನು। ಪೂರ್ವ ಜನ್ಮದ ವಿಧಿ ತೀರುವ ತನಕ ! ಪತಿ ಭಕುತಿಯಿಲ್ಲದಿಹ ಸತಿಯಿದ್ದು ಫಲವೇನು ? ಮತಿಯಿಲ್ಲದವರಿಗೆ ಬೋಧಿಸಿದರೇನು ॥"

೧೩

ಲಮಾಣಿಯರ ಹಾಡು, ಕುಣಿತವನ್ನು ಮುಗ್ಧ ಮನಸ್ಸಿನಿಂದ ನೋಡುತ್ತ ಕುಳಿತಿದ್ದ ಕಲಾ ರಾಧಕ ಕೃಷ್ಣಾ ದೀಕ್ಷಿತ. ಅಷ್ಟರಲ್ಲಿ ಬಂದ

ಬೇಕಂತೆ" ಎಂದು ಹೇಳಿ ಹೋದ.

ದೀಕ್ಷಿತ ಬಂದಾಗ ಮುಲ್ಲಾಸಾಬ ಶಾಮಣ್ಣನ ಬಳಿ ಕುಳಿತಿದ್ದ.

"ನೀವು ನನ್ನ ಭಾಳ ಸಮೀಪದ ಮಂದ್ಯೆಂದು ಕರೆದೀನಿ. ಏನೋ ಒಂದಿಷ್ಟು ಧರ್ಮ, ಜಾತಿ, ನೀತಿ, ದೊಡ್ಡಿಸ್ತಾನಕಿ ಉಳಕೊಂಡದಂದ್ರ ನಿಮ್ಮಿಬ್ರಲಿಂದ. ನಿಮ್ಗ ಗೊತ್ತೇ ಅದ, ನಿಂಗಣ್ಣನ ಖೂನಾಯ್ತು, ಪೋಲೀಸರು ನನ್ನ ಮೇಲೆ ಅನುಮಾನಪಟ್ಟರು. ಖಾಸಾ ದೋಸ್ತನ ಖೂನಿ ನಾ ಯಾಕ ಮಾಡ್ತಲೀ? ಖೂನಿ ಆದ ರಾತ್ರಿ ನಾ ನಮ್ಮ ತ್ವಾಟದಾಗ ನಿಮ್ಮಿಬ್ರ ಸಂಗಾಟ, ಬೆಳಗಾಗತನಕ ಮೂರೆಲೆ ಆಟ ಆಡಕೊಂತ ಕುಂತಿದ್ದೆ. ಅಂತ ಹೇಳಿವ್ನ. ಅದ್ಕಂತೀನಿ ನೀವೂ ಯಾರತ್ನ ಬಂದ ಕೇಳಿದ್ರ ಈ ಮಾತ್ನೇಳಬೇಕು. ನೋಡ್ರಿ, ಇವರೊಳ್ಗ ಅನುಮಾನ ಮಾಡಬ್ಯಾಡ್ರಿ ನಾ ನಿಮಗ ಬೇಕಾದಟು ಸಹಾಯ ಮಾಡ್ತೀನಿ" ಎಂದ.

ಮುಲ್ಲಾಸಾಬ, ದೀಕ್ಷಿತರು ಶಾಮಣ್ಣನ ಮಾತಿಗೆ ಒಪ್ಪಲಿಲ್ಲ.

೧೪

ಬೆಳಗಾಯಿತು. ಕೃಷ್ಣಾ ದೀಕ್ಷಿತ ರಂಗಪ್ಪನ ಕಡೆಗೆ ಹೊರಟ.

ಅಂಗಡಿಯಲ್ಲಿ ಕುಳಿತಿದ್ದ ರಂಗಪ್ಪ–"ನಡೀಲಿಕ್ಕಿ ಇನ್ನೊಂದು ಹಾದಿ, ಕುಡೀಲಿಕ್ಕಿ ನೀರಿನ ಇನ್ನೊಂದು ಭಾವಿ ಇರಲಿಕ್ಕೆ ಇನ್ನೊಂದು ಜಾಗ ಮಾಡಿಕೊಟ್ಟಿದ್ದಕ್ಕ ಊರವರ ಸಂಗಡ ನಮ್ಮ ಸಂಪರ್ಕನೇ ಇರದಿಲ್ಲ, ನೋಡ್ರಿ. ಅಕಸ್ಮಾತ್ ಯಾರಾದೂ್ರ ನಮ್ಮ ಸುಖ ದುಃಖ ಕೇಳಿದ್ರ, ನಮ್ಗ ಅಂಥವ್ರ ವ್ಯಾಲ ವಿಶ್ವಾಸನೇ ಆಗಂಗಿಲ್ಲ ನೋಡ್ರಿ, ನಮ್ಮಂತ ಆದನರೇ ಏನು? ಹಾಳ್ಣ, ಹುಟ್ಟು ಸಾವು ಇವೆರಡೇ ಖರೆ ಅವ ನೋಡ್ರಿ, ಮೊನ್ನೆ ನಮ್ಮ ತಿಮ್ಮಪ್ಪ ತುಸು ಖಾರ ಮಾತಾಡಿದ್ರು, ನಾನೇ ಬಂದು ಕ್ಷಮಾ ಕೇಳಬೇಕಂತ ಮಾಡಿದ್ದೆ. ಆದ್ರ ಅಲ್ಲಿ ಬರಲಿಕ್ಕ ಧೈರ್ಯ ಆಗಲಿಲ್ಲ. ಈಗ ನೀವೇ ಬಂದ್ರಿ, ಉಪಕಾರ ಮಾಡಿದ್ರಿ" ಗದ್ಗದ ಕಂಠದಿಂದ ಹೇಳಿದ. ಆ ಪ್ರಾಮಾಣಿಕ ಮನೋಭಾವದ ನೋವನ್ನು ದೀಕ್ಷಿತ ಅರಿತುಕೊಂಡ.

"ಎಲ್ಲಿಯ ತನಕ ಇಡೀ ಸಮಾಜದ ಗರ್ಭದಲ್ಲಿ ಬೇರು ಬಿಟ್ಟ ಕೊಳಕು ನಂಜಿಗೆಯ ಕ್ರಾಕೃಕಿನ ಸರ್ವನಾಶ ಆಗುವದಿಲ್ಲವೋ ಅಲ್ಲಿಯ ತನಕ ಮೇಲ್ಮೇಟಕ್ಕೆ ಮಾಡುವ ಎಲ್ಲ ಪ್ರಯತ್ನಗಳೂ ವ್ಯರ್ಥ, ನನ್ನ ಸಂಸ್ಕಾರ ಮತ್ತು ಜೀವನ ಪದ್ಧತಿಯನ್ನು ಬಿಟ್ಟು ಇನ್ನೊಬ್ಬರ ಸಂಸ್ಕಾರ ಮತ್ತು ಜೀವನ ಪದ್ಧತಿಯನ್ನು ಸ್ವೀಕರಿಸಿದರೆ ಅದು 'ಪರಿವರ್ತನೆ' ಎಂದು ಅನಿಸಿಕೊಳ್ಳಬಹುದೇ ?"

ರಂಗಪ್ಪ ವ್ಯಾಪಾರದಲ್ಲಿದ್ದರಿಂದ ದೀಕ್ಷಿತಗೆ ವಿಚಾರ ಮಾಡುವ ಅವಕಾಶ ಸಿಕ್ಕಿತು. ರಂಗಪ್ಪ ಸಿತ್ತ ಬೆಲ್ಲ ಅವಲಕ್ಕಿ ತಿಂದು ಹಾಲು ಕುಡಿದ. ರಂಗಪ್ಪನನ್ನು ತನ್ನ ಮನೆಗೆ ಒಂದು ದಿನ ಬರಲು ಆಮಂತ್ರಿಸಿದ ದೀಕ್ಷಿತ.

"ಒಂದಿನ ರಾತ್ರಿ ದುಕಾನ ಮುಚ್ಚಿದ ಮ್ಯಾಲ ಬರತೀನಿ" ಎಂದ ರಂಗಪ್ಪ ಖುಷಿಯಿಂದ.

೧೫

ಹದಿನೈದು ದಿನದ ಮಾರಿಕಾಂಬ ಜಾತ್ರೆ ನೆರೆದಿತ್ತು, ಒಂದು ದಿನ ಸಂಜೆ ಗುಡಿ ಹತ್ತಿರವೇ ಒಂದು ಘಟನೆ ಸಂಭವಿಸಿತು.

ಎಂದಿನಂತೆ ಜನರು ಜಾತ್ರೆಯಲ್ಲಿ ತುಂಬಿದ್ದರು. ಎಲ್ಲಿಂದಲೋ ಒಂದು ಗೂಳಿ ಹುಚ್ಚೆದ್ದು ಜನರ ಗುಂಪಿನಲ್ಲಿಯೇ ಓಡಲಾರಂಭಿಸಿತು. ಪ್ರಾಣಾಪಾಯ ಭೀತಿಯಿಂದ ಜನರು ಗುಡಿಯಲ್ಲಿ ನುಗ್ಗಿದರು. ಅಲ್ಲಿದ್ದ ಪೂಜಾರಿಗಳು, "ಕೆಳಗೆ ಹೋಗಿ ಸಾಯ್ರಿ ಇಲ್ಯಾಕೆ ಬಂದ್ರಿ. ನಡೀರಿ, ದೇವರ ಗುಡಿ ಮೈಲಿಗ್ಯಾಗ್ತದ" ಎಂದರು.

ಯಾವನೋ ಒಬ್ಬ ಧೈರ್ಯದಿಂದ, "ಸ್ವಾಮಿ ಸಾಯಬೇಕಾದ್ರ ಇಲ್ಯಾಕ ಬರತಿದ್ವಿ, ಬದುಕಬೇಕಂತ ಬಂದೀವಿ" ಅಂದ.

"ಬದ್ಕ ಬೇಕಂತ ಇವತ್ತಿಲ್ಲಿ ಬರ್ತೀರಿ; ನಾಳೆ ಗರ್ಭಗುಡಿಗೂ ಸೇರ್ತೀರಿ. 'ಮೈಲಿಗಿಯಾದ್ರ ತಾಯಿ ಊರಿಗೂರೇ ಸುಟ್ಟು ಬಿಟ್ಟಾಳು. ಹಿಂದೊಮ್ಮೆ ಹಿಂಗೇ ಮೈಲಿಗಾಗೋ ಪ್ರಸಂಗ ಬಂದಿತ್ತು. ಯಾವನೋ ದುರಾತ್ಮ



ಹೇಳಿದ್ನಂತೆ, ಆಯ್ತು ಎಲ್ಲರೂ ಗುಡಿ ಪ್ರವೇಶ ಮಾಡಬೇಕೂಂತ ತಯಾರಾದ್ರಂತೆ. ಅವ್ರು ಬಂದಾಗ ಅಲ್ಲಿ ತಾಯಿನೇ ಇರಲಿಲ್ಲವಂತೆ. ನಮ್ಮಪ್ಪ ಹೇಳಿದ್ನರೀ... ತಾಯಿ ಅವ್ನ ಕನಸಿನಲ್ಲಿ, ಬಂದು "ಮಗ ನನ್ನ ಗುಡಿ ಮೈಲಿಗೆ ಮಾಡಲಿಕ್ಕೆ ಮಂದಿ ಬರ್ತಾರಂತೆ. ಅದ್ಕೆ ನಾ ನಿನ್ನ ಮನ್ಗೆ ಬರ್ತೀನಿ, ಈ ದಿನ ಒಂದು ಹಾರ ಮಾಡು" ಎಂದು ಕೇಳಿದಳಂತೆ..." ಪೂಜಾರಿ ಮುಂದುವರಿಸಿದ್ದ.

ಯುವಕನೊಬ್ಬ ತುಂಟತನದಿಂದ, "ನಿಮ್ಮ ದೇವ್ರು ಇಂಥ ಅಂಜಿ ಬುರುಕಳೇನ್ರಿ" ಎಂದು ಕೇಳಿದ.

ಪೂಜಾರಿ ಕೋಪದಿಂದ, "ನಾಸ್ತಿಕ, ನಡಿ ಹೊರ್ಗ..." ಎಂದು ಹೇಳಿ ತನ್ನ ಗಲ್ಲ ಹಿಡಿದುಕೊಂಡ.

೧೬

ಕೃಷ್ಣಾ ದೀಕ್ಷಿತ ಮನೆಗೆ ಬರುವಾಗ ಪಂಚಾಯತ ಕಚೇರಿಯ ಮುಂದೆ ಪೋಲೀಸ್ ಜೀಪಿನಲ್ಲಿ ಸಾಹುಕಾರ ಶಾಮಣ್ಣನಿರುವುದನ್ನು ಕಂಡ.

ಮೂರು ದಿನವಾದರೂ ಶಾಮಣ್ಣ ಮರಳಿ ಬರಲಿಲ್ಲ. ಅವನ ತಮ್ಮ ಒಂದೆರಡು ಸಲ ಪಟ್ಟಣಕ್ಕೆ ಹೋಗಿ ಬಂದ. ಮೈಮೇಲೆ ಬರಬಹುದೆಂಬ ಭಯದಿಂದ ಊರಲ್ಲಿ ಯಾರೂ ಅವನ ಬಗ್ಗೆ ಹೆಚ್ಚಿನ ಆಸಕ್ತಿ ತೋರಿಸಲಿಲ್ಲ.

ಶಾಮಣ್ಣ ಹೋದ ಮಾರನೆ ಬಸಮ್ಮನ ತಮ್ಮ ಬಂದ. ಅವಳನ್ನು ನಸುಕಿನಲ್ಲಿಯೇ 'ಗೋಷಾ' ಹಾಕಿದ ಗಾಡಿಯಲ್ಲಿ ಕರೆದೊಯ್ದ.

೧೭

ಮೃಗ ಪ್ರವೇಶ. ಮಳೆಗಾಲ ಬಂತು. ಆಕಾಶದಲ್ಲಿ ಕಪ್ಪು ಮೋಡಗಳು ಸುತ್ತಾಡಹತ್ತಿದವು. ಜನರು ಮುಗಿಲಿನ ಕಡೆಗೆ ಆಶೆಗಣ್ಣುಗಳಿಂದ ನೋಡ ತೊಡಗಿದರು. ಗ್ರಾಮದ ಮುಖ್ಯ ಜನರೆಲ್ಲ ದಕ್ಷಿಣ, ಬಾಗಿಣ ತೆಗೆದುಕೊಂಡು. ಬಾಜಾಬಜಂತ್ರಿಯ ಜೊತೆಗೆ ರಾಮದೀಕ್ಷಿತರ ಮನೆಗೆ ಬಂದರು. "ರಂಟೆ ಪೂಜೆ ಮುಹೂರ್ತ" ತೆಗೆದುಕೊಡುವ ಕೆಲಸ ದೀಕ್ಷಿತರದು.

ರಂಟೆ ಪೂಜೆ ಮುಗಿಯಿತು. ಆದರೆ ಈ ಸಲವೂ ಮತ್ತೆ ಮಳೆ ಬರಲಿಲ್ಲ. ಜನ ಹೌಹಾರಿ ಹೋದರು. ಹಿಂದೆ ಎರಡು ವರ್ಷಗಳಿಂದ ಆಕಾಶದಿಂದ ತೊಟ್ಟು ನೀರು ಬಿದ್ದಿಲ್ಲ. ಪರಿಸ್ಥಿತಿ ಬದಲಾಗಿ ಎಷ್ಟೋಮಂದಿ ಮಾನ ಮರ್ಯಾದೆ ತೊರೆದು ಜೋಳಿಗೆ ಕೈಯಲ್ಲಿ ಹಿಡಿದರು. ಮೇವಿಲ್ಲದೆ ಹಿಂಡುಗಟ್ಟಲೆ ದನಕರುಗಳು ಒದ್ದಾಡತೊಡಗಿದವು.

ಹೋಮ-ಹವನ, ದೇವರ ಪೂಜೆ, ರುದ್ರಾಭಿಷೇಕ, ಕುಂಭದ ಮೆರವಣಿಗೆ, ಕಪ್ಪೆಯ ಪೂಜೆ, ನಮಾಜು, ಪ್ರಾರ್ಥನೆ ಎಲ್ಲ ಮುಗಿಯಿತು. ಮಳೆ ಮಾತ್ರ ಬರಲೇ ಇಲ್ಲ.

ಕೊಟ್ಟಿಗೆಯಲ್ಲಿ ಕಟ್ಟಿದ್ದ ಸಾಹುಕಾರ ಶಾಮಣ್ಣನ ದನಗಳು ನೀರು, ಮೇವಿಲ್ಲದೆ ಸತ್ತಿದ್ದವು. ಮರುದಿನ ಗೌಡರ ಆಕಳು ದಾರಿಯಲ್ಲೇ ಬಿದ್ದು ಪ್ರಾಣ ಬಿಟ್ಟಿತ್ತು. ಊರಿನ ಹಲವಾರು ದನಕರುಗಳು ಸಾವಿನ ದವಡೆಗೆ ಸಿಲುಕಿದವು. ದೇವರಲ್ಲಿಯ ವಿಶ್ವಾಸ ಬತ್ತಿ ಹೋಯಿತು. ಜನರು ಗುಳೆ ಕಟ್ಟಿಕೊಂಡು ಹೊರಟರು.

ಎಲ್ಲಿಗೆ? ಗುರಿ ಗೊತ್ತಿಲ್ಲ. ಕೆಲಸ ಸಿಗಬಹುದೆಂಬ ಆಸೆಯಿಂದ ಈ ಊರಿಂದ ಆ ಊರಿಗೆ, ಈ ಜಾಗದಿಂದ ಆ ಜಾಗಕ್ಕೆ, ದೊಡ್ಡ ಪಟ್ಟಣಕ್ಕೆ ಕಾರಖಾನೆಗಳಿದ್ದ ಊರುಗಳಿಗೆ, ಮಳೆಯಾದ ಪ್ರದೇಶಗಳಿಗೆ, ಕೊನೆಗೆ ಎಲ್ಲಿಯೂ ನೆಲೆ ಸಿಗದ್ದರಿಂದ ಮುಂಬಯಿಗೆ ಹೊರಟರು.

ಭಾಷೆ, ಜಾತಿ, ಅಂತಸ್ತು, ಪ್ರದೇಶ, ಘನತೆ ಗೌರವ, ದೇವರು-ದಿಂಡರು ಎಲ್ಲ ಮಾಯವಾಗಿ ಹೋದವು. ಸಾವಿನ ಭಯ ಎಲ್ಲರನ್ನೂ ಒಂದೇ ಸಾಲಿನಲ್ಲಿ ತಂದು ನಿಲ್ಲಿಸಿತು. ಬ್ರಾಹ್ಮಣ, ಶೂದ್ರ, ಉಚ್ಚ-ನೀಚ, ಶ್ರೀಮಂತ-ಬಡವ, ಹರಿಜನ-ಗಿರಿಜನ. ಮೇಲು ಜಾತಿ, ಕೀಳು ಜಾತಿ ಎಲ್ಲರ ಹಸಿವು ಒಂದೇ ಎಂದು ಗೊತ್ತಾಯಿತು, ಎಲ್ಲರ ನೋವೂ ಒಂದೇ, ಎಲ್ಲರ ಸಾವು ಒಂದೇ, ಎಲ್ಲರ ಬದುಕು ಒಂದೇ ಎಂದು ಜನರು ತಿಳಿದುಕೊಂಡರು. ಸಾವು ಮುಂದೆ ಬಾಯ್ದೆರೆದು ನಿಂತಾಗ ಆತ್ಮಜ್ಞಾನ ಆದರೇನು ಫಲ?

ಮಳೆ ಬರಲೇ ಇಲ್ಲ. ಜನರು ಜೀವದಾಸೆಗಾಗಿ ಮನೆಮಾರು, ಹೆತ್ತವರನ್ನೇ ಬಿಟ್ಟು ಹೋದರು.

ಹೆಣ್ಣು ಹಣ್ಣು ಮುದುಕ–ಮುದುಕಿಯರಿಗೆ ಊರು ಬಿಟ್ಟು ಹೋಗಲು ಸಾಧ್ಯವಾಗಲಿಲ್ಲ. ಇದ್ದಿದ್ದು ಇಷ್ಟಷ್ಟು ದಿನ ತಿಂದು ಇಲ್ಲದಾದಾಗ ಹಸಿವಿನಿಂದ ಸಾವಿಗೀಡಾದರು.

ಗುಳೆ ಹೊರಟಿದ್ದ ಜನರನ್ನು ತಡೆದು ನಿಲ್ಲಿಸಲೆತ್ನಿಸಿದ ಕೃಷ್ಣಾ ದೀಕ್ಷಿತ, “ನಿಲ್ರೀ, ನಾವೆಲ್ಲಾರೂ ಕೂಡಿ ಜಲಜಾಕ್ಷಿಯಲ್ಲಿ ಬಾವಿ ತೋಡೋಣ. ಊರಲ್ಲೆ ದುಡಿದು ಕೂಲಿ ಮಾಡೋಣ. ಹೊಲಗಳಲ್ಲಿ ಒಡ್ಡು ಹಾಕೋಣ. ರಸ್ತೆ ತಯಾರಿಸೋಣ. ಸರಕಾರದ ಸಹಾಯ ಕೇಳೋಣ. ನಮ್ಮ ಹೊಲ, ನಮ್ಮ ನೆಲ ಹಸನು ಮಾಡಿಕೊಳ್ಳೋಣು... ನೀವು ಹೋಗಬೇಡ್ರಿ” ಎಂದು ಕಳಕಳಿಯಿಂದ ಬೇಡಿಕೊಂಡ. ಆತನ ಆದರ್ಶದ ಮಾತು ಯಾರಿಗೂ ಅರ್ಥವಾಗಲಿಲ್ಲ. ಅವರು ಮುಂದೆ ನಡೆದರು.

ಕೃಷ್ಣಾ ದೀಕ್ಷಿತ ಮನೆಗೆ ಬಂದಾಗ ಅಣ್ಣ ರಾಮಾದೀಕ್ಷಿತ ಊರು ಬಿಡುವ ವಿಚಾರ ಎತ್ತಿದ. ಕೃಷ್ಣಾ ದೀಕ್ಷಿತ ಊರು ಬಿಡಲು ಇಚ್ಛಿಸಲಿಲ್ಲ. ಮನೆಯಲ್ಲಿ ಮಿಕ್ಕವರೆಲ್ಲಾ ಹೊರಟರು. ಕುಸುಮಾ ಮಾತ್ರ ಗಂಡನ ಜೊತೆಗೆ ಉಳಿದಳು.

ಸಾಹುಕಾರ ಶಾಮಣ್ಣನ ತಮ್ಮ ಸಂಗಣ್ಣನಿಗೂ ಬರಗಾಲದ ಬಿಸಿತಾಗಿತು. ವ್ಯಾಪಾರ ಕುಸಿದಾಗ ಹೆಂಡತಿ–ಮಕ್ಕಳೊಂದಿಗೆ ಪಟ್ಟಣಕ್ಕೆ ಹೊರಟೇಬಿಟ್ಟ.

*

ಸರಕಾರೀ ಗಂಜೀ ಕೇಂದ್ರಗಳು ಪ್ರಾರಂಭವಾದವು. ಉಪ್ಪು ಹಾಕಿ ಕುದಿಸಿದ ಜೋಳದ ನುಚ್ಚು. ಈ ಗಂಜಿಯನ್ನು ಮಧ್ಯಾಹ್ನ ಸುಮಾರು ಎರಡು ಗಂಟೆಗೆ ಕೊಡುವ ವ್ಯವಸ್ಥೆ ಮಾಡಲಾಗಿತ್ತು. ಗಂಜಿಗಾಗಿ ಪಂಚಾಯ್ತಿ ಆಫೀಸಿನ ಮುಂಭಾಗದ ಬಯಲಿನಲ್ಲಿ ಚೆಂದನಕೇರಿಯ ಜನರಷ್ಟೇ ಅಲ್ಲ, ಸುತ್ತ ಮುತ್ತಲಿನ ಜನರೂ ಬಂದು ನೆರೆಯುತ್ತಿದ್ದರು. ಒಳಗೆ ಹಸಿವೆಯ ತಾಪ, ಮೇಲೆ ಬಿಸಿಲಿನ ತಾಪ, ಸಂಕಟ ತಾಳಲಾರದೆ ಯಾರಾದರೂ ಪ್ರಜ್ಞೆ ತಪ್ಪಿದರೆ ಹತ್ತಿರ ಕುಳಿತವರು ಗಡಿಬಿಡಿಯಿಂದ ಅವರನ್ನು ಹೊತ್ತುಕೊಂಡು ಹತ್ತಿರದ ಗಿಡದ ಕೆಳಗಡೆ ಮಲಗಿಸಿ ಮತ್ತೆ ಓಡಿ ಬಂದು ತಮ್ಮ ಸಾಲಿನಲ್ಲಿ ಕೂಡುತ್ತಿದ್ದರು. ಆಕಸ್ಮಾತ್ ಯಾರಾದರೂ ಸತ್ತರೆ ಕೇಳುವವರೂ ಯಾರಿರಲಿಲ್ಲ. ರಕ್ತ ಬಸಿದಷ್ಟು ಮೊಲೆ ಹೀರಿ, ತೊಟ್ಟು ಹಾಲು ಸಿಗದೇ, ಚೀರಿ ಚೀರಿ ಒದ್ದಾಡಿ, ಪ್ರಾಣಬಿಡುವ ಕೂಸಿನ ಮೃತ ದೇಹವನ್ನು ಭಾರವನ್ನು ಇಳಿಸಿದಂತೆ ಸಹಜ ರೀತಿಯಿಂದ ಕೆಳಗಿಟ್ಟು, ಮುಂದೆ ಸಾಗುವ ತಾಯಿ ತನ್ನ ತಾಯ್ತನವನ್ನೇ ಕಳೆದುಕೊಂಡಂತಿತ್ತು. “ನನ್ನ ಹಸಿವು ಮತ್ತು ನನ್ನ ಅನ್ನ” ಎಂಬ ಈ ಎರಡನ್ನು ಬಿಟ್ಟರೆ ಮತ್ತೇನಿರಲಿಲ್ಲ.

ಹಳೆಯ ಸಾಮಾನು ಖರೀದಿ ಮಾಡುವ ವ್ಯಾಪಾರಿಗಳ ಹಾವಳಿ ಶುರು ಆಯಿತು. ಪಾಪದ ಕೆಲಸವೆಂದು ಗೊತ್ತಿದ್ದರೂ ದೇಹದ ವ್ಯಾಪಾರಕ್ಕಿಳಿದ ಹೆಂಗಸರನ್ನು ಒಂದೊತ್ತಿನ ಅನ್ನಕ್ಕೆ ಒಂದೊಂದು ದಿನ ಹಿಂಸಿಸಿದ ರಾಕ್ಷಸರ ಗೋತ್ರ ಬೆಳೆಯಿತು. ಗುಡ್ಡಿ–ಗುಂಡಾರಗಳ ಮೆಟ್ಟಿಲುಗಳ ಮೇಲೆ ಚೀರುತ್ತ ಬಿದ್ದ ಅನಾಥ ಹಸುಗೂಸುಗಳ ಸಂಖ್ಯೆ ಹೆಚ್ಚಿತು.

ದೇವರು ನಿಶ್ಚಿಂತನಿದ್ದ. ದೇವರು ತಟಸ್ಥನಿದ್ದ. ದೇವರು ಕಲ್ಲಾಗಿದ್ದ.

೧೮

ಓಡುತ್ತ ಕೃಷ್ಣಾ ದೀಕ್ಷಿತನ ಮನೆಗೆ ಬಂದ ಸತ್ಯಭಾಮಾ, “ಸ್ವಲ್ಪ ಜಲ್ದೀ ನಡ್ರಿ ಮುಣ್ಣ್ಯಾಬಸ್ತ್ಯದ, ಅಪ್ರು ರ್‍ಯಾಂಗ್ಯ್ಯಾಂಗೋ ಮಾಡ್ಲಿಕತ್ತ್ಯಾರ”ಎಂದು ಕಣ್ಣೀರಿಟ್ಟಳು.

ಅವರೀರ್ವರು ಬರುತ್ತಲೇ ಒಬ್ಬ ಹೆಂಗಸು ಬಂದು. “ಆತನ ಭೂಮಿಯ ಋಣ ಮುಗೀತು” ಎಂದಳು. ಸತ್ಯಭಾಮಾಗೆ ಸಿಡಿಲು ಬಡಿದಂತಾಯಿತು. ಕೃಷ್ಣಾ ದೀಕ್ಷಿತ ಇತರರೊಂದಿಗೆ ಕುಲಕರ್ಣಿ ಭೀಮನ ಅಗ್ನಿಸಂಸ್ಕಾರ ಕಾರ್ಯ ಮುಗಿಸಿ ಬಂದ.

೧೯

ಕ್ಷಾಮ ಪೀಡಿತ ಜನರಿಗಾಗಿ ಸರಕಾರ “ಅಭಾವ ಪರಿಹಾರ ಕಾಮಗಿರಿ” ನಡೆಸಿತ್ತು. ಒಂದು ದಿನದ ಕೆಲಸಕ್ಕೆ ಸರಕಾರದಿಂದ ಒಬ್ಬರಿಗೆ ನಾಲ್ಕು ರೂಪಾಯಿ ಕೂಲಿ ಪ್ರಕಾರ ಕೊಡಬೇಕೆಂದು ನಿರ್ಧ



M. K. Publicity

ರಿಸಿದ್ದರೂ ಕಾಂಟ್ರಾಕ್ಟರರ ಕೈವಾಡದಿಂದ ಕೂಲಿ– ಯವರಿಗೆ ಸಿಗುತ್ತಿದ್ದುದು ಕೇವಲ ೨ ರೂಪಾಯಿ. ವಿರೋಧಿಸಿದರೆ ಕೆಲಸಕ್ಕೇ ಸಂಚಕಾರ. ದೊಡ್ಡ ಪ್ರಮಾಣದಲ್ಲಿ ಕೆಲಸ ನಡೆಯುವ ಸ್ಥಾನದಲ್ಲಿ ಸರಕಾರವೇ ಗಂಜಿ ಕೊಡುವ ವ್ಯವಸ್ಥೆ ಮಾಡಿತ್ತು. ಪ್ರತಿದಿನ ಎರಡು ಕ್ವಿಂಟಾಲ್ ಕೋಟಾ ಇದ್ದರೆ ಕಾಂಟ್ರಾಕ್ಟರ್ ಮತ್ತು ನಡುವಿನ ಜನರು ಕೇವಲ ಒಂದೇ ಕ್ವಿಂಟಾಲಷ್ಟು ಕುದಿಯಿಸಿ ಹಾಕುತ್ತಿದ್ದರು.

ಗಾಣಗಾಪುರದಲ್ಲಿ ದನಗಳಿಗಾಗಿ ದೊಡ್ಡ 'ರಕ್ಷಣಾ ಕೇಂದ್ರ' ವಿತ್ತು. ಯಾರಾದರೂ ತಮ್ಮ ದನಗಳನ್ನು ಅಲ್ಲಿ ತಂದು ಬಿಡಬಹುದಾಗಿತ್ತು. ಅನೇಕ ಜನರು ತಮ್ಮ ದನಕರುಗಳನ್ನು ಅಲ್ಲಿ ಒಯ್ದು ಬಿಟ್ಟರು. ಕೆಲವು ಶ್ರೀಮಂತರು ಟ್ರಕ್ಕಿನ ವ್ಯವಸ್ಥೆ ಮಾಡಿದ್ದರು. ಟ್ರಕ್ಕುಗಳು ಅಲ್ಲಿದ್ದ ದನಗಳನ್ನು ಸ್ಥಳಾಂತರಿಸುತ್ತಿದ್ದವು. ಹಿಂದುಗಳ ಆಸ್ತಿಕ ಭಾವನೆಯಿಂದ ಹಸುಗಳಿಗೆ ಪ್ರಾಧಾನ್ಯ ದೊರಕಿತು. ಎಮ್ಮೆ, ಎತ್ತುಗಳಿಗೆ ಅಷ್ಟೊಂದು ಮಹತ್ವ ಸಿಗಲಿಲ್ಲ.

ಧರ್ಮ ಪೀಠಗಳು, ಮಠಾಧೀಶರು, ಸಾರ್ವ ಜನಿಕ ಸಂಸ್ಥೆಗಳು, ಸೇವಾದಳ ಮತ್ತು ಸ್ವಯಂ ಸೇವಕರಂತಹ ಸಂಸ್ಥೆಗಳೂ ಕ್ಷಾಮ ಪೀಡಿತರಿ ಗಾಗಿ ಕೆಲಸ ಮಾಡುತ್ತಿದ್ದವು. ಸರ್ಕಾರೇತರ ಗಂಜಿ ಕೇಂದ್ರಗಳನ್ನು ತೆಗೆಯಲಾಗಿದ್ದಿತು. ಆದರೆ ಈ ಭೀಕರ ಪರಿಸ್ಥಿತಿಯಿಂದ ಪಾರಾಗುವದು ಹೇಗೆ?

ಬರಗಾಲದ ಬಿಸಿ ತಾಗಿ ರಂಗಪ್ಪನ ವ್ಯಾಪಾರ ನಿಂತುಹೋಯಿತು. ರಂಗಪ್ಪ ಹಸಿದುಬಂದಿದ್ದ. ಕೃಷ್ಣಾ ದೀಕ್ಷಿತ ಕರೆದೊಯ್ದು ಊಟ ಹಾಕಿದ ನಂತರ ರಂಗಪ್ಪ, "ನಾ ಒಂದು ಸಲ ವಿಚಾರ ಮಾಡಿದ್ದೆ ಇಲ್ಲೆ ಇರಬೇಕೂಂತ, ಊರ ಬಿಟ್ಟು ದಿಕ್ಕು ಪಾಲಾಗಿ ಹೋಗದು ಬ್ಯಾಡಾಂತ; ಆದ್ರ ಈಗ ನನ್ನ ಅನ್ನಿಸ್ತದ ಆ ವಿಚಾರ ಅಷ್ಟೊಂದು ಸರಿ ಇರಲಿಲ್ಲಾಂತ. ಸುಮ್ನ ಯಾವುದೋ ಒಂದು ಹುಚ್ಚಿಗೆ ಬಿದ್ದು ಸಾಯೋದು ವ್ಯರ್ಥ... ನನ್ ಮಾತ್ ಕೇಳಿದ್ರ ನೀವು ಆದಷ್ಟು ಬೇಗ ಈ ಊರು ಬಿಡ್ರಿ..." ಎಂದ ರಂಗಪ್ಪ.

"ಎಲ್ಲಿ ಹೋಗ್ಲಿ ರಂಗಪ್ಪ, ಊರ ಬಿಟ್ಟು" ದೀಕ್ಷಿತನ ದನಿಯಲ್ಲಿ ನೈರಾಶ್ಯವಿತ್ತು.

"ಹೋದವರು ಈ ಪ್ರಶ್ನೆ ಕೇಳಕೊಂಡಿಲ್ಲ. ಒಂದು ವ್ಯಾಳೆ ಕೇಳಿದ್ರೂ ಅಂದ್ರ ಅವ್ರು ಹೋಗ್ತಾನೆ ಇರಲಿಲ್ಲ. ಹೋದವ್ರೆಲ್ಲ ಸುಮ್ನೆ ಹೊರಟಬಿಟ್ರು. ಅಲ್ಲಿ ಬೆಳಕು ಸಿಕ್ಕೀತು ಎಂಬ ಆಸೆಯಿಂದ ಹೊರಟು ಬಿಟ್ರು. ನಾವು ಹಂಗೇನೆ ಒಮ್ಮಿಂದೊಮ್ಮೆಲೆ ವಿಚಾರ ಮಾಡೋದನ್ನ ನಿಲ್ಲಿಸಿ ಬಿಡೋಣ. ಅಂದ್ರ ಎಲ್ಲಾ ಸರಳಾಗ್ತದ. ಎಲ್ಲಾ ಸಹ ಜಾಗ್ತದ," ಎಂದ ರಂಗಪ್ಪ.

"ನೀನು ಹೇಳೋದು ಸರಿ" ಎಂದ ದೀಕ್ಷಿತ. ರಂಗಪ್ಪ ಹೊರಟ. "ಹೋಗುವಾಗ ನಂಗ ಹೇಳಿ ಹೋಗ್ತಿ ಅಲ್ಲ?" ಕೇಳಿದ ದೀಕ್ಷಿತ.

"ದ್ಯಾಮವ್ವನಾಣೆ ಹಂಗೇ ಹೋಗೋದಿಲ್ಲ" ಎಂದರಂಗಪ್ಪ ಕಂಬನಿ ತುಂಬಿ.

೨೦

ಶಾರಿ ರಸ್ತೆ ಕೆಲಸಕ್ಕೆ ಹೋಗುತ್ತಿದ್ದಳು. ಆಕೆಗೆ ಗೌಡರ ಆಶ್ರಯ ತಪ್ಪಿರಬೇಕೆಂದು ಜನರು ಊಹಿಸಿದರು. ಜನರು ಕಲ್ಪಿಸಿಕೊಂಡತಹ



ರಾಜ್ಕುಮಾರ್ ಮಾಡಿರೋ ಪಿಕ್ಚರ್ಗೆ ಹೋರ್‍ತಿ - ದೀನಿ... 'ದೀರ್ಘಾಯುಷ್ಮಾನ್ಭವಾ...'ಂತ ಆಶೀರ್ವಾದ ಮಾಡ್ಬಿಡಿ ಜೋಯಿಸ್ರೇ...!!!

ಸಂಬಂಧ ಶಾರಿ ಮತ್ತು ಗೌಡರ ನಡುವೆ ಇದ್ದೇ ಇರಲಿಲ್ಲ.

ಶಾರಿ ಗಂಡ ಕುಡಿಯುವ ಚಟಕ್ಕೆ ಬಲಿಯಾದಾಗ ಶಾರಿ, ಗೌಡರು, ಪರಿಚಯದವರೆಲ್ಲ ತಿಳಿಸಿ ಹೇಳಿದರು. ಆದರೂ ಆತ ಬಿಡಲಿಲ್ಲ. ಒಂದು ದಿನ ಲಿಂಗಬಸ್ಯಾ ಶಾರೀಗೆ–"ಶಾರಿ ಛಂದಿದ್ದೀ, ನಿನ್ನ ಮೈ ನಾನಾ ಮಂದಿಗೆ ಮರಳ್ ಮಾಡ್ತಾಂಗಾ–ಯ್ತು. ಹುಚ್ಚೆ ಮಂದಿ ಕೈ ತುಂಬ ರೊಕ್ಕ ಕೊಟ್ಟು ಬರತಾರ. ನಾ ಕರಕೊಂಡ ಬರ್‍ತೀನಿ. ನೀ ಕುಂದ್ರ ಸಗೋ... ಖುಷಿ ಮಾಡಿ ಕಳಿಸು ಆಯ್ತುನೋಡಂತಿ ಒಂದೇ ವರ್ಷದಾಗ ನಾವು ಪಟ್ಟಣದಾಗೇ ಮನಿ ಕಟಗೊಂಡಿರ ಬಹುದು" ಎಂದ. ಶಾರಿ ಒಪ್ಪಲಿಲ್ಲ; ಗೌಡರಿಗೆ ಎಲ್ಲಾ ವೃತ್ತಾಂತ ಹೇಳಿದಳು. ಇದನ್ನರಿತ ಲಿಂಗಬಸ್ಯಾ ಶಾರೀ ಕತ್ತು ಹಿಡಿಯ ತೊಡಗಿದಾಗ ಗೌಡರು ಕೊಡಲಿ ಎತ್ತಿದರು. ಲಿಂಗಬಸ್ಯಾ ಓಡಿದ. ಹೋಗುವಾಗ, "ಗೌಡ ನನ್ನ ಹೆಂಗ್ಸನ್ನ ಕೆಡ್ಸದ್ನಪೊ" ಎಂದರಚಿದ.

ಈ ಘಟನೆಯಾದ ದಿನದಿಂದ ಲಿಂಗಬಸ್ಯಾ ಚೆಂದನಕೇರಿಗೆ ಬರಲೇ ಇಲ್ಲ. ಗೌಡರು ಶಾರಿಗೆ ಆಶ್ರಯ ಕೊಟ್ಟರು. ಬರಗಾಲದಿಂದ ಗೌಡರ ಪರಿಸ್ಥಿತಿಯೂ ಹದಗೆಟ್ಟಿತು. ಅಂತೆಯೇ ಶಾರಿ ಎಲರ ಜೊತೆ ಬರಗಾಲದ ಕೆಲಸ ನಡೆದಲ್ಲಿ ಹೋಗಿ ದುಡಿಯುತ್ತಿದ್ದಳು. ಶಾರಿ ಬಗ್ಗೆ ಜನರಲ್ಲಿ ಮೊದಲಿದ್ದ ಅಸಹ್ಯ ಭಾವನೆ ಕ್ರಮೇಣ ಅಳಿಸಿಹೋಗಿತ್ತು.

ಪಟ್ಟಣಕ್ಕೆ ಹೊರಟಿದ್ದ ಸರ್ವಿಸ್ ಕೆಟ್ಟು ದಾರಿಯಲ್ಲಿ ನಿಂತಿತು. ಗೌಡರು ಹೊರಗೆ ಬಂದು ನಿಂತರು. ಅಷ್ಟರಲ್ಲಿ ಲಿಂಗಬಸ್ಸ ಬಂದ. ಗಡ್ಡ ಮೀಸೆ ಬಿಟ್ಟು ಅವನು ಸಾಧುವಂತೆ ಕಾಣಿಸುತ್ತಿದ್ದ. ಆತ, "ಗೌಡರೆ, ನಾನು ಕೊಡ್ಲಿ ತಂದ ಕೊಡ್ತೀನಿ ನನ್ನ ಕಡ್ದ ಬಿಡ್ರಿ" ಎಂದ.

"ಸಂದ್ಭೋದ ಮಾನ–ಮರ್ಯಾದೆ ಈಗ ನಿನ್ನ ಕಡದ್ರೂ ಬರಾಕಿಲ್ಲ" ಎಂದರು ಗೌಡರು.

"ಗೌಡ್ರ ನಿಮ್ಮ ಪಾದ ನನ್ನ ತಿಳ್ಕೊಂಡೆನ. ದೇವರಂಥ ಮನಸರ ನೀವು. ನಾನು ಅಂಥ ಅಪವಾದ ಹೊರ್‍ಸಿದ್...ಕ್ಷಮಾ ಮಾಡ್ರೀ" ಎಂದು ಕೈ ಜೋಡಿಸಿದ.

"ಹುಚ್ಚಾ ಮೊದ್ಲ ಹೋಗಿ ನಿನ್ನ ಹೆಂಡ್ತೀನ ನೋಡು, ಆಕಿ ಕ್ಷಮಾ ಕೇಳು" ಎಂದರು.

ಬರಗಾಲ ಕಾಮಗಿರಿಯಲ್ಲಿ ಕೆಲಸ ಮಾಡ್ತಿದ್ದ ಶಾರೀನ್ನ ಪತ್ತೆ ಹಚ್ಚಿ ಕರೆದ ಲಿಂಗಬಸ್ಯಾ. ಶಾರಿ ಆತನ ಪಾದದ ಮೇಲೆ ಕುಸಿದುಬಿದ್ದಳು. "ತಪ್ಪಾಯ್ತು" ಎಂದು ಕೈಹಿಡಿದು ಆತ ಎಬ್ಬಿಸುತ್ತಿರುವಾಗ ಶಾರಿಯ ಪ್ರಜ್ಞೆ ತಪ್ಪಿತು

೨೧

ಒಂದು ದಿನ ಊರ ಜನರ ಜೊತೆ ಕೃಷ್ಣ ದೀಕ್ಷಿತನೂ ಸಲಿಕೆ, ಗುದ್ದಲಿ ಹಿಡಿದು ನಡೆದ. ಎಲ್ಲರಿಗೂ ಆಶ್ಚರ್ಯವಾಯಿತು; ಕಳವಳವೆನಿಸಿತು. ಆ ದಿನ ದೀಕ್ಷಿತನಿಗೆ ಕೆಲಸ ಸಿಗದೆ ಸುಮ್ಮನೆ ಓಂತಿರುಗಿದ. ದಾರಿಯಲ್ಲಿ ಎತ್ತಿನ ಗಾಡಿಯಲ್ಲಿ ಮುಲ್ಲಾ ಸಾಬನ ಇಡೀ ಸಂಸಾರ ಹೊರಟಿತ್ತು.

"ಎಲ್ಲಿಗ್ಹೊರಟೆಪ್ಪ?" ಕೇಳಿದ ದೀಕ್ಷಿತ.

"ಪಟ್ಟಣಕ್ಕೆ; ಖಾಜಾಸಾಬರ ದರಬಾರಕ್ಕೆ. ಅವ್ರು ದರ್ಗಾದ ಹತ್ರ ಮಕ್ಕಳಿಗೆ, ಹೆಂಗಸ್ರಿಗಿ ಮತ್ತ ಮುದಕರಿಗೆ ಒಂದೊಂದ್ ರೊಟ್ಟಿ ಕೊಡ್ತಾರಂತ. ನಾ ಎಲ್ಲಾದ್ರು ದುಡ್ದತಿಂತೀನಿ. ಸಿಕ್ರ ಸೈ ಇಲ್ದ್ರ ಆ ದೇವ್ರ ಹೆಸ್ರು ತೊಗೊಂಡು ಮಲಗ್ತೀನಿ" ಎಂದ ಮುಲ್ಲಾಸಾಬ.

ಇಂಥ ಭಯಂಕರ ಪರಿಸ್ಥಿತಿಯಲ್ಲಿಯೂ ಮುಲ್ಲಾಸಾಬನ ಆಸ್ತಿಕತೆಯನ್ನು ನೋಡಿ ದೀಕ್ಷಿತ–ನಿಗೆ ಮೋಜೆನಿಸಿತು. ದೇವರಲ್ಲಿ ಅಥವಾ ಯಾವ–ದೋ ಒಂದು ದಿವ್ಯತ್ವದಲ್ಲಿಟ್ಟಿರುವ ಈ ನಂಬಿಕೆಯಿಂದಲೇ ಅಲ್ಲವೆ ಮನುಷ್ಯರು ಎಂಥ ಪ್ರಸಂಗದಲ್ಲಿಯೂ ತಮ್ಮ ಧೈರ್ಯ ಕಳೆದುಕೊಳ್ಳುವದಿಲ್ಲ ಎಂದು ವಿಚಾರ ಮಾಡುತ್ತ ದೀಕ್ಷಿತ ಮನೆಗೆಬಂದ.

ಒಂದು ದಿನ ಬೆಳಿಗ್ಗೆ ಕುಸುಮಾ ಮಾಳಿಗೆಯ ಮೇಲೆ ಬಟ್ಟೆ ಒಣ ಹಾಕುತ್ತಿದ್ದಳು. ದೃಷ್ಟಿ ಚೆಂದನ ಕೇರಿಯ ಮೇಲೆ ಬಿತ್ತು. ಇದೊಂದು ದೊಡ್ಡ ಸ್ಮಶಾನವೆನಿಸಿತು ಆಕೆಗೆ.


೨೨

ಗಂಡ ಮರಳಿ ಬಂದ್ರ ಬ್ಯಾಂಬ್ರಿಗೆ ಊಟ ಹಾಕ್ತೇನೆಂತ ಪರಕೆ ಹೊತ್ತಿದ್ದಳು ಶಾರಿ. ಅದರ



ಮೆರಿಟ್*
ಹೊಲಿಗೆ ಮೆಶೀನು
ಜೀವನವಿಡೀ ಬಾಳಿಕೆ ಬರುವ ಉಡುಗೊರೆ

...ಕಾರಣ, ಸಿಂಗರ್‌ನವರು ತಮ್ಮ ಪ್ರತಿಯೊಂದು ಮೆಶೀನಿನಲ್ಲಿರುವ 307 ಭಾಗಗಳಲ್ಲಿ ಪ್ರತಿಯೊಂದನ್ನೂ ಪರೀಕ್ಷಿಸುತ್ತಾರೆ.



ಅನೇಕ ತಲೆಮಾರುಗಳಿಂದ ಸಿಂಗರ್‌ನವರ ಹೊಲಿಗೆ ಮೆಶೀನು ಮದುವೆಗಳಲ್ಲಿಯೂ, ವಾರ್ಷಿಕೋತ್ಸವಗಳಲ್ಲಿಯೂ ಉಡುಗೊರೆಯಾಗಿ ಕೊಡಲು ಅತ್ಯುತ್ತಮವಾದದ್ದು ಎಂದು ಪರಿಗಣಿಸಲ್ಪಡುತ್ತಿದೆ. ಅಧಿಕಾಧಿಕ ಜನರು ಸಿಂಗರ್‌ನ್ನೇ ಏಕೆ ಆಯ್ದುಕೊಳ್ಳುತ್ತಾರೆ ಎಂಬುದಕ್ಕೆ ಇವೀಗ ಕೆಲವು ಕಾರಣಗಳು.

ಅನುಭವ

ಜಗತ್ತಿನಲ್ಲಿ ಪ್ರಪ್ರಥಮ ವ್ಯಾವಹಾರಿಕ ಹೊಲಿಗೆ ಮೆಶೀನನ್ನು ಸಾದರಪಡಿಸಿದವರು ಸಿಂಗರ್‌ನವರು. ಅದರರ್ಥವೆಂದರೆ 125 ಕ್ಕಿಂತಲೂ ಹೆಚ್ಚು ವರ್ಷಗಳ ಅನುಭವ ಅವರಿಗಿದೆ. ಇಂದು ಭಾರತದಲ್ಲಿನ ಎಲ್ಲಕ್ಕಿಂತ ಹಳೆಯ ಹೊಲಿಗೆ ಮೆಶೀನುಗಳು ಸಿಂಗರ್‌ನವರದ್ದೆ. ಅವುಗಳಲ್ಲಿ ಕೆಲವನ್ನಾದರೂ ನೀವು ಕಂಡಿರಬಹುದು.

ಶ್ರೇಣಿ

ವಿವಿಧ ಹೊಲಿಗೆ ಮೆಶೀನುಗಳ ಶ್ರೇಣಿಯಿಂದ ನಿಮಗೆ ಬೇಕಾದದ್ದನ್ನು ನೀವು ಆಯ್ದುಕೊಳ್ಳಬಹುದು. ಅವುಗಳಲ್ಲಿ ಪ್ರತಿಯೊಂದು ಅವಶ್ಯಕತೆಗೂ ಸೂಕ್ತವಾಗುವ ಮಾಡೆಲ್ ಇದ್ದೇ ಇದೆ. ಬೆಲೆ ಕೂಡ ಎಲ್ಲರಿಗೂ ಅನುಕೂಲವಾಗುವಂತಹದೇ.

ಯೋಜನೆಗಳು

ಸಿಂಗರ್‌ನವರು ಅನುಕೂಲವಾದ, ಕಂತುಗಳಲ್ಲಿ ಕೊಳ್ಳುವ ಯೋಜನೆಗಳನ್ನು ಸಹ ಏರ್ಪಡಿಸಿದ್ದಾರೆ. ಆದ್ದರಿಂದ ಪೂರ್ತಿ ಹಣವನ್ನು ಒಂದೇ ಸಲ ಕೊಡುವುದು ನಿಮಗೆ ಸಾಧ್ಯವಿಲ್ಲದಿದ್ದರೆ ನೀವು ಸುಲಭ ಕಂತುಗಳಲ್ಲಿ ಸಲ್ಲಿಸಬಹುದು.

ಉಳಿತಾಯ



ಮನೆಜನರಿಗೆಲ್ಲ ನೀವೇ ಬಟ್ಟೆ ಹೊಲಿಯುವುದಾದರೆ ನಿಮಗೆ ಎಷ್ಟು ಉಳಿತಾಯವಾಗುತ್ತದೆ ನೋಡಿ. ಇಂದಿನ ದಿನಗಳಲ್ಲಿ ದರ್ಜಿಗಳ ಮಜೂರಿ ಬಹಳ ಹೆಚ್ಚು ಇರುವಾಗ, ನೀವು ಮೆಶೀನಿಗೆ ಕೊಟ್ಟ ಹಣ ನಿಮಗೆ 2 ವರ್ಷಕ್ಕಿಂತಲೂ ಕಡಿಮೆ ಸಮಯಾದಲ್ಲಿ ಹಿಂದೆ ಬರುತ್ತದೆ ಎಂದು ನಿಮಗೆ ಗೊತ್ತಾಗುವುದು.

ಅಂಗಡಿಗಳು

ಸಿಂಗರ್‌ಗೆ ದೇಶದಾದ್ಯಂತ ಹರಡಿರುವ ವ್ಯಾಪಾರಿಗಳಿದ್ದಾರೆ. ನಿಮ್ಮ ಮನೆಯ ಹತ್ತಿರ ಸಿಂಗರ್ ಅಂಗಡಿಯಾಗಲೀ, ಅಥವಾ ವ್ಯಾಪಾರಿಯಾಗಲೀ ಇರುವುದು ಖಂಡಿತ.

ಸೇವೆ

ಸಿಂಗರ್‌ನವರ ಹೊಲಿಗೆ ಮೆಶೀನು ದೀರ್ಘಕಾಲ ಬಾಳಿಕೆ ಬರುವಂತೆ ರಚಿಸಲ್ಪಡುತ್ತದೆ. ಮತ್ತು, ನಿಮ್ಮ ಮೆಶೀನು ಯಾವಾಗಲೂ ಸಮರ್ಪಕವಾಗಿ ಕೆಲಸ ಮಾಡುವ ಸ್ಥಿತಿಯಲ್ಲಿರುವಂತೆ ಮಾಡಲು ವ್ಯಾಪಕವಾಗಿ ಹರಡಿರುವ ಸಿಂಗರ್ ಅಂಗಡಿಗಳಲ್ಲಿ ಮತ್ತು ವ್ಯಾಪಾರಿಗಳಲ್ಲಿ ಮಾರಾಟಾನಂತರದ ದಕ್ಷ ಸೇವೆ ಖಾತ್ರಿಯಾಗಿ ದೊರೆಯುತ್ತದೆ. ಹೀಗಾಗಿ ನಿಮಗೆ ನಿಮ್ಮ ಮೆಶೀನಿನಿಂದ ಜೀವನ ಪರ್ಯಂತ ಸೇವೆ ದೊರೆಯುತ್ತದೆ.

ಒಂದು ನಿಮಿಷಕ್ಕೆ 1000 ಹೊಲಿಗೆಗಳು

ಮೆರಿಟ್ ಹೊಲಿಗೆ ಮೆಶೀನು ಪ್ರತಿ ನಿಮಿಷಕ್ಕೆ 1000 ಹೊಲಿಗೆಗಳನ್ನು ಹಾಕುವ ಪರೀಕ್ಷಣದಲ್ಲಿ ಯಶಸ್ವಿಯಾಗಿದೆ. ಮೆರಿಟ್ ಹೊಲಿಗೆ ಮೆಶೀನಿನಲ್ಲಿ ಅಡಕವಾಗುವ ಎಲ್ಲಾ ಭಾಗಗಳನ್ನು ಸಿಂಗರ್‌ನವರು ಪರೀಕ್ಷಿಸುತ್ತಾರೆ. ಪ್ರತಿಯೊಂದು ಮೆಶೀನೂ ಸಮರ್ಪಕವಾಗಿ ಕೆಲಸ ಮಾಡುತ್ತಿರುವಂತೆ ಮತ್ತು ಜೀವನ ಪರ್ಯಂತ ಬಾಳಿಕೆ ಬರುವಂತೆ ರಚಿಸಲ್ಪಡುತ್ತದೆ.



ಒಂದು ಹೊಲಿಗೆಯೂ ತಪ್ಪುವುದಿಲ್ಲ

ಮೆರಿಟ್ 4000 ನಿರಂತರ ಗಂಟೆಗಳ ಕಾಲ, ಒಂದು ಹೊಲಿಗೆಯನ್ನೂ ತಪ್ಪಿಸದೆ ಕೆಲಸ ಮಾಡುವುದೆಂದು ಸಿಂಗರ್‌ನವರಿಗೆ ನಿರೀಕ್ಷೆ ಇದೆ. ಉತ್ಕೃಷ್ಟತೆಯ ಬಗ್ಗೆ ಇಷ್ಟು ಜಾಗರೂಕತೆಯನ್ನು ವಹಿಸುತ್ತಿರುವುದರಿಂದಲೇ ಸಿಂಗರ್ ವಿಶ್ವದಾದ್ಯಂತ ಪ್ರಖ್ಯಾತಿಯನ್ನು ಪಡೆದಿದೆ.

ಸಿಂಗರ್ ಅವರ
ಮೆರಿಟ್ ಹೊಲಿಗೆ ಮೆಶೀನು
ಅನೇಕ ವರ್ಷ ನಿಮ್ಮೊಡನೆ ಸಹರ್ಷ ಒಡನಾಟ

* ಸಿಂಗರ್ ಕಂಪೆನಿಯ ಟ್ರೇಡ್ ಮಾರ್ಕ್

ಪ್ರಕಾರ ಆಕೆ ಮರುದಿನ ದೀಕ್ಷಿತ ದಂಪತಿಗಳಿಗೆ ಊಟ ಹಾಕಿದಳು.

ಲಿಂಗಬಸ್ಯಾ "ನಾವು ಬೊಂಬಾಯಿಗೆ ಹೋಗ್ತೀವಿ. ಇವೊತ್ತು ಕಡೆ ಬಸ್ಸಿಗೆ ಪಟ್ಟಣಕ್ಕೆ ಹೋಗಿ ನಾಳೆ ಸಂಜೆ ಮುಂದ ಬೊಂಬಾಯಿ ಗಾಡಿ ಲಿಂದ ಹೋಗ್ತೀವಿ," ಎಂದ. ಸಂಜೆ ಅವರು ಊರುಬಿಟ್ಟರು.

ಕುಸುಮಾ "ನಾವೂ ಹೋಗೋಣೇನ್ರಿ?" ಎಂದು ಕೇಳಿದಳು.

"ಒಂದೆರಡು ದಿನದೊಳಗೇ ಹೋಗೋಣು" ಎಂದ ದೀಕ್ಷಿತ.

೨೩

ಇಡೀ ಚಂದನಕೇರಿಯಲ್ಲಿ ಎಂಟು ಹತ್ತು ಮನೆಗಳಲ್ಲಿ ಮಾತ್ರ ಜನರಿದ್ದರು. ದ್ಯಾಮವ್ವನ ಒಕ್ಕಲಿಗರು ಮುಟ್ಟಾಗಿ ಹೋಗಿರಲ್ಲ. ಗುಡ್ಡದ ಮೇಲೆ ದ್ಯಾಮವ್ವನ ಪೂಜಾರಿ ಭಿಕ್ಷೆ ಬೇಡಿ ಜೀವಿಸುತ್ತಿದ್ದ. ಅಲ್ಲಿಯ ಕಾರ್ಯಕ್ರಮಗಳೆಲ್ಲವೂ ನಿಂತುಹೋಗಿದ್ದವು.

ರಾತ್ರಿ ಸುಮಾರು ಹನ್ನೊಂದು ಗಂಟೆಗೆ ರಂಗಪ್ಪನ ಹೆಂಡತಿ ಓಡಿಬಂದು, "ದೀಕ್ಷಿತರೆ ಬಾಗ್ಲಾ ತಗೀರಿ, ನೀವು ಈಗಿಂದೀಗ ಬರಬೇಕು; ಅವ್ರು ಹ್ಯಾಂಗ್ಯಾಂಗೊ ಮಾಡಾಕತ್ತಾರ" ಎಂದು ಕಣ್ಣೀರಿಟ್ಟಳು.

ದೀಕ್ಷಿತ ರಂಗಪ್ಪನ ಮನೆ ಸೇರಿದಾಗ ಆತ ಇಹಲೋಕ ತ್ಯಜಿಸಿದ್ದ. ಆ ದಿನ ಊರು ಬಿಡುವುದಾಗಿ ಹೇಳಿದ್ದ ರಂಗಪ್ಪ ಊರೇಕೆ ಬಿಡಲಿಲ್ಲ ದೀಕ್ಷಿತ ಯೋಚಿಸಿದ.

೨೪

ಭಯಂಕರ ಕಾಲರಾ ಹರಡಿತು. ಔಷಧೋಪಚಾರ ನಡೆಯಿತು. ಆದರೂ ರೋಗ ಹಿಡಿತದಲ್ಲಿ ಬರಲೇ ಇಲ್ಲ.

ಕ್ಷಾಮ ಪೀಡಿತ ಕಾಲರಾಪೀಡಿತ ಚಂದನಕೇರಿ ಈಗ ಭಯಂಕರ ಯಾತನಾ ಶಿಬಿರದಂತೆ ಕಾಣಿಸು

ಊರು ಬಿಡಬೇಕೆಂದಿದ್ದ ಕೃಷ್ಣಾದೀಕ್ಷಿತ, ಕುಸುಮಾ ಇಬ್ಬರೂ ತಮ್ಮ ವಿಚಾರ ಬದಲಿಸಿ ಸ್ವಯಂ ಸೇವಕರಾಗಿ ಕೆಲಸ ಮಾಡತೊಡಗಿದರು.

ಕಾಲರಾ ಭಯಂಕರ ರೂಪ ತಾಳಿತು. ಹೆಚ್ಚಿನ ಸುದ್ದಿಯಲ್ಲಿ ಡಾಕ್ಟರರು, ನರ್ಸುಗಳು ಬಂದರು. ಅವರ ಹಿಂದೆಯೇ ದೊಡ್ಡ ವ್ಯಾನಿನಲ್ಲಿ ಸರಕಾರಿ ಸಿನಿಮಾದವರು ಬಂದರು. ಮುಖ್ಯ ಜನರು ಫಿಲಂನಲ್ಲಿ ಬರುವಂತೆ ಶೂಟಿಂಗ್ ಮಾಡಿದರು. ರೋಗಿಗಳ ಕಡೆಯಿಂದ ಪ್ರಶ್ನೆಗಳ ಉತ್ತರ ತಾವೇ ಹೇಳಿಸಿ ರೆಕಾರ್ಡ ಮಾಡಿಕೊಂಡರು. ಮೂರು ನಾಲ್ಕು ಗಂಟೆಗಳ ವರೆಗೆ ಇದೇ ಕೆಲಸ ನಡೆಯಿತು. ಇದಾದನಂತರ ಪೇಪರಿನವರೂ ಫೋಟೋಗ್ರಾಫರರೂ ಬಂದರು. ಸಂಜೆಯ ತನಕ ಬರೀ ಈ ಕಾರ್ಯಕ್ರಮವೇ ನಡೆಯಿತು. ಆದಿನ ರೋಗಿಗಳ ಗತಿ ದೇವರೇ ಬಲ್ಲ.

ಸರಕಾರದ ಪ್ರಚಾರ–ತಂತ್ರ, ದೊಡ್ಡವರು ಎಂದೆನಿಸಿಕೊಳ್ಳುವವರ ಕ್ಷುದ್ರ ಮನೋಭಾವ ಡಂಭಾಚಾರ, ಹೇಸಿಗೆ ತರುವಂಥ ವ್ಯವಹಾರ–ಗಳಿಂದ ಕುಸುಮಾ ಬೇಸತ್ತಳು.

೨೫

ಸುಮಾರು ರಾತ್ರಿ ಎಂಟು ಒಂಭತ್ತರ ಸಮಯ ದ್ಯಾಮವ್ವನ ಒಕ್ಕಲದವರು ಒದರಾಟ ಕೇಳಿಸಿತು. ಪರಿಚಯಸ್ಥ ರುದ್ರನನ್ನು ಕುರಿತು ದೀಕ್ಷಿತ ಏನಾಯಿತೆಂದು ಕೇಳಿದ.

"ನಮ್ಮೋಣಿ ಜೋಪ್ಡಿಗೋಳೆಲ್ಲ ಕಾಲರಾ ಬ್ಯಾನಿಯಿಂದ ಸುತಗೊಂಡಾಯ್ತಂತ ಸುಟ್ರಂತ" ರುದ್ರ ಹೇಳಿದ.

"ಸುಟ್ಟವರ್ಯಾರು?...ಸರಕಾರದವರ ಹೀಂಗ ಮಾಡ್ದರೇನು ಮತ್ತ?" ದೀಕ್ಷಿತ ಶಂಕಿಸಿದ.

"ಕಾಣ್ಸಲಾರ್ದ ಸರಕಾರ ಮತ್ತು ದೇವರು ಏನ್ಮಾಡಿದ್ರೂ ನಡ್ದ ಹೋಗ್ತಾಯ್ತಿ" ಎಂದ ರುದ್ರನ ಮಾತಿನಲ್ಲಿ ತೀವ್ರ ವೇದನೆ ಅಡಗಿತ್ತು.

"ನೀವೆಲ್ಲಿರತೀರ ಇನ್ನಮ್ಯಾಲ?"

"ಭೂಮಿತಾಯಿಗಿ ಬಡತನ ಬಂದಿಲ್ಲ. ಎಲ್ಲಾದರೂ ಇರಾಕ ತುಸು ಜಾಗ ಕೊಟ್ಟೇಕೊಡ್ತಾಳ"

ಮರುದಿನ ಬೆಳಿಗ್ಗೆ ಸರಕಾರೀ ಜನರು ಜೀಪಿನಲ್ಲಿ ಬಂದರು. ನೊಂದವರಿಗೆ ಪರಿಹಾರ ಧನ ನೀಡಿ ತಮ್ಮ ಪಾಲಿಗೆ ಸ್ವಲ್ಪ ಲಪಟಾಯಿಸಿ ಹೊರಟು ಹೋದರು.

೨೬

ಸಂಜೆಯಾಗುವಷ್ಟರಲ್ಲೆ ನಿರಾಶ್ರಿತರೆಲ್ಲ ದ್ಯಾಮವ್ವನ ಗುಡಿಯ ಅಂಗಳದಲ್ಲಿ ಬಿಡಾರ ಬಿಟ್ಟರು. ಅವರಿಗಾಗಿ ಅಲ್ಲೊಂದು ಗಂಜಿ–ಕೇಂದ್ರ ತೆರೆಯಲಾಯಿತು.

ದೀಕ್ಷಿತರ ಬಳಿಯಿದ್ದ ಹಸು ಗೌರಿ ಸತ್ತಿತು. ಕುಸುಮಾ ನೊಂದಳು. ಯಾರೋ ಮೂರು–ನಾಲ್ಕು ಮಂದಿ ಬಂದು ಗೌರಿಯನ್ನು ಊರ ಹೊರಗಿನ ಬಯಲಿಗೊಯ್ದು ಅದರ ಚರ್ಮ ಸುಲಿದರು.

ದೀಕ್ಷಿತ 'ರಿಲೀಫ್' ತಂಡದತ್ತ ಹೊರಟುಬಂದ. ದೊಡ್ಡವರೆಲ್ಲ ಚಿತ್ರ ತೆಗೆಸಿಕೊಂಡು ಜೀಪು-ಗಾಡಿಗಳಲ್ಲಿ ಹೋಗಿಬಿಟ್ಟರು. ಉಳಿದವರು ಕೆಲವೇ ಮಂದಿ–ನರ್ಸು, ಕಂಪೌಂಡರ್, ವೈದ್ಯಕೀಯ ವಿದ್ಯಾರ್ಥಿಗಳು.

ಬೇಜಾರುಪಟ್ಟ ದೀಕ್ಷಿತ ದ್ಯಾಮವ್ವನ ಗುಡ್ಡದತ್ತ ಹೊರಟ. ಅಲ್ಲಿ ಯಾರೂ ಇರಲಿಲ್ಲ. ಪೂಜಾರಿ ಮೈಲಾರಿ ತುಂತುಣಿ ಬಾರಿಸುತಲಿದ್ದ.

ಆತ ದೀಕ್ಷಿತನನ್ನು ಕಂಡು "ಕಲಿಯುಗದ ಪರಭಾವ ಸ್ವಾಮೀ, ಭೂಮಿಗೆ ಭೂಮಿನೇ ಒಂದೊಡ್ಡ ಕಸಾಯಿಖಾನಿ ಆಯ್ತು. ಇನ್ನೂ ಏನಾಗೇದಂತೀನಿ ? ಆಕಾಶದಿಂದ ಬೆಂಕಿಮಳೀ ಸುರಿಲಿಲ್ಲಾ ಅಂದ್ರ ನನ್ನ ಹೆಸ್ರಾ ಮೈಲಾರಿ ಅಂತ ಕರೀಬ್ಯಾಡ್ರಿ. ನೂರು ವರ್ಷ ಬೆಂಕಿ ಮಳೀ ಬೀಳ್ತಾಯ್ತಿ. ಮುಂದ

ನೂರು ವರ್ಷ ಖಾಲಿ ಮಳಿ ಸುರಿತಾಯ್ತು. ಹೀಂಗಾಗಿ ಭೂಮಿಗೆ ಭೂಮಿನೇ ಪ್ರಳಯದಾಗ ಮುಣುಗಿ ನಂತ್ರ ತಾಯಿ ಹುಟ್ತಾಳು ಪುಟೇನ ಈ ಈ ಭೂಮಿನ್ಯಾಗ, ಈ ಪರಪಂಚದಾಗ. ಅಗ ಅಲ್ಲ. ಈ ಬ್ರಹ್ಮಾಂಡದಾಗ ದೇವ್ರ ರಾಜ್ಯ ಶುರು ಆಗ್ತಾಯ್ತು. ತಿಳೀತ...ಈಗೇನ್ ಕಸ್ನ ಕಾಣ ಬ್ಯಾಡ. ಈಗಂತು ನಾಶಾಗದರ ಕಡೀಗ ನಡ ದಾಯ್ತು, ನಡೀಲಿ. ನಮ್ಮ ನಿಮ್ಮಂಥ ಮನುಷ್ಯ ಪ್ರಾಣಿ ಕಡೀಂದ ಈ ಬರೋ ಬಿರುಗಾಳಿನಾ ತಡೆಯಾದು. ಶಕ್ಯಿಲ್ಲೇನಪ್ಪಾ ಆ ಪರಮಾತ್ಮನ ಹೆಸ್ರಾ ತೆಗೊಂಡು ಬಂದಿದ್ಕ ಎದಿ ಕೊಟ್ಟು ನಿಂದ್ರಬೇಕು ತಿಳೀತಾ..." ಎಂದು ಮೈಲಾರಿ ಸಮಗ್ರ ಭವಿಷ್ಯವನ್ನೇ ಬಿಚ್ಚಿಹೇಳಿದ.

೧೭

ಕೃಷ್ಣಾ ದೀಕ್ಷಿತ ಮನೆಗೆ ಬಂದಾಗ ನಡುಮನೆ ಯಲ್ಲಿ ಕುಸುಮಾ ಬಿದ್ದಿದ್ದಳು. ಹತ್ತಿರವೇ ವಾಂತಿ ಮಾಡಿಕೊಂಡಿದ್ದಳು. ಗಾಬರಿಗೊಂಡ ದೀಕ್ಷಿತ ಡಾಕ್ಟರ್, ನರ್ಸುಗಳನ್ನು ಕರೆದುತಂದ. ವಿಶೇಷ ಕಾಳಜಿಯಿಂದ ಇಲಾಜ್ ಮಾಡಲಾಯಿತು. ಆದರೆ ಕುಸುಮಾ ಉಳಿಯಲಿಲ್ಲ. ಬೆಳಗಾಗುವದರೊಳ ಗಾಗಿ ಸುದ್ದಿ ಹಬ್ಬಿತು. ಜನರು ಬಂದರು. ಹಳಹಳಿಸಿ ಸಿದರು. ಅತ್ತರು.

ರುದ್ರ ಭೂಮಿಯಲ್ಲಿ ಧಗಧಗಿಸುವ ಬೆಂಕಿಯಲ್ಲಿ ಕುಸುಮಾ ಬೆಳಗಾಗುವದರೊಳಗಾಗಿ ಊರು ಬಿಟ್ಟು ಹೋಗುವ ಕನಸಿನೊಂದಿಗೆ ಸುಡುತ್ತಿ ದ್ದಳು. ದೀಕ್ಷಿತನಿಗೆ ಎಲ್ಲವೂ ಶೂನ್ಯವಾಗಿತ್ತು.

೧೮

ದೀಕ್ಷಿತ ಮನೆಗೆ ಬಂದ. ಕುಸುಮಾ ಮಲಗಿದ ಜಾಗದಲ್ಲಿ ಒಂದು ಹಣತಿ ಉರಿಯುತ್ತಿತ್ತು. ಯಾರು ಹಚ್ಚಿರಬೇಕೆಂದು ನೋಡಿಗ ಒಂದು ಮೂಲೆಯಲ್ಲಿ ಮಾವ ನಾರಾಯಣಶಾಸ್ತ್ರಿಗಳು ಕುಳಿತಿದ್ದರು.

ಮಧ್ಯಾಹ್ನ ಮೂರರ ಸಮಯ. ದೀಕ್ಷಿತ ಬಸ್ ಸ್ಟ್ಯಾಂಡಿಗೆ ಬಂದ. ಸರ್ವಿಸ್ ಬಂತು ಒಳಗಿನಿಂದ ಯಾರೋ "ದೀಕ್ಷಿತರೇ, ಬರಬೇಕೇನು? ಬರ್ರಿ ಇಲ್ಲಿ ಜಾಗ ಅದ ಬರ್ರಿ" ಎಂದು ಕರೆದರು. ಕೃಷ್ಣಾ ದೀಕ್ಷಿತ ಒಳಗೆ ಬಂದು ಕುಳಿತುಕೊಂಡ. ಸರ್ವಿಸ್ ಮುಂದೆ ನಡೆಯಿತು.

೧೯

ಚಂದನಕೇರಿಯ ಮಾರಿಕಾಂಬಾ ಕಾಲೇಜಿನಲ್ಲಿ ಇದ್ದ ಆರುಮಂದಿ ಅಧ್ಯಾಪಕರು ಹೊರಗಿನವರು. ಅದೇ ಊರಿನ ಪ್ರಿನ್ಸಿಪಾಲರು ಊರವರಿಂದ ದೂರ ಸರಿದಿದ್ದರು.

ಬರ ಬಿದ್ದಿದ್ದರಿಂದ ಶಾಲಾ ಹುಡುಗರು ಕೆಲಸ ಹುಡುಕಿಕೊಂಡು ಹೋಗಿದ್ದರು. ಕಾಲರಾ ಶುರು ವಾದಾಗ ಸರಕಾರದಿಂದ ಆಜ್ಞೆ ಹೊರಟು ಎರಡು ತಿಂಗಳು ಶಾಲೆ-ಕಾಲೇಜುಗಳನ್ನು ಮುಚ್ಚಲಾಯಿತು.

ಸಂಜೆ ಪಟ್ಟಣಕ್ಕೆ ಹೋಗುವ ಸರ್ವಿಸಿನಲ್ಲಿ ಕುಳಿತು ಪುನಃ ಈ ಯಾತನಾ ಶಿಬಿರಕ್ಕೆ ನಾನು ಬರಲೇಬಾರದೆಂದು ನಿಶ್ಚಯಿಸಿದೆ. ಸರ್ವಿಸ್ ನಡೆ ಯಿತು. ಚಂದನಕೇರಿಯ ಎಲ್ಲ ನೆನಪನ್ನು ನನ್ನದಾಗಿ ಗಿಸಿಕೊಂಡು ಹೊರಟುಬಿಟ್ಟೆ. ✡



Printed & published by P. S. Bhat for the Jayakarnataka News Printers Ltd., at the Samyukta Karnataka Press, Koppikar Road, Hubli-580 020. Rep: Bombay: V. Satyamurthy Phone: 522412; Calcutta: H. Muzamdar 46-4233; Madras: A. K. Subramanian Phone: 842201; New Delhi. P. R. Chopra Phone: 224130

KASTURI PRICE : 1-25 Regd. No. KRNG 43
Registered with the Registrar of Newspapers for India under No. 3533/57

ಚತುರ ಶೀಲ

